ಚರಕ-ಸಂಘದ ಹೊಸರೂಪು.

ಅರ್ಥಾತ್

ಗಾಂಧೀಜಿಯವರ ಸ್ವರಾಜ್ಯ ದರ್ಶನ

ಅನುವಾದಕರು: ಶ್ರೀ. ರಾ. ಸಾವಕಾರ.

ಪ್ರಕಾಶಕರು: ಶ್ರೀ. ವಡವಿ ರಾಮಚಂದ್ರ
ಮಂತ್ರಿ, ಕರ್ನಾಟಕ ಚರ್ಖಾಸಂಘ,

ಪ್ರಕಾಶನ ಸ್ಥಳ:— ಕರ್ನಾಟಕ ಚ. ಸಂ. ಕಚೇರಿ ಹಳೇಹುಬ್ಬಳ್ಳಿ.

ಬೆಲೆ:— ೧। ರೂ.

ಚರಕ-ಸಂಘದ ಹೊಸರೂಪು.

ಅನುವಾದಕರುಃ ಶ್ರೀ. ರಾ. ಸಾವಕಾರ.

ಪ್ರಕಾಶಕರುಃ ಶ್ರೀ. ವಡವಿ ರಾಮಚಂದ್ರ
ಮಂತ್ರಿ, ಕರ್ನಾಟಕ ಚರ್ಖಾಸಂಘ,

ಪ್ರಕಾಶನ ಸ್ಥಳಃ— ಕರ್ನಾಟಕ ಚ. ಸಂ. ಕಚೇರಿ ಹಳೇಹುಬ್ಬಳ್ಳಿ.

ಬೆಲೆ:— ೧। ರೂ.

ಅನುವಾದಕರ ಬಿನ್ನಹ.

ಖಾದೀ ಪ್ರಚಾರವು ಹೆಚ್ಚುತ್ತ ನಡೆದಂತೆ ಆ ವಿಷಯಕ ಜ್ಞಾನ, ತಂತ್ರ, ಮುಂತಾದವುಗಳಲ್ಲಿ ಹೆಚ್ಚಿನ ಶೋಧವೂ ಆಗ ಹತ್ತಿತು. ಸದ್ಯಕ್ಕೆ ಅದೊಂದು ಶಾಸ್ತ್ರವಾಗಿಯೇ ಪರಿಣಮಿಸಿದೆ. ಖಾದಿಯ ಮಹತ್ವ, ಖಾದೀ ಆಂದೋಲನದ ಗುರಿ, ಆ ಬಗ್ಗೆ ಅವಶ್ಯಕವಾದ ಕ್ರಿಯೆಗಳ ವಿವೇಚನೆ, ಇತ್ಯಾದಿ ಸಂಗತಿಗಳನ್ನೊಳಗೊಂಡ ಸಾಹಿತ್ಯವೂ ಹಿಂದೀ ಭಾಷೆಯಲ್ಲಿ ನಿರ್ಮಾಣವಾಗ ಹತ್ತಿದೆ. ಈ ಸಾಹಿತ್ಯದ ಲಾಭವು ಕರ್ನಾಟಕದಲ್ಲಿಯ ಖಾದೀ ಕಾರ್ಯಕರ್ತರಿಗೂ, ಖಾದೀ ಪ್ರೇಮಿಗಳಿಗೂ, ಖಾದೀ ವಿದ್ಯಾಲಯದ ವಿದ್ಯಾರ್ಥಿಗಳಿಗೂ ಲಭಿಸುವಂತೆ ಅದನ್ನು ಕನ್ನಡದಲ್ಲಿ ಅನುವಾದಿಸಬೇಕೆಂಬ ಲವಲವಿಕೆಯು ಕರ್ನಾಟಕದ ಚರ್ಖಾ ಸಂಘದ ಕಾರ್ಯವಾಹಕರಲ್ಲಿ ಇದ್ದಿತು. ಈ ಕಾರ್ಯವು ಅತ್ಯವಶ್ಯವಾದುದೆಂದೂ, ಇದನ್ನು ನಾನು ಕೈಕೊಳ್ಳಬೇಕೆಂದೂ ನನ್ನ ಮಿತ್ರರೂ, ಸಂಘದ ಹಿಂದಿನ ಮಂತ್ರಿಗಳೂ ಆದ ಶ್ರೀಮಾನ್ ಕೆ. ಎ. ವೆಂಕಟರಾಮಯ್ಯನವರು ಕಳೆದ ಎರಡು ವರ್ಷಗಳ ಹಿಂದೆಯೇ ಸೂಚಿಸಿದ್ದರು. ಆದರೆ ಅದನ್ನು ಕೈಕೊಳ್ಳಲು ನನಗೆ ಧೈರ್ಯವಾಗಲಿಲ್ಲ. ಯಾಕಂದರೆ ನನಗೆ ಹಿಂದೀ ಭಾಷೆಯ ಪರಿಚಯ ಸಾಕಷ್ಟಿರುವದಿಲ್ಲ. ಇದಲ್ಲದೆ ವೈಯಕ್ತಿಕ ತೊಂದರೆಗಳೂ ಇದ್ದವು. ಆದರೂ ಕೊನೆಗೆ ಅವರ ಪ್ರೇಮಪೂರ್ವಕವಾದ ಆಗ್ರಹವನ್ನು ಮೀರುವದು ನನ್ನಿಂದಾಗಲಿಲ್ಲ. ಅವರು ನನಗೆ ಅವಶ್ಯವಾದ ಸಮಯವನ್ನು ಒದಗಿಸಿಕೊಟ್ಟರು. ಅ. ಭಾ. ಚರ್ಖಾಸಂಘದ ಮಂತ್ರಿಗಳಾದ ಪೂಜ್ಯ, ಜಾಜೂಜಿಯವರೂ ನನ್ನನ್ನು ಪ್ರೋತ್ಸಾಹಗೊಳಿಸಿದರು. ಈ ಬಗ್ಗೆ ಅವರೀರ್ವರಿಗೂ ನನ್ನ ಕೃತಜ್ಞತೆಗಳನ್ನು ಸಲ್ಲಿಸದಿರಲಾರೆನು.

'ಚರಕ ಸಂಘದ ಹೊಸ ರೂಪು' ಇದು ಮೊದಲನೆಯ ಪುಸ್ತಕವು. ಇದಲ್ಲದೆ 'ಕತಾಯೀಗಣಿತ,' 'ವಸ್ತ್ರ ಸ್ವಾವಲಂಬಿಗಳ ಕೈಪಿಡಿ,' 'ವಸ್ತ್ರ ಸ್ವಾವಲಂಬನ ಮಾರ್ಗದರ್ಶಿಕ,' ತಕಲಿಯಿಂದ ನೂಲುವದೆಂತು ಎಂಬೀ ಪುಸ್ತಕಗಳೂ ಮುದ್ರಣಕ್ಕೆ ಸಿದ್ಧವಾಗಿವೆ. ಅವೂ ತೀವ್ರದಲ್ಲಿಯೇ ಹೊರಬೀಳುವವು.

ಕರ್ನಾಟಕದಲ್ಲಿಯ ಖಾದೀ ಪ್ರೇಮಿಗಳೂ, ಕಾರ್ಯಕರ್ತರೂ, ವಿದ್ಯಾರ್ಥಿಗಳೂ, ಈ ಸಾಹಿತ್ಯದ ಲಾಭ ಪಡೆದುಕೊಳ್ಳುವದಾದರೆ ನಾನು ಕೃತಾರ್ಥನಾದೆನೆಂದು ಭಾವಿಸುವೆನು.

ನಾನು ಬರೆದ ಪುಸ್ತಕಗಳನ್ನು ಓದಿ ಹಲವು ತಿದ್ದುಪಡಿಗಳನ್ನು ಸೂಚಿಸಿದ್ದಕ್ಕಾಗಿ ನನ್ನ ಮಿತ್ರರಾದ ಶ್ರೀ. ಪುಂಡಲೀಕಜಿ ಕಾತಗಡೆ, ಶ್ರೀ ರಾ. ವೇ. ವಡವಿ (ಕರ್ನಾಟಕ ಚ. ಸಂಘದ ಮಂತ್ರಿ) ಇವರಿಗೂ ಇತರ ಮಿತ್ರರಿಗೂ ನನ್ನ ವಂದನೆಗಳನ್ನರ್ಪಿಸುವೆನು.

ನನ್ನ ಬಿನ್ನಹವನ್ನು ಮನ್ನಿಸಿ, ತಮ್ಮ ಅನೇಕ ಕಾರ್ಯಕಲಾಪದಲ್ಲಿ ಸಮಯ ಸಾಧಿಸಿ, ಮುನ್ನುಡಿ ಬರೆದು ನನ್ನನ್ನು ಪ್ರೋತ್ಸಾಹಿಸಿದ ಶ್ರೀಮಾನ್ ದಿವಾಕರ ರಂಗರಾಯರಿಗೂ ನನ್ನ ವಂದನೆಗಳನ್ನರ್ಪಿಸುವೆನು.

ಹಳೇ ಹುಬ್ಬಳ್ಳಿ
ತಾ. ೨೦-೪-೪೭

ಶ್ರೀ. ರಾ. ಸಾವಕಾರ.

ನಾಲ್ಕು ಮಾತು.

'ಖಾದಿ' ಎಂಬುದು ಗಾಂಧೀಜಿಯವರ ಮಹಾಸೂತ್ರಗಳಲ್ಲಿ ಒಂದು. ಅದರ ಅರ್ಥವು ಗಂಭೀರ ಹಾಗು ವ್ಯಾಪಕವಿದ್ದು ವಿಕಸನಶೀಲವಿರುವದು. ಅವರ ಜೀವನದ ವಿಕಾಸವಾಗುತ್ತ ಹೋದಂತೆ ಅವರ ತತ್ವವಿಚಾರಗಳು ಪ್ರಗತಿ ಹೊಂದುತ್ತ ಹೋದಂತೆ ಖಾದಿಯ ಅರ್ಥವು ಹೆಚ್ಚೆಚ್ಚು ವ್ಯಾಪಕವಾಗುತ್ತ ಹೋಗುವದು.

ಖಾದಿಯು ಗಾಂಧೀಜಿಯವರ ಹಿಂದುಸ್ತಾನದಲ್ಲಿಯ ಸಾರ್ವಜನಿಕ ಜೀವನದೊಡನೆಯೆ ಹುಟ್ಟಿದುದು ಎಂದು ಹೇಳಬಹುದು. ನನಗೆ ತಿಳಿದಂತೆ ಈಗಾಗಲೇ ಎರಡು ಸಾರೆ ಗಾಂಧೀಜಿಯವರು ಖಾದಿಗೆ ಎರಡು ಸಂಸ್ಕರಣಗಳನ್ನು ಕೊಟ್ಟಿದ್ದಾರೆ. ಈ ನವಸಂಸ್ಕರಣವು ಮೂರನೆಯದು ಎಂದು ಹೇಳಬಹುದು.

ಖಾದಿಗೆ ಅವರು ಈಗ ಹೊಸ ಅರ್ಥ ಹೇಳಿದ್ದಾರೆಂದು ಇದರ ಅರ್ಥವಲ್ಲ. ಅವರ ಮಟ್ಟಿಗೆ, ಅವರ ಮನೋರಂಗದಲ್ಲಿ ಖಾದಿಯು ಯಾವಾಗಲೂ ಒಂದು ಅಹಿಂಸಾಮಯ ಜೀವನದ ಗುರುತು, ಆರ್ಥಿಕ ವಿಕೇಂದ್ರೀಕರಣದ ಚಿನ್ಹ, ಸಾದಾ ಜೀವನದ ಪ್ರತೀಕ, ಯಂತ್ರರಹಿತ ಉತ್ಪತ್ತಿಯ ಧ್ವಜ. ಆ ಖಾದಿಯ ಉದ್ಯೋಗದ ಪ್ರಸಾರ ಹೆಚ್ಚುತ್ತ ಹೋದಂತೆ ಅದು ವ್ಯವಹರಣೆಯಲ್ಲಿ ಬರುತ್ತ ಹೋದಂತೆ ತಮ್ಮ ಆದರ್ಶದಿಂದ ಆ ವ್ಯವಹಾರವು ಎಷ್ಟು ದೂರವಿರುವದೆಂಬುದು ಅವರಿಗೆ ಹೊಳೆಯುತ್ತ ಹೋಯಿತು. ಆದುದರಿಂದ ಅವರು ಆಯಾ ಕಾಲಕ್ಕೆ ತಮ್ಮ ಆದರ್ಶದ ಪುನರುಚ್ಚಾರ ಮಾಡುತ್ತ ಬಂದಿರುವರು. ಪ್ರತಿಸಾರೆ ಅವರು ಮಾಡಿದ ಈ ಬಗೆಯ ಪುನರುಚ್ಚರಣವೆ ಖಾದಿಯ ಒಂದು ನವಸಂಸ್ಕರಣ ಎಂದು ಹೇಳಬಹುದು.

ನನಗೆ ತಿಳಿದ ಮಟ್ಟಿಗೆ ಈಗಾಗಲೇ ಈ ಬಗೆಯ ಎರಡು ಸಂಸ್ಕರಣಗಳು ಆಗಿವೆ, ಮೊದಲು ಖಾದಿ ಎಂಬುದೊಂದು ಹಳ್ಳಿಗರ ಪೂರಕ ಉದ್ಯೋಗ, ಸತ್ತು ಹೋದ ಇಲ್ಲವೆ ಸಾಯುತಿರುವ ಹಿಂದುಸ್ತಾನದ ಗ್ರಾಮೋದ್ಯೋಗಗಳ ಹಾಗು ಕೈಗಾರಿಕೆಗಳ ಪುನರುಜ್ಜೀವನದ ಪ್ರತೀಕ ಎಂದು ಮಾತ್ರ ಜನರು ಹಾಗು ಖಾದಿ ಕಾರ್ಯಕರ್ತರು ತಿಳಿದರು. ಗಾಂಧೀಜಿಯವರು ಇದನ್ನು ನೋಡಿ ೧೯೩೪ರಲ್ಲಿ ಖಾದಿಯು "ಜೀವನವೇತನ" ದ ಪ್ರತೀಕವಾಗಲಿಕ್ಕೆ ಬೇಕು ಎಂದು ಪ್ರತಿಪಾದಿಸಿದರು. ಎಂಟು ತಾಸು ನೂಲುವವರಿಗೆ ಹೊಟ್ಟೆ ತುಂಬುವಷ್ಟು ವೇತನ ದೊರೆಯಲಿಕ್ಕೇ ಬೇಕು; ಹಾಗೆ ವೇತನಕೊಡದೆ ಸಿದ್ಧಪಡಿಸಿದ ಖಾದಿ ನಿಜವಾದ ಖಾದಿಯೇ ಅಲ್ಲ ಎಂದು ಸಾರಿದರು. ಇದು ಖಾದಿಯ ಮೊದಲನೆ ಸಂಸ್ಕರಣ ಎಂದು ಹೇಳಬಹುದು.

ಗಾಂಧೀಜಿಯವರು ಈ ತತ್ವವನ್ನು ಪ್ರತಿಪಾದಿಸಿ ಅದನ್ನು ಚರಖಸಂಘದವರು ವ್ಯವಹಾರದಲ್ಲಿ ತರಲು ಪ್ರಯತ್ನಮಾಡಿದ ಬಳಿಕ ಕೂಡ ಖಾದಿ ನೂಲುವವರು ನೇಯುವವರು ಖಾದೀಧಾರಿಗಳಾಗದೆ ಕೇವಲ ಕೂಲಿಗಾಗಿ ನೂಲುವದನ್ನು ನೇಯುವದನ್ನು ಅವರು ಕಂಡು ಹಿಡಿದರು. ಆದುದರಿಂದ ೧೯೩೮-೩೯ರಲ್ಲಿ ಖಾದೀ ಸ್ವಾವಲಂಬನದ ತತ್ವವನ್ನು ಗಾಂಧೀಜಿಯವರು ಹೆಚ್ಚು ಜೋರಿನಿಂದ ಪ್ರತಿಪಾದಿಸಿ ಅದಕ್ಕೆ ಚಾಲನೆ ಕೊಟ್ಟರು. ಇದು ಖಾದಿಯ ದ್ವಿತೀಯ ಸಂಸ್ಕರಣವೆನ್ನಬಹುದು.

ಮುಂದೆ ಇದರಿಂದಲೂ ಖಾದಿಯ ಪೂರ್ಣ ಅರ್ಥವು ವ್ಯಕ್ತವಾಗದೆ ಹೋಯಿತು. ಗಾಂಧೀಜಿಯವರ ಆದರ್ಶವು ವ್ಯವಹಾರದಲ್ಲಿ ಇಳಿಯದೆ ಹೋಯಿತು. ಆದುದರಿಂದ ಈಗ ಆಗಾಖಾನರ ಅರಮನೆಯಿಂದ ಮುಕ್ತರಾಗಿ ಹೊರಗೆ ಬಂದ ಬಳಿಕ ಗಾಂಧೀಜಿ

ಯವರು ಈ ಪುಸ್ತಕದಲ್ಲಿ ಹೇಳಲಾದ ಮೂರನೆ ಸಂಸ್ಕರಣವನ್ನು ಪ್ರತಿಪಾದಿಸಿದರು. ಅದೇ ಈಗ ಖಾದಿಯು ನವಸಂಸ್ಕರಣ ಎಂದೆನಿಸುವದು.

ಖಾದಿಯು ಗ್ರಾಮದ ಪುನರುಜ್ಜೀವನ ಮುಖ್ಯ ಸಾಧನ, ಅಲ್ಲಿಯ ಆರ್ಥಿಕ ಜೀವನದ ಕೇಂದ್ರ, ಆರ್ಥಿಕ ವಿಕೇಂದ್ರೀಕರಣದ ಸಾಧನ ವಿಶೇಷ, ಸ್ವಾವಲಂಬಿ ಹಾಗು ಸ್ವಯಂಪೂರ್ಣಪದ್ಧತಿಯ ತಳಹದಿ. ಹೀಗಿರುವದರಿಂದ ಸಮಗ್ರ ಗ್ರಾಮಸೇವೆಯ ಮಧ್ಯ ಬಿಂದುವೆಂದು, ಅಹಿಂಸಾಮಯ ಸಮಾಜ ರಚನೆಯ ಏಕಮೇವ ಮಾರ್ಗವೆಂದು ಗಾಂಧೀಜಿಯವರು ಈಗ ಈ ನವಸಂಸ್ಕರಣವನ್ನು ಪ್ರತಿಪಾದಿಸುತಿರುವರು.

ಗಾಂಧೀಜಿ ಎಂದರೆ ಕೇವಲ ರಾಜಕೀಯ ವ್ಯಕ್ತಿಯಲ್ಲ. ಇಡೀ ಮಾನವೀ ಜೀವನಕ್ಕೆ ಒಂದು ಹೊಸ ರೀತಿಯನ್ನು ಕಲ್ಪಿಸಲಿಕ್ಕೆ ಗಾಂಧೀಜಿಯವರ ಅವತಾರವಿರುವದು. ಮಾನವ ಕುಲದ ಭವಿಷ್ಯವು ಉಜ್ವಲ, ಶಾಂತಿಮಯ, ವ್ಯವಸ್ಥಿತ ಆಗಬೇಕಾದರೆ ಇದೇ ಒಂದು ಮಾರ್ಗವೆಂದು ಅವರು ಘಂಟಾಘೋಷವಾಗಿ ಆಹ್ವಾನ ಕೊಡುತಿರುವರು. ಅವರು ಹೇಳುತಿರುವ ಮಾತುಗಳನ್ನು ಆ ದೃಷ್ಟಿಯಿಂದ ಪರ್ಯ್ಯಾಲೋಚಿಸುವದು ಅತ್ಯವಶ್ಯ. ಹಾಗೆ ಮಾಡಲು ಈ ಪುಸ್ತಕವು ಬಹಳ ಸಹಾಯಕವಾಗುವದು.

ಇದು ಹೇಳಿಕೇಳಿ ಭಾಷಾಂತರವಿರುವದು. ಮೂಲ ಹಿಂದೀ ಸಹ ಸ್ಪಷ್ಟವಿದ್ದರೂ ಅಷ್ಟೊಂದು ಸುಂದರ ಅಥವಾ ಲಾಲಿತ್ಯ ಪೂರ್ಣ ಭಾಷೆಯಲ್ಲಿ ಬರೆಯಲಾಗಿಲ್ಲ. ಆದುದರಿಂದ ಕೇವಲ ಭಾಷೆಯ ಕಡೆಗೆ ನೋಡದೆ ನಾವು ಈ ಪುಸ್ತಕದಲ್ಲಿಯ ಅರ್ಥಗರ್ಭದ ಕಡೆಯೆ ಹೆಚ್ಚು ಲಕ್ಷಗೊಟ್ಟು ಓದಲಿಕ್ಕೆ ಬೇಕು. ಕನ್ನಡದಲ್ಲಿ ಈ

ಬಗೆಯ ಪುಸ್ತಕಗಳೇ ಕಡಿಮೆ. ಹೀಗಿರುವದರಿಂದ ನಾವು ಇಂಥ ಪುಸ್ತಕಗಳನ್ನು ಪ್ರೀತಿಯಿಂದ ಸ್ವಾಗತಿಸಿ ಪ್ರೋತ್ಸಾಹಿಸಿ ಅವುಗಳಲ್ಲಿಯ ತತ್ವಾರ್ಥಗಳನ್ನು ಪರಿಶೀಲಿಸಿ ಲಾಭ ಪಡೆಯುವದು ನಮ್ಮ ಕರ್ತವ್ಯವು.

ರಂಗನಾಥ ದಿವಾಕರ.

೫-೧೨-೪೬.



ಮಹಾತ್ಮಾ ಗಾಂಧಿಯವರ
ಸೂತ್ರರೂಪದಲ್ಲಿಯ ಸಂದೇಶ.

“ ನೂಲಿರಿ, ಅರಿತುಕೊಂಡು ನೂಲಿರಿ, ನೂಲುವವರು ಖಾದೀ ಧರಿಸಿರಿ, ಖಾದೀಧಾರಿಗಳು ಅವಶ್ಯ ನೂಲಿರಿ.”

“ರಾಟೆ ಅರ್ಥಾತ್ ನೂಲುವುದು ಅಹಿಂಸೆಯ ಪ್ರತೀಕವಾದುದೆಂದು ಮನಗಾಣುವುದೇ ‘ಅರಿತುಕೊಂಡು’ ಎಂಬುದರ ಅರ್ಥವು. ಚನ್ನಾಗಿ ಮನನ ಮಾಡಿದರೆ ಇದು ಪ್ರತ್ಯಕ್ಷವಾಗುವುದು.

ಹೊಲದಲ್ಲಿ ಹತ್ತಿ ಆರಿಸಿ ಬಿಡಿಸುವುದು, ಹತ್ತಿ ಅರೆದು ಕಾಳು ತೆಗೆಯುವುದು, ತುನಾಯಿಪದ್ಧತಿಯಿಂದ ಹಂಜೀ ಮಾಡುವುದು, ನೂಲುವುದು, ನಂಬರು ಕಂಡು ಹಿಡಿಯುವುದು ಜೋಡೆಳೆ ಮಾಡಿ ಲಡಿ ಸುತ್ತುವುದು,ಮುಂತಾದ ಎಲ್ಲ ಕ್ರಿಯೆಗಳು ‘ನೂಲಿರಿ’ ಎಂಬೀ ಶಬ್ದದಲ್ಲಿ ಅಡಕವಾಗಿರುವವು.”

ಸೇವಾಗ್ರಾಮ
ತಾ||೨೮-೩-’೪೫.

ಮೋ. ಕ. ಗಾಂಧಿ.

ಸೂತ್ರಯಜ್ಞ



ಈ ಸಲ ಸೆರೆಮನೆಯಲ್ಲಿ 'ಮಾರ್ಕ್ಸ'ರ ಸಾಹಿತ್ಯ ಹಾಗೂ ತದನುಸಾರವಾಗಿ ರಶಿಯಾ ದೇಶದಲ್ಲಿ ನಡೆದಿರುವ ಅದ್ಭುತ ಪ್ರಯೋಗ ಇವುಗಳ ಬಗ್ಗೆ ನನಗೆ ಅಲ್ಲಿ ದೊರೆತ ಸಾಹಿತ್ಯ ಓದಿದೆನು. ಆ ಪ್ರಯೋಗವೆತ್ತ, ನಮ್ಮ ರಾಟಿ ಎತ್ತ ! ಇಲ್ಲಿಯಂತೆ ಅಲ್ಲಿಯಾದರೂ ಎಲ್ಲ ಜನತೆಗೂ 'ಯಜ್ಞ'ದಲ್ಲಿ ಭಾಗ ವಹಿಸಲು ಕರೆ ಹೋಗುತ್ತಿರುವದು. ಆದರೆ ಇಲ್ಲಿಯ ಹಾಗೂ ಅಲ್ಲಿಯ ಭೇದವೆಂದರೆ ಪೂರ್ವ-ಪಶ್ಚಿಮ ಅಥವಾ ದಕ್ಷಿಣ-ಉತ್ತರಗಳಂತಿರುವದು. ನಮ್ಮ ರಾಟಿ ಎತ್ತ, ಅಲ್ಲಿಯ ಉಗಿ ಹಾಗೂ ವಿದ್ಯುಚ್ಛಕ್ತಿಯಿಂದ ನಡೆಯುತಿರುವ ಯಂತ್ರಗಳೆತ್ತ ! ಆದರೂ ಅವುಗಳಿಗಿಂತ ಬಸವನ ಹುಳದಂತೆ ಮಂದಗತಿಯಿಂದ ತಿರುಗುತ್ತಿರುವ ರಾಟಿಯೇ ನನಗೆ ಪ್ರಿಯಕರ. ರಾಟಿಯು ಅಹಿಂಸೆಯ ಪ್ರತೀಕ. ಹಾಗೂ ಕೊನೆಗೆ ಅಹಿಂಸೆಗೇ ವಿಜಯವುಂಟಾಗುವದು. ಆದರೆ ರಾಟಿಯ ಪೂಜಾರಿಗಳಾದ ನಾವು ಬುದ್ಧಿ ಹೀನರಾದರೆ ಅದು ಲಜ್ಜಾಸ್ಪದ. ಆದರಿಂದ ಅಹಿಂಸೆಯನ್ನೂ ನಾವು ನಾಚಿಕೆಗೆ ಈಡು ಮಾಡುವೆವು.

ಸೂತ್ರಯಜ್ಞದ ಪ್ರವೃತ್ತಿಯು ಒಳಿತಾಗಿರುವದು. ಅದರಲ್ಲಿ ಪ್ರಾಣ-ಪ್ರತಿಷ್ಠಾಪನೆ ಮಾಡುವದು ಅಗತ್ಯವಾಗಿದೆ. ಯಂತ್ರಗಳಂತೆ ರಾಟಿಗೂ ಶಾಸ್ತ್ರವಿದೆ, ರಾಟಿಯ ಶಾಸ್ತ್ರವನ್ನು ನಾವಿನ್ನೂ ರೂಪುಗೊಳಿಸಿರುವದಿಲ್ಲ. ಆ ಸಲುವಾಗಿ ಆಳವಾದ ಅಧ್ಯಯನವು ಅವಶ್ಯ. ಶ್ರದ್ಧೆಯಿಲ್ಲದ ಜ್ಞಾನ ನಿರರ್ಥಕವಿರುವಂತೆ ಜ್ಞಾನರಹಿತ ಶ್ರದ್ಧೆಯು ಅಂಧವಿರುವದು.

— ಗಾಂಧೀಜಿ.

ಓಂ

ಮುನ್ನುಡಿ

ಮಹಾತ್ಮಾ ಗಾಂಧಿಯವರು ಇ. ಸ. ೧೯೪೪ ರಲ್ಲಿ ಸೆರೆ-ಮನೆಯಿಂದ ಬಿಡುಗಡೆ ಹೊಂದಿ ಅಗಸ್ಟ ತಿಂಗಳಲ್ಲಿ ಸೇವಾ ಗ್ರಾಮಕ್ಕೆ ಬಂದುತಲ್ಪಿದರು. ಅಂದಿನಿಂದ ಅವರು ಚರಕ ಸಂಘದ ಕಾರ್ಯ ಪದ್ಧತಿ ಹಾಗೂ ಗೊತ್ತು ಗುರಿಗಳಲ್ಲಿ ಬದಲಾವಣೆಗಳನ್ನು ಮಾಡುವ ಕುರಿತು ಚರ್ಚೆಯನ್ನು ಪ್ರಾರಂಭಿಸಿದರು. ಆಳವಾದ ವಿಚಾರ ಮಂಥನವಾಯಿತು. ಇದರ ಪರಿಣಾಮವಾಗಿ ಚರಕ ಸಂಘದ ಕಾರ್ಯ ಪದ್ಧತಿಯಲ್ಲಿ ಬಹಳ ಮಾರ್ಪಾಟುಗಳಾಗಬೇಕೆಂದು ನಿರ್ಧಾರವಾಯಿತು. ಆ ಮಾರ್ಪಾಟುಗಳಲ್ಲಿ ಹೊಸ ಸಂಗತಿಗಳನೇಕ ಅಡಕವಾಗಿರುವವು. ಇವೆಲ್ಲವುಗಳ ಸಂಕಲನಕ್ಕೆ 'ಚರಕ ಸಂಘದ ಹೊಸ ರೂಪು' ಎನ್ನುವದು ಉಚಿತ. ಈ ಬಗ್ಗೆ ಗಾಂಧೀಜಿಯರು ಕಾಲ ಕಾಲಕ್ಕೆ ಮಾಡಿದ ಭಾಷಣ, ಅವರು ಕಾರ್ಯಕರ್ತರೊಂದಿಗೆ ಮಾಡಿದ ಚರ್ಚೆ, ಸಂಘದ ವಿಶ್ವಸ್ತ ಮಂಡಲದ ಸಭೆಗಳಲ್ಲಾದ ವಿಚಾರವಿನಿಮಯ ಹಾಗೂ ಗೊತ್ತುವಳಿಗಳು, ಮತ್ತು ಅವುಗಳನ್ನು ಕಾರ್ಯ ರೂಪದಲ್ಲಿ ತರಲು ಕೈಕೊಳ್ಳಬೇಕಾದ ಯೋಜನೆಗಳು, ಇವೆಲ್ಲವುಗಳ ಬಗ್ಗೆ ಸಂಘದ ಪರಿಪತ್ರಗಳಲ್ಲಿ ಅನೇಕ ಲೇಖಗಳು ಪ್ರಕಟವಾಗಿರುವವು. ಇವುಗಳಲ್ಲಿ ಗಾಂಧೀಜಿ ಹಾಗೂ ಸಂಘದ ಮಂತ್ರಿಗಳ ನಡುವೆ ದಿನಾಲು ಒಂದು ತಾಸಿನಂತೆ ಏಳು ದಿನಗಳವರೆಗೆ ನಡೆದ ಚರ್ಚೆಯು ವಿಶೇಷ ಮಹತ್ವದ್ದಾಗ್ಗಿದೆ. ಈ ಚರ್ಚೆಯು ಪುಸ್ತಕ ರೂಪದಿಂದ ಪ್ರಕಟವಾಗಿದೆ. ಆದರೆ ಅದು ಕೇವಲ ಪ್ರಮುಖ ಖಾದೀ ಕಾರ್ಯಕರ್ತರಿಗೆ ಮಾತ್ರ ಮುಟ್ಟಿವೆ. ಅದಕ್ಕೆ ಬೇಡಿಕೆಯೂ ಬಹಳ ಇದ್ದಿತು-

ಈ ಸಂಗತಿಗಳು ಕಾಲ ಕಾಲಕ್ಕೆ ಪ್ರಕಟವಾಗುತ್ತಿದ್ದರೂ ಜನತೆಗೆ ಅವುಗಳ ಸಂಪೂರ್ಣ ಪರಿಚಯವಾಗದಾಯಿತು. ಅವು ಬೇರೆ ಬೇರೆಯಾಗಿ ಪ್ರಕಟವಾಗಿರುವದರಿಂದ ಅವುಗಳ ಸಂಪೂರ್ಣ ಚಿತ್ರವು ಒಂದೆಡೆ ದೊರೆಯದಾಯಿತು. ರಚನಾತ್ಮಕ ಕಾರ್ಯದಲ್ಲಿ ತೊಡಗಿದ ಕಾರ್ಯಕರ್ತರಲ್ಲಿ ಅನೇಕರು ಹಾಗೂ ಇತರರು ಈ ಹೊಸರೂಪಿನ ನಿಜ ಸ್ವರೂಪವನ್ನರಿಯಲು ಅವಶ್ಯವಿರುವ ಎಲ್ಲ ಸಂಗತಿಗಳನ್ನು ಒಂದೆಡೆ ಅವ್ಯಾಹತವಾಗಿ ಓದಲು ಉತ್ಸುಕರಾಗಿದ್ದರು. ಈ ಬೇಡಿಕೆಯನ್ನು ಪೂರೈಸುವ ಸಲುವಾಗಿಯೇ ಅವುಗಳನ್ನು ಈ ಪುಸ್ತಕ ರೂಪದಲ್ಲಿ ಪ್ರಕಟಿಸಿರುವೆವು. ಇದರಲ್ಲಿ ಮೇಲೆ ಹೇಳಿದ ಏಳು ದಿನಗಳ ಚರ್ಚೆಯೂ ಸ್ವಲ್ಪ ಸಂಶೋಧಿತ ರೂಪದಲ್ಲಿ ಸಮಾವಿಷ್ಟವಾಗಿದೆ.

ಈ ಚಿಕ್ಕ ಪುಸ್ತಕವನ್ನು ಓದುವದರಿಂದ ಓದುಗರಿಗೆ ಚರಕ ಸಂಘದ ಗುರಿ ಹಾಗೂ ಹೊಸ ಕಾರ್ಯ ಪದ್ಧತಿ ಇವುಗಳ ಸಂಪೂರ್ಣ ಪರಿಚಯವಾಗುವದೆಂದೂ, ಖಾದೀ ಪ್ರೇಮಿಗಳು ಸಂಘದ ಹೊಸ ಕಾರ್ಯಕ್ರಮವನ್ನು ಒಮ್ಮನಸ್ಸಿನಿಂದ ಒಪ್ಪಿಕೊಳ್ಳುವರೆಂದೂ ಆಶಿಸುವೆವು.

ಸೇವಾಗ್ರಾಮ
೧೯-೭-'೪೫

ಶ್ರೀಕೃಷ್ಣದಾಸ ಜಾಜೂ
ಮಂತ್ರಿ
ಅಖಿಲ ಭಾರತ ಚರಕ ಸಂಘ.

ಚರಕ ಸಂಘದ ಹೊಸ ರೂಪ
ಮೊದಲನೆಯ ಸಭೆ

ಆಗಸ್ಟ ಆಂದೋಲನದ ಮೊದಲು ೧೯೪೨ನೇ ಜೂನ ತಿಂಗಳಲ್ಲಿ ಚರಕ ಸಂಘದ ಸಭೆಯೊಂದು ಸೇರಿತ್ತು. ಮುಂದೆ ಒಂದುವರೆ ತಿಂಗಳಲ್ಲಿಯೇ ಮಹಾತ್ಮಾ ಗಾಂಧಿ, ಸರದಾರ ವಲ್ಲಭ ಭಾಯಿ ಪಟೇಲ, ಬಾಬೂ ರಾಜೇಂದ್ರ ಪ್ರಸಾದ ಮೊದಲಾದ ಸಂಘದ ಟ್ರಸ್ಟಿಗಳು ಸೆರೆಮನೆಯಲ್ಲಿ ಬಂಧಿಸಲ್ಪಟ್ಟರು. ಇನ್ನುಳಿದ ಟ್ರಸ್ಟಿಗಳು ಸಹ ಯಾವಾಗ್ಗೆ ಸೆರೆಮನೆ ಸೇರುವರೆಂಬ ಭರವಸೆ ಇಲ್ಲದ್ದರಿಂದ ಇ. ಸ. ೧೯೪೨ನೇ ಅಗಸ್ಟ ೨೯, ೩೦ ತಾರೀಖುಗಳ ದಿನ ಸಂಘದ ಸಭೆ ಕರೆಯಲಾಯಿತು. ವಿಶೇಷತಃ ಟ್ರಸ್ಟಿಗಳ ಅನುಪಸ್ಥಿತಿಯಲ್ಲಿ ಸಂಘದ ಕಾರ್ಯವನ್ನು ಹೇಗೆ ಸಾಗಿಸಬೇಕೆಂಬ ಬಗ್ಗೆ ಆ ಸಭೆಯಲ್ಲಿ ಗೊತ್ತು ಮಾಡಲಾಯಿತು. ಆ ಸಭೆಯುನಂತರ ಮತ್ತೆ ಕೆಲವು ಟ್ರಸ್ಟಿಗಳು ಬಂಧಿಸಲ್ಪಟ್ಟರು. ಆ ನಂತರ ಕೋರಂ ಆಗುವದೇ ಶಕ್ಯವಾಗದ್ದರಿಂದ ಸಂಘದ ಸಭೆಯನ್ನು ಕರೆಯಲು ಸಾಧ್ಯವೇ ಆಗಲಿಲ್ಲ. ಎರಡು ವರ್ಷಗಳ ದೀರ್ಘ ಅವಧಿಯನಂತರ ಇ. ಸ. ೧೯೪೪ರಲ್ಲಿ ಪೂಜ್ಯ ಗಾಂಧೀಜಿ ಹಾಗೂ ಇತರ ಹಲವರು ಟ್ರಸ್ಟಿಗಳು ಕಾರಾವಾಸದಿಂದ ಬಿಡುಗಡೆ ಹೊಂದಿದರು. ಇ. ಸ. ೧೯೪೪ನೇ ಸಪ್ಟಂಬರ ೧, ೨, ೩ ತಾರೀಖುಗಳ ದಿನ ಸೇವಾಗ್ರಾಮದಲ್ಲಿ ಸಂಘದ ಸಭೆ ಸೇರಿಸಲಾಯಿತು. ಸಭೆಯು ಜರುಗಿದ ಮೂರೂ ದಿನ ಮಹಾತ್ಮಾ ಗಾಂಧಿಯವರ ಮಹತ್ವದ ಭಾಷಣಗಳಾದವು. ಅವುಗಳ ಸಾರಾಂಶವನ್ನು ಈ ಕೆಳಗೆ ಕೊಟ್ಟಿರುವೆವು.

ಮೊದಲನೆಯ ದಿನ ೧-೯-೧೯೪೪ :—

ನಾವು ಇಲ್ಲಿ ಕೂಡಿದುದು ಎರಡು ವರ್ಷಗಳು ಮಿಕ್ಕಿಹೋದ ನಂತರ. ಈ ಅವಧಿಯಲ್ಲಿ ಹೊರಗೆ ನಡೆದ ಸಂದರ್ಭಗಳ ಅಲ್ಪ ಸ್ವಲ್ಪ ಪರಿಚಯ ನನಗಾಗಿದೆ. ಅಲ್ಪ ಸ್ವಲ್ಪ ಎಂದು ಹೇಳುವ ಉದ್ದೇಶವೆಂದರೆ ಪರಿಪೂರ್ಣವಾಗಿಲ್ಲವೆಂಬದು. ಈ ಎರಡು ವರ್ಷಗಳೆಂದರೆ ಒಂದು ಯುಗವನ್ನೇ ಕಳೆದಂತಾಯಿತೆನ್ನಬಹುದು. ಈ ಅವಧಿಯಲ್ಲಿ ಹಿಂದುಸ್ಥಾನಕ್ಕೆ ಒಂದು ಗಂಡಾಂತರವೇ ಬಂದೊದಗಿತು. ಇದರಲ್ಲಿ ಚರಕ-ಸಂಘವಾದರೂ ಸುರಕ್ಷಿತವಾಗಿ ಉಳಿಯುವದು ಹೇಗೆ ?

ನಾವು ತಿರುಗಿ ಕೂಡಿದ ಸದ್ಯದ ಪರಿಸ್ಥಿತಿಯಲ್ಲಿ ಸ್ವಲ್ಪ ಕೆಲಸ ಮಾಡಬಲ್ಲೆವು. ಆದರೆ ಅದು ನಮಗೆ ಸಾಲದು. ಚರಕ ಸಂಘದ ಸ್ವತ್ತಿನ ಬಹುಭಾಗವು ನಷ್ಟವಾಗಿದೆ. ಇಲ್ಲವೆ ಸರಕಾರದ ವಶಕ್ಕೆ ಹೋಗಿದೆ. ನಮ್ಮ ಸಂಗಡಿಗರಲ್ಲಿ ಹಲವರು ಇಲ್ಲಿ ಇರುವದಿಲ್ಲ. ನಾನು ಇಲ್ಲಿ ಕಾಂಗ್ರೆಸದ ಬಗ್ಗೆ ಹೇಳುತ್ತಿರುವದಿಲ್ಲ. ಆದರೆ ಚರಕ ಸಂಘಕ್ಕೆ ವಿಶೇಷ ಸೇವೆ ಸಲ್ಲಿಸಿದ ಹಾಗೂ ಸಂಘದ ವಿಶ್ವಸ್ತ ಮಂಡಲದ ಸಭಾಸದರಾಗಿದ್ದ ಹಲವರು ಇಲ್ಲಿ ಕಾಣಿಸುವದಿಲ್ಲ. ಆದರೂ ಇಲ್ಲಿದ್ದ ಜನರಿಂದಲೇ ಆಡಳತೆ ಸಾಗಬಲ್ಲದು. ಇದನ್ನು ನಿರ್ವಹಿಸುವ ಆಶ್ವಾಸನವು ಅವರಿಂದ ದೊರೆಯಬಹುದು.

ನಾನು ಸೆರೆಮನೆಯಲ್ಲಿ ಸಾಕಷ್ಟು ವಿಚಾರ ಮಾಡಿರುವೆನು. ಆದರ ಫಲಿತಾಂಶವನ್ನು ಸಂಕ್ಷಿಪ್ತವಾಗಿ ಇಲ್ಲಿ ವಿವರಿಸುವೆನು.

ಸೆರೆಮನೆಯಲ್ಲಿ ನನ್ನ ಮನಸ್ಸಿಗೆ ಹೊಳೆದ ಸಂಗತಿಗಳಲ್ಲಿ ಅತಿ ಮಹತ್ವದ್ದೆಂದರೆ ಚರಕ ಸಂಘದ ಅಸ್ತಿತ್ವವು ಅಳಿಯ

ಬಲ್ಲದು. ಅದನ್ನು ನಾಶಮಾಡಲು ಸರಕಾರವು ಸಾಕಷ್ಟು ಹೆಣಗಾಡಿತು. ನಮ್ಮ ಕಾರ್ಯವೇನೋ ತಕ್ಕಮಟ್ಟಿಗೆ ಸಾಗಿತ್ತು. ಆದರೆ ಸರಕಾರವು ಇಷ್ಟಪಟ್ಟಿದ್ದರೆ ನಮ್ಮನ್ನು ನಿರ್ನಾಮ ಮಾಡಬಹುದಾಗಿತ್ತೆಂಬದು ನನಗೆ ತೋಚಿತು. ಅಂದರೆ ಈ ದೇಶದಲ್ಲಿಯ ರಾಟೆಯ ಪ್ರವೃತ್ತಿಯು ಎಂಥ ಪರಿಸ್ಥಿತಿಯಲ್ಲಿಯೂ ನಿಲ್ಲಲಾರದೆಂಬ ನನ್ನ ಕಲ್ಪನೆಯು ಇದರಿಂದ ಸಿದ್ಧಿಸಲಿಲ್ಲ. ಕೂಡಲೆ ಸೋಲನ್ನೊಪ್ಪುವವನು ನಾನಲ್ಲ. ಆದರೆ ನಮ್ಮ ಜೀವಿತವು ಸರಕಾರದ ದಯೆಯ ಮೇಲೆ ಅವಲಂಬನವಾಗಿರುವದೆಂಬುದು ಸೆರೆಮನೆಯಲ್ಲಿ ನನಗೆ ಹೊಳೆಯಿತು. ಈ ಮಾತು ನನಗೆ ಚುಚ್ಚುತ್ತಿರುವದು. ನನ್ನ ಅಳವಿನೊಳಗಿನದಿದ್ದರೆ ಕೇವಲ ಈಶ್ವರನ ದಯೆಯಿಂದಲೇ ಬದುಕುವೆನು ಅನ್ಯರ ದಯೆಯಿಂದಲ್ಲ. ಹಾಗೆ ನೋಡಿದರೆ ಯಾವುದೇ ಮನುಷ್ಯನು ಅನ್ಯರ ನೆರವಿಲ್ಲದೆ ಜೀವಿಸಲಾರನು. ಇದು ಈಶ್ವರೀ ನ್ಯಾಯವು.

ನನ್ನ ಕಲ್ಪನೆ (ತತ್ವಪ್ರಣಾಲಿ)ಯಮೇಲೆ ನನ್ನ ಪ್ರವೃತ್ತಿಗಳೆಲ್ಲ ಅವಲಂಬಿಸಿರುವವು. ಆಗಲಿ ಬದುಕಬೇಕಾದರೆ ನಾನು ಕೇವಲ ಈಶ್ವರನ ದಯೆಯನ್ನು ಕೋರುವೆನು. ಅನ್ಯ ಯಾರಲ್ಲಿಯೂ ದಯೆಯ ಯಾಚನೆಯನ್ನು ಮಾಡೆನು. ಹೀಗಿದ್ದರೂ ಅನ್ಯರ ನೆರವಿಲ್ಲದೆ ಮನುಷ್ಯನ ನಿರ್ವಾಹವು ಸಾಗಲಾರದೆಂಬದು ಈಶ್ವರೀ ನ್ಯಾಯವದೆ. ಆದರೆ ಅಂಥ ನೆರವಿನ ವಿಷಯವನ್ನು ನಾನು ಈಗ ಎತ್ತುತ್ತಿರುವದಿಲ್ಲ.

ನನ್ನ ಪ್ರವೃತ್ತಿಗಳಿಗೆಲ್ಲ ಈ ಕಲ್ಪನೆಯೇ ಆಧಾರವು. ಚರಕಸಂಘದ ತಳಹದಿಯನ್ನಾದರೂ ಇದೇ ಕಲ್ಪನೆಯ ಆಧಾರಶಿಲೆಯ ಮೇಲೆ ನಿರ್ಮಿಸಲಾಗಿತ್ತು. ಅಹಿಂಸೆಯ ಮಾರ್ಗದಿಂದಲೇ ಹಿಂದುಸ್ಥಾನವು ಬದುಕಿ ಬಾಳಬೇಕಾದರೆ ಮತ್ತು ಉನ್ನತಿ ಹೊಂದ

ಬೇಕಾದರೆ ಅದು ರಾಟಿಯ ಬಲದಿಂದ ಮಾತ್ರ ಸಾಧ್ಯವಾಗುವದೆಂದೂ, ರಾಟಿಯೇ ಅದರ ಪ್ರತೀಕವಾಗಬಲ್ಲದೆಂದೂ, ದಕ್ಷಿಣ ಆಫ್ರಿಕೆಯಲ್ಲಿಯೇ ನಾನು ಮನಗಂಡಿದ್ದೆನು. ಇದರ ಪ್ರತೀಕಗಳೂ ನಮಗೆ ಶಕ್ತಿಪ್ರದವಾಗಬಹುದು. ಆದರೆ ಆ ಶಕ್ತಿಯು ಜಗತ್ತಿಗೆ ಕಲ್ಯಾಣ ಪ್ರದವಾಗದು. ನಾನು ಸೆರೆಮನೆಯಲ್ಲಿದ್ದಾಗ್ಗೆ ಹೀಗೆ ಆಲೋಚಿಸಿದೆನು, ನಮ್ಮ ರಾಟಿಯ ಕಾರ್ಯ ಸರಣಿಯಲ್ಲಿ ಹಲವು ದೋಷಗಳಿವೆ. ಅವುಗಳನ್ನು ತಿದ್ದಿಕೊಳ್ಳಬೇಕಾಗುವದು. ರಾಟಿಯನ್ನು ತಿರುಗಿಸಿರಿ ಎಂದು ನಾನು ಹಿಂದುಸ್ಥಾನಕ್ಕೆ ಹೇಳಿದೆನು. ಯಾವ ರೀತಿಯಲ್ಲಿ ಅದನ್ನು ತಿರುಗಿಸತಕ್ಕದ್ದೆಂಬದು ನನಗೆ ಚನ್ನಾಗಿ ಗೊತ್ತಿತ್ತು. ಆದರೆ ಅದನ್ನು ಯಾವ ದೃಷ್ಟಿಯಿಂದ ಹಾಗೂ ಯಾವ ಬುದ್ಧಿಯಿಂದ ತಿರುಗಿಸತಕ್ಕದ್ದೆಂಬದರ ಬಗ್ಗೆ ಸಾಕಷ್ಟು ಒತ್ತಿ ಹೇಳಲಿಲ್ಲ. ನಾನು ವ್ಯವಹಾರ ಕುಶಲನಿರುವೆನೆಂದು ನನ್ನ ತಿಳುವಳಿಕೆ. ವ್ಯವಹಾರಾಂಶಕ್ಕೇ ನನ್ನ ಸಂಗಡಿಗರು ಬಹಳ ಮಹತ್ವ ಕೊಡಹತ್ತಿದರು. ಅದನ್ನು ನಾನು ಸಹಿಸಿವೆನು. ಅದಕ್ಕೆ ನನ್ನ ಸಹಕಾರವನ್ನೂ ನೀಡಹತ್ತಿದೆನು. ಆದರೆ ಈಗ ಬರೀ ರಾಟಿಯನ್ನು ತಿರುಗಿಸಿರಿ ಎಂದು ನಾನು ಹೇಳಿದ ಮಾತ್ರಕ್ಕೆ ನಮ್ಮ ಕಾರ್ಯ ಸಾಗದು ಎಂದು ಮಾತ್ರ ನಾನು ಹೇಳುತ್ತಿರುವೆನು. ಈಗ ನಾವು ಬಹಳ ಮುಂದುವರಿದಿರುವೆವು.

ಇನ್ನು ಮುಂದೆ ಕಾರ್ಯವನ್ನು ಹೇಗೆ ಮುಂವರಿಸಬೇಕೆಂಬ ಬಗ್ಗೆ ನಾನು ವಿಚಾರ ಮಾಡಹತ್ತಿದ್ದೆನು. ನನ್ನ ಕೈಯಿಂದಲೇ ಸಂಘವನ್ನು ಏಕೆ ವಿಸರ್ಜನ ಮಾಡಬಾರದೆಂಬದನ್ನೂ ನಾನು ಆಲೋಚಿಸುತ್ತಿದ್ದೆ. ಸಂಘವು ತನ್ನ ನಾಶವನ್ನು ತಾನೇ ಏಕೆ ಮಾಡಿಕೊಳ್ಳಬಾರದೆಂಬದನ್ನೂ ನಾನು ಆಲೋಚಿಸುತ್ತಿರುವೆನು. ಇದ್ದ ಬಿದ್ದ ಸ್ಥಿರ ಚರ ಆಸ್ತಿಯನ್ನು ಜನತೆಯಲ್ಲಿ ಹಂಚಿಬಿಡ

ಬೇಕು ! ರಾಟಿಯ ಸಂದೇಶವನ್ನು ನಾವು ಮನೆ ಮನೆಗೆ ಮುಟ್ಟಿ ಸುವ ವರೆಗೆ ನಮ್ಮ ಕಾರ್ಯವು ಅಪೂರ್ಣವಾಯಿತೆಂದೇ ನನ್ನ ಮತ. ಇದೇ ಕಾರಣದಿಂದ ನಾವು ನಮ್ಮ ಆದರ್ಶದಿಂದ ನಾವು ಇನ್ನೂ ಬಹು ದೂರ ಉಳಿದಿರುವೆವು. ಏಳು ಲಕ್ಷ ಹಳ್ಳಿಗಳಿರು ವವು. ಇವುಗಳಲ್ಲಿ ನಮ್ಮ ರಾಟಿಯ ಚಟುವಟಿಕೆ ಯೆಂದರೇ ನೆಂಬುದರ ಅರಿವು ಸಹ ಇಲ್ಲದ ಹಳ್ಳಿಗಳು ಅನೇಕ ಇರುವವು. ಇದೇ ನಮ್ಮ ದೋಷ. ಈ ಬಗ್ಗೆ ತಾವು ಆಲೋಚಿಸಿರಿ.

ಈ ವಿಚಾರ ಲಹರಿಯಿಂದಲೇ ವಿಕೇಂದ್ರೀಕರಣದ ಕಲ್ಪ ನೆಯು ತಲೆ ದೋರಿತು. ಇದು ಸಫಲವಾದರೆ ಎಷ್ಟು ಒಳಿತಾ ಗುವದು ಎಂದು ನಾನು ಅಂದು ಕೊಂಡೆನು. ನನ್ನ ಮಾರ್ಗ ದಲ್ಲಿ ಅನೇಕ ತೊಂದರೆಗಳಿರುವವೆಂಬದನ್ನೂ ನಾನು ಆಲೋಚಿಸಿ ದೆನು. ರಾಟಿಯ ಬಗ್ಗೆ ನಾನು ಮಾಡಿದಷ್ಟು ವಿಚಾರ ಹಾಗೂ ಸಾಧನೆಗಳನ್ನು ಯಾರೂ ಮಾಡಿಲ್ಲವೆಂದು ನನ್ನ ಅಂಬೋಣ. ಯಾರಾದರೂ ಒಂದು ವೇಳೆ ಮಾಡಿರಬಹುದೇ ಎಂಬದೊಂದು ಪ್ರಶ್ನೆ. ಈ ನನ್ನ ಪ್ರತಿಪಾದನೆಯು ಗಂಭೀರವಾದುದು. ಇದ ರಲ್ಲಿ ಅಭಿಮಾನವೂ ಬೆರೆತಿದೆ. ಆದರೆ ಇದನ್ನು ಯೋಗ್ಯ ಸಮಯ ದಲ್ಲಿ ಹೇಳದಿದ್ದರೆ ಅದೊಂದು ನಮ್ರತೆಯ ವಿಡಂಬನೆಯೇ ಸರಿ. ಸೆರೆಮನೆಯಲ್ಲಿಯಾದರೂ ರಾಟಿಯನ್ನುಳಿದು ಇತರ ಯಾವ ವಿಷ ಯದ ಬಗ್ಗೆಯೂ ನಾನು ವಿಚಾರಿಸುತ್ತಿರಲಿಲ್ಲ. ಈ ನನ್ನ ಅಂಬೋ ಣವು ದೊಡ್ಡದಿದೆ. ಇದರಲ್ಲಿ ಅಭಿಮಾನವೂ ಇರಬಹುದು.

ನನ್ನ ಎಲ್ಲ ಚಟವಟಿಕೆಗಳಲ್ಲಿ ತೋರಿಬರುತ್ತಿರುವ ಶಕ್ತಿ, ಸಾಮರ್ಥ್ಯ, ಸವಿನಯ ಶಾಸನಭಂಗದಲ್ಲಿಯ ಬಲ, ಇವೆಲ್ಲ ರಾಟಿ ಯಿಂದಲೇ ನನಗೆ ದೊರೆತಿರುವವು. ರಾಟಿಯ ಕಾರ್ಯಕ್ಕಾಗಿ ನಾನು ನೀಡಿವಷ್ಟು ಪರಿಶ್ರಮ ಹಾಗೂ ಹಣವನ್ನು ಇತರ

ಯಾವ ಕಾರ್ಯಕ್ಕೂ ನೀಡಿರುವದಿಲ್ಲ. ಟಿಳಕ-ಸ್ವರಾಜ್ಯಫಂಡಿನ ಒಂದು ಕೋಟಿ ರೂಪಾಯಿಯ ನಿಧಿಯ ಬಹು ಭಾಗವನ್ನು ರಾಟಿಯ ಕಾರ್ಯದಲ್ಲಿಯೇ ನಾವು ತೊಡಗಿಸಿದೆವು. ಈ ವಿಷಯ ದಲ್ಲಿ ನನ್ನ ಮೇಲೆ ದೋಷಾರೋಪಣೆಯನ್ನು ಮಾಡಲಾಯಿತು. ಆದರೆ ಅದೆಲ್ಲ ನನ್ನ ಸ್ತುತಿಯೆಂದೇ ನಾನು ಭಾವಿಸಿದೆನು. ಯಾಕಂದರೆ— ಮಾಡಿದ್ದನ್ನೆಲ್ಲ ವಿಚಾರಪೂರ್ವಕ ಬುದ್ಧಿಪುರಃಸರ ವಾಗಿಯೇ ಮಾಡಿದ್ದೆನು. ಎರಡನೆಯವರನ್ನು ವಂಚಿಸಿಯಂತೂ ನಾನು ಏನನ್ನೂ ಮಾಡಲಿಲ್ಲ! ರಾಟಿಯಲ್ಲಿ ತೊಡಗಿಸಿದ ಹಣವನ್ನು ಜನತೆಗೆ ತಿಳಿಸಿಯೇ ತೊಡಗಿಸಲಾಯಿತು. ಅದರ ಫಲವೇ ಈ ಸಂಸ್ಥೆಯಾಗಿರುವದು.

ನಾನು ಮಾಡಿದ ವಿಚಾರ, ಓದಿದ ಸಾಹಿತ್ಯ ಇವುಗಳ ಬಲದಿಂದ ನಾನು ಅಧಿಕಾರವಾಣಿಯಿಂದ ಹೇಳಬಯಸುವದೇ ನಂದರೆ ನನ್ನ ಸಾಧನೆಯು ತೀವ್ರವಾಗಿದ್ದರೂ ಅಪೂರ್ಣವಾಗಿತ್ತು. ನನ್ನ ಅಭ್ಯಾಸವು ತಕ್ಕಷ್ಟು ಸಂಪೂರ್ಣವಾಗಿಲ್ಲೆಂಬದನ್ನು ನಾನು ಒಪ್ಪಲೇಬೇಕು. ಈ ಸಂಗತಿಗಳ ರೂಪರೇಷೆಗಳು ನನ್ನ ಕಣ್ಣಿಗೆ ಹೆಚ್ಚು ಸ್ಪಷ್ಟವಾಗಿ ತೋರಹತ್ತಿರುವದರಿಂದ ನಾನು ಆಡುತ್ತಿರುವ ಈ ಶಬ್ದಗಳಲ್ಲಿ ಹೆಚ್ಚಿನ ಬಲಬಂದಿದೆ.

ಇಲ್ಲಿ ಬಂದಿರುವ ತಾವೆಲ್ಲರು ಚರಕ ಸಂಘದ ಕಾರ್ಯ ಕರ್ತರು; ಅಥವಾ ಸಂಘದ ಇಲ್ಲವೆ ನನ್ನ ಬಗ್ಗೆ ಸಹಾನುಭೂತಿ ಯುಳ್ಳವರು ಅಥವಾ ಜನತೆಯ ಪ್ರತಿನಿಧಿಗಳಿರುವಿರಿ. ನಮ್ಮ ಹಿಂದೆ ಜನತೆಯ ಬಲವು ಎಷ್ಟಿರುವದೆಂಬದನ್ನು ನಾವು ತೋರಿಸ ಬಲ್ಲೆವು. ಆಂದೋಲನದಲ್ಲಿ ಹಿಂದುಸ್ಥಾನವು ತೋರ್ಪಡಿಸಿದ ಬಲ ದಿಂದಲೇ ನಾವು ಸರಿಯಾದ ಮಾರ್ಗದಲ್ಲಿ ಹೋಗುವದು ಸಾಧ್ಯವಿತ್ತು. ಆದರೆ ಹಾಗೆ ಮಾಡಲು ನಮ್ಮಿಂದಾಗಲಿಲ್ಲ. ಈ

ದೋಷವು ತಮ್ಮದಲ್ಲ, ನನ್ನದಿದೆ. ನಾನು ಈಗ ಹೇಳುತ್ತಿರುವದು ತಮಗೆ ದೋಷ ಕೊಡಬೇಕೆಂದಲ್ಲ ಆದರೆ ನನ್ನ ಹಾಗು ತಮ್ಮ ಬುದ್ಧಿಯನ್ನು ಹೊಡೆದೆಬ್ಬಿಸುವ ಕುರಿತು ಮಾತ್ರ.

ನಾವು ರಾಟಿಯನ್ನು ತಿರುಗಿಸಿದೆವು. ಆದರೆ ತಿಳಿದು ನೋಡಿ ಅಲ್ಲ. ಕೇವಲ ಯಂತ್ರದಂತೆ ತಿರುಗಿಸಿದೆವು. ರಾಟಿಯಲ್ಲಿ ಅಡಕವಾಗಿರುವ ಅರ್ಥದ ವ್ಯಾಪಕತೆಯನ್ನು ತಾವು ಚನ್ನಾಗಿ ಅರಿತು ಅದರೊಂದಿಗೆ ತಾದಾತ್ಮ್ಯ ಪಡೆದಿದ್ದರೆ ಅದರಲ್ಲಿ ನಾನು ಹೊರಡಿಸುತ್ತಿರುವ ಅರ್ಥವನ್ನೇ ತಾವೂ ಹೊರಡಿಸುತ್ತಿದ್ದಿರಿ. ಅದರಲ್ಲಿ ರಾಜಕಾರಣವೂ ಪೂರ್ಣ ತುಂಬಿದೆ. ಆದರೆ ಅದು ಕುಟಿಲ ರಾಜಕಾರಣವಲ್ಲ. ರಾಟಿಯಲ್ಲಿ ಅಡಕವಾಗಿರುವಷ್ಟು ಶುದ್ಧ ಸಾತ್ವಿಕ ರಾಜಕಾರಣವು ಎರಡನೆಯ ಯಾವ ವಸ್ತುವಿನಲ್ಲಿಯೂ ಇರುವದಿಲ್ಲ. ಇದು ನಿಜವಾಗಿದ್ದರೆ "ನೂಲಿನಲ್ಲಿ ಸ್ವರಾಜ್ಯ"ವೆಂದು ಅನ್ನುತ್ತ ಬಂದಿರುವದರಲ್ಲಿ ಎರಡನೆಯ ಯಾವ ಅರ್ಥವಿದೆ? ನೂಲು ಹರಿದಂತೆ ಸ್ವರಾಜ್ಯವೂ ಹರಿಯುವದು ಎಂಬರ್ಥವು ಅದರಲ್ಲಿರದು, ಎಂಬುದಾಗಿ ನಮ್ಮನ್ನು ದೂಷಿಸುತ್ತಿರುವದುಂಟು.

ಚರಕ ಸಂಘದವರು, ಗ್ರಾಮೋದ್ಯೋಗ ಸಂಘದವರು ಹಾಗೂ ಗಾಂಧೀವಾದಿಗಳು ಬುದ್ಧಿಹೀನರಾಗುತ್ತಿರುವರು ಎಂದು ನಮ್ಮ ಮೇಲೆ ಆರೋಪ ಕಂಡು ಬರುತ್ತದೆ. ಅವರ ಮೇಲೆ ಜನತೆಯ ಶ್ರದ್ಧೆಯದೆ. ಆದರೆ ಜನತೆಗೆ ದೇಶದ ಎಲ್ಲ ಪರಿಸ್ಥಿತಿಯ ಅರಿವನ್ನು ಚೆನ್ನಾಗಿ ಮಾಡಿಕೊಡುವದು ಅವರಿಂದ ಆಗದು. ಮಾರ್ಕ್ಸರ ಸಾಹಿತ್ಯವು ನಮ್ಮ ಮಧ್ಯದಲ್ಲಿ ಬರಹತ್ತಿದೆ. ಈ ಹೊರಗಿನ ಶಕ್ತಿಗಳ ಪ್ರಭಾವದೆದುರು ಅವರು ಕಾಲೂರಿ ನಿಲ್ಲಲಾರರು.

ನಾವು ಅಹಿಂಸೆಯ ಅರ್ಚಕರೆಂದು ಹೇಳಿಕೊಳ್ಳುತ್ತಾ ಅದರ ಶಕ್ತಿಯು ಎಂಥದ್ದಿರುವದೆಂಬದನ್ನು ತೋರಿಸಿ ಕೊಡದಿದ್ದರೆ ನಾವು ಅದೆಂಥ ಗಾಂಧೀವಾದಿಗಳು? ಮೂಲತಃ ಗಾಂಧೀವಾದವೆಂಬ ವಸ್ತುವೇ ಇರುವದಿಲ್ಲ. ನಿಜವಾಗಿ ಏನಾದರೂ ಇದ್ದರೆ ಅದು ಅ ಹಿಂ ಸಾ ವಾ ದ ವಿ ರು ವ ದು. ಚರಕಸಂಘದ ಪ್ರತಿಯೊಬ್ಬ ವ್ಯಕ್ತಿಯು ಅಹಿಂಸೆಯ ಜೀವಿತ ಮೂರ್ತಿಯಾಗಿರಬೇಕು ಎಂದು ನಮ್ಮಮೇಲೆ ಆರೋಪ ಮಾಡಲಾಗುತ್ತಿದೆ. ಪ್ರಸ್ತುತ ಕಾಲದಲ್ಲಿ 'ಗಾಂಧೀವಾದೀ' ಶಬ್ದದ ಅಪಾರ್ಥವಾಗಿದೆ. ಆ ಶಬ್ದವು ಸ್ತುತಿ ವಾಚಕವಾಗಿ ಉಳಿದಿಲ್ಲ. ನಾವು ಅಹಿಂಸಾಮಯ ಇರುವದಿಲ್ಲೆಂಬದನ್ನು ಒಪ್ಪಿಕೊಳ್ಳೋಣ. ಒಂದುವೇಳೆ ಅಹಿಂಸಾಮಯ ಇದ್ದಿದ್ದರೆ ಪ್ರತಿಯೊಂದು ಹಳ್ಳಿಯಲ್ಲಿಯೂ ರಾಟೆಯನ್ನು ನೆಲೆಗೊಳಿಸುತ್ತಿದ್ದೆವು. ನನ್ನಿಂದ ಅಹಿಂಸಾವಾದಿ ಅಥವಾ ಗಾಂಧೀವಾದಿಗಳು ತೇಜಸ್ವಿಗಳಾಗಿರಬೇಕು. ಇದು ಆಗಲಿಲ್ಲೆಂಬದನ್ನು ನಾನು ಒಪ್ಪುವೆನು. ಇದರ ರಹಸ್ಯ ತಂತ್ರವು ನನಗೆ ಗೊತ್ತಿದ್ದರೆ ಅದನ್ನು ಕನಿಷ್ಟ ಸೇವಾಗ್ರಾಮದಲ್ಲಿಯಾದರೂ ಬೆಳಕಿಗೆ ತರುತ್ತಿದ್ದೆನು. ಆದರೆ ಇಲ್ಲಿಯ ಜನರಿಗೆ ನಾವು ರಾಟೆ ಕೊಟ್ಟಿದ್ದರೂ ಅವರು ಅದರಲ್ಲಿ ಆತ್ಮೀಯತೆಯನ್ನು ತೋರಿಸುತ್ತಿರುವದಿಲ್ಲ. ನಾವು ಅವರಿಗೆ ಹೆಚ್ಚುಹಣ ಕೊಡುತ್ತಿರುವೆವು, ಕಲಿಸುತ್ತಿರುವೆವು; ಎರಡನೆಯ ಕೆಲಸಗಳನ್ನು ಕೊಟ್ಟು ಅವರನ್ನು ಪ್ರಲೋಭಿಸುತ್ತಲೂ ಇರುವೆವು, ತರತರದಿಂದ ಅವರ ಸೇವೆ ಮಾಡುತ್ತಿರುವೆವು. ಆದರೂ ನಮಗೆ ಸಫಲತೆಯು ದೊರೆತಿಲ್ಲ. ಹೀಗಿದ್ದರೂ ರಾಟೆಯ ಶಕ್ತಿಯಲ್ಲಿ ನನ್ನ ವಿಶ್ವಾಸವು ಅಚಲವಾಗಿರುವದು. ನಾನೇ ಸ್ವತಃ ಅದರ ಅಧ್ಯಕ್ಷನಾದೆನು. ಆದರೂ ಭಗ್ನಮನೋರಥನಾಗಿ ಕುಳಿತಿರುವೆನು.

ಆದುದರಿಂದಲೆ, ಇದನ್ನೆಲ್ಲ ನಮ್ಮಿಂದ ಮಾಡುವದಾಗಲಿಲ್ಲೆಂಬ ಮಾತನ್ನು ನಾವು ಒಪ್ಪಲೇಬೇಕೆಂದು ನಾನು ಹೇಳುತ್ತಿದ್ದುದು. ನಮ್ಮಲ್ಲಿ ತ್ಯಾಗಿಗಳ ಸಂಖ್ಯೆಯು ಕಡಿಮೆ ಇರುವದೆಂದಲ್ಲ. ನಮ್ಮಲ್ಲಿ ತ್ಯಾಗಿಗಳಾದ ಬಂಧುಭಗಿನಿಯರು ಸಾಕಷ್ಟಿರುವರು. ಅವರಿಗೆ ನನ್ನ ವಂದನೆಗಳನ್ನರ್ಪಿಸುವೆನು. ಒಬ್ಬೊಬ್ಬರನ್ನು ನೆನಿಸಿದಂತೆ ನನ್ನ ಅಂತಃಕರಣವು ತುಂಬಿ ಬರುತ್ತಿದೆ. ಇಷ್ಟು ತ್ಯಾಗೀಜನರು ಇರುತ್ತಿರುವ ದೇಶವು ಅವನತಿಗೆ ಹೋಗಲಾರದೆಂದು ನನ್ನ ಆತ್ಮವು ನನಗೆ ಹೇಳುತ್ತಿರುವುದು. ಆದರೆ ಇಷ್ಟು ತ್ಯಾಗವನ್ನು ಮಾಡಿದರೂ ರಾಷ್ಟ್ರಕ್ಕೆ ಸ್ವಾತಂತ್ರ್ಯ ಲಭಿಸಲಿಲ್ಲ. ಸ್ವಾತಂತ್ರ್ಯವಾದರೂ ಬರಹತ್ತಿದೆ. ಒಂದು ವೇಳೆ ನಾವು ಊಹಿಸಿದ ವೇಳೆಗಿಂತ ಮೊದಲೇ ಬರಹತ್ತಿರಬಹುದು. ಆದರೆ ಅದರಿಂದ ನನಗೆ ತೃಪ್ತಿಯಾಗದು. ಇದರಲ್ಲಿ ನಿನ್ನ ಭಾಗವೆಷ್ಟು? ಎಂದು ನನ್ನನ್ನೇ ನಾನು ಕೇಳುತ್ತಿರುವೆನು. ನಾವು ನಮ್ಮ ಕೈಯಿಂದಾದ ಮಟ್ಟಿಗೆ ಪ್ರಯತ್ನ ಮಾಡಿರುವೆವೆಂಬದನ್ನು ನಾನು ಮನವರಿಕೆ ಮಾಡಿಕೊಳ್ಳುವೆನು. ಆದುದರಿಂದ ನಾನು ಯಾರಿಗೂ ದೋಷ ಕೊಡುವದಿಲ್ಲ; ಪರಿಸ್ಥಿತಿಯನ್ನು ಮಾತ್ರ ನಿವೇದಿಸುತ್ತಿರುವೆನು. ಪರಿಸ್ಥಿತಿಯನ್ನು ಚೆನ್ನಾಗಿ ಅರಿತುಕೊಳ್ಳುವದೊಂದು ಬುದ್ಧಿಯ ಲಕ್ಷಣವಾಗಿದೆ. ನಾವು ಮಾಡಿದ ಕೆಲಸದಿಂದ ನಾವು ಸಂತುಷ್ಟರಾಗಬಾರದು. ಮಾಡಲು ಶಕ್ಯವಾದುದನ್ನು ನಮ್ಮ ಕೈಯಿಂದಾದ ಮಟ್ಟಿಗೆ ಮಾಡಿರುವೆವು. ನಮ್ಮನ್ನಳೆಯಲು ನಾವು ಕಲ್ಪಿಸಿಕೊಂಡ ಅಳತೆಗೋಲಿಗೆ ಸರಿಯಾಗಿ ಹೆತ್ತುವಂತೆ ಸಂಘದ ಕಾರ್ಯವನ್ನು ವಿಸ್ತರಿಸಿದ್ದರೆ ನಮ್ಮನ್ನು ಇಂದು ವರಿಸಿದ ನಿರಾಶೆಯ ಕತ್ತಲೆಯು ಕಂಡುಬರುತ್ತಿರಲಿಲ್ಲ. ಯಾಕಂದರೆ, ಅದರಿಂದ ಅಹಿಂಸಕ ಸ್ವರಾಜ್ಯವು ನಮಗೆ ಕೈಗೂಡುತ್ತಿತ್ತು. ಆದರೂ ಅದು ನಮ್ಮಿಂದ ಸಾಧ್ಯವಾಗಲಿಲ್ಲ.

ನಾನು ತಮಗೊಂದು ತೀಕ್ಷ್ಣವಾದ ಪ್ರತೀಕಾರವನ್ನು ಸೂಚಿಸುವೆನು. ತಾವು ಅದಕ್ಕೆ ಸಿದ್ಧರಿದ್ದರೆ ನಾನೂ ತಮ್ಮೊಡನೆ ಅದರಲ್ಲಿ ಒಂದುಗೂಡಿರುವೆನೆಂದು ಬಗೆಯಿರಿ. ಆದರೆ ತಿಳಿಯದೆ ಅದನ್ನು ಸ್ವೀಕರಿಸಕೂಡದು. ಅದೇನು ಅಷ್ಟೊಂದು ಸಾಹಸದ ಮಾತೂ ಇರುವದಿಲ್ಲ. ಬುದ್ಧಿಪೂರ್ವಕ ವಿಚಾರಮಾಡಿ ಈ ನಿರ್ಣಯಕ್ಕೆ ಬರುವದಾದರೆ ಒಳಿತು. ತಾವು ಯೋಗ್ಯ ನಿರ್ಣಯಕ್ಕೆ ಬಂದದ್ದಾದರೆ, ಚರಕಸಂಘವನ್ನು ತಾವು ಸಂಪೂರ್ಣ ಮುಚ್ಚಿ ಬಿಡುವಿರಿ. ಅದರ ವಶದಲ್ಲಿದ್ದ ಸ್ಥಿರ-ಚರ ಆಸ್ತಿಯನ್ನು ಕಾರ್ಯನಿರ್ವಹಣೆಗಾಗಿ ಕೆಲಸಗಾರರಲ್ಲಿ ಹಂಚಿಬಿಡುವಿರಿ. ಮುಂದಿನ ಕಾರ್ಯವನ್ನು ಸಾಗಿಸುವ ಕುರಿತು ಒಂದು ಕವಡಿಯನ್ನು ಸಹ ಇಟ್ಟುಕೊಳ್ಳುವ ಆವಶ್ಯಕತೆ ಇಲ್ಲ. ರಾಟಿಯು ಅನ್ನಪೂರ್ಣೆಯೆಂದು ನಾವೆಲ್ಲರು ಭಾವಿಸಿರುವೆವು. ಒಂದುವೇಳೆ ನಾಲ್ವತ್ತು ಕೋಟಿ ಜನತೆಯೂ ಹೀಗೆಯೇ ಭಾವಿಸಿದರೆ ರಾಟಿಯ ಚಟುವಟಿಕೆಗಾಗಿ ಒಂದು ಕವಡಿಯನ್ನು ಸಹ ವೆಚ್ಚಮಾಡುವ ಕಾರಣವಿಲ್ಲ. ಸರಕಾರದಿಂದ ಹೊರಡುತ್ತಿರುವ ಶಾಸನ - ಪತ್ರಗಳಿಗೂ ಬೆದರುವ ಯಾವ ಪ್ರಸಂಗವೂ ಇಲ್ಲ; ಬಂಡವಲುಗಾರರ ಮೋರೆಯನ್ನು ನೋಡುತ್ತ ಕುಳಿತುಕೊಳ್ಳುವ ಆವಶ್ಯಕತೆಯೂ ಸಂದರ್ಭವೂ ಇಲ್ಲ. ನಾವೇ ಸ್ವತಃ ಕೇಂದ್ರಗಳಾಗಿ ಪರಿಣಮಿಸುವೆವು. ಹಾಗೂ ಜನರು ಧಾವಿಸುತ್ತ ನಮ್ಮೆಡೆ ಬರುವರು. ಕೆಲಸವನ್ನು ಹುಡುಕುವ ಸಲುವಾಗಿ ಎರಡನೆಯ ಕಡೆಗೆ ಹೋಗಬೇಕಾದುದಿಲ್ಲ. ಪ್ರತಿಯೊಂದು ಹಳ್ಳಿಯು ಸ್ವತಂತ್ರ-ಹಿಂದುಸ್ಥಾನದ ಒಂದೊಂದು ತಿರುಪುಟಕ್ಕೆ ಚಕ್ರಬಿಂದುವಾಗುವದು. ಸ್ವತಂತ್ರಹಿಂದುಸ್ಥಾನವು, ಮುಂಬೈ, ಕಲಕತ್ತೆಯಂಥ ಪಟ್ಟಣಗಳಲ್ಲಿಲ್ಲ. ಆದರೆ ಏಳುಲಕ್ಷ ಹಳ್ಳಿಗಳಲ್ಲಿ, ನಾಲ್ವತ್ತು ಕೋಟಿ ಜನತೆಯಲ್ಲಿ ವಿಭಕ್ತವಾಗಿ ಹೋಗುವದು. ಆ ಮೇಲೆ ಹಿಂದು-ಮುಸಲ್ಮಾನ ಪ್ರಶ್ನೆ, ಅಸ್ಪೃಶ್ಯತೆಯು

ಸಮಸ್ಯೆ, ಹೊಡೆದಾಟ ಬಡಿದಾಟ, ತಪ್ಪುತಿಳುವಳಿಕೆ, ಮೇಲಾಟ ಮುಂತಾದವುಗಳಿಗೆ ಎಡೆಯಿಲ್ಲದಾಗುವದು. ಈ ಕಾರ್ಯಕ್ಕಾಗಿಯೇ ಸಂಘದ ಅಸ್ತಿತ್ವವಿರುವದು. ಇದಕ್ಕಾಗಿ ನಾವು ಜೀವಿಸಬೇಕಾಗಿದೆ. ಇದಕ್ಕಾಗಿಯೇ ನಾವು ಸಾಯಲೂಬೇಕಾಗಿದೆ.

ಇದು ದೊಡ್ಡ ಕೆಲಸವು. ಇದಕ್ಕೆ ಮೇಲ್ತರದ ಬುದ್ಧಿಯ ಆವಶ್ಯಕತೆಯಿರುವದೆಂದು ತಾವು ಅನ್ನಬಹುದು. ನಾನು ಹೇಳುವದೆಂದರೆ, ವಾಚನಾಲಯಗಳಲ್ಲಿ ಕುಳಿತು ಓದುವದರಿಂದಾಗಲಿ, ಓದಿಸುವದರಿಂದಾಗಲಿ ಆ ಮೇಲ್ತರದ ಬುದ್ಧಿಯು ಲಭಿಸುವಂತಹದಲ್ಲ. ನಮ್ಮ ಕೈಗಳಿಂದ ದುಡಿದು ಬುದ್ಧಿಯನ್ನು ಮಿನುಗುಗೊಳಿಸಬೇಕಾಗಿದೆ. ಇದರಿಂದಲೇ ಮೂಲ ಶಿಕ್ಷಣದ ಉತ್ಪತ್ತಿಯಾಗಿದೆ. ಈ ಶಿಕ್ಷಣದಲ್ಲಿ ಕೈಕಾಲುಗಳ ಪರಿಶ್ರಮದ ಮುಖಾಂತರ ಬುದ್ಧಿಯು ಸತೇಜವಾಗುತ್ತ ಹೋಗುವದು. ಪುಸ್ತಕಗಳನ್ನು ಸುಟ್ಟುಬಿಡಬೇಕೆಂದು ಇದರ ಅರ್ಥವಲ್ಲ; ಆದರೆ ಅವುಗಳ ಸ್ಥಾನವು ಗೌಣವಾಗಿದೆ. ರಾಟಿಗೆ ಅಗ್ರಸ್ಥಾನವಿದೆ. ಗ್ರಾಮೋದ್ಯೋಗ, ಹೊಸ ಶಿಕ್ಷಣ ಪದ್ಧತಿ ಮೊದಲಾದ ಇತರ ಪ್ರವೃತ್ತಿಗಳು ಇದರಿಂದಲೇ ಹುಟ್ಟಿವೆ. ತಿಳುವಳಿಕೆಯಿಂದ ನಾವು ರಾಟಿಯನ್ನು ಅಂಗೀಕರಿಸಿದ್ದಾದರೆ ಅದು ನಮ್ಮ ಹಳ್ಳಿಗಳಲ್ಲಿ ಮತ್ತೆ ಹೊಸ ಜೀವಕಳೆಯನ್ನು ತುಂಬಬಹುದು. ಸಂಘದಲ್ಲಿ ಈಗಿರುವ ನಮ್ಮ ಸಂಗಡಿಗರ ಶಕ್ತಿಯು ನಮ್ಮನ್ನು ಒಯ್ಯಬಹುದಾದ ಮಟ್ಟಿಗೆ ಮಾತ್ರ ನಾವು ಹೋಗಬಲ್ಲೆವು. ವಿಶ್ವಾಮಿತ್ರನಂತೆ ಪ್ರತಿ-ಸೃಷ್ಟಿಯನ್ನು ನಿರ್ಮಿಸುವದು ನನ್ನ ಉದ್ದೇಶವಿಲ್ಲ. ಅವನು ತ್ರಿಶಂಕುವನ್ನು ಸ್ವರ್ಗಕ್ಕೆ ಕಳಿಸಬಯಸಿದನು. ಆದರೆ ಆತನು ಅಂತರಿಕ್ಷದಲ್ಲಿಯೇ ತೂಗಾಡಬೇಕಾಯಿತು. ಅದು ಕಾರಣ ಭೂಮಿತಾಯಿಯು ನಮಗೆ ದಯಪಾಲಿಸಿದ ಶಕ್ತಿಯಿಂದಲೇ ನಾವು ಕಾರ್ಯ ಮಾಡಬೇಕಾಗಿದೆ.

ಚರಕಸಂಘವನ್ನು ನಮ್ಮ ಕೈಯಿಂದ ನಾವೇ ಒಂದುವೇಳೆ ವಿಸರ್ಜನೆ ಮಾಡಿಬಿಟ್ಟರೆ ಸರಕಾರವು ಏನನ್ನು ಜಪ್ತಮಾಡುವದು? ಯಾರನ್ನಾದರು ಗುಂಡಿಕ್ಕಬಹುದೋ? ನಾವಂತೂ ನಾಲ್ವತ್ತು ಕೋಟಿಯಲ್ಲಿ ಬೆರೆತು ಹೋಗುವೆವು. ಒಂದು ವೇಳೆ ಅವರು ನಮ್ಮನ್ನು ಹಾರಿಸಿಬಿಡಬೇಕೆಂದು ಇಷ್ಟಪಟ್ಟರೆ ನಾವು ನಗುತ್ತ-ಕೆಲೆಯುತ್ತ ಹೋಗುವೆವು. ನಮ್ಮಲ್ಲಿಯ ಅರ್ಧಕೋಟಿ ಜನ ಸತ್ತುಹೋದರೇನಾಯಿತು? ಸಮುದ್ರದಲ್ಲಿಯ ಒಂದು ಬೊಗಸೆ ನೀರು ಹಾರಿಹೋದರೆ ಸಮುದ್ರವೇನೂ ಬತ್ತುವದಿಲ್ಲ. ಅವರ ಶಕ್ತಿಯನ್ನು ಯಾರೂ ತಡೆಹಿಡಿಯಲಾರರು. ಆದರಂತೆ ನಮ್ಮನ್ನು ಹತ್ತಿಕ್ಕಲು ಪ್ರಯತ್ನಗಳು ನಡೆ ನಡೆದಹಾಗೆ ನಮ್ಮ ಶಕ್ತಿಯು ಹೆಚ್ಚು ಹೆಚ್ಚು ಬೆಳೆಯುತ್ತ ಹೋಗುವುದು. ಆದರೆ ಅಹಿಂಸೆಯ ಶಕ್ತಿಯನ್ನು ಮಾತ್ರ ನಾವು ಅರಿತಿರಬೇಕೆಂಬದೊಂದು ಗುಟ್ಟು ಮಾತ್ರ ಇದಕ್ಕಿದೆ.

ರಾಟಿಯ ಶೋಧವನ್ನು ನಾವು ಸಾಂಗೋಪಾಂಗವಾಗಿ ಮಾಡಿರುವೆವೋ ಹೇಗೆಂಬದನ್ನು ಮಾತ್ರ ನಾವು ನೋಡತಕ್ಕದ್ದದೆ. ಅದರ ಸಲುವಾಗಿ ನಾವು ಸಾಕಷ್ಟು ತಪವನ್ನಾಚರಿಸಿರುವೆವು, ಶೋಧಮಾಡಿರುವೆವು. ಅನೇಕ ತರದ ರಾಟಿಗಳನ್ನು ಮಾಡಿಸಲಾಯಿತು. ಆದರೆ ಯಂತ್ರಶಕ್ತಿಯ ಪೂರ್ಣ ಪರಿಚಯವಿದ್ದ ಓರ್ವ ಶಾಸ್ತ್ರಜ್ಞನನ್ನು ಈಗ ಉತ್ಪನ್ನ ಮಾಡುವದಿದೆ. ಈಗಿನ ರಾಟಿಯಿಂದ ಹೊರಡತಕ್ಕ ನೂಲಿಗಿಂತ ಹೆಚ್ಚು ಉತ್ತಮ ಹಾಗೂ ಹೆಚ್ಚು ನೂಲು ಹೊರಡಿಸುವಂತಹ ರಾಟಿಯೊಂದನ್ನು ಅವನು ಮಾಡತಕ್ಕದ್ದಿದೆ. ಅಂಥ ಶಾಸ್ತ್ರಜ್ಞನು ಒಂದುವೇಳೆ ದೊರೆಯದಿದ್ದರೂ ನಾನೇನು ಎದೆಗುಂದತಕ್ಕವನಲ್ಲ. ಬುದ್ಧಿಬಲದಿಂದ ನಾನನ್ನುತ್ತಿರುವ ಮಾತು ಸತ್ಯವಾದುದೆಂಬದನ್ನು ತೋರಿಸಿಕೊಡುವೆನು. ಈ ಕಾರ್ಯವನ್ನು ವಿಶ್ವಾಸದಿಂದ ಮಾಡತಕ್ಕದ್ದಿದೆ. ವಿಶ್ವಾಸವು

ರೂಪುಗೊಳ್ಳಲು ಅದು ಬುದ್ಧಿಯು ಮುಖಾಂತರ ಮಿನುಗುವದು. ತನ್ನಿಂದ ತಾನೇ ಬೆಳಗುಸುವ ವಸ್ತು ಅದಲ್ಲ. ಶ್ರದ್ಧೆಯು ಹೆಚ್ಚು ಬೆಳೆಯುತ್ತ ಹೋದಂತೆ ಅದಕ್ಕೆ ಎರಡನೆಯ ವಾಹನವು ದೊರೆಯಲು ಅದರಲ್ಲಿ ಜ್ಯೋತಿಯು ಬೆಳಗಹತ್ತುವದು. ಶ್ರದ್ಧೆಯು ಎಂದೂ ಅಡಗದು. ಅದು ಅಧಿಕಾಧಿಕವಾಗಿ ಬೆಳೆಯುತ್ತ ಹೋಗುವದು. ಅದರ ಜೊತೆಯಲ್ಲಿ ಬುದ್ಧಿಯು ತೇಜಸ್ವಿಯಾಗುತ್ತ ನಡೆಯುವದು. ಹಾಗೂ ಶ್ರದ್ಧೆಯು ತಿರುಗಿ ಬುದ್ಧಿವಾದವನ್ನು ಎದುರಿಸಬಲ್ಲದು. ನಮಗೆ ವ್ಯಾಖ್ಯಾನಗಳನ್ನು ಕೊಡತಕ್ಕದ್ದಿಲ್ಲ. ಆದರೆ ನಿಜವಾದ ವೈಜ್ಞಾನಿಕ ಪರಿಣಾಮವನ್ನು ಬೈಲಿಗೆ ತರತಕ್ಕದ್ದಿದೆ. ನಮ್ಮ ಶ್ರದ್ಧೆಯ ಕಹಳೆಯನ್ನು ಜಗತ್ತಿನಲ್ಲೆಲ್ಲ ಊದಿ, ನೀವು ಸತ್ಯವಂತರಲ್ಲ ನಾವು ಸತ್ಯವಂತರು ಎಂದು ಹೇಳುವೆವು.

ಇಂದು ನಾವು ಕೆಳಗೆ ಬಿದ್ದಿರುವೆವು. ಈ ಪರಿಸ್ಥಿತಿಯಲ್ಲಿ ನಾವು ಕಾರ್ಯ ಮಾಡಬೇಕಾಗಿದೆ. ಈ ಸಲುವಾಗಿ ನಾವು ನಮ್ಮ ಕಾರ್ಯವನ್ನು ಸರಿಯಾಗಿ ಏರ್ಪಡಿಸುವಾ; ಮನಸ್ಸಿನಲ್ಲಿ ಯಾವತರದ ಕಿಲ್ಬಿಷಕ್ಕೂ ಇಂಬುಗೊಡದಿರುವಾ; ಎಲ್ಲ ತಿಕ್ಕಾಟಗಳ ಬಗ್ಗೆ ಕೊನೆಯ ನಿರ್ಣಯಕ್ಕೆ ಬರುವಾ; ಪರಸ್ಪರರಲ್ಲಿಯ ಕಲಹಗಳನ್ನು ನಿಲ್ಲಿಸುವಾ. ನಮ್ಮ ಪ್ರತಿನಿಧಿಯ ಮೇಲೆ ನಮ್ಮ ಪೂರ್ಣ ವಿಶ್ವಾಸವಿರತಕ್ಕದ್ದು. ಪ್ರತಿಯೊಬ್ಬರು ಖಂಡತುಂಡ ನುಡಿಯುವವರಾಗಬೇಕು ನುಡಿಯಬೇಕು. ನಾವು ಸತ್ಯದ ಉಪಾಸನೆಯನ್ನು ಮಾಡುತ್ತಿರುವದರಿಂದ ನಾವು ಪೂರ್ಣ ಸತ್ಯವನ್ನೇ ಆಡತಕ್ಕದ್ದು. ನಮ್ಮಲ್ಲಿ ಎಷ್ಟರಮಟ್ಟಿಗೆ ಭಯವು ತಲೆದೋರುವದೋ ಅಷ್ಟರ ಮಟ್ಟಿಗೆ ನಾವು ಕಡಿಮೆ ಸತ್ಯವನ್ನು ನುಡಿಯುವೆವು. ಅದುಕಾರಣವೆ ಗೀತೆಯಲ್ಲಿ ಅಭಯಕ್ಕೆ ಅಗ್ರಸ್ಥಾನವನ್ನು ಕೊಟ್ಟಿದ್ದಾರೆ

ಈ ಎಲ್ಲ ಮಾತುಗಳನ್ನು ಸೂಕ್ಷ್ಮ ಅನುಭವದಿಂದ ಹೇಳಿರುವೆನು. ನಾವು ನಿರ್ಭಯರಾಗಿ ಕೆಲಸ ಮಾಡತಕ್ಕದ್ದದೆ. ಏನನ್ನೂ

ಬಚ್ಚಿಡತಕ್ಕದ್ದಲ್ಲ. ಸ್ವಾರ್ಥವನ್ನು ಬಿಟ್ಟುಬಿಡತಕ್ಕದ್ದು. ಇಲ್ಲವಾದರೆ ನಾವು ಹಿಂದಮಾತೆಯ ದ್ರೋಹ ಬಗೆದಂತಾಗುವದಲ್ಲದೆ ನಮ್ಮ ಶಕ್ತಿಯನ್ನು ಸಂಘಟಿಸುವದೂ ನಮ್ಮಿಂದಾಗಲಾರದು. ಸ್ವಾರ್ಥವು ನಮ್ಮ ಮಾರ್ಗದಲ್ಲಿ ಸಾಕಷ್ಟು ಅಡೆತಡೆಗಳನ್ನುಂಟು ಮಾಡಿದೆ.

ಎರಡನೆಯ ದಿನ ತಾ|| ೨-೯-೪೪

ನಾನು ನಿನ್ನೆ ಅವಸರದಿಂದ ಹಲವು ಮಾತು ಹೇಳಿದೆನು. ನಿನ್ನೆ ಸ್ವಲ್ಪ ಕೆಲಸ ಮಾಡಿದಂತಾಯಿತೇನೋ ನಿಜ. ಆದರೆ ಮುಂದೆ ಆ ಬಗ್ಗೆ ನಾನು ವಿಚಾರಮಾಡಹತ್ತಿದೆನು. ನಾನೊಂದು ದೊಡ್ಡ ಕಾರ್ಯವನ್ನು ಎಬ್ಬಿಸಿದ್ದೆನು. ಅದಾವುದೆಂದರೆ ತಮ್ಮ ಸಲುವಾಗಿ ಒಂದು ಯೋಜನೆಯನ್ನು ತಯಾರಿಸಿ ತಮ್ಮೆದುರು ಅದನ್ನು ಮಂಡಿಸುವುದು. ನಿನ್ನೆ ರಾತ್ರಿ ಹಾಗೂ ಇಂದು ಮುಂಜಾವಿನಲ್ಲಿ ಆ ಬಗ್ಗೆ ಆಲೋಚನೆ ಮಾಡಹತ್ತಿದ್ದೆನು. ಆ ಸಲುವಾಗಿ ಮೌನವನ್ನು ಆಚರಿಸಿದೆನು. ಬರೆದು ತೆಗೆದಂತೆ ಅದನ್ನು ಓದಿ ಹೇಳುವೆನುಃ—

"೧. ಹಳ್ಳಿಯೇ ರಾಟೆಯ ಕಲ್ಪನೆಯ ತಳಹದಿ. ಹಳ್ಳಿಯಲ್ಲಿ ಹರಿದು ಹಂಚಿಹೋಗುವದೇ ಚರಕಸಂಘದ ಇಷ್ಟಾರ್ಥಸಿದ್ಧಿ. ಈ ಗುರಿಯನ್ನು ಲಕ್ಷಿಸಿಯೇ ಚರಕ ಸಂಘದ ಕಾರ್ಯಪದ್ಧತಿಯಲ್ಲಿ ಕೆಳಗಣ ಬದಲಾವಣೆ ಮಾಡತಕ್ಕದ್ದೆಂದು ಚರಕ ಸಂಘದ ಈ ಸಭೆಯು ನಿರ್ಣಯಿಸುತ್ತದೆ.

(ಅ) ಸಿದ್ಧವಿದ್ದ ಹಾಗೂ ಸಂಘದಿಂದ ಅನುಮತಿ ಪಡೆದ ಕಾರ್ಯಕರ್ತರು ಹಳ್ಳಿಗಳಲ್ಲಿ ನೆಲಸಬೇಕು.

(ಆ) ಮಾರಾಟದ ಅಂಗಡಿ ಹಾಗೂ ಹುಟ್ಟುವಳಿ ಕೇಂದ್ರಗಳನ್ನು ಮರ್ಯಾದಿತ ಮಾಡಬೇಕು;

(ಇ) ಈಗಿದ್ದ ವಿದ್ಯಾಲಯಗಳನ್ನು ವಿಸ್ತ್ರತಗೊಳಿಸಬೇಕು. ಹಾಗೂ ಅಭ್ಯಾಸಕ್ರಮವನ್ನು ಹೆಚ್ಚಿಸಬೇಕು;

(ಈ) ಸ್ವತಂತ್ರ ಹಾಗೂ ಸ್ವಾವಲಂಬಿಗಳಾಗಲಿಚ್ಛಿಸುವ ತಾಲೂಕ ಅಥವಾ ಜಿಲ್ಹೆಗಳಿಗೆ ಸಂಘವು ಮನ್ನಣೆ ಕೊಟ್ಟರೆ, ಸ್ವತಂತ್ರತೆಯನ್ನು ಕೊಡಬೇಕು.

(೨) ಹೊಸಪದ್ಧತಿಗೆ ಅನುಕೂಲ ಹಾಗೂ ಆವಶ್ಯಕವಾಗಿರುವಂಥ ಸೂಚನೆಗಳನ್ನು ಮಾಡುವ ಕುರಿತು, ಚರಕಸಂಘ, ಗ್ರಾಮೋದ್ಯೋಗ ಸಂಘ, ತಾಲೀಮಿ ಸಂಘ, ಇವುಗಳ ಸ್ಥಾಯಿ ಸಮಿತಿಯೊಂದನ್ನು ಸ್ಥಾಪಿಸಬೇಕು. ಪೂರ್ಣ ಅಹಿಂಸೆಯ ಆವಿಷ್ಕರಣ ಮಾಡುವ ಹೊಣೆಯು ಈ ಮೂರೂ ಸಂಸ್ಥೆಗಳ ಮೇಲಿರುವದೆಂಬವನ್ನು ಅವು ಅರಿತಿರಲಿ. ಇದರ ಸಂಪೂರ್ಣ ವಿಕಾಸದಲ್ಲಿಯೇ ಪೂರ್ಣ ಸ್ವರಾಜ್ಯವು ಅಡಗಿಕೊಂಡಿರುವದು. ಇಡೀ ರಾಜಕಾರಣವು ತಮ್ಮನ್ನು ಅವಲಂಬಿಸಬೇಕೇ ವಿನಾ ಪ್ರಚಲಿತ ರಾಜಕಾರಣವನ್ನು ತಾವು ಅವಲಂಬಿಸಕೂಡದೆಂಬ ಅರಿವು ಈ ಮೂರೂ ಸಂಸ್ಥೆಗಳಿಗಿರತಕ್ಕದ್ದು. ಈ ಹೊಂದಿಕೆಯು ತಂತಾನೇ ಆಗಬೇಕು. ನಾನು ಇದುವರೆಗೆ ಹೇಳಿದ್ದರ ಸಾರಾಂಶವು ಈ ಮೂರೂ ಸಂಸ್ಥೆಗಳ ಕಾರ್ಯಕರ್ತರು ಸ್ಥಿತಪ್ರಜ್ಞರಂತೆ ಆಗಬೇಕೆಂಬುದು. ಇದು ಒಂದುವೇಳೆ ಶಕ್ಯವಾಗದಿದ್ದರೆ ನಮ್ಮ ಕಾರ್ಯರೇಷೆಯನ್ನು ಬದಲಿಸಬೇಕಾಗುವದು. ನಮ್ಮ ಗುರಿಯು ಕೆಳಗೆ ಹೋಗಲೇಬೇಕಾಗುವದು. ಇಂದು ನಮ್ಮ ಸ್ಥಿತಿಯು ವಿಚಿತ್ರವಾಗಿ ತೋರುತ್ತಿರುವದು."

ಇದರಲ್ಲಿ ಚರಕಸಂಘ, ಗ್ರಾಮೋದ್ಯೋಗ ಸಂಘ, ತಾಲೀಮಿ ಸಂಘ ಈ ಮೂರೂ ಸಂಸ್ಥೆಗಳ ಸಂಯುಕ್ತ ಸಮಿತಿಯನ್ನು ಏರ್ಪಡಿಸುವ ಸೂಚನೆಯನ್ನು ನಾನು ಮಾಡಿರುವೆನು. ಇಡೀ ರಾಜ

ಕಾರಣವು ನಮ್ಮ ಕಾರ್ಯವನ್ನೇ ಅವಲಂಬಿಸಿರುವಂತೆ ಅದನ್ನು ರೂಪುಗೊಳಿಸಬೇಕಾಗಿದೆ.

ನಾವು ಬಹು ದೀನಸ್ಥಿತಿಯಲ್ಲಿರುವೆವು. ಕಾಂಗ್ರೆಸ ಜನರಿಂದ ತಮಗೆ ಸಹಾಯವು ದೊರೆಯುತ್ತಿಲ್ಲವೆಂದು ಚರಕಸಂಘದ ಧ್ಯೇಯ ನಿಷ್ಠ ಅನುಯಾಯಿಗಳು ನನಗೆ ಹೇಳಿರುವರು. ಈ ಎರಡು ವರ್ಷಗಳಲ್ಲಿ ಬಂದ ಅನುಭವವೂ ನಮ್ಮ ಮುಂದಿದೆ. ಸೆರೆಮನೆ ಯಲ್ಲಿ ಬಿದ್ದಿರುತ್ತಿದ್ದ ವೃತ್ತಪತ್ರಗಳಲ್ಲಿಯೂ ನಾನು ಬಹಳ ಓದಿ ರುವೆನು. ನಮ್ಮ ಕಾರ್ಯಕರ್ತರು ಹೊರಡಿಸುತ್ತಿದ್ದ ದೀನತೆಯನ್ನು ನಾನು ಕಣ್ಣಾರೆಯೂ ಕಂಡಿದ್ದೆನು. ಈಗ ಮಾತುಕತೆಗಳಿಂದ ಇದೆಲ್ಲ ಸ್ಪಷ್ಟವಾಗಿ ಹೋಗಿರುವದು.

ಸೆರೆಮನೆಯಲ್ಲಿದ್ದಾಗ್ಗೆ ಕಮ್ಯೂನಿಸ್ಟರ ಇಡೀ ಸಾಹಿತ್ಯವನ್ನು ನಾನು ಓದಿದ್ದೇನೆ. ಅದೇನು ನನಗೆ ಹೊಸ ವಿಷಯವಾಗಿರ ಲಿಲ್ಲ. ಮೌಲಾನಾ ಹಜರತ ಮೋಹಾನಿಯವರು ಆಶ್ರಮಕ್ಕೆ ಬರುತ್ತಿದ್ದಾಗ್ಗೆ ಇಡೀ ದಿನವೆಲ್ಲ ಈ ವಿಷಯಕ ಚರ್ಚೆಯನ್ನು ನಾನು ಅವರೊಂದಿಗೆ ಮಾಡುತ್ತಿದ್ದೆನು. ಉದ್ಯಮಶೀಲರೂ ಪದ ವೀಧರರೂ ಆಗಿರುವ ಕಾರ್ಯಕರ್ತರ ಸಾಕಷ್ಟು ಸಂಖ್ಯೆಯು ಇಂದು ಸಮತಾವಾದಿಗಳಲ್ಲಿ ಇರುವದು. ಇವರಲ್ಲಿ ತಾಟಸ್ಥ್ಯ ವನ್ನು ತಳೆಯುತ್ತಿರುವ ಜನರು ನನ್ನೆಡೆ ಬರುತ್ತಿರುವರು. ನಿಮ್ಮ ಲ್ಲಿದ್ದ ತತ್ವಜ್ಞಾನವನ್ನು ನೀವು ನಂಬಿರುವ ಸಿದ್ಧಾಂತವನ್ನೂ ಜಗತ್ತಿನ ಎದುರು ಮಂಡಿಸಿರೆಂದು ಅವರು ನನಗೆ ಹೇಳುತ್ತಿರು ವರು. ಜಗತ್ತಿನೆದುರು ನಾನೊಂದು ಹೊಸ ವಿಧಾನವನ್ನು ಮಂಡಿಸಿರುವೆನು. ಅದರ ಹಿಂದೆ ಇತಿಹಾಸವಿಲ್ಲ. ನಾಲ್ವತ್ತು ವರ್ಷಗಳಲ್ಲಿ ನನಗೆ ಬಂದ ಅನುಭವವೇ ನನ್ನ ಬಂಡವಾಳವು.

ಪದವೀಧರರು ನಮ್ಮಲ್ಲಿ ಕಡಿಮೆ ಇರುವರೆಂಬದನ್ನು ನಾವು ಒಪ್ಪಲೇಬೇಕು. ನಮ್ಮ ಹತ್ತಿರ ಹಣವಿಲ್ಲ. ಅಷ್ಟೊಂದು ಯೋಗ್ಯತೆಯೂ ಇಲ್ಲ. ಈ ಎಲ್ಲ ಸಂಕಷ್ಟಗಳನ್ನೂ ನಾನು ಅರಿತಿರುವೆನು. ಇವುಗಳ ಮಧ್ಯದಲ್ಲಿಯೇ ಎಪ್ಪತ್ತೈದು ವರ್ಷ ನಗುತ್ತ ಕೆಲೆಯುತ್ತ ನಡೆದು ಬಂದಿರುವೆನು. ನಿರ್ಭಯನಾಗಿ ನನ್ನ ಮಾರ್ಗವನ್ನು ನಾನು ಕಂಡುಹಿಡಿಯುತ್ತ ಸಾಗಿರುವೆನು. ಆ ನಿರ್ಭಯತೆಯು ತಮ್ಮಲ್ಲಿಯೂ ಬರಲೆಂದು ನಾನು ಆಶಿಸುತ್ತೇನೆ.

ಈ ತರದ ನಿರ್ಭಯತೆಯು ನಮ್ಮಲ್ಲಿದ್ದುದಾದರೆ ಜ್ಞಾನಪೂರ್ವಕವಾಗಿ ನಮ್ಮ ಮಾರ್ಗವನ್ನು ನಾವು ಕಲ್ಪಿಸಿಕೊಳ್ಳಬಲ್ಲೆವು. ಪ್ರತಿಯೋಗಿ ವಸ್ತುವನ್ನು ಎದುರಿಸಬಲ್ಲೆವು. ಕತ್ತಲೆಯು ಮುಂದೆ ಮುಂದೆ ಹರಿಯುತ್ತ ಹೋಗುವಂತೆ ಮಾಡುವದೇ ಬೆಳಕನ್ನು ತೋರಿಸುವ ರೀತಿ. ಕತ್ತಲೆಯೆಂದರೆ ಬೆಳಕಿನ ಅಭಾವ ಬೆಳಕನ್ನು ಹೆಚ್ಚಿಗೆ ಬೆಳಿಸುವದೇ ಜಗತ್ತಿನಲ್ಲಿಯ ಸೂಚಿಯಾಗಿದೆ. ಆತ್ಮನಾಶದ ಹೊರತು ಕತ್ತಲೆಗೆ ಗತ್ಯಂತರವೇ ಉಳಿಯಲಾರದು. ಇದೇ ಅಹಿಂಸೆಯ ರೀತಿಯು. ಈ ಭಾವವು ನನ್ನ ಅಂತಃಕರಣವನ್ನು ಪೂರ್ಣವಾಗಿ ವ್ಯಾಪಿಸಿರುವದರಿಂದ ನನಗೆ ಯಾತರ ಭಯವೂ ಇಲ್ಲ. ನನ್ನ ಬಂಡಿಯು ಕಂದಕದಲ್ಲಿ ಹಾಯ್ದು ಸಹ ಮುಂದೆ ಸಾಗುತ್ತಲೇ ಇದೆ. ಅಹಿಂಸೆಯ ಈ ಪ್ರದರ್ಶನವನ್ನು ನಾನು ಸತ್ತನಂತರ ನೀವು ನೋಡುವಿರಿ, ಆ ಮುಂಚೆ ಅಲ್ಲ.

ಇದುವರೆಗೆ ನಾವು ಹೆಳವರಾಗಿರುವ ಕಾರಣ ಕಾಂಗ್ರೆಸದ ಮುಖವನ್ನು ನೋಡುತ್ತ ಕುಳಿತಿರುವೆವು. ಕಾಂಗ್ರೆಸು ನಮಗೆ ನೆರವಾದರೇ ನಮ್ಮ ಕಾರ್ಯ ಸಾಗುವದೆಂದು ನಾವು ತಿಳಿಯುತ್ತಿರುವೆವು. ಆದರೆ ಕಾಂಗ್ರೆಸಿನಲ್ಲಿ ಚರಕ ಸಂಘದ ಬಗ್ಗೆ

ಗೊತ್ತುವಳಿಯನ್ನು ತಯಾರಿಸಿದವನು ನಾನೇ ಇದ್ದೆನು. ಇದು ಪ್ರಗತಿಶೀಲವಾದ ವಸ್ತುವೆಂದು ನನಗೆ ತೋರಿತು. ನಾವು ಹಳ್ಳಿಗಳಲ್ಲಿ ಹೇಗೆ ಕೆಲಸ ಮಾಡಬೇಕೆಂಬದನ್ನು ತೋರಿಸಿರಿ ಎಂದು ಕಾಂಗ್ರೆಸಿಗರು ನಮ್ಮ ಬೆನ್ನು ಹತ್ತುತ್ತಿರಬೇಕು, ಇಂಥ ಶಕ್ತಿಯು ನಮ್ಮಲ್ಲಿರತಕ್ಕದ್ದು. ಅಂದರೆ, ಯಾವ ಕಾಂಗ್ರೆಸಿಗನು ಚರಕಸಂಘವನ್ನು ಬಿಟ್ಟು ಹೊರಗೆ ಉಳಿಯುವನು? ಈ ತಿಳು ವಳಿಕೆಯು ನಮ್ಮಲ್ಲಿದ್ದುದಾದರೆ ಪರಸ್ಪರರಲ್ಲಿ ಐಕಮತ್ಯವುಂಟಾ ಗುತ್ತಿತ್ತು. ಈರ್ವರೂ ಒಬ್ಬರು ಇನ್ನೊಬ್ಬರಲ್ಲಿ ಬೆರೆತು ಹೋಗು ತ್ತಿದ್ದರು. ನಾವು ಕಾಂಗ್ರೆಸದ ರಚನಾತ್ಮಕ ಕಾರ್ಯವನ್ನು ಮಾಡುತ್ತಿದ್ದರೆ, ಕಾಂಗ್ರೆಸು ಸರಕಾರದೊಡನೆ ಹೋರಾಡುವ ಮತ್ತು ಕಾಯದೆ ಮಂಡಳಗಳ ಕಾರ್ಯ ಮಾಡುತ್ತಿತ್ತು. ಈ ಎರಡೂ ಕಾರ್ಯಗಳು ಪರಸ್ಪರ ವಿರುದ್ಧವಾಗಿರುವವೆಂದು ಅನಿ ಸುತ್ತಿದ್ದಿಲ್ಲ.

ಆದುದರಿಂದ ಎಲ್ಲ ಮಾತುಗಳನ್ನು ನಾವು ಹೊಸ ದೃಷ್ಟಿ ಯಿಂದಲೂ ಹೊಸ ಆಗ್ರಹದಿಂದಲೂ ಆಲೋಚಿಸಬೇಕಾಗುವದು. ನಾನು ತಮ್ಮೆದುರು ಯಾವ ಹೊಸ ವಿಧಾನವನ್ನೂ ಮಂಡಿಸಿ ರುವದಿಲ್ಲ. ತಮ್ಮ ಜೀವನದಲ್ಲಿ ಅದನ್ನು ತಾವು ಸಿದ್ಧಗೊಳಿಸಿ ದರೆ ಅದೊಂದು ದೊಡ್ಡ ಸಂಗತಿಯಾಗುವದು. ನಮ್ಮ ಸ್ಥಿತಿಯು ವಿಚಿತ್ರವಾಗುತ್ತಾ ನಡೆದಿದೆ. ಖಾದೀ ಕಾರ್ಯದಲ್ಲಿ ನಾವು ಇದು ವರೆಗೆ ಅನುಸರಿಸುತ್ತ ಬಂದ ಮಾರ್ಗದಿಂದ, ನಾನು ರಾಟೆ ಯಲ್ಲಿ ಕಂಡಿರುವ ಶಕ್ತಿಯನ್ನು ಎಂದೂ ಸಿದ್ಧಗೊಳಿಸಲಾರೆವು. ಈ ಬಗ್ಗೆ ನನ್ನ ಮನಸ್ಸಿನಲ್ಲಿ ಯಾವ ಸಂಶಯವೂ ಇಲ್ಲ.

ಯಂತ್ರವಾದವನ್ನು ನಂಬುತ್ತಿರುವ ಜನರೂ ಹಿಂದುಸ್ಥಾ ನದ ಮಿತ್ರರಾಗಿರುವರೆಂಬ ಬಗ್ಗೆ ಸಂದೇಹವಿಲ್ಲ. ಆದರೆ ನನ್ನ

ಹಾಗೂ ಅವರ ನಡುವೆ ಉತ್ತರ ದಕ್ಷಿಣ ಧ್ರುವಗಳಷ್ಟು ಅಂತ ರವಿದೆ. ಯಂತ್ರವಾದಿಗಳ ಹೇಳಿಕೆಯಂತೆ ನಗರ ವಾಸಿಗಳು ನಡೆ ಯಲೊಲ್ಲರೇಕೆ? ಆದರೆ ಹಳ್ಳಿಗರಾದ ನಾವು ತಪ್ಪಿಯಾದರೂ ಆ ದಾರಿಯನ್ನು ಹಿಡಿದಿದ್ದಾದರೆ, ಹಿಂದುಸ್ಥಾನದ ರೂಪಚಿತ್ರ ವನ್ನೇ ಬದಲಿಸಬೇಕಾಗುವದು. ಇದರಿಂದ ಕೋಟ್ಯಾವಧಿ ಬಡ ಜನರು ಸತ್ತುಹೋಗಿ ವೇಷ ಭೂಷಾಡಂಬರದ ಒಂದು ಕೋಟಿ ವೀರರು ಮಾತ್ರ ಉಳಿಯುವರು. ನನಗೆ ೧೨೫ ವರ್ಷ ಬಾಳುವ ಅಭಿಲಾಷೆಯಿದೆ. ಆದರೆ ೩೯ ಕೋಟಿ ಜನ ನಾಶವಾಗಿ ಒಂದು ಕೋಟಿ ಉಳಿಯುವದು ಅಂದರೆ ಮೂವತ್ತೊಂಬತ್ತು ಕೋಟಿ ಜನ ಸುಟ್ಟು ಬೂದಿಯಾಗುವದನ್ನು ನೋಡುವದು ನನ್ನಿಂದಾ ಗದು. ಎಲ್ಲಕ್ಕೂ ಹೆಚ್ಚು ಊನರಾಗಿರುವ ಜನರ ಸೇವೆಯನ್ನು ಮಾಡುವದು ಹಾಗೂ ಅವರ ಸಂಗಡ ಹೆಜ್ಜೆಯನ್ನಿಡುತ್ತ ಸಾಗು ವದು ಇದೇ ನನ್ನ ಶಿಕ್ಷಣವು. ಇಷ್ಟು ವರ್ಷ ಖಾದಿಯ ಮುಖಾಂತರ ಇದೇ ಕಾರ್ಯವನ್ನು ಜರುಗಿಸುವ ಪ್ರಯತ್ನವು ನಡೆದು ಬಂದಿದೆ. ನಮ್ಮ ಇತಿಹಾಸವು ಸ್ವಲ್ಪ ವರ್ಷಗಳದು ಆದರೆ ಈ ಅವಧಿಯಲ್ಲಿ ನಾವು ಎಷ್ಟು ಬದಲಾವಣೆ ಮಾಡಿ ರುವೆವು? ಬದಲಾವಣೆ ಮಾಡತಕ್ಕದ್ದಲ್ಲೆಂದು ತಾವು ಅಭಿಪ್ರಾಯ ಪಟ್ಟರೆ ಅದೂ ಸರಿಯೇ. ಇದು ಸೋಲೆಂದು ನಾನು ಬಗೆಯು ವದಿಲ್ಲ. ತಾವು ಎಲ್ಲ ಬಗೆಯಿಂದ ಆಲೋಚಿಸಿ ನಿರ್ಣಯ ಮಾಡಿರಿ. ತಿರುಗಿ ಇಷ್ಟುಜನ ಸೇರುವರೆಂದು ಯಾರಿಗೆ ಗೊತ್ತು? ನನ್ನ ತಲೆಯಲ್ಲಿ ಬಂದ ವಿಚಾರವನ್ನು ಇದ್ದಕ್ಕಿದ್ದಹಾಗೆ ತಮ್ಮೆ ದುರು ಮಂಡಿಸಿರುವೆನು.

ರಾಟಿಯು ನಮ್ಮ ಗುರಿಯ ಎಲ್ಲಕ್ಕೂ ಮಿಗಿಲಾದ ಪ್ರತೀ ಕವಾಗಿರುವದೆಂದು ನಾವು ಭಾವಿಸುತ್ತಿದ್ದರೆ ಹಾಗೂ ಈಗಿನ

ರೀತಿಯಿಂದ ನಮ್ಮ ಪ್ರತಿಪಾದನೆಯನ್ನು ಸಾರ್ಥಕ ಗೊಳಿಸುವದು ನಮ್ಮಿಂದ ಶಕ್ಯವಾಗದಿದ್ದರೆ ನಮ್ಮ ಕಾರ್ಯ ಸರಣಿಯನ್ನು ನಾವು ಬದಲಿಸಲೇಬೇಕಾಗುವದು.

ನಾವು ಇದುವರೆಗೆ ಮಾಡಿದುದೆಲ್ಲ ಆಮೂಲಾಗ್ರ ತಪ್ಪೇ ತಪ್ಪು ಆಗಿತ್ತೆಂಬುದೇನೂ ಅಲ್ಲ. ನಾವು ಇದುವರೆಗೆ ಮಾಡಿದುದು-ಸತ್ಯನಿಷ್ಠೆಯಿಂದ ಮಾಡಿದುದು. ಯಾಕೆ, ಅದೇನು ಕಡಿಮೆ ಇದ್ದಿತೇ?-ಅಲ್ಪ ಬಂಡವಾಳದಿಂದ ನಾಲ್ಕುವರೆ ಕೋಟಿ ರೂಪಾಯಿಗಳನ್ನು ಹಳ್ಳಿಗಳಿಗೆ ಮುಟ್ಟಿಸಿದೆವು. ಹಳ್ಳಿಗಳಿಗೆ ಹಣ ಮುಟ್ಟಿಸುವ ಕುರಿತು ತಗಲಿದ ವೆಚ್ಚವು ಪರಿಮಾಣದಲ್ಲಿ ಕಡಿಮೆ ಇರುವದು. ಆದರೆ ಹೀಗಿದ್ದರೂ ನಮ್ಮ ಉದ್ದೇಶದ ಅಳತೆಯಲ್ಲಿ ಕೆಲಸವು ಎರಡನೆಯ ತರಗತಿಗಿಳಿದದೆ. ಈ ತರದ ವ್ಯಾಪಾರೀ ಕೆಲಸದಲ್ಲಿ ಸಿಕ್ಕುಬೀಳಬಾರದು. ಚೀನದ ಸಹಕಾರೀ ಕಾರ್ಯ ವಿಷಯಕ ಪುಸ್ತಕವೊಂದನ್ನು ಜವಾಹೆರರು ನನಗೆ ಕಳಿಸಿರುವರು. ನಾವು ಇಲ್ಲಿ ಮಾಡುತ್ತ ಬಂದಿರುವ ಕಾರ್ಯದ ಮುಂದೆ ಅಲ್ಲಿಯ ಕಾರ್ಯವೇನೂ ಅಲ್ಲ. ಆದರೆ ಕಾರ್ಯದ ದೃಷ್ಟಿಯಿಂದ ನೋಡಿದರೆ ನಾವು ಏನೂ ಕೆಲಸ ಮಾಡಿರುವದಿಲ್ಲ. ಏಳು ಲಕ್ಷ ಹಳ್ಳಿಗಳನ್ನು ಮುಟ್ಟುವದು ನಮ್ಮಿಂದ ಶಕ್ಯವಾಗಿಲ್ಲ. ಗಿರಣಿಗಳಿಗೆ ಪ್ರತಿಯಾಗಿ ನಾವು ಒಂದು ನೂರಾಂಶದಷ್ಟು ಕೆಲಸ ಮಾಡಿರುವೆವು. ಇಂಥ ಕಾರ್ಯದ ಬಗ್ಗೆ ನಾವು ಅಭಿಮಾನ ಪಡುವದಾದರೂ ಹೇಗೆ? ಇದುಕಾರಣ ನಾನು ಹೇಳುವದೇನಂದರೆ, ಈ ಬದಲಾವಣೆಯನ್ನು ಮಾಡುವದು ನಮ್ಮಿಂದಾಗದಿದ್ದರೆ ಒಂದು ಕೇವಲ ಪಾರಮಾರ್ಥಿಕ ಸಂಸ್ಥೆಯಂತೆ ನಾವು ಕೆಲಸ ಮಾಡುತ್ತ ಹೋಗುವಾ. ಇದರಿಂದ ನನಗೇನು ನಾಚಿಕೆ ಬರುವದಿಲ್ಲ. ನಮ್ಮ ಪ್ರತಿಪಾದನೆಯನ್ನು ಸಿದ್ಧಗೊಳಿಸತಕ್ಕದ್ದದೆ. ಇದನ್ನು ಮಾಡು

ವಾಗ್ಗೆ ಯಾರನ್ನೂ ವಂಚಿಸತಕ್ಕದ್ದಿಲ್ಲ: ಇದನ್ನು ಮಾಡತಕ್ಕದ್ದೆಂದವೇಲೆ ಶಕ್ತಿಯನ್ನು ಹೆಚ್ಚಿಸುವ ಬಗೆ ಯಾವುದೆಂಬ ಬಗೆ ಆಲೋಚಿಸಿರಿ. ಬದಲಾವಣೆ ಮಾಡುವ ಕುರಿತು ಒಂದು ವೇಳೆ ಸಂಘವನ್ನು ತಾವೇ ತಮ್ಮ ಕೈಯಿಂದ ಬಂದು ಮಾಡಿ ಬಿಡಬೇಕಾದರೆ ಅದರಿಂದಲೂ ನಮ್ಮ ಶಕ್ತಿ ಬೆಳೆಯುವದು.

ಮೂರನೆಯ ದಿನ ೩-೯-೧೯೪೪

ಇಂದು ನನ್ನ ಮನೋಭಾವವನ್ನು ಹೆಚ್ಚು ಸ್ಪಷ್ಟವಾಗಿ ತಮಗೆ ತಿಳಿಸಲು ಯತ್ನಿಸುವೆನು. ಎರಡು ದಿನ ಹೇಳಿದುದನ್ನು ಎರಡನೆಯ ಕಟ್ಟಿನಲ್ಲಿ ಸೇರಿಸಿ ತಿಳಿಯಪಡಿಸುವೆನು.

ಒಂದು ಸಣ್ಣ ಸಂಗತಿಯಿಂದ ನಮ್ಮ ಕೆಲಸದ ಆರಂಭವಾಯಿತು. ನಾನು ರಾಟೆಯ ಕಾರ್ಯವನ್ನು ಆರಂಭಿಸಿದಾಗ್ಗೆ ಶ್ರೀ ವಿಠ್ಠಲದಾಸಭಾಯಿ ಹಾಗೂ ಹಲವು ಭಗಿನಿಯರೂ ನನ್ನೊಡನೆ ಇರುತ್ತಿದ್ದರು. ಅವರಿಗೆ ನನ್ನ ಇಂಗಿತವನ್ನು ತಿಳಿಯಪಡಿಸಿದ್ದೆನು. ಮಗನಲಾಲಭಾಯಿ ಮೊದಲಾದ ಅನ್ಯರೂ ಇದ್ದರು. ಅವರು ಹೋಗುವದಾದರೂ ಎಲ್ಲಿ? ಅವರು ನನ್ನೊಂದಿಗೇ ಜೀವಿಸತಕ್ಕವರು.—ಸಾಯತಕ್ಕವರು. ಆ ದಿನಗಳಲ್ಲಿ ವಿಠ್ಠಲದಾಸರು ಕೂಲಿಕಾರರ ಸಲುವಾಗಿ ಬಡಿದಾಡುತ್ತಿದ್ದರು. ಅವರು ತಮ್ಮ ಅಂಗಡಿಯನ್ನು ಬಿಟ್ಟು ಈ ದರಿದ್ರ ಕೆಲಸದಲ್ಲಿ ಸೇರಿದರು. ಆ ಕಾಲಕ್ಕೆ ಭವಿಷ್ಯದಲ್ಲಿ ನಮ್ಮ ಹಣೇಬರಹದಲ್ಲಿ ಎನು ಬರೆದಿತ್ತೆಂಬದು ಗೊತ್ತಿರಲಿಲ್ಲ.

ಇಂದು ಕೋಟಿ ಎರಡು ಕೋಟಿ ಜನ ರಾಟೆಯ ಕಕ್ಷೆಯಲ್ಲಿ ಬಂದು ಸೇರಿರುವರು. ರಾಟೆಯಲ್ಲಿ ಸ್ವರಾಜ್ಯ ಸಂಪಾದ

ನೆಯ ಶಕ್ತಿಯುಂಟೆಂದು ನಾವು ಇದುವರೆಗೆ ಅನ್ನುತ್ತ ಬಂದಿರುವೆವು. ಇಷ್ಟು ವರ್ಷಗಳಲ್ಲಿ ರಾಟೆಯ ಮುಖಾಂತರ ಹಳ್ಳಿಗರಿಗೆ ಸಾಕಷ್ಟು ಹಣವನ್ನೂ ಮುಟ್ಟಿಸಿರುವೆವು. ರಾಟೆಯನ್ನುಳಿದು ಸ್ವರಾಜ್ಯವು ದೊರೆಯಲಾರದೆಂದು ಇಂದೂ ನಾವು ಅನ್ನಬಲ್ಲೆವೋ? ಎಂದಿನವರೆಗೆ ನಮ್ಮ ಈ ಪ್ರತಿಪಾದನೆಯನ್ನು ಸಿದ್ಧಗೊಳಿಸಲಾರೆವೋ ಅಂದಿನವರೆಗೆ ರಾಟೆಯನ್ನು ತಿರುಗಿಸುವದೆಂದರೆ ಅದು ನಮ್ಮ ದೀನದೆಸೆಗೆ ಪೋಷಕವಾಗಿಯೇ ಪರಿಣಮಿಸುವದು. ಅದು ಮುಕ್ತಿಮಂತ್ರವಾಗದು ಇಷ್ಟು ಮಾತನ್ನು ನಿಮಗೆ ತಿಳಿಸಲು ನಾನು ಶಕ್ತನಾಗಿದ್ದರೆ ನಾನು ಮುಂದಿನ ಹೆಜ್ಜೆಯನ್ನೆತ್ತುವೆನು.

ಎರಡನೆಯ ಹೆಜ್ಜೆಯೆಂದರೆ ನಾವು ಕೋಟ್ಯಾವಧಿ ಜನತೆಗೆ ಈ ಮಾತನ್ನು ತಿಳಿಸಲೆಳಿಸಿರುವದಿಲ್ಲ. ಆ ಕೋಟ್ಯಾವಧಿ ಜನತೆಯಲ್ಲಿ ರಾಟೆಯ ಬಗ್ಗೆ ಜಿಜ್ಞಾಸೆಯೂ ಇಲ್ಲ. ಜ್ಞಾನವೂ ಇಲ್ಲ.

ಕಾಂಗ್ರೆಸ್ಸು ರಾಟೆಯನ್ನು ಅಂಗೀಕರಿಸಿದ್ದುದು ನಿಜ. ಆದರೆ ಅದನ್ನು ಅದು ಆತ್ಮ ಸಂತೋಷದಿಂದ ಸ್ವೀಕರಿಸಿದ್ದಿತೋ? ಇಲ್ಲ. ನನ್ನ ಮೇಲಿನ ಆದರ ಬುದ್ಧಿಯಿಂದ ಅದನ್ನು ಅವರು ಸಹಿಸುತ್ತಿರುವರು. ಸಮಾಜವಾದಿಗಳಂತೂ ಅದನ್ನು ನಗೆಗೀಡು ಮಾಡುತ್ತಿರುವರು. ಅದರ ವಿರುದ್ಧವಾಗಿ ಅವರು ಭಾಷಣಗಳನ್ನೂ ಮಾಡಿರುವರು. ಸಾಕಷ್ಟು ಲೇಖನಗಳನ್ನೂ ಬರೆದಿರುವರು. ಅವರಿಗೆ ಕೊಡಲು ಪ್ರತ್ಯಕ್ಷ ಉತ್ತರವು ನಮ್ಮಲ್ಲಿರುವದಿಲ್ಲ. ರಾಟೆಯಿಂದ ಸ್ವರಾಜ್ಯ ದೊರೆಯುವದೆಂಬ ಮಾತಿನಲ್ಲಿ ಅವರ ವಿಶ್ವಾಸವನ್ನು ನಾನು ಹುಟ್ಟಿಸುವದೆಂತು ?. ಇಂತಿಂಥ ರೀತಿಯಲ್ಲಿ ಪ್ರತಿಪಾದನೆಯನ್ನು ನಾವು ಸಿದ್ಧಗೊಳಿಸಬಲ್ಲೆವೆಂಬದನ್ನು ಇಷ್ಟು ವರ್ಷ ನಮ್ಮಿಂದ ತೋರಿಸಲಾಗಲಿಲ್ಲ.

ಇನ್ನು ಮೂರನೆಯ ಹೆಜ್ಜೆ.

ಅಹಿಂಸೆಯು ಮುಗಿಲಮೇಲಿನವಸ್ತುವೇನು ಅಲ್ಲ. ಒಂದು ವೇಳೆ ಹಾಗಿದ್ದರೆ ಅದು ನನಗೆ ನಿಷ್ಪ್ರಯೋಜಕವಾದುದು. ಭೂಮಿಯೊಳಗಿಂದಲೇ ನಾನು ಬಂದಿರುವೆನು. ಅದರಲ್ಲಿಯೇ ನಾನು ಬೆರೆತು ಹೋಗತಕ್ಕದ್ದಿದೆ. ರಾಟೆಯೆಂಬದೊಂದು ನಿಜವಾದ ಆದರ್ಶ ವಸ್ತುವಾಗಿದ್ದರೆ ನನ್ನ ಕಾಲುಗಳು ನೆಲದಮೇಲಿರುವದರಿಂದ ಅಲ್ಲಿಯೇ ಅದರ ದರ್ಶನ ಪಡೆಯಲು ಬಯಸುತ್ತೇನೆ. ಕೋಟಿಗಟ್ಲೆ ಜನರು ಪಾಲಿಸಲು ಶಕ್ಯವಾಗಿರುವಂಥ ಅಹಿಂಸೆಯೇ ನನಗೆ ಬೇಕಿದೆ. ದಯಾರ್ದ್ರತೆಯೇ ಮುಂತಾದ ಗುಣಗಳು ನೆಲೆಗೊಂಡಿರುವ ಸಮಾಜದಲ್ಲಿ ಅಹಿಂಸೆಯು ಒಡಮೂಡದಿದ್ದರೆ ಮತ್ತೆಲ್ಲಿ ಅದು ಶಕ್ಯವಾಗುವದು?

ಹಿಂಸಾವಾದಿಗಳ ಮನೆಯಲ್ಲಿ ಹೋಗಿ ನೋಡಿರಿ ಒಂದೆಡೆ ಹುಲಿದೊಗಲು ತೂಗುತ್ತಿದ್ದರೆ ಇನ್ನೊಂದೆಡೆ ಜಿಗರಿಯ ಕೋಡುಗಳು ಇಳಿಬಿದ್ದಿರುವವು. ಗೋಡೆಗಳಮೇಲೆ ಕತ್ತಿ ಬಂದೂಕುಗಳು ಜೋತು ಬಿದ್ದಿರುವವು. ನಾನು ವ್ಹಾಯಿಸರಾಯರ ಮಂದಿರಕ್ಕೆ ಹೋಗಿದ್ದೆನು. ಮುಸೋಲಿನಿಯ ಮನೆಗೂ ನನ್ನನ್ನು ಕರೆದೊಯ್ಯಲಾಗಿತ್ತು. ನಾಲ್ಕೂಕಡೆ ಶಸ್ತ್ರಗಳು ತೂಗಹಾಕಿದ್ದನ್ನು ನಾನು ಕಂಡೆನು. ನನಗೆ ಶಸ್ತ್ರ-ವಂದನೆಯನ್ನೂ ಅರ್ಪಿಸಿದರು. ಯಾಕಂದರೆ ಅವು ಅವರ ಪ್ರತೀಕಗಳು.

ಅದರಂತೆ ಅಹಿಂಸೆಯ ಪ್ರತ್ಯಕ್ಷ ದರ್ಶನವನ್ನು ಒದಗಿಸಿ ಕೊಡುವಂಥ ರಾಟೆಯೇ ನಮ್ಮ ಪ್ರತೀಕವು. ಅಂಥ ಕಾರ್ಯವನ್ನು ನಾವು ಮಾಡಿ ತೋರಿಸುವ ವರೆಗೆ ಅದು ಸಿದ್ಧವಾಗಲಾ

ರದು. ಮುಸೋಲಿನಿಯ ಚಾವಡಿಯಲ್ಲಿ ಕತ್ತಿ ಇದ್ದಿತು. ಮುಟ್ಟಿದರೆ ಕೊಯ್ಯುವೆನು ಎಂದು ಅದು ಅನ್ನುತ್ತಿತ್ತು. ಅದರಲ್ಲಿ ಹಿಂಸೆಯ ಪ್ರತ್ಯಕ್ಷ ದರ್ಶನವಾಗುತ್ತದೆ. "ನನ್ನನ್ನು ಮುಟ್ಟಿರಿ ಅಂದರೆ ನನ್ನ ಪ್ರತಾಪವನ್ನು ನೋಡಿರಿ" ಎಂದು ಅದು ಸಾರುತ್ತಿದ್ದಿತು. ರಾಟೆಯನ್ನು ಕಂಡೊಡನೆ ಅಹಿಂಸೆಯ ದರ್ಶನವಾಗುವಂತೆ ನಾವು ರಾಟೆಯ ಶಕ್ತಿಯನ್ನು ಸಿದ್ಧಗೊಳಿಸತಕ್ಕದ್ದಿದೆ. ಆದರೆ ಈಗ ನಾವು ಕಂಗಾಲರಾಗಿರುವೆವು. ಸಮಾಜವಾದಿಗಳಿಗೆ ನಮ್ಮ ಮರುಮಾತು ಏನಿದೆ? ಇಷ್ಟು ವರ್ಷಗಳಿಂದ ನೀವು ರಾಟೆ ರಾಟೆಯೆಂದು ಜಪಿಸುತ್ತ ಬಂದಿರುವಿರಿ ಅದರಿಂದ ನೀವು ಸಾಧಿಸಿದ ಪುರುಷಾರ್ಥವಾದರೂ ಯಾವುದು! ಎಂದು ಅವರು ಕೇಳುತ್ತಿರುವರು.

ಮುಸಲ್ಮಾನರ ಕಾಲದಲ್ಲಿಯೂ ರಾಟೆಯು ನಡೆಯುತ್ತಿದ್ದಿತು. ಆಗ್ಗೆ ಡಾಕಾದ ಮಲಮಲು ತಯಾರಾಗುತ್ತಿತ್ತು. ಆಗಾದರೂ ರಾಟೆಯು ಅಹಿಂಸೆಯ ಪ್ರತೀಕವಾಗಿರದೆ ದೈನ್ಯದ ದ್ಯೋತಕವಾಗಿದ್ದಿತು. ಬಾದಶಹರು ಹೆಣ್ಣುಮಕ್ಕಳನ್ನೂ, ಕೀಳುತರಗತಿಯ ಜನರನ್ನೂ ಏನೂ ಪ್ರತಿಫಲವಿಲ್ಲದೆ ದುಡಿಸಿಕೊಳ್ಳುತ್ತಿದ್ದರು. ಮುಂದೆ ಈಸ್ಟ ಇಂಡಿಯಾ ಕಂಪನಿಯವರೂ ಇದೇ ಕಿತ್ತಿಯನ್ನು ತೀಡಿದರು. ಕೌಟಿಲನ ಅರ್ಥಶಾಸ್ತ್ರದಲ್ಲಿಕೂಡಾ ಈ ವಿಷಯದ ಉಲ್ಲೇಖವಿದೆ. ಆ ಕಾಲದಲ್ಲಿಯೂ ರಾಟೆಯು ಹಿಂಸೆಯ ಅಥವಾ ಒತ್ತಾಯದ ಪ್ರತೀಕವಾಗಿದ್ದಿತು. ರಾಟೆಯನ್ನು ತಿರುಗಿಸುವವರಿಗೆ ಎರಡು ಮುಷ್ಟಿ ಕಾಳು ಅಥವಾ ಎರಡು ಕಾಸು ಮಾತ್ರ ದೊರೆಯುತ್ತಿತ್ತು. ಇದರಿಂದ ಉತ್ಪನ್ನವಾಗುತ್ತಿದ್ದ ಮಲಮಲಿನ ತಾಗೆಯನ್ನುಟ್ಟರೂ ಅರಸು ಮನೆತನದ ಹೆಣ್ಣುಮಕ್ಕಳು ಬತ್ತಲೆ ಇದ್ದಂತೆ ತೋರುತ್ತಿದ್ದರು.

ಆದರೆ ತಮ್ಮೆದುರು ನಾನು ಇಟ್ಟಿರುವ ರಾಟೆಯು ಅಹಿಂಸೆಯ ಪ್ರತೀಕವೆಂದು ಇಡಲ್ಪಟ್ಟಿರುವದು. ಈ ಮುಂಚೆ ಈ ಸಂಗತಿ

ಯನ್ನು ನಾನು ತಮಗೆ ತಿಳಿಸಿಲ್ಲವಾದರೆ ಅದು ನನ್ನ ತಪ್ಪು. ನಾನು ಕುಂಟನು. ಮೆಲ್ಲಮೆಲ್ಲನೆ ಸಾಗತಕ್ಕವನು. ಆದರೂ ಇದು ವರೆಗೆ ಆದ ಕಾರ್ಯಕ್ಕೆ ಪ್ರತಿಫಲ ದೊರೆತಿಲ್ಲವೆಂದು ನಾನು ಬಗೆಯಲಾರೆನು.

ನಾಲ್ಕನೆಯ ಹೆಜ್ಜೆಯನ್ನಿಕ್ಕಲು ಈಗ ನಾನು ಇಷ್ಟಪಡುತ್ತಿರುವದಿಲ್ಲ. ರಾಟೆಯನ್ನು ಬಿಟ್ಟರೆ ನಮಗೆ ಸ್ವರಾಜ್ಯ ದೊರೆಯದೆಂಬದನ್ನು ನಾವು ಸಿದ್ಧಮಾಡಿ ತೋರಿಸಿರುವದಿಲ್ಲ. ಕಾಂಗ್ರೆಸಿಗರಿಗೆ ಈ ಮಾತಿನ ಮನವರಿಕೆಯನ್ನು ಮಾಡಿಕೊಡುವದು ನಮ್ಮಿಂದಾಗುವ ವರೆಗೆ ಅದು ಸಿದ್ಧವಾಗಲಾರದು. ರಾಟೆ ಹಾಗೂ ಕಾಂಗ್ರೆಸ ಈ ಎರಡೂ ಶಬ್ದಗಳು ಪರ್ಯಾಯವಾಚಕವಾಗಿರಬೇಕು.

ಅಹಿಂಸೆಯನ್ನು ಪ್ರತಿಪಾದಿಸುವ ಕಾರ್ಯವು ಕಠಿಣವದೆ. ಅದರ ತಳಕ್ಕೆ ಹೋಗಿ ಶೋಧಿಸುವ ವರೆಗೆ ಅದರ ನಿಜಸ್ವರೂಪವು ನಮಗೆ ಹೊಳೆಯದು. ಇದುವರೆಗೆ ಹೇಳುತ್ತ ಬಂದುದನ್ನು ನಾನು ಸಮರ್ಥಿಸುತ್ತ ಬಂದಿರುವೆನು. ಜಗತ್ತು ನನ್ನನ್ನು ಪರೀಕ್ಷಿಸುತ್ತಿರುವದು. ರಾಟೆಯ ಬಗ್ಗೆ ನಾನು ಮಾಡುತ್ತಿರುವ ವಿಧಾನವು ಮೂರ್ಖತನದ್ದಾಗಿರುವದೆಂದು ಅದು ಒಂದು ವೇಳೆ ನಿರ್ಣಯಿಸಿದರೆ ಯಾವ ಅಡ್ಡಿಯೂ ಇಲ್ಲ. ನೂರಾರು ವರ್ಷಗಳಿಂದ ದೈನ್ಯ, ಅಸಹಾಯತೆ, ಒತ್ತಾಯ, ಬಿಟ್ಟಿ ಬೇಗಾರಗಳ ಪ್ರತೀಕವಾಗಿದ್ದ ರಾಟೆಯನ್ನು ಸದ್ಯದ ಪ್ರಪಂಚದಲ್ಲಿ ಘನವಾದ ಅಹಿಂಸೆಯ ಶಕ್ತಿ ಸಂಘಟನೆ, ಆರ್ಥಿಕ ವ್ಯವಸ್ಥೆಗಳ ಪ್ರತೀಕವನ್ನಾಗಿ ಮಾರ್ಪಡಿಸುವ ವೇಳೆಯನ್ನು ಹಿಡಿದು ನಾವು ಹೊರಟಿರುವೆವು. ತಿರುವಿದ್ದುದನ್ನು ನಾವು ಸರಿಮಾಡಿದ್ದೇವೆ. ಇತಿಹಾಸವನ್ನು ಬದಲಿಸಿದ್ದೇವೆ. ಇದನ್ನೆಲ್ಲ ತಮ್ಮ ಮುಖಾಂತರ ನಾನು ಮಾಡಲೆಣಿಸುತ್ತಿರುವೆನು.

ಈ ಎಲ್ಲ ಸಂಗತಿಯನ್ನರಿತಮೇಲೂ ರಾಟಿಯಲ್ಲಿ ಸ್ವರಾಜ್ಯ ಸಂಪಾದನೆಯ ಶಕ್ತಿಯಿರುವದೆಂಬದನ್ನು ಒಂದು ವೇಳೆ ನಂಬದಿದ್ದರೆ ತಾವು ನನ್ನನ್ನು ಬಿಟ್ಟುಬಿಡಿರಿ. ಇದರಲ್ಲಿ ತಮ್ಮ ಪರೀಕ್ಷೆಯಿದೆ. ಶ್ರದ್ಧೆಯಿಲ್ಲದಿದ್ದರೂ ತಾವು ನನ್ನನ್ನು ವಂಚಿಸಿದರೆ ತಾವು ದೇಶಕ್ಕೆ ದೊಡ್ಡ ಅಹಿತ ಮಾಡಿದಂತಾಗುವದು. ನನ್ನ ಕೊನೆಯ ದಿನಗಳಲ್ಲಿ ತಾವು ನನ್ನನ್ನು ವಂಚಿಸಬಾರದೆಂದು ತಮಗೆ ನಮ್ರ ಪ್ರಾರ್ಥನೆಯಿದೆ.

ಇದು ವರೆಗಿನ ಕಾರ್ಯಪದ್ಧತಿಯಲ್ಲಿದ್ದ ದೋಷಗಳ ಹೊಣೆ ನನ್ನದು. ಯಾಕಂದರೆ ಇದನ್ನೆಲ್ಲ ಅರಿತಿದ್ದರೂ ನಾನು ಅದರ ಮುಖಂಡತ್ವವನ್ನು ವಹಿಸಿರುವೆನು. ಆದರೆ ಹಿಂದೆ ಆಗಿಹೋದುದನ್ನು ಈಗ ಬಿಟ್ಟುಬಿಡುವಾ. ರಾಟಿಯು ಅಹಿಂಸೆಯ ಪ್ರತೀಕವಾಗಿರುವದೆಂಬದನ್ನು ನಾವು ಮನಃಪೂರ್ವಕವಾಗಿ ನಂಬುತ್ತಿರುವೆವೋ ? ರಾಟಿಯು ಅಹಿಂಸೆಯ ಪ್ರತೀಕವಾಗಿರುವದೆಂದು ಅಂತಃಕರಣವನ್ನು ಸ್ಮರಿಸಿ ಹೇಳುತ್ತಿರುವ ಜನ ನಮ್ಮಲ್ಲೆಷ್ಟಿರುವದು?

ಈ ನಿಮ್ಮ ಮೂಬಣ್ಣದ ನಿಶಾನೆಯು ಏನಿರುವದು? ಕೇವಲ ಇಷ್ಟು ಗಜ ಅಗಲು, ಇಷ್ಟು ಗಜ ಉದ್ದವಾದ ಖಾದಿಯ ತುಂಡಿರುವದೋ ? ಇದರ ಬದಲು, ನೀವು ಎರಡನೆಯದನ್ನಾದರೂ ಏರಿಸಬಹುದು. ಆದರೆ ಇದರಲ್ಲಿ ಭಾವನೆಯು ತುಂಬಿದೆ. ಇದರಲ್ಲಿ ಭಾವನೆಯನ್ನು ಒಡಮೂಡಿಸಿರುವೆವು. ಇದರ ಸಲುವಾಗಿ ನಾವು ಸಾಯಲನುವಾಗುವೆವು. ಇದು ಸ್ವರಾಜ್ಯದ ಪ್ರತೀಕವಾಗಿದೆ. ಜಾತೀಯ ಐಕಮತ್ಯದ ಚಿಹ್ನವಾಗಿದೆ. ಇದನ್ನು ನಾವು ಮರೆಯಲಾರೆವು ಮಾಜಲಾರೆವು. ಅದರಂತೆ ಈ ರಾಟಿಯು ಅಹಿಂಸೆಯ ಪ್ರತೀಕವು.

ಈ ರಾಟಿಯ ಹೆಸರಿನಿಂದ ನನ್ನ ವಿಚಾರ-ಪ್ರವಾಹವನ್ನು ತಮ್ಮೆದುರು ಹರಿಸುತ್ತಿರುವೆನು. ಇದಕ್ಕೆ ಸ್ವಾವಲಂಬನವೆನ್ನಿರಿ

ಅಥವಾ ಇನ್ನೇನಾದರೂ ಅನ್ನಿರಿ. ರಾಷ್ಟ್ರೀಯ ಸಂಘಟನೆ ಹಾಗೂ ಸ್ವಾವಲಂಬನ ಇವುಗಳ ಹೆಸರಿನಿಂದ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಹಾಗೂ ಆ ಮೂಲಕ ಕೋಟ್ಯಾವಧಿ ಜನರ ರಕ್ತಶೋಷಣವಾಗ ಹತ್ತಿದೆ. ನಮ್ಮ ಸ್ವಾವಲಂಬನವು ಆ ಮಾದರಿಯದಲ್ಲ. ಇದು ನಿಃಶೋಷಣದ (Nonexploitation) ಅಂದರೆ ಶೋಷಣ, ಒತ್ತಾಯ, ದಬ್ಬಾಳಿಕೆಗಳಿಂದ ಮುಕ್ತಿ ಪಡೆಯುವ ರೀತಿಯದೆ. ನನ್ನ ಆದರ್ಶವು ಶಬ್ದಗಳಲ್ಲಿಲ್ಲ; ವಸ್ತುವಿನಲ್ಲಿದೆ. ಆದರೂ ಶಬ್ದಗಳು ಚಮತ್ಕಾರಪೂರ್ಣವಿರುತ್ತವೆ. ಶಬ್ದವು ಭಾವನೆಗೆ ದೇಹವನ್ನು ಕಲ್ಪಿಸಿಕೊಡುವದು. ಭಾವನೆಯು ಶಬ್ದಬಲದಿಂದ ಸಾಕಾರವಾಗುವದು. ನಮ್ಮ ಧರ್ಮದಲ್ಲಿ ಸಾಕಾರ-ನಿರಾಕಾರಗಳ ಗದ್ದಲವು ಆಗಾಗ್ಗೆ ಕೇಳಬರುತ್ತಲಿರುವದು. ಸಾಕಾರವಾದಿಗಳು ಸಗುಣಭಕ್ತಿಗೆ ಮಹತ್ವಕೊಡುತ್ತಿರುವರು. ಈ ಭಾವನೆಯಂತೆ ನಾವು ಅಹಿಂಸೆಯ ಉಪಾಸನೆಯನ್ನು ಮಾಡುವದಾದರೆ ರಾಟೆಯನ್ನು ಅದರ ಸಾಕಾರಮೂರ್ತಿ ಅಥವಾ ಪ್ರತೀಕವೆಂದು ನಮ್ಮ ಕಣ್ಣೆದುರು ಇಟ್ಟುಕೊಂಡು ಅದರ ದರ್ಶನ ಪಡೆಯಬೇಕಾಗುವದು. ನಾನು ಅಹಿಂಸೆಯ ದರ್ಶನವನ್ನು ಮಾಡಿಕೊಳ್ಳುವಾಗ ರಾಟೆಯ ದರ್ಶನವೂ ನನಗಾಗುತ್ತಿದೆ. ಕೃಷ್ಣನು ಯಾರೆಂದು ನಿರಾಕಾರವಾದಿಯು ಕೇಳಬಹುದು. ಅವರು ಬೆಟ್ಟಗಳ ತುದಿಯ ಮೇಲೆ ಅಥವಾ ಆಕಾಶದಲ್ಲಿಯ ಮೋಡಗಳ ಮೇಲೆ ಸಂಚರಿಸತಕ್ಕವರು. ನಾವು ನೆಲದ ಮೇಲೆ ನಡೆಯತಕ್ಕವರು. ನಮ್ಮ ಮರ್ಯಾದೆಯನ್ನರಿತು ನಮಗೆ ತಕ್ಕುದಾದ ಸಾಕಾರ ಈಶ್ವರನ ನಮ್ಮ ಆ ಮೂರ್ತಶ್ರದ್ಧೆಯ ಹಾಗೂ ಭಾವನೆಯ-ಪ್ರತೀಕವು ಯಾವುದಾಗಬಹುದೆಂಬದನ್ನು ಹುಡಿಕಿಕೊಳ್ಳಬೇಕು. ಈ ಸತ್ಯವನ್ನು ತಾವು ಅರಿಯಲು ಶಕ್ತರಾದರೆ ನನ್ನ ಮಾತಿನಲ್ಲಿಯ ದೃಢತೆಯನ್ನು ತಿಳಿದುಕೊಳ್ಳುವಿರಿ. ಜಾಜೂಜಿಯವರೊಡನೆಯಾದರೂ ಇಷ್ಟು

ದೃಢತೆಯಿಂದ ಈ ಮುಂಚೆ ನಾನು ಎಂದೂ ಮಾತಾಡಿರಲಿಲ್ಲ. ನಾನೇನೋ ಗಡಿಬಿಡಿ ಮಾಡಹತ್ತಿರುವೆನೆಂದು ಜೇರಾಜಮಿಯವರು ಅನ್ನುತ್ತಿರುವರು. ಆದರೆ ರಾಟೆಯ ಉಪಾಸನೆಯ ಬಗ್ಗೆ ನನ್ನಲ್ಲಿದ್ದ ಭಾವನೆಯು ತಮ್ಮ ಅಂತಃಕರಣದಲ್ಲಿ ಒಡಮೂಡದಿದ್ದರೆ ಒಂದು ನೂರು ವರ್ಷ ಗತಿಸಿದರೂ ಅಹಿಂಸೆಯ ದರ್ಶನವು ಆಗದು. ನನ್ನ ಅಂತಃಕರಣದಲ್ಲಿ ಒಡಮೂಡಿರುವಂತಹ ಭಾವನೆಯಿಂದ ಅದರ ಹತ್ತಿರ ಹೋಗಿ ಅದನ್ನು ತಿರುಗಿಸಿದಾಗಲೇ ರಾಟೆಯಲ್ಲಿ ನನಗೆ ದೃಗ್ಗೋಚರವಾಗಿರುವ ಅಹಿಂಸೆಯ ಶಕ್ತಿಯ ದರ್ಶನವು ಆದೀತಲ್ಲ. ಈ ಸಲುವಾಗಿಯೇ ನನ್ನೊಡನೆ ಬನ್ನಿರಿ. ಇಲ್ಲವೆ ನನ್ನನ್ನು ಬಿಡಿರಿ ಎಂದು ನಾನು ಹೇಳುತ್ತಿರುವೆನು. ನನ್ನೊಡನೆ ತಾವು ಬರುತ್ತಿದ್ದರೆ ನನ್ನ ಯೋಜನೆಯನ್ನು ಕೊಡುತ್ತೇನೆ ಹಾಗೂ ಎಲ್ಲವನ್ನೂ ಮಾಡುವೆನು. ಇದು ತಮಗೆ ಇನ್ನೂ ತಿಳಿದಿರದಿದ್ದರೆ ಇಡೀ ದಿನ ತಮ್ಮೊಡನೆ ಕೂಡುವೆನು. ತಿಳಿಯದೆ ತಿಳಿದಿದೆಯೆಂದರೆ ತಾವೂ ವಂಚಿತರಾಗುವಿರಿ, ನನ್ನನ್ನೂ ವಂಚಿಸುವಿರಿ. ನಮ್ಮನ್ನು ಇಲ್ಲಿ ಶಿವನ ಲಗ್ನದ ಮೆರವಣಿಗೆಗಾಗಿ ಯಾರೂ ಸೇರಿಸಿರುವದಿಲ್ಲ. ಹೇಗಾದರೂ ಒಣರೊಟ್ಟಿಯ ತುಣುಕಿಗಾಗಿ ಬಾಯಿ ಬಡುತ್ತಿರುವಷ್ಟು ಪಾಮರರಾಗಿ ಕುಳಿತಿರುವದಿಲ್ಲಾ. ದೇಶದಲ್ಲಿ ಸೇವೆಯ ಕೆಲಸವು ಬೇಕಾದಷ್ಟು ಬಿದ್ದಿದೆ. ಅನೇಕಮಾರ್ಗಗಳು ಸಿದ್ಧವಿರುವವು. ನನ್ನ ಶ್ರದ್ಧೆಯು ನನ್ನನ್ನು ಮೇಲೆತ್ತಬಹುದು. ತಮ್ಮನ್ನಲ್ಲ. ಆದ್ದರಿಂದ ಮೋಸ ಹೋಗಬೇಡಿರಿ. ನನ್ನ ಮಾರ್ಗವನ್ನು ಕಂಡುಕೊಳ್ಳಲು ನನ್ನನ್ನು ಮುಕ್ತಮಾಡಿರಿ. ನಾನೂ ಮೋಸದಲ್ಲಿದ್ದೆನು, ರಾಟೆಯ ವಿಷಯಕ ನನ್ನ ನಂಬಿಕೆಯು ಕೇವಲ ಮೂರ್ತಿಪೂಜೆಯಾಗಿದ್ದಿತೆಂಬ ಮಾತು ನಿರ್ಧರವಾದದ್ದಾದರೆ ಆ ರಾಟೆಯ ಕಟ್ಟಿಗೆಯಿಂದಲೇ ನನ್ನನ್ನು ಸುಟ್ಟು ಬಿಡುವಿರಿ ಅಥವಾ ನಾನೇ ನನ್ನ ಕೈಯಿಂದ ರಾಟೆಯನ್ನು ಸುಟ್ಟು ಬೂದಿ ಮಾಡುವೆನು.

ಇನ್ನು ಚರಕ ಸಂಘವನ್ನು ಬಂದು ಮಾಡುವದೇ ಆದರೆ ತಮ್ಮ ಕೈಯಿಂದಲೇ ಅದನ್ನು ಬಂದು ಮಾಡಿ ಬಿಡಿರಿ. ಇದರಿಂದ ಸೂರ್ಯನೆದುರು ಮಂಜು ಮಾಯವಾಗುವಂತೆ ಎಲ್ಲ ಗೊಂದಲವೂ ತನ್ನಿಂದ ತಾನೇ ಇಲ್ಲದಾಗುವದು. ಆದರೂ ಯಾವ ರಾಟಿಯುಸಲುವಾಗಿ ನಾವು ಸಣ್ಣಾಗುತ್ತಿರುವೆವೋ ಮತ್ತು ಅದರಲ್ಲಿಯೇ ಸಿಕ್ಕುಕೊಂಡಿರುವೆವೋ ಆ ರಾಟಿಯು ಹಲವರ ಕೈಯಲ್ಲಿ ಉಳಿಯ ಬಹುದು. ಆಗ ಒಂದು ವೇಳೆ ಅದು ಅವರ ಕೈಯಲ್ಲಿ ಒಂದು ಬಲವಾದ ಶಸ್ತ್ರವಾಗಿಯೂ ಪರಿಣಮಿಸಬಹುದು. ಅದು ಒಂದುವೇಳೆ ಮೂರ್ಖತೆಯಿಂದ ತುಂಬಿದ ವಸ್ತುವೆಂದು ತಾವು ಬಗೆಯುತ್ತಿದ್ದರೆ ನಾನೊಂದು ಮೂರ್ಖತಾ ಸಂಘವನ್ನು ನಡಿಸಲು ಹಾಗೂ ಹಿಂದುಸ್ಥಾನವನ್ನು ಕೆಳಗೆ ನೂಕಲು ಇಚ್ಛಿಸುವದಿಲ್ಲ. ತಾವು ಈ ರಾಟಿಯಲ್ಲಿ ಅಹಿಂಸೆಯನ್ನು ಕಂಡದ್ದಾದರೆ ತಮ್ಮ ರಾಟಿಯು ಕೇವಲ ನಡೆಯುವದೇಕೆ! ಓಡಹತ್ತುವದು. ಆಮೇಲೆ ಅದನ್ನು ಜೀವದಿಂದುಳಿಸುವ ಯೋಚನೆಯನ್ನೇ ತಾವು ಮಾಡುವ ಕಾರಣವುಳಿಯದು.

ನಾನು ತಮಗೆ ಹೇಳುತ್ತಿರುವದೇನಂದರೆ; ತಾವು ನನ್ನ ಗೊಡವೆ ಬಿಡಿರಿ. ಅಥವಾ ಹೊಸ ಸಿದ್ಧಾಂತವನ್ನೊಪ್ಪಿಕೊಂಡು ನನ್ನೊಡನೆ ನಡೆಯಿರಿ. ಎರಡು ವರ್ಷಗಳ ತಪಶ್ಚರ್ಯದನಂತರ ಈ ಹೊಸ ವಸ್ತುವನ್ನು ನಾನು ತೆಗೆದುಕೊಂಡು ಬಂದಿರುವೆನು. ಅದನ್ನು ತಮಗೆ ಕೊಡುವದು ನನ್ನಿಂದಾಗುವದೋ ಇಲ್ಲವೋ ನಾನರಿಯೆ. ಆದರೆ ಕೊಡುವ ಹವ್ಯಾಸಮಾತ್ರ ಮಾಡಿರುವೆನು. ಇನ್ನು ನನಗೆ ಸಹಾಯ ನೀಡುವದು ಅಂದರೆ ನನ್ನೊಡನೆ ನಡೆಯುವದು ನಿಮಗೆ ಕಠಿಣವಾಗಹತ್ತಿದೆ.

ತಮಗೆ ತಿಳಿಸಲು ನಾನು ಸಮರ್ಥನಾದರೆ ಒಂದು ಮಾತನ್ನು ಮಾಡಿರಿ. ಅದೇನಂದರೆ ಇಂದಿನ ತಾರೀಖಿನಿಂದ ನನ್ನೊಡನೆ

ಉಳಿಯಲಿಚ್ಛಿಸುವವರು ರಾಟೆಯು ಅಹಿಂಸೆಯ ಪ್ರತೀಕವಾಗಿರುವದೆಂಬದನ್ನು ನಂಬುತ್ತಿರುವೆವೆಂದು ನನಗೆ ಬರೆದು ಕೊಡಿರಿ. ಇಂದು ತಾವು ನಿರ್ಧಾರ ಮಾಡತಕ್ಕದ್ದಿದೆ. ಆದರೆ ತಾವು ರಾಟೆಯು ಅಹಿಂಸೆಯ ಪ್ರತೀಕವಾಗಿದೆಯೆಂಬದನ್ನು ನಂಬುತ್ತಿರುವದಿಲ್ಲ. ತಮ್ಮಿಂದ ನಂಬಲೂ ಶಕ್ಯವಿಲ್ಲ. ಹೀಗಿದ್ದರೂ ನನ್ನೊಡನೆ ತಾವು ಸಾಗುತ್ತ ಬಂದರೆ ಖಂಡಿತವಾಗಿ ಗಂಡಾಂತರದಲ್ಲಿ ಬೀಳುವಿರಿ, ಹಾಗೂ ನನ್ನನ್ನೂ ಮುಳುಗಿಸುವಿರಿ.

ಪ್ರಾರಂಭಿಕ ಚರ್ಚೆ

ಎರಡನೆಯ ದಿನ ಸಭೆಯ ಮುಂದೆ ವಿಚಾರಕ್ಕಾಗಿ ಮಂಡಿಸಲ್ಪಟ್ಟ ಗೊತ್ತುವಳಿಯ ಬಗ್ಗೆ ಅದೇ ದಿನ ಅಲ್ಪ ಸ್ವಲ್ಪ ಚರ್ಚೆಯಾಯಿತೆಂಬದು ನಿಜ. ಆದರೆ ವೇಳೆಯ ಅಭಾವದ ಮೂಲಕ ಹಾಗೂ ಅದರ ಬಗ್ಗೆ ಹೆಚ್ಚಿಗೆ ವಿಚಾರಮಾಡುವ ಅವಶ್ಯಕತೆ ಇದ್ದುದರಿಂದ ಸಭೆಯು ಯಾವ ನಿರ್ಣಯವನ್ನೂ ಮಾಡಲಿಲ್ಲ. ಸಭೆಯು ಮುಗಿದ ನಂತರ ಚರಕ ಸಂಘದ ಮಂತ್ರಿಗಳಾದ ಶ್ರೀ. ಜಾಜೂಜಿಯವರು ಪೂಜ್ಯ ಗಾಂಧೀಜಿಯವರೊಡನೆ ತಾ|| ೭-೧೦-೪೪ರಿಂದ ೧೩-೧೦-೪೪ರ ವರೆಗೆ ಏಳು ದಿನ ದಿನಾಲು ಒಂದು ತಾಸಿನಂತೆ ಈ ವಿಷಯಕ ಚರ್ಚೆಮಾಡಿದರು. ಚರ್ಚೆಯ ವಿಷಯವನ್ನು ಸ್ವಾಮಿ ಆನಂದರು ತಪ್ಪದೆ ಬರೆದುಕೊಳ್ಳುತ್ತಿದ್ದರು. ಅವರು ಸಿದ್ಧಗೊಳಿಸಿದ ಪ್ರತಿಯಲ್ಲಿಯ ವಿಷಯಾಂತರ ಹಾಗೂ ಅನಾವಶ್ಯಕವೆಂದೆನಿಸಿದ ಅಂಶವನ್ನು ತೆಗೆದು ಹಾಕಿ ಉಳಿದ ಭಾಗವನ್ನು ಈ ಕೆಳಗೆ ಕೊಡುತ್ತಿರುವೆವು.

ಮೂರನೆಯ ದಿನ: ತಾ॥ ೭-೧೦-೪೪.

ಸಪ್ಟಂಬರ ತಿಂಗಳಲ್ಲಿ ಸೇರಿದ ಕಾರ್ಯಕರ್ತರ ಸಭೆಯಲ್ಲಿ ಬಾಪೂಜಿಯವರು ಮಂಡಿಸಿದ ಹಾಗೂ ಅಲ್ಪ ಸ್ವಲ್ಪ ಚರ್ಚಿತವಾದ ಗೊತ್ತುವಳಿಯನ್ನು ಮೊದಲು ಶ್ರೀ. ಜಾಜೂಜಿಯವರು ಗಾಂಧೀಜಿಯವರಿಗೆ ಓದಿ-ತೋರಿಸಿದರು.

ಸಮಿತಿಯಲ್ಲಿ ಯಾವ ಯಾವ ಸಂಘಗಳು ಸೇರಬಹುದು.

ಸಂಘದ ಭಾವೀ ಕಾರ್ಯದ ರೂಪ ರೇಷೆಯನ್ನು ಗೊತ್ತು ಪಡಿಸುವಾಗ್ಗೆ ಗ್ರಾಮೋದ್ಯೋಗಿ ಸಂಘ, ತಾಲೀಮೀ ಸಂಘ, ಇವುಗಳ ಸಲಹೆ ಸೂಚನೆಗಳನ್ನು ಪಡೆಯತಕ್ಕದ್ದೆಂದು ಸೂಚಿಸಲಾಗಿತ್ತು. ಈ ಪರಿವಿಡಿಯಲ್ಲಿ ಹರಿಜನ ಸೇವಕ ಸಂಘ, ಗೋಸೇವಾ ಸಂಘ ಹಾಗೂ ಕಸ್ತೂರಿಬಾ ಟ್ರಸ್ಟ, ಇವುಗಳ ಸಮಾವೇಶವೂ ಆಗುವದೋ ಎಂದು ಶ್ರೀ. ಜಾಜೂಜಿಯವರು ಕೇಳಿದರು.

ಬಾಪೂಜಿ:—ಅಹುದು. ಗ್ರಾಮೋದ್ಧಾರ ಕಾರ್ಯಕ್ರಮದ ಬಗ್ಗೆ ಈ ಸಂಸ್ಥೆಗಳ ಸಂಬಂಧವಾದರೂ ಚರಕ ಸಂಘದಷ್ಟೇ ನಿಕಟವಾದದ್ದಾಗಿರುವದು. ಈ ಸಂಸ್ಥೆಗಳ ಹಿಂದೆ ಆರ್ಥಿಕ ದೃಷ್ಟಿಯಿದೆ. ರಾಜನೈತಿಕವಿಲ್ಲ. ಸಂಘಗಳ ಏಕೀಕರಣದಲ್ಲಿ ಗ್ರಾಮುಗಳ ಸಮಗ್ರಸೇವೆಯ ದೃಷ್ಟಿಯಿದೆ. ಆದರೆ ಕಸ್ತೂರಬಾಟ್ರಸ್ಟು ಮಾತ್ರ ಬೇರೆಯೇ ಇರಲಿ.

ಸಮ್ಮಿಲಿತ ಸಮಿತಿಯ ರೂಪರೇಷೆ:—

ಜಾಜೂಜಿ:—ಟ್ರಸ್ಟನ್ನು ಬೇರ್ಪಡಿಸುವದರಿಂದ ಸಮ್ಮಿಲಿತ ಸಮಿತಿಯ ಒಂದು ಅಂಗವು ಊನವಾಗುವದು. ಆರೂ ಸಂಘಗಳ ಓರ್ರೋರ್ವ ಅಥವಾ ಹೆಚ್ಚು ಪ್ರತಿನಿಧಿಗಳನ್ನೊಳಗೊಂಡ ಒಂದು ಸಮ್ಮಿಲಿತ ಸಮಿತಿಯನ್ನು ನಿರ್ಮಿಸಬಹುದು.

ಬಾಪೂಜಿ:—ಟ್ರಸ್ಟಿನ ಸಂಸ್ಥೆಗಳಿಂದ ನಮ್ಮ ಕಾರ್ಯವನ್ನು ನಾವು ಮಾಡಿಸಬಹುದು. ಆ ಕಾರ್ಯವಾದರೂ ಗ್ರಾಮಸೇವೆಯಿಂದ ತೀರ ಭಿನ್ನವಾಗಿರಬಾರದು. ಆದರೆ ಕಸ್ತೂರಬಾ ಟ್ರಸ್ಟು ಇದರಲ್ಲಿ ಸೇರ್ಪಡೆಯಾಗಿರುವದೆಂದು ತಿಳಿಯಕೂಡದು. ಚರಕ ಸಂಘದೆದುರು ಈ ಗೊತ್ತುವಳಿಯನ್ನು ನಾನು ಮಂಡಿಸಿದಾಗ್ಗೆ ಕಸ್ತೂರಬಾ ಟ್ರುಸ್ಟು ನನ್ನ ಕಣ್ಣಮುಂದೆ ಇದ್ದಿರಲಿಲ್ಲ. ಗ್ರಾಮೋದ್ಯೋಗ ಹಾಗೂ ತಾಲೀಮೀ ಸಂಘಗಳೇ ಇದ್ದವು. ಈ ಎಲ್ಲ ಸಂಘಗಳ ಪ್ರಮುಖರು ಸಮ್ಮಿಲಿತರಾಗಿ ಸಮಗ್ರ ಗ್ರಾಮಕಾರ್ಯದ ಆಧಾರಭೂತವಾಗಿರುವ ನೀತಿ ರೀತಿಗಳ ರಕ್ಷಕರಾಗಿ ಒಬ್ಬರು ಇನ್ನೊಬ್ಬರ ಕೆಲಸದಲ್ಲಿ ಕೈ ಹಾಕದೆ ತಮ್ಮ ತಮ್ಮ ನೈತಿಕ ಪ್ರಭಾವವನ್ನು ಪರಸ್ಪರರಲ್ಲಿ ಬೀರುತ್ತಿರಬೇಕೆಂಬುದೇ ನನ್ನ ಉದ್ದೇಶವಾಗಿದ್ದಿತು. ಸಂಘದ ವಿಕಾಸವು ಯಾವ ಮಟ್ಟಕ್ಕೆ ಬರಬಹುದೆಂಬದನ್ನು ನೈತಿಕ ದೃಷ್ಟಿಯಿಂದ ನಿರೀಕ್ಷಿಸುತ್ತಿರುವದೇ ಚರಕ ಸಂಘದ ಕೇಂದ್ರ ಕಚೇರಿಯ ಕೆಲಸವಾಗುವದು. ಯುಕ್ಲಿಡನ ಬಿಂದುವ್ಯೋಪಾದಿಯಲ್ಲಿ ತನ್ನ ಆದರ್ಶ ಬಿಂದುವನ್ನು ಮುಟ್ಟುವದು ಸಂಘಕ್ಕೆ ಅಶಕ್ಯವಾಗಬಹುದು. ವ್ಯವಹಾರಿಕ ವಿಷಯಗಳನ್ನುಳಿದು ಮಿಕ್ಕ ಸಂಗತಿಗಳ ನೈತಿಕ ನಿಯಮನ ಮಾಡುವದೆಂದರೆ ವಿಕೇಂಧ್ರೀಕರಣವು. ಗೋಸೇವಾ ಸಂಘ, ಹರಿಜನ ಸೇವಕ ಸಂಘ ಮೊದಲಾದ ಸಂಸ್ಥೆಗಳನ್ನೆಲ್ಲ ಈ ವಿಕೇಂದ್ರೀ ಕರಣದ ಮಟ್ಟಕ್ಕೆ ಮುಟ್ಟಿಸುವದು ನನ್ನಿಂದ ಶಕ್ಯವಾಗದೆಂಬದನ್ನು ನಾನು ಬಲ್ಲೆನು. ಎಲ್ಲವುಗಳ ಹುಟ್ಟು ಗ್ರಾಮಸೇವೆ, ಗ್ರಾಮೋದ್ಯೋಗ ಇವುಗಳಲ್ಲಿಯೇ ಆಗಿರುವದು. ಕಾರಣ ಸಂಚಾಲಕರಾಗಲೀ ಕಾರ್ಯಕರ್ತರಾಗಲೀ ಬೇರೆ ಬೇರೆ ಸಂಸ್ಥೆಗಳಲ್ಲಿ ಶುದ್ಧಮನಸ್ಸಿನಿಂದ ಕೆಲಸ ಮಾಡುತ್ತ ಹೋಗುತ್ತಿದ್ದರೆ ಅವರೆಲ್ಲರು ಸ್ವೇಚ್ಛೆಯಿಂದಲೇ ಒಂದೆಡೆ ಸೇರಿ ಆಲೋಚಿಸ

ತೊಡಗುವರು. ಚರಕ ಸಂಘದ ಕಾರ್ಯವು ಏಕೆ ಸ್ಥಗಿತವಾಗಿದೆ ಎಂದೂ ಅವರು ವಿಚಾರಿಸುವರು. ಕಾರ್ಯವೇನೂ ತಡೆದು ನಿಂತಿಲ್ಲ. ೧೫ ಸಾವಿರ ಹಳ್ಳಿಗಳಲ್ಲಿ ಅದು ಪಸರಿಸಿದೆ ಬಡಜನರಲ್ಲಿ ನಾಲ್ಕುವರೆ ಕೋಟಿ ರೂಪಾಯಿ ಹಂಚಿಹೋಗಿವೆ. ಎಂಬೀ ಉತ್ತರವನ್ನು ಯಾರೊಬ್ಬರು ಕೊಡಬಹುದು. ಇದೆಲ್ಲ ಒಳಿತೇ. ಆದರೆ ಇಷ್ಟರಿಂದ ನಾವು ಸಂತುಷ್ಟರಾಗತಕ್ಕದ್ದಲ್ಲ. ಇದುವರೆಗಾದರೂ ನಾವು ಮಾಡತಕ್ಕ ಕಾರ್ಯದಲ್ಲಿ ನೂರರಲ್ಲೊಂದು ಪಾಲು ಮಾತ್ರ ಮಾಡಿರುವೆವೆಂಬದು ನಮ್ಮನ್ನು ಯಾವಾಗಲು ಚುಚ್ಚುತ್ತಿರಬೇಕು.

*

ಅಲ್ಲಿ ಒಂದುವೇಳೆ ಚರಕ ಸಂಘದ ಕೆಲಸ ಮಾಡುವ ಕಾರ್ಯಕರ್ತನಿದ್ದರೆ ಅವನು ಕೇವಲ ಖಾದೀ ಕಾರ್ಯವನ್ನೇ ಚಿಂತಿಸದೆ ವ್ಯಾಪಕ ಅರ್ಥದಲ್ಲಿ ಗ್ರಾಮೋದ್ಯೋಗ ಗೋಸೇವೆ ಮುಂತಾದ ಕಾರ್ಯಗಳ ಪ್ರತಿನಿಧಿಯೂ ಆಗುವನು. ಹೀಗಾಗದಿದ್ದರೆ ಕಾರ್ಯಕರ್ತನು ಈ ಕಾರ್ಯಗಳೆಲ್ಲ ತನ್ನ ಕಾರ್ಯಕ್ಷೇತ್ರಕ್ಕೆ ಹೊರಪಟ್ಟಂಥವೆಂದೂ ಅದೊಂದು ಹೊಸ ಒಜ್ಜೆಯು ತನ್ನಮೇಲೆ ಬಿದ್ದಿದೆಯೆಂದೂ ಬಗೆಯುವನು. ಹೀಗಾದರೆ ಮಾತ್ರ ನಮ್ಮ ನೀತಿ ರೀತಿಗಳು ಅಹಿಂಸಕವಾಗಿ ಉಳಿಯಲಾರವು. ಕಾರ್ಯಕರ್ತನು ಹೇಗಿರಬೇಕೆಂದರೆ ಹಳ್ಳಿಯಲ್ಲಿ ನೆಲಿಸಿ ಈ ಎಲ್ಲ ಕಾರ್ಯಗಳಲ್ಲಿ ಇಷ್ಟೇ ಏಕೆ? ಸಮಗ್ರ ಗ್ರಾಮ ಜೀವನದಲ್ಲಿ ಬೆರೆತು ಹೋಗಬೇಕು. ಅಂದರೆ ಆತನಿಗೆ ಈ ಕೆಲಸಗಳು ಎಂದೂ ಭಾರವೆಂದೆನಿಸಲಾರವು.

ಜಾಜೂಜಿ:—ಈ ಕಾರ್ಯಕರ್ತರಲ್ಲಿ ಹಲವರನ್ನು ಗೋಸೇವಾ ಸಂಘದಿಂದ, ಕೆಲವರನ್ನು ಗ್ರಾಮೋದ್ಯೋಗ ಸಂಘದಿಂದ

ಹೆಲವರನ್ನು ತಾಲೀಮೂ ಸಂಘದಿಂದ ಕೆಲವರನ್ನು ಚರಕ ಸಂಘ ದಿಂದ ಆರಿಸಬಹುದಷ್ಟೇ?

ಬಾಪೂಜೀ—ಎಲ್ಲ ಸಂಘಗಳ ಏಕೀಕರಣ ಹಾಗೂ ಸಮ್ಮಿಲಿತ ನೀತಿಯೆಂದರೆ ಇದೇ. ಕಾರ್ಯ ನಿಯಂತ್ರಣದ ವಿಷಯವು ಇದರಲ್ಲಿಲ್ಲ. ಎಲ್ಲರ ಸಮ್ಮಿಲಿತ ನೈತಿಕ ಪ್ರಭಾವ ಹಾಗೂ ಒಂದೇ ಸಮಗ್ರ ದೃಷ್ಟಿ ಇವುಗಳಿಂದ ಕಾರ್ಯ ಮಾಡುವ ರೀತಿಯು ಮಾತ್ರ ಇದರಲ್ಲಿದೆ.

ಜಾಜೂಜೀ— ಚರಕ ಸಂಘದ ಕಾರ್ಯವನ್ನು ವ್ಯಾಪಾರ ವಿಭಾಗ, ಜನಸೇವೆಯ ವಿಭಾಗ, ಎಂಬೀ ಎರಡುಬಗೆಯಲ್ಲಿ ವಿಂಗಡಿಸಿ ಬೇರೆ ಬೇರೆ ಸಾಗಿಸಬೇಕೋ? ಹಳ್ಳಿಯ ಯಾವತ್ತು ಕಾರ್ಯಕಲಾಪವನ್ನು ಸಮಗ್ರ ದೃಷ್ಟಿಯಿಂದ ಸಾಗಿಸಲಿಕ್ಕೂ, ಹಾಗೂ ಅವರಿಗೆ ದಾರಿ ತೋರಿಸಲಿಕ್ಕೂ ಈ ಕಾರ್ಯಕರ್ತರ ನಿಯಂತ್ರಣವನ್ನು ಈ ಸಮ್ಮಿಲಿತ ಸಮಿತಿಯು ಮುಖಾಂತರ ಮಾಡತಕ್ಕದ್ದೆಂದು ನನ್ನ ಅಭಿಪ್ರಾಯವಿದೆ.

ಬಾಪೂಜೀ— ನನ್ನ ಅಭಿಪ್ರಾಯವು ಹಾಗೇನೂ ಇಲ್ಲ. ಯಾವ ತರದ ವ್ಯವಸ್ಥೆ ಮಾಡುವದು ಒಳಿತು ಎಂಬವನ್ನು ಎಲ್ಲ ಸಂಸ್ಥೆಗಳ ಸಂಯುಕ್ತ ಸಮಿತಿಯು ಒಂದೆಡೆ ಸೇರಿ ನಿರ್ಣಯಿಸಬಹುದು. ಈ ವ್ಯವಸ್ಥೆಯಂತೆ ಎಲ್ಲ ಸಂಸ್ಥೆಯವರು ಏಕತ್ರಿತರಾಗಿ ಸಂಘಟಿತ ರೀತಿಯಿಂದ ಕಾರ್ಯಕೈಕೊಂಡರೆ ತಂತ್ರ-ಸಂಚಾಲನ ಕಾರ್ಯವು ಸುಗಮವಾಗುವದು. ಹಾಗೂ ಕೃಷ್ಣಾನದಿಯು ೧೦-೨೦ ಜಲಬಿಂದುಗಳ ಅಲ್ಪ ಧಾರೆಯಲ್ಲಿ ಉಗಮ ಹೊಂದಿ ಬರಬರುತ್ತ ಕೃಷ್ಣಸಾಗರದ ವಿಶಾಲ ಸ್ವರೂಪವನ್ನು ಹೊಂದಿದಂತೆ ನಮ್ಮ

ಕಾರ್ಯದ ಪ್ರವಾಹವು ಅಖಂಡವಾಗಿ ವಿಶಾಲವಾಗುತ್ತ ಸಾಗುವದು. ಸಮ್ಮಿಲಿತ ಸಮಿತಿಯ ನನ್ನ ಕಲ್ಪನೆಯು ಈ ತರಹದ್ದಿದೆ.

ಕಾರ್ಯವನ್ನು ಹೇಗೆ ಪ್ರಾರಂಭಿಸುವದು?

ಜಾಜೂಜಿಃ— ಎಲ್ಲ ತೊಂದರೆಯೆಂದರೆ ಕಾರ್ಯಕರ್ತರದು. ತಾವು ಹೊಸ ಹೊಸ ಕಾರ್ಯಗಳನ್ನು ಹೊರಡಿಸುತ್ತಲೇ ಇರುವಿರಿ. ಆದರೆ ಕಾರ್ಯಕರ್ತರ ಅಭಾವದ ಮೂಲಕ ನಮ್ಮಿಂದ ಎಲ್ಲವನ್ನೂ ನಿರ್ವಹಿಸಲಾಗುವದಿಲ್ಲ. ಅಂದರೂ ಏಳು ಲಕ್ಷ ಹಳ್ಳಿಗಳನ್ನು ನಾವು ಮುಟ್ಟತಕ್ಕದ್ದಿರುವದೆಂದು ತಾವು ಮತ್ತೆ ಹೇಳುವಿರಿ.

ಬಾಪೂಜಿಃ—ನಿಃಸಂಶಯವಾಗಿಯೂ ಹೇಳುವೆನು. ಒಂದು ವೇಳೆ ನೀವು ಸೋತದ್ದಾದರೆ ನಾನೂ ತಮ್ಮೊಡನೆಯೆ ಇರುವೆನಲ್ಲವೇ?

ಜಾಜೂಜಿ:—ಹಾಗಾದರೆ ಕಾರ್ಯಕರ್ತರನ್ನು ತಯಾರಿಸತಕ್ಕದ್ದೆಂಬುದು ನಿಶ್ಚಿತವಾದಂತಾಯಿತೆಂದು ಬಗೆಯುತ್ತೇನೆ. ಸದ್ಯಕ್ಕೆ ಅಷ್ಟೊಂದು ಯೋಗ್ಯ ಕಾರ್ಯಕರ್ತರು ದೊರೆಯುವರೆಂಬ ಆಸೆಯನ್ನು ನಾವು ತಳೆಯಕೂಡದು. ಇಂದು ಎರಡನೆಯ ತರಗತಿಯ ಕಾರ್ಯಕರ್ತನಿಂದಲೇ ನಮ್ಮ ಕೆಲಸ ಸಾಗಿಸಬೇಕಾಗುವದು. ಮುಂದೆ ಅವರಲ್ಲಿಯೇ ಮೊದಲನೆಯ ತರಗತಿಯ ಕಾರ್ಯಕರ್ತರು ಹೊರಡಬಹುದು.

ಬಾಪೂಜಿ:—ಚರಕ ಸಂಘದ ಕಾರ್ಯಕರ್ತರ ಸಂಖ್ಯೆಯು ಎರಡು ಸಾವಿರ ಆಗಬಹುದೇ?

ಜಾಜೂಜಿಃ—ಸುಮಾರು ಮೂರು ಸಾವಿರ ಆಗಬಹುದು.

ಬಾಪೂಜಿ:—ಹಾಗಾದರೆ ಇವರಿಂದಲೇ ಕೆಲಸ ತೆಗೆದು ಕೊಳ್ಳಿರಿ. ಅವರ ಮೇಲೆಯೇ ಈ ಕಾರ್ಯದ ಹೊಣೆ ಹಾಕಿರಿ. ಕೆಲಸ ಮಾಡಲು ಅವರಿಗೆ ಹೆಚ್ಚಿನ ಸ್ವಾತಂತ್ರ್ಯವನ್ನೂ ಕೊಡಿರಿ. ಸ್ವಲ್ಪ ಗಂಡಾಂತರವನ್ನೆದುರಿಸಿಯಾದರೂ ಈ ವಿಕೇಂದ್ರಿಕರಣವನ್ನು ಸಾಧಿಸಬೇಕಾಗುವದು.

ಜಾಜೂಜಿ:—ತಮ್ಮ ಈ ವಿಕೇಂದ್ರೀಕರಣದ ಸಂಪೂರ್ಣ ಅರ್ಥವು ನನಗೆ ಹೊಳೆಯದಾಗಿದೆ.

ಬಾಪೂಜಿ:—ಹಳ್ಳಿ ಹಳ್ಳಿಯಲ್ಲಿ ಕಾರ್ಯವನ್ನು ಪಸರಿಸ ತಕ್ಕದ್ದದೆ. ಕಾರ್ಯವು ಇಷ್ಟು ದೊಡ್ಡದು. ಒತ್ತಾಯದಿಂದ ಇದು ಕೊನೆಗಾಣದು. ಮಧ್ಯವರ್ತಿ ನಿಯಂತ್ರಣದಿಂದ ಕಾರ್ಯಕರ್ತರನ್ನು ಸಾಕಷ್ಟು ಮುಕ್ತಮಾಡಬೇಕಾಗುವದು. ಹಾಗೂ ಅವರಿಂದ ಈ ಕೆಲಸ ಮಾಡಿಸಬೇಕಾಗಿದೆ. ಅವರು ಇಷ್ಟೊಂದು ಹೊಣೆಯನ್ನು ಹೊರಲೊಪ್ಪದೆ ಹೊರಟು ಹೋದರೆ ಅವರಿಗೆ ಅಪ್ಪಣೆ ಕೊಡ ಬೇಕಾಗುವದು. ನಾವು ಯಾರನ್ನೂ ತೆಗೆಯಲಿಚ್ಛಿಸುವದಿಲ್ಲ. ನೂಲಿನ ಲಡಿಗಳನ್ನು ಪಡೆದು ಅವುಗಳ ಬೆಲೆಯಲ್ಲಿ ನಿಮ್ಮಲ್ಲಿದ್ದ ಖಾದಿಯನ್ನು ಕೊಡುವ ಏರ್ಪಾಟನ್ನು ಮಹಾರಾಷ್ಟ್ರದಲ್ಲಿ ನೀವು ಮಾಡ್ನಿದ್ದಿರಿ. ಅದು ನನಗೆ ಒಳ್ಳೇ ರುಚಿಸಿತ್ತು. ಇನ್ನೂ ಅದು ವ್ಯಾಪಕವಾಗಲಿಲ್ಲ. ಆದರೆ ಇದನ್ನು ನಾವು ಸದ್ಯದ ಕಾರ್ಯ ಕರ್ತರಿಂದ ಮಾಡಿಸುತ್ತಿರುವೆವಲ್ಲವೇ? ಕೆಲಸವು ಹಿಗೆಯೇ ಬೆಳೆ ಯತಕ್ಕುದಾಗಿರುವದು. ತೊಂದರೆಗಳನ್ನೊಡ್ಡುವ ಕಾರ್ಯಕರ್ತರು ಹೊರಟು ಹೋಗುವರು. ಅಂಥವರನ್ನು ತೆಗೆಯುವದರಿಂದ ನನ ಗೇನೂ ಕ್ಷೋಭೆಯಾಗದು. ಸಂಘವು ನಿಶ್ಚಿತಗೊಳಿಸಿದ ನೀತಿಗೆ ಭಂಗತರುವಂಥವರು ಹೊರಟು ಹೋಗುವದೇ ತನ್ನ ನೀತಿಯಲ್ಲಿ

ಕಾಲಕಾಲಕ್ಕೆ ತಕ್ಕ ಮಾರ್ಪಾಟು ಮಾಡುವ ಹಕ್ಕು ಸಂಘಕ್ಕಿದೆ. ಈ ತರದ ಬದಲಾವಣೆಗಳಾಗುವವೆಂದು ನಾವು ಮೊದಲೇ ಅರಿತಿರಲಿಲ್ಲವೆಂದು ಕಾರ್ಯಕರ್ತರು ಅನ್ನಲಾರರು. ಖಾದಿಯ ಉಡಪನ್ನೇ ಧರಿಸಬೇಕು. ಪ್ರಾವ್ಹಿಡೆಂಟ ಫಂಡಿನ ಯೋಜನೆಯಲ್ಲಿ ಸೇರಬೇಕು. ಇತ್ಯಾದಿ ನಿಯಮಗಳು ಹಿಂದಿನಿಂದ ಮಾಡಲ್ಪಟ್ಟವು. ಇವು ಎಲ್ಲರಿಗೂ ಅನ್ವಯಿಸುವಂತೆ ನಾವು ಮಾಡಲಿಲ್ಲವೇ ? ಇದನ್ನು ಸಮ್ಮತಿಸದಿದ್ದವರು ಹೊರಹೋಗಲೇಬೇಕಾಯಿತು. ಈ ರೀತಿಯಲ್ಲಿ ಜನರು ಹೋಗುತ್ತಿದ್ದರೆ ಅದು ಕ್ರಮಪ್ರಾಪ್ತವಾಗುವದೇ ಸರಿ. ಎರಡನೆಯ ಕಾರಣದಿಂದ ನಾವು ಜನರನ್ನು ತೆಗೆಯುವದಿಲ್ಲ. ತಿರುಗಿ ಈ ಹೊಸವ್ಯಾಪಕವಾದ ಕಾರ್ಯದಲ್ಲಿ ಅವರಿಂದ ಪೂರ್ಣ ಕೆಲಸ ತೆಗೆದುಕೊಳ್ಳುವೆನು. ನಮ್ಮ ಯೋಜನೆಯಲ್ಲಿ ಉಳಿಯಲಿಚ್ಛಿಸುವವರು ಉಳಿಯುವರು. ಅದನ್ನು ಬಿಟ್ಟು ಹೋಗಲಿಚ್ಛಿಸುವವರು ತಾನೇ ಹೊರಟು ಹೋಗುವರು. ಈಗಿನ ಕಾರ್ಯಕರ್ತರನ್ನು ಚದರಿಸಿ ಹೊಸದೃಷ್ಟಿಯಿಂದ ಕಾರ್ಯವನ್ನು ಕೈಕೊಳ್ಳಬೇಕೆಂದು ನಾನು ಎಂದೂ ಬಯಸಿಲ್ಲ, ಒಂದೇ ಸ್ಥಳದಲ್ಲಿ ನಮಗೆ ಐದು ಜನ ದೊರೆತರೆ ಹಾಗೂ ಒಂದುವೇಳೆ ಅಲ್ಲಿ ಹೆಚ್ಚು ಕಾರ್ಯವಾಗುವಂತಿದೆ ಎಂದು ನಮಗೆ ತೋರಿದರೆ ಕೈಕಾಗದದ ಕಾರ್ಯವನ್ನು ಅಲ್ಲಿ ಪ್ರಾರಂಭಿಸಲು ನಾನು ಹೇಳುವೆನು. ಹೀಗೆಯೇ ಅನ್ಯ ಉದ್ಯೋಗಗಳನ್ನು ಕಲ್ಪಿಸಬಹುದು. ಅನುಕೂಲತೆ ಇದ್ದರೆ ಹೆಚ್ಚು ಖಾದಿಯನ್ನು ಉತ್ಪನ್ನಮಾಡಿ ಅದನ್ನು ಸುತ್ತಮುತ್ತಲು ಮಾರಿಬಿಡಿರಿ. ಇದೇ ವಿಕೇಂದ್ರೀಕರಣವು.

ಎರಡನೆಯ ದಿನ, ರವಿವಾರ ತಾ|| ೮ ಅಕ್ಟೋಬರ ೧೯೪೪

ಭಾಷೆ ಮುಂತಾದ್ದರ ಜ್ಞಾನಃ—

ಜಾಜೂಜಿಃ— ಇನ್ನು ಕಾರ್ಯಕರ್ತರು ಹೇಗಿರಬೇಕು? ಅವರ ಯೋಗ್ಯತೆ ಎಂಥದಿರಬೇಕು? ಎಂಬವನ್ನು ತಿಳಿಯ ಪಡಿಸಬೇಕು.

ಬಾಪೂಜಿ:— ನಾನು ಸದ್ಯಕ್ಕೆ ಅನ್ಯ ಸಂಸ್ಥೆಗಳನ್ನು ಬದಿಗಿರಿಸುವೆನು. ಚರಕಸಂಘದ ಕಾರ್ಯಕರ್ತರನ್ನೇ ಅನುಲಕ್ಷಿಸಿ ಮಾತಾಡುವೆನು. ಅವರಿಗೆ ಮೊದಲು ತಮ್ಮ ಮಾತೃಭಾಷೆಯಲ್ಲದೆ ಪ್ರಾಂತದ ಭಾಷೆ ಹಾಗೂ ರಾಷ್ಟ್ರಭಾಷೆಯ ಜ್ಞಾನವಿರಬೇಕು. ಇಂಗ್ಲಿಷ ಭಾಷೆಯ ಜ್ಞಾನದ ಅವಶ್ಯಕತೆಯು ನನಗೇನೂ ಅನಿಸುವದಿಲ್ಲ. ತಮ್ಮ ದೇಶದ ಆರ್ಥಿಕ, ಸಾಮಾಜಿಕ ಹಾಗೂ ರಾಜನೈತಿಕ ಪರಿಸ್ಥಿತಿಯ ಅರಿವು ಅವರಿಗೆ ಇರಬೇಕಾಗುವದಲ್ಲದೆ ಜಗತ್ತಿನ ಸಾಮಾನ್ಯ ಪರಿಸ್ಥಿತಿಯ ಪರಿಚಯವೂ ಇರಬೇಕು. ಇದೆಲ್ಲ ಕಠಿಣವಾದುದೇನೋ ನಿಜ. ಆದರೆ ಅವರಿಗೆ ಪೃಥ್ವಿಯ ಭೂಗೋಲ ಹಾಗೂ ಜಗತ್ತಿನ ಸ್ಥಿತಿಗತಿಯ ಬಗ್ಗೆ ತಿಳುವಳಿಕೆ ಇರಬೇಕಲ್ಲವೆ? ಪರದೇಶಗಳಲ್ಲಿ ಏನು ನಡೆಯುತ್ತಲಿದೆ? ಅವುಗಳಲ್ಲಿಯ ರಾಜ್ಯದ ಆಡಳತೆ ಹೇಗದೆ? ಈ ಎಲ್ಲ ಸಂಗತಿಗಳನ್ನು ಅವರು ಅರಿತಾಗಲೆ ಭಾರತವರ್ಷವು ಎಲ್ಲಿದೆ ನಾವು ಎಲ್ಲಿ ಹೋಗತಕ್ಕದ್ದಿದೆ ಎಂಬುದು ತಿಳಿಯುವದಲ್ಲವೆ? ಈ ಪರಿಸ್ಥಿತಿಯಲ್ಲಿ ನಮ್ಮ ಕಾರ್ಯಕರ್ತರಿಗೆ ಅವರು ನೆಲಿಸಿದ ಕಾರ್ಯಕ್ಷೇತ್ರದ ನಿಜ ಪರಿಸ್ಥಿತಿಯ ವಿವರವಾದ ಜ್ಞಾನವಿರುವದು ಅಗತ್ಯವಾಗಿದೆ.

ಖಾದೀ.

ಇದು ಸರ್ವಸಾಮಾನ್ಯ ಸಿದ್ಧತೆಯಾದಂತಾಯಿತು. ಕೇವಲ ರಾಟೆಯ ಪೂರ್ಣ ಜ್ಞಾನವಷ್ಟೇ ಸಾಲದು. ರಾಟಿ ಹಾಗೂ

ತಕಲಿ ಇವೆರಡು ಸಾಧನಗಳ ಜ್ಞಾನವೂ ಅವಶ್ಯವಾದುದು. ಆದ ರಂತೆ ಕೇವಲ ನೂಲು ತೆಗೆಯುವದು ಮಾತ್ರವಲ್ಲ; ಆದರೆ ಆ ಶಾಸ್ತ್ರದ ಪರಿಪೂರ್ಣ ಜ್ಞಾನವೂ ಅವರಲ್ಲಿರಬೇಕು. ಅಂದರೆ ನಂಬರು ತೆಗೆಯುವದು, ಹಿಂಜುವದು, ಹತ್ತಿಯ ಜಾತಿಯನ್ನು ಗುರುತಿಸುವದು, ಯಾವತರದ ಹಿಂಜುವ ಕ್ರಿಯೆಗೆ ಯಾವತರದ ಹತ್ತಿಯು ಅನುರೂಪವಾಗುವದು ಇತ್ಯಾದಿ ಮೊದಲ್ಗೊಂಡು ನೂಲುತೆಗೆಯುವ ವರೆಗಿನ ಯಾವತ್ತೂ ಕ್ರಿಯೆಗಳ ಪರಿಚಯ, ಹಿಂಜುವ ಪದ್ಧತಿಯಲ್ಲಿ ಸುಧಾರಣೆಯಾಗುತ್ತಾಗುತ್ತಾ ಸದ್ಯದ ಪರಿಸ್ಥಿತಿಗೆ ಅದು ಹೇಗೆ ಬಂದು ನಿಲುಕಿದೆ ಎಂಬುದರ ಪೂರ್ಣ ಇತಿಹಾಸ; ರಾಟೆಯಲ್ಲಿ ಇದುವರೆಗೆ ಆದ ಸುಧಾರಣೆ ಹಾಗೂ ವಿಕಾಸ ಇವೆಲ್ಲವುಗಳ ಜ್ಞಾನ; ಈಗಿನ ರಾಟೆಗಳನ್ನು ಸರಿಯಾಗಿ ಜೋಡಿಸುವದು ಹಾಗೂ ದುರಸ್ತ ಮಾಡುವದು ಇತ್ಯಾದಿ ಎಲ್ಲವೂ ಅವರಿಗೆ ಗೊತ್ತಿರತಕ್ಕದ್ದು. ನಡುವೆ ಹರಿಯದಂತೆ ನೂಲು ತೆಗೆಯುವದು, ರಾಟೆಯನ್ನು ಜೋಡಿಸುವದು, ದುರಸ್ತ ಮಾಡುವದು ಮುಂತಾದುದನ್ನು ನಾನು ಯರವಡೆಯಲ್ಲಿ ಕಲಿತೆನು. ಅಲ್ಲಿ ನನಗೆ ಸಹಾಯವಾಗಲಾರೂ ಇರಲಿಲ್ಲ. ಇದರಿಂದ ನಾನು ಹೇಳುವದೆಂದರೆ ಕಾರ್ಯಕರ್ತರಿಗೆ ಬಡಿಗತನದ ಸಾಮಾನ್ಯ ಜ್ಞಾನವೂ ಇರಬೇಕು. ಹಳ್ಳಿಯ ಜನರು ಮುರಿಗೇಡಾದ ರಾಟೆಗಳನ್ನು ತರುವದುಂಟು. ಆದರೆ ಕಾರ್ಯಕರ್ತರು ಅವುಗಳನ್ನು ಸರಿಪಡಿಸಿ ಕೊಡದಿದ್ದರೆ ಅವರು ಹಾಗೇ ಕುಳಿತುಕೊಳ್ಳಬೇಕಾಗುವದು.

ಅನ್ಯ ಗ್ರಾಮೋದ್ಯೋಗಃ—

ರಾಟೆಯೆಂದರೆ ಗ್ರಾಮೋತ್ಥಾನದ ಮಧ್ಯಬಿಂದು ಅಥವಾ ಸೂರ್ಯಗ್ರಹವೆಂದು ನಾನು ಭಾವಿಸಿರುವೆನು. ಅದು ಕಾರಣ ಆ ಬಗ್ಗೆ ನಾನು ಇಷ್ಟೊಂದು ಹೇಳಿದೆನು. ತಮ್ಮ ಹಳ್ಳಿಯಲ್ಲಿ

ಇದನ್ನುಳಿದು ಹಳ್ಳಿಯ ಯಾವ ಉದ್ಯೋಗವು ನಡೆಯಬಹುದೆಂಬುದನ್ನು ನೋಡಬೇಕಾಗುವದು. ಇದರಲ್ಲಿ ಎಣ್ಣೆಯ ಗಾಣವು ಮೊದಲು ಬರುವದು. ಮಗನವಾಡಿಯ ಝುನೇರಭಾಯಿ ಪಟೇಲರು ಇದರದೊಂದು ಶಾಸ್ತ್ರವನ್ನೇ ರಚಿಸಿರುವರು. ಅದನ್ನೂ ತಿಳಿಯಬೇಕಾಗುವದು. ಮೂರನೆಯ ಉದ್ಯೋಗವೆಂದರೆ ಕೈಕಾಗದ ತಯಾರಿಸುವದು. ಇಡೀ ಹಿಂದುಸ್ಥಾನಕ್ಕೆ ಕಾಗದ ಪೂರೈಸುವ ದೃಷ್ಟಿಯು ಇದರಲ್ಲಿರದೆ ಕೇವಲ ತಮ್ಮ ಹಳ್ಳಿಯನ್ನು ಸ್ವಾವಲಂಬಿಯಾಗುವಂತೆ ಮಾಡುವ ಕುರಿತು ಹಾಗೂ ಸ್ವಲ್ಪ ಪ್ರಾಪ್ತಿಯನ್ನು ಹೆಚ್ಚಿಸಲಿಕ್ಕೆ ಇದನ್ನು ಕಲಿಯತಕ್ಕದ್ದಿದೆ.

ಜಾಜೂಜಿ:— ಕಾಗದದ ಕೆಲಸವು ಬೆಳೆಯಿತೆಂದರೆ ಸಣ್ಣದೊಂದು ಕಾರಖಾನೆಯನ್ನು ನಡಿಸಿದಂತೆಯೇ ಅದರ ಸ್ವರೂಪವಾಗುವದು.

ಬಾಪೂಜಿ:—ನಾನು ರೂಪರೇಷೆಯನ್ನು ಮಾತ್ರ ಕೋರುತ್ತಿರುವೆನು. ಎಣ್ಣೆ, ಕೈಕಾಗದ ಇವುಗಳಾದಮೇಲೆ ಬೀಸುವ ಕಲ್ಲಿನಿಂದ ಹಿಟ್ಟು ಬೀಸುವ ಕೆಲಸವೊಂದನ್ನು ಪ್ರತಿಯೊಂದು ಹಳ್ಳಿಯಲ್ಲಿ ಜೀವಿತ ಗೊಳಿಸತಕ್ಕದ್ದಿದೆ. ಇದಾಗದಿದ್ದರೆ ಬೀಸುವ ಗಿರಣಿಗಳು ನಮ್ಮ ಹಣೆಬರಹದಲ್ಲಿ ಬರೆದಿದ್ದಂತೆಯೇ ಸರಿ. ಈ ವಿಷಯಕ ಅಂಜಿಕೆಯು ನನ್ನ ಮನಸ್ಸಿನಲ್ಲಿ ಅನೇಕ ವರ್ಷಗಳಿಂದಿದೆ. ಹಿಟ್ಟಿನಂತೆಯೇ ಅಕ್ಕಿಯದು ಅಘರ್ಷಿತವಾದ ಅಕ್ಕಿ (whole rice) ಯನ್ನು ತಿನ್ನುವ ಪರಿಪಾಠವನ್ನು ನಾವು ಪುನಃ ಹಳ್ಳಿಗಳಲ್ಲಿ ಕೆಡವದಿದ್ದರೆ ಆಹಾರ ಸಮಸ್ಯೆಯನ್ನು ಬಿಡಿಸುವದು ನಮ್ಮಿಂದಾಗದು. ಥಳಿಸಿದ ಅಕ್ಕಿ ಬಿಳೀ ಸಕ್ಕರೆ ಮುಂತಾದವುಗಳೆಲ್ಲ ಮನುಷ್ಯನ ಆರೋಗ್ಯಕ್ಕೆ ಹಾನಿಕಾರಕವಾದವುಗಳೆಂದು

ಈಗ ಎಲ್ಲರಿಗೂ ಮನವರಿಕೆಯಾಗಿದೆ. ಹೆಸರುವಾಸಿಯಾದ ತಜ್ಞರೆಲ್ಲರು ಈ ಮಾತನ್ನು ಅಂಗೀಕರಿಸಿರುವರು. ಈ ವಿಷಯಕ ಸಾಹಿತ್ಯವು ಅಮೇರಿಕೆಯಿಂದ ಬಹಳ ಬರುತ್ತಿರುವದು. ಅಲ್ಲಿಗೆ ಈಗ ಕಂದೀ ಅಥವಾ ಹಳದೀ ಬಣ್ಣದ ಸಕ್ಕರೆಯು ಈ ಪರಿಪಾಠದಲ್ಲಿದೆ. ಒಳ್ಳೇ ಸಂಷ್ಕಾರ ಮಾಡಿದ ಬಿಳೀ ಸಕ್ಕರೆಯಲ್ಲಿ ಅದಕ್ಕೆ ಹಳದೀ ಬಣ್ಣ ಬರುವಂತೆ ಹಾನಿಕಾರಕವಾದ ಬಣ್ಣವನ್ನು ಮಿಶ್ರಮಾಡಿ ವ್ಯಾಪಾರಸ್ಥರು ಮಾರುತ್ತಿರುವ ಮಬ್ಬಿಗೆ ಪರಿಸ್ಥಿತಿ ಬಂದು ನಿಂತಿದೆ. ಅಕ್ಕಿಯ ಬಗ್ಗೆಯಾದರೂ ತೊಳವೆ ಕಲ್ಲು ಬೀಸೂವ ಕಲ್ಲುಗಳನ್ನೇ ಉಪಯೋಗಿಸಬೇಕಾಗುವದು.

ಬೇಸಾಯ ಹಾಗೂ ಗೋಪಾಲನ.

ಇನ್ನು ನಾನು ಬೇಸಾಯವನ್ನು ತೆಗೆದುಕೊಳ್ಳುವೆನು. ಹಳ್ಳಿಗರ ಉಪಜೀವನವು ಬೇಸಾಯದಮೇಲೆ, ಬೇಸಾಯವು ಎತ್ತು ಆಕಳುಗಳಮೇಲೆ ಅವಲಂಬಿತವಾಗಿದೆ. ಈ ವಿಷಯದಲ್ಲಿ ನಾನು ಕುರುಡನಿದ್ದಂತೆಯೇ ಸರಿ. ಸ್ವಂತ ಅನುಭವವು ನನಗಿಲ್ಲ. ಆದರೆ ಬೇಸಾಯ ಹಾಗೂ ಎತ್ತು-ಆಕಳು ಇಲ್ಲದ ಊರಿಲ್ಲ. ಎಮ್ಮೆ ಕೋಣಗಳು ಉಂಟು. ಆದರೆ ಕೊಂಕಣಪಟ್ಟೆ ಮೊದಲಾದ ಅಲ್ಪ ಪ್ರದೇಶವನ್ನು ಬಿಟ್ಟರೆ ಬೇಸಾಯಕ್ಕಾಗಿ ಅವುಗಳನ್ನು ಹೆಚ್ಚಾಗಿ ಹೂಡುತ್ತಿರುವದಿಲ್ಲ. ಹೀಗಿದ್ದರೂ ಎಮ್ಮೆದನಕ್ಕೆ ನಾವು ಬಹಿಷ್ಕಾರ ಹಾಕುತ್ತಿರುವೆವೆಂದಲ್ಲ. ಆದ್ದರಿಂದ ಹಳ್ಳಿಯ ಪಶುಧನದ ವಿಶೇಷತಃ ತಮ್ಮ ಹಳ್ಳಿಯಲ್ಲಿಯ ದನ-ಕರುಗಳ ಜೋಪಾನದ ಬಗ್ಗೆಯೂ ನಮ್ಮ ಕಾರ್ಯಕರ್ತರು ಸಾಕಷ್ಟು ದಕ್ಷತೆ ವಹಿಸುತ್ತಿರಬೇಕು. ಘನವಾದ ಈ ಸಮಸ್ಯೆಯನ್ನು ಬಿಡಿಸುವದು ನಮ್ಮಿಂದಾಗದಿದ್ದರೆ ಹಿಂದುಸ್ಥಾನವು ಹಾಳಾಗಿ ಹೋಗುವದು. ಅದರೊಂದಿಗೆ ನಾವೂ ಹೋಗುವೆವು. ಯಾಕಂದರೆ ಅಂಥ ಪ್ರಸಂ

ಗದಲ್ಲಿ ಒಂದುವೇಳೆ ಅವು ಆರ್ಥಿಕದೃಷ್ಟಿಯಿಂದ ನಮಗೆ ಭಾರವಾಗಿ ಪರಿಣಮಿಸಿದರೆ, ಪಾಶ್ಚಿಮಾತ್ಯ ದೇಶಗಳ ರೀತಿಯಲ್ಲಿ ಅವುಗಳ ಸಂಹಾರ ಮಾಡುವದನ್ನುಳಿದು ಅನ್ಯ ಉಪಾಯವೇ ಉಳಿಯದು.

ಆದುಕಾರಣ ನಮ್ಮ ಕಾರ್ಯಕರ್ತರು ಅಲ್ಪವುಟ್ಟಿಗಾದರೂ ಈ ವಿಷಯಕ ಜ್ಞಾನವನ್ನು ಸಂಪಾದಿಸಿಕೊಳ್ಳಬೇಕಾಗುವದು. ಈ ಪ್ರಶ್ನೆಯನ್ನು ಬಿಡಿಸುವ ಕುರಿತು ಹಿಂಸಕ ರೀತಿಯಾವುದು ಅಹಿಂಸಕ ರೀತಿಯಾವುದು ಎಂಬದನ್ನೂ ಲಕ್ಷಿಸಬೇಕಾಗುವದು. ಇದರಲ್ಲಿ ನಮ್ಮ ಜನವೃದ್ಧಿಯ ಸಮಸ್ಯೆಯನ್ನು ಬಿಡಿಸುವ ವಿಷಯವೂ ಅಡಕವಾಗಿದೆ. ನಮ್ಮ ಅಹಿಂಸೆಯ ರೀತಿಯು ಸಫಲವಾಗುವದೋ, ವಿಫಲವಾಗುವದೋ ಎಂಬದನ್ನು ನಾನರಿಯೆ. ಒಂದುವೇಳೆ ಅಹಿಂಸೆಯ ರೀತಿಯು ಕೈಗೂಡದಿದ್ದರೆ ನಾವು ಅಬಲರೆಂದು ಸಿದ್ಧವಾಗುವದು ಅಹಿಂಸೆಯಲ್ಲಿ. ನಮ್ಮ ತಪಸ್ಸು, ಸಾಮಾನ್ಯ ಭಾಷೆಯಲ್ಲಿ ಹೇಳುವದಾದರೆ ನಮ್ಮ ಪ್ರಯತ್ನ ಅಪೂರ್ಣವಾಗಿದ್ದಿತೆಂಬುದು ಸ್ಪಷ್ಟವಾಗುವದು. ಆದರೆ ಸೇವಕರಾದ ನಮ್ಮೆಲ್ಲರಿಗೂ ಏನಾದರೂ ಪ್ರಯತ್ನ ಮಾಡಲೇ ಬೇಕಾಗುವದು. ತಿರುಗಿ ಬೇಸಾಯದ ಕಡೆ ಹೊರಳುವಾ. ಇಂದು ಅತ್ತಾದರೂ ಕೇವಲ ಅರಾಜಕತೆಯೇ ನೆಲಿಸಿದೆ. ಹೊಲಗಳೆಲ್ಲ ತುಂಡು ತುಂಡಾಗಿ ಹಂಚಿಹೋಗಿವೆ. ಅಣ್ಣತಮ್ಮಂದಿರು ವಿಭಕ್ತರಾದಂತೆ ಹೊಲಗಳು ತುಂಡು ತುಂಡಾಗುತ್ತ ಹೋಗುವವು. ಒಂದು ಸಣ್ಣ ಹಾದಿಯನ್ನು ಮಾಡಬೇಕಾದರೆ ಮಧ್ಯದಲ್ಲಿಯ ಹೊಲದವನು ಮಾಡಗೊಡುವದಿಲ್ಲ. ಈ ತುಂಡಿನ ಪದ್ಧತಿಯಿಂದ ನಾವು ಸಾಯತಕ್ಕವರೇ. ಹಳ್ಳಿಯ ಜನರೆಲ್ಲ ಬಂಧುಭಾವದಿಂದ ಒಂದೆಡೆ ಸೇರಿ ಸಹಕಾರದಿಂದ ಹೊಲಮಾಡುವ ಸಿದ್ಧಾಂತವನ್ನು

ಅಂಗೀಕರಿಸಬೇಕಾಗುವದು. ಗ್ರಾಮಸೇವಕನು ತನ್ನ ಕ್ಷೇತ್ರದ ಪರಿಸ್ಥಿತಿಯನ್ನು ಪರ್ಯಾಲೋಚಿಸಿ ಅಲ್ಲಿಯ ಜನರನ್ನು ಇತ್ತ ಸೆಳೆಯುವನು.

ಕುಡಿಯುವ ನೀರು ಹಾಗೂ ಗ್ರಾಮದ ಸ್ವಚ್ಛತೆ.

ಹೊಲದ ನಂತರ ನೀರಿನ ಪ್ರಶ್ನೆಯು ತನ್ನಿಂದ ತಾನೇ ಉದ್ಭವಿಸುವದು. ಇದು ಹೊಲಕ್ಕೆ ಬೇಕಾಗುವ ನೀರಿನ ಮಾತಲ್ಲ. ಕುಡಿಯಲು ಬೇಕಾಗುವ ನೀರಿನದು. ಸೇವಕ ಕಾರ್ಯಕರ್ತನು ಊರಲ್ಲಿಯ ಎಲ್ಲ ಭಾಂವಿಗಳ ನಿರೀಕ್ಷಣೆ ಮಾಡುವನು. ಅವುಗಳ ಒಳಗಣ ಹಾಗೂ ಹೊರಗಣ ಹೊಲಸು ತೆಗೆದು ಸ್ವಚ್ಛ ಮಾಡುವನು. ಊರಲ್ಲಿ ಭಾಂವಿಗಳು ಎಷ್ಟಿವೆ? ಅವುಗಳಲ್ಲಿ ಎಷ್ಟು ಭಾಂವಿಗಳಲ್ಲಿ ಎಲ್ಲ ಜಾತಿಯ ಜನರು ನೀರು ತುಂಬಲು ಪರವಾನಿಗೆ ಇದೆ? ಅವುಗಳ ಸುತ್ತು ಮುತ್ತಲಿನ ಸ್ವಚ್ಛತೆ ಹೇಗದೆ? ಶೌಚಕೂಪವಾಗಲಿ ಶೌಚ ವಿಸರ್ಜನೆ ಮಾಡುವ ಸ್ಥಳವಾಗಲೀ ಭಾಂವಿಯಿಂದ ಎಷ್ಟು ದೂರದಲ್ಲಿದೆ? ಇದೆಲ್ಲವನ್ನೂ ನೋಡುವನು. ಸಮೀಪದಲ್ಲಿದ್ದರೆ ಅದರಿಂದೊದಗುವ ಅಪಾಯವನ್ನು ಆ ಹಳ್ಳಿಗರಿಗೆ ತಿಳಿಸಿ ಹೇಳಿ, ಅವರ ಸಹಕಾರ ಪಡೆದು ಶೌಚ ವಿಸರ್ಜನದ ಸ್ಥಳವನ್ನು ದೂರದಲ್ಲಿ ಕಲ್ಪಿಸಿಕೊಡುವನು. ಇದರಲ್ಲಿ ಇಡೀ ಗ್ರಾಮದ ಸ್ವಚ್ಛತೆಯ ವಿಷಯವು ಸಮಾವೇಶವಾಗುವದು. ಗ್ರಾಮ ಸೇವಕನು ಎಲ್ಲಿಯ ವರೆಗೆ ಹೋಗಬೇಕಾಗುವದೆಂಬದು ಈಗ ನಮಗೆ ಗೊತ್ತಾದಂತಾಯಿತು. ಇಡೀ ಗ್ರಾಮದ ಸ್ವಚ್ಛತೆ, ಗೊಬ್ಬರ ಹಾಗೂ ಕಸದ ಗುಂಡಿಗಳು, ಹೇಗೆ ವ್ಯವಸ್ಥಿತರೀತಿಯಿಂದ ಇರತಕ್ಕದ್ದೆಂಬದನ್ನು ತಿಳಿಯುವದು ಹಾಗೂ ಅದರಂತೆ ಏರ್ಪಡಿಸುವದು ಗ್ರಾಮ ಸೇವಕನಿಗೆ ಬಿಟ್ಟ

ದ್ದಲ್ಲ. ಶ್ರಮ ವಿಭಾಗವಿರುವದೇನೋ ನಿಜ. ಆದರೆ ಉಗಿಬಂಡಿ ಯೆದರು ನಿಶಾನೆಯನ್ನು ಅಲ್ಲಾಡಿಸುವ ಪೋರ್ಟರನಂತಾಗಲೀ, ಅಥವಾ ಚರ್ಮದ ಕಾರಖಾನೆಯಲ್ಲಿ ಇತರ ಯಾವ ಕ್ರಿಯೆಯ ಅರಿವೂ ಇಲ್ಲದೆ ಕೇವಲ ಅಟ್ಟೆಗಳನ್ನು ಮಾಡುತ್ತ ಕುಳಿತಿರುವ ಹೆಣ್ಣುಮಕ್ಕಳಂತಾಗಲೀ ಕೆಲಸ ಮಾಡುವದಾದರೆ ಅದು ನಿಷ್ಪ್ರ ಯೋಜನವಾದದ್ದು. ಇಲ್ಲಿ ನಾವು ಗ್ರಾಮ—ಶರೀರದ ಎಲ್ಲ ಅಂಗ ಗಳನ್ನು ಅಳವಡಿಸುವ ಜ್ಞಾನವನ್ನು ಪಡೆಯತಕ್ಕದ್ದದೆ. ಹಳ್ಳಿ ಯಲ್ಲಿ ತಕ್ಕಮಟ್ಟಿಗೆ ಹೊಲಿಗೆಯ ಕೆಲಸವೂ ನಡೆಯುವದು. ಹಳ್ಳಿ ಯಲ್ಲಿಯ ಒಕ್ಕಲಿಗ, ಕುಂಬಾರ, ಬಡಿಗ, ಮೊಚ್ಚಿಗಾರ ಇವರಲ್ಲಿ ಪರಸ್ಪರ—ಸಹಕಾರವನ್ನುಂಟುಮಾಡಿ ಇವರನ್ನೆಲ್ಲ ಒಂದುಗೂಡಿ ಸುವ ಕಾರ್ಯಕ್ಕೇ ಗ್ರಾಮ ಸಂಘಟನೆಯೆನ್ನುವರು. ಈ ಮಾತು ಗಳು ನೋಡಲಿಕ್ಕೇನೋ ಬಹಳವಾಗಿ ತೋರುವವು. ಆದರೆ ನಿಜವಾಗಿ ಹಾಗಿರುವದಿಲ್ಲ. ತನ್ನ ಶರೀರ ಹಾಗೂ ಬುದ್ಧಿ ಇವು ಗಳನ್ನು ಪೂರ್ಣರೀತಿಯಿಂದ—ದುಡಿಸಲನುವಾದ ನಿಷ್ಠೆಯುಳ್ಳ ಕಾರ್ಯಕರ್ತನಿಗೆ ಈ ಕಾರ್ಯವು ಅಷ್ಟು ಕಠಿನವಾಗತಕ್ಕದ್ದಲ್ಲ.

ಕಡೆಗೆ ನನ್ನ ಕೊನೆಯ ಮಾತನ್ನು ಕೇಳಿರಿ. ಹಳ್ಳಿಯಲ್ಲಿ ಹೋಗಿ ತಳವೂರುವ ಕಾರ್ಯಕರ್ತನು ಅಹಿಂಸೆಯ ಬಗ್ಗೆ ಅಜ್ಞ ನಾಗಿದ್ದರೆ ಅವನಿಂದ ಕಾರ್ಯ ಸಾಗಲಾರದು. ಆತನು ಅರ್ಥ ಶಾಸ್ತ್ರವೇ ಪ್ರಮಾಣವೆಂದು ತಿಳಿದು ನೀತಿಶಾಸ್ತ್ರವು ಅನಾವಶ್ಯಕ ವಾದುದೆಂದು ಬಗೆದರೆ ಕೊನೆಗೆ ಎಲ್ಲ ಕೆಲಸವೂ ಹದಗೆಡುವದು. ಅಹಿಂಸೆಯೇ ನಮ್ಮ ಆಧಾರ ಶಿಲೆ. ಅದರ ಮೇಲೆಯೇ ನಾವು ಕಾಲೂರಿ ನಿಲ್ಲಬಲ್ಲೆವು. ನಾವು ಅದನ್ನು ಬದಿಗಿರಿಸಿದರೆ ನಮ್ಮ ಕಾರ್ಯಸಾಗದು. ಆರಂಭದಲ್ಲಿ ಜನರು ಹುರುಪಿನಿಂದ ಸ್ವಲ್ಪ ಕಾರ್ಯವನ್ನು ಮಾಡಬಹುದು. ಆದರೆ ತಳಹದಿಯಿಲ್ಲದೆ ಸ್ವರಾಜ್ಯ

ಮಂದಿರವನ್ನು ಕಟ್ಟುವದು ಸಾಧ್ಯವಾಗಲಾರದು. ಪ್ರತಿಯೊಂದು ವ್ಯವಹಾರದಲ್ಲಿ ಸೇವಕರು ತಮ್ಮ ನಡುವಳಿಕೆಯಿಂದ ಈ ಬಗ್ಗೆ (ಜನರಿಗೆ) ಶಿಕ್ಷಣ ಕೊಡತಕ್ಕದ್ದಿದೆ. ಕೇವಲ ಪುಸ್ತಕದಿಂದ ಅಥವಾ ಶಾಲೆಯನ್ನು ಹಾಕಿ ಈ ಕಾರ್ಯ ಮಾಡಲು ಬರಲಾರದು. ಇದನ್ನೆಲ್ಲ ಮಾಡುವದು ಅವನಿಂದಾಗದಿದ್ದರೆ ಎಲ್ಲವೂ ಅಸ್ತವ್ಯಸ್ತ ವಾಗುವದು. ಈ ತರದ ಅಸ್ತವ್ಯಸ್ತ ಸಂಗತಿಗಳು ನಮ್ಮ ಇತಿಹಾಸದಲ್ಲಿ ತುಂಬಿವೆ.

ಜಾಜೂಜೀ:—ಹಳ್ಳಿಯಲ್ಲಿ ಒಬ್ಬನಲ್ಲದೆ ಇಬ್ಬರು ಕಾರ್ಯಕರ್ತರಿದ್ದರೆ ಹೆಚ್ಚು ಅನುಕೂಲವಾಗುವದು. ಒಬ್ಬನು ಒಂದು ಮಾಡಿದರೆ ಇನ್ನೊಬ್ಬನು ಮತ್ತೊಂದು ಮಾಡುವನು. ಇದರಿಂದ ಒಬ್ಬನಿಂದ ಇನ್ನೊಬ್ಬನಿಗೆ ಸಹಾಯವಾಗುವದು.

ಬಾಪೂಜೀ:—ಹಲವರು ನನಗೆ ಇದೇ ಪ್ರಶ್ನೆ ಕೇಳಿರುವರು. ಈ ಬಗ್ಗೆ ನಿಶ್ಚಿತವಾದ ಧೋರಣೆಯನ್ನು ನಾನು ತೋರಿಸಲಾರೆ. ಕಾರ್ಯಕರ್ತನು ಓರ್ವನೇ ಹೋಗುವದು ನನಗೆ ಪ್ರಿಯಕರ. ಆತನೊಬ್ಬನೆ ಪರಿಸ್ಥಿತಿಯೊಡನೆ ಹೋರಾಡಿ ನಿರ್ಭಯನಾಗುವನು. ಆದರೆ ಒಬ್ಬನಿಂದ ಕಾರ್ಯವು ನೀಗದಿದ್ದರೆ ಇನ್ನೊಬ್ಬನನ್ನು ಕಳಿಸಿರಿ. ಆರ್ಥಿಕ ಪರಿಸ್ಥಿತಿಯು ನಮಗೆ ಅಡ್ಡ ಬಂದಾಗ್ಗೆ ನೋಡಿಕೊಳ್ಳುವಾ. ಈ ವಿಷಯದಲ್ಲಿ ನಾನು ಇಲ್ಲಿಯವರೆಗೆ ಹೋಗುವೆನು, ಒಂದುವೇಳೆ ವಿವಾಹಿತ ಕಾರ್ಯಕರ್ತನು ಅಲ್ಲಿ ಹೋಗುವದಾದರೆ ಆತನ ಹೆಂಡತಿಯು ಇನ್ನೊಬ್ಬ ಕಾರ್ಯಕರ್ತಳಾಗಿರತಕ್ಕದ್ದು.

ಜಾಜೂಜೀ:—ಹಲವು ಕಾರ್ಯಕರ್ತರು ಮೇಲಿನ ತರಗತಿಯವರಿದ್ದರೆ ಕೆಲವರು ಸಾಮಾನ್ಯ ಯೋಗ್ಯತೆಯುವರಿರುವರು.

ಒಳ್ಳೇ ಕಾರ್ಯಕರ್ತನ ಕೈಕೆಳಗೆ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಆರೇಳು ಕಾರ್ಯಕರ್ತರಿದ್ದರೆ?

ಬಾಪೂಜಿ:—ಈ ಬಗ್ಗೆ ನಾನು ಹಲವರೊಡನೆ ಚರ್ಚಿಸಿರುವೆನು. ಆದರೆ ಎಲ್ಲಿಡೆಯಲ್ಲಿಯೂ ಇದು ಶಕ್ಯವಾಗಲಾರದು. ನೀವು ಅನೇಕ ಕಾರ್ಯಕರ್ತರನ್ನು ತಯಾರಿಸಿರಿ. ಇಲ್ಲವಾದರೆ ನಿಮ್ಮ ಕಾರ್ಯವು ನಡೆಯಲಿಕ್ಕಿಲ್ಲೆಂದು ನಾನು ತಿಮ್ಮಪ್ಪನಾಯಕರಿಗೆ ಹೇಳಿದ್ದೆನು. ಅವರು ಕರ್ನಾಟಕದ ಓರ್ವ ದೊಡ್ಡ, ಸುಯೋಗ್ಯ ಕಾರ್ಯಕರ್ತರು. ಆರೇಳು ರೂಪಾಯಿಗಳಲ್ಲಿ ತಮ್ಮ ನಿರ್ವಾಹ ಸಾಗಿಸುತ್ತಿದ್ದರು. ಅವರು ಕಾರ್ಯಕರ್ತರನ್ನು ತಯಾರಿಸಹತ್ತಿದರು. ಆಗ್ಗೆ ಸ್ಥಾನಿಕ ಕಾರ್ಯಕರ್ತರನ್ನು ಕಡಿಮೆ ಖರ್ಚಿನಿಂದ ತಯಾರ ಮಾಡಬಹುದೆಂದು ಅವರು ಮನಗಂಡರು. ಹಾಗೂ ತಕ್ಕ ಶಿಕ್ಷಣ ಕೊಟ್ಟು ಅಂಥ ಕಾರ್ಯಕರ್ತರನ್ನು ತಯಾರಿಸಿದರು.

ಜಾಜೂಜಿ:— ಆದರೆ ವಾಡಿಕೆಯಾಗಿ ಅನುಭವವು ತದ್ವಿರುದ್ಧವಾಗಿರುವದು. ವಿವಾಹಿತ ಕಾರ್ಯಕರ್ತನ ಹೆಂಡತಿಯು ಆತನಿಗೆ ಸಹಾಯಕಳಾಗುವ ಬದಲು ಹಲವು ಸಾರೆ ಕಾಲ್ತೊಡಕಾಗುವಳು.

ಬಾಪೂಜಿ:— ಅದುಕಾರಣದಿಂದಲೇ ನಾನು ಈ ಬಗ್ಗೆ ಯಾವುದೊಂದು ನಿಯಮವನ್ನು ಮಾಡಲೆಣಿಸುವದಿಲ್ಲ. ಕಾರ್ಯಕರ್ತನು ವಿವಾಹಿತನಾಗಿರತಕ್ಕದ್ದೆಂದೇ ರಾಜಾಜಿಯವರು ಅನ್ನುತ್ತಿರುವರು.

ಕಾರ್ಯಕರ್ತನ ಬಗ್ಗೆ ವೆಚ್ಚ:—

ಜಾಜೂಜಿ:— ಓರ್ವ ಕಾರ್ಯಕರ್ತನ ಸಲುವಾಗಿ ಎಷ್ಟು ಹಣ ವೆಚ್ಚ ಮಾಡಬೇಕಾದೀತು?

ಬಾಪೂಜಿಃ— ಇದಂತೂ ಯುದ್ಧದ ತುಟ್ಟಿಯ ಕಾಲ. ಇನ್ನೂ ಬಹುಕಾಲ ಹೀಗೆಯೇ ಇರಬಹುದೆಂಬ ಭೀತಿಯದೆ. ಈ ತರದ ಕಾರ್ಯಕರ್ತನಿಗಾಗಿ ತಿಂಗಳೊಂದಕ್ಕೆ ಐವತ್ತುರೂಪಾಯಿ, ನೂರು ಸಹ, ಖರ್ಚುಮಾಡುವೆನು.

ಜಾಜೂಜಿ:— ಊಟಕ್ಕಂತೂ ಎಲ್ಲರಿಗೂ ಕೊಡಲೇಬೇಕಾಗುವದು. ಇದಲ್ಲದೆ ಪರಿವಾರ, ಹುಡುಗರಿಗೆ ಕಲಿಸುವದು, ಇವುಗಳ ಹೊಣೆಯೂ ಇದೆ.

ಬಾಪೂಜಿಃ— ನಡುವಿನ ಹಾದಿಯನ್ನೊಂದು ನಾವು ಹುಡುಕಬೇಕಾಗುವದು. ಬಹಳ ತೊಡಕಿದ್ದವರನ್ನು ಬಿಟ್ಟುಬಿಡಬೇಕಾಗುವದು. ಗಂಡಸು, ಹೆಂಡತಿ ಇಬ್ಬರು ಮಕ್ಕಳು ಹೀಗೆ ನಾಲ್ಕು ಪರಮಾವಧಿ ಐದು ಜನ ಪರಿವಾರದ ವರೆಗೆ ನಾವು ಮಿತಿಯನ್ನಿಡಬಹುದು. ಇದಕ್ಕೂ ಹೆಚ್ಚು ಲಂಪಟವಿದ್ದವರನ್ನು ತೆಗೆದುಕೊಳ್ಳದೆ ಇರುವದೇ ಲೇಸು.

ಜಾಜೂಜಿಃ— ಹಲವು ಕಾರ್ಯಕರ್ತರು ತಮ್ಮ ಮೇಲೆ ಅಣ್ಣತಮ್ಮಂದಿರ, ಅಕ್ಕತಂಗಿಯರ, ತಾಯಿತಂದೆಗಳ, ಇತ್ಯಾದಿ ಬೇರೆ ಬೇರೆ ಜನರ ಹೊಣೆಯೂ ಇರುತ್ತದೆಂದು ಪ್ರತಿಪಾದಿಸುವರು.

ಬಾಪೂಜಿ:— ಅಂಥವರಿಗೆ ಇಲ್ಲಿ ಸ್ಥಾನವಿಲ್ಲ.

ಜಾಜೂಜಿಃ— ಕಾರ್ಯಕರ್ತನ ವೇತನವನ್ನು ನಿಶ್ಚಯಿಸುವಾಗ್ಗೆ ಆತನ ಯೋಗ್ಯತೆಯನ್ನು ಲಕ್ಷಿಸತಕ್ಕದ್ದೋ ಅಥವಾ ಆತನ ಮೇಲಿರುವ ಪರಿವಾರದ ಹೊಣೆಯನ್ನೋ?

ಬಾಪೂಜಿ:— ವಲ್ಲಭಸ್ವಾಮಿಗೆ ನಾನು ಐದು ರೂಪಾಯಿ ಕೊಡುವೆನು. ನೂರಲ್ಲ, ಆದರೆ ಬಹಳ ಪರಿವಾರವಿದ್ದವರಿಗೆ ಪರಮಾವಧಿ ವೇತನವನ್ನಾದರೂ ಕೊಡುವೆನು. ಅವರನ್ನು ಬಿಡುವದಿಲ್ಲ. ಇದರಿಂದ ಈರ್ವರೂ ಇರುವರು. ಪರಸ್ಪರರಲ್ಲಿ ಯಾವ ತರದ ದ್ವೇಷಭಾವನೆಯೂ ಉಂಟಾಗದು. ಯಾತರ ಬಗ್ಗೆ ಆಶೆಯೂ ತಲೆದೋರದು.

ಜಾಜೂಜಿ:— ನಮ್ಮ ಕಾರ್ಯಕರ್ತರು ಹಳ್ಳಿಗರಿಂದ ಎಲ್ಲಿ ಯವರೆಗೆ ಪ್ರತಿ ಸಹಾಯ (Response) ಅಪೇಕ್ಷಿಸಬಹುದು ? ಕಾರ್ಯಕ್ಷೇತ್ರವನ್ನು ಆರಿಸುವಾಗ್ಗೆ ಅವರಿಗೆ ಕೆಲವು ಕರಾರು ಹಾಕುವದು ಉಚಿತವಾಗುವದೋ ? ಈಗಿನ ಪರಿಸ್ಥಿತಿಯೆಂದರೆ, ನಾವು ಯಾವುದೊಂದು ಹಳ್ಳಿಗೆ ಹೋದರೆ ಅಲ್ಲಿಯ ಜನರು ನಾವು ಧನಿಕರೆಂದೂ, ಸಾಧ್ಯವಾದ ಮಟ್ಟಿಗೆ ನಮ್ಮಿಂದ ಹಣ ಜಗ್ಗಬೇಕೆಂದೂ ಅವರು ಬಯಸುವರು. ಎರಡುವರ್ಷ ಕೆಲಸ ಮಾಡಿ ನಮ್ಮ ಕಾರ್ಯಕರ್ತನು ಹೊರಟು ಹೋದನೆಂದರೆ ಅಲ್ಲಿ ಏನೂ ಉಳಿಯುವದಿಲ್ಲ.

ಬಾಪೂಜಿ:— ನಾವು ಏನೂ ಕರಾರು ಹಾಕಲಾರೆವೆಂದು ನನ್ನ ಅಭಿಪ್ರಾಯ. ಆದಿವಾದಿಗಳ ಮಧ್ಯದಲ್ಲಿ ಅವರ ಸೇವೆ ಮಾಡುವ ಕುರಿತು ನಾವು ಹೋಗಿ ನೆಲಿಸುವೆವು. ಇದರಲ್ಲಿ ಅವ ರಿಂದ ಕರಾರು ಅಪೇಕ್ಷಿಸುವದಾದರೂ ಏನು ? ನಾವು ಅಲ್ಪ ಸ್ವಲ್ಪ ಕೆಲಸಮಾಡಿ ಅನುಭವ ಪಡೆದ ಸ್ಥಳವನ್ನಾರಿಸಿಕೊಂಡು ಅಲ್ಲಿ ನೆಲಸಿ ಕಾರ್ಯಮಾಡಹತ್ತಿದರೆ ಅದು ಬೆಳೆದು ಹಬ್ಬುವ ದೆಂಬುದು ಬೀಜಮಾತು.

ಆದರೆ ಎಲ್ಲವೂ ಕೊನೆಗೆ ಕಾರ್ಯಕರ್ತರ ಮೇಲೆಯೇ ಅವ ಲಂಬಿಸಿದೆ. ಹಳ್ಳಿಗರ ಪ್ರೇಮವನ್ನು ಸಂಪಾದಿಸಿ ಅವರಿಂದ

ಏನಾದರೂ ಪಡೆಯುವದಾದರೆ ಧಾರಾಳವಾಗಿ ಪಡೆಯಲಿ.

ಕಾರ್ಯಕರ್ತನ ಪರೀಕ್ಷೆ:—

ಜಾಜೂಜಿ:— ಕಾರ್ಯಕರ್ತನು ಎಷ್ಟು ವರ್ಷಗಳಲ್ಲಿ ಸ್ವಾವಲಂಬಿಯಾಗತಕ್ಕದ್ದು ? ಐದು ವರ್ಷಗಳಲ್ಲಿಯೇ ?

ಬಾಪೂಜಿ:—ಐದು ವರ್ಷಗಳೆಂದು ನೀವೇ ಅಂದಿರುವಿರಲ್ಲಾ.

ಕಾರ್ಯಕರ್ತನು ಒಂದು ತಿಂಗಳಿಗೆ ತಗಲುವಷ್ಟು ಹಣವನ್ನು ತೆಗೆದುಕೊಂಡು ಹಳ್ಳಿಯಲ್ಲಿ ಹೋಗುವನು. ಹಳ್ಳಿಗರಿಂದ ಒಂದು ತುಣುಕು ಭೂಮಿಯನ್ನು ಪಡೆದು ಅಲ್ಲಿ ಒಂದು ಗುಡಿಸಲು ಹಾಕಿಕೊಳ್ಳುವನು. ಒಂದುವೇಳೆ ಅಲ್ಲಿ ಯಾರದಾದರೊಂದು ತೆರವಿದ್ದ ಮನೆ ಸಿಕ್ಕರೆ ಅದನ್ನು ಹಿಡಿಯುವನು. ಕಿಸೆಯಿಂದ ತಕಲಿಯನ್ನು ತೆಗೆದುಕೊಂಡು ಒಂದು ಗಿಡದ ಕೆಳಗೆ ಕುಳಿತುಕೊಳ್ಳುವನು. ಹಳ್ಳಿಯ ಜನರ ಹತ್ತಿರ ರಾಟಿಗಳಿದ್ದರೆ ಅವುಗಳನ್ನು ತೆಗೆದುಕೊಂಡು ಸರಿಪಡಿಸಿ ಅವುಗಳನ್ನು ನಡಿಸಹತ್ತುವನು. ಹಳ್ಳಿಯಲ್ಲಿಯ ಹುಡುಗರನ್ನು ಒಂದೆಡೆ ಸೇರಿಸಿ ಅವರನ್ನು ಆಡಲಿಕ್ಕೆ ಹಚ್ಚುವದು, ಅವರಿಗೆ ಕಥೆಗಳನ್ನು ಹೇಳುವದು, ಹಾಡುಗಳನ್ನು ಕಲಿಸುವದು ಹಾಗೂ ಅವರಿಂದ ಊರನ್ನು ಸ್ವಚ್ಛಮಾಡುವದು ಇತ್ಯಾದಿ ಕಾರ್ಯ ಕೈಕೊಳ್ಳುವನು. ವೇತನವನ್ನು ಹೊರ್ತು ಪಡಿಸಿ ಉಳಿದ ಉದ್ಯೋಗ ಅಥವಾ ಅನ್ಯ ಯಾವ ಕೆಲಸಕ್ಕಾಗಲೀ ಬಂಡವಾಳವೆಂದು ನಾನು ಒಂದು ಕವಡಿಯನ್ನಾದರೂ ಕೊಡೆನು. ಬೇಕಾದುದೆಲ್ಲವನ್ನು, ಆತನು ತನ್ನ ನೈಜ ಬುದ್ಧಿಬಲದಿಂದಲೂ, ಪ್ರೇಮದಿಂದಲೂ ಸಂಗ್ರಹಿಸಿಕೊಳ್ಳಬೇಕು. ಇದರಲ್ಲಿಯೇ ಆತನ ಪ್ರೇಮ, ಸೇವಾಭಾವ ಹಾಗೂ ಶಕ್ತಿಗಳ ಪರೀಕ್ಷೆಯಿರುವದು.

ಜಾಜೂಜಿ:—ಬಹು ದುಸ್ತರವಾದ ಪರೀಕ್ಷೆಯಿದೆ.

ಬಾಪೂಜಿ:—ಅವಶ್ಯವಾಗಿ ದುಸ್ತರವಿದೆ. ಇದರಲ್ಲಿ ಕತ್ತಿ ಕಠಾರಿಯನ್ನು ಹಿಡಿಯಬೇಕಾದುದು ಅಷ್ಟರಲ್ಲಿಯೇ ಇದೆ! ನಾನು ಸೂಚಿಸಿದುದೇ ಪ್ರೇಮದ ಹಾಗೂ ಸೇವೆಯ ಮಾರ್ಗವು. ಅಹಿಂಸೆಯ ರೀತಿಯಲ್ಲಿ ಸ್ವರಾಜ್ಯವನ್ನು ಸಂಪಾದಿಸುವದಾದರೆ ನನ್ನಲ್ಲಿ ಎರಡನೆಯ ಮಾರ್ಗವಿಲ್ಲ.

ಮೂರನೆಯ ದಿನ, ಮಂಗಳವಾರ ತಾ ೧೦-೧೦-೧೯೪೪

ಸ್ವಾವಲಂಬಿಯಾಗುವದೆಂತು?

ಜಾಜೂಜಿ:—ಕಾರ್ಯಕರ್ತನು ಸ್ವಾವಲಂಬಿಯಾಗುವದು ಹೇಗೆ? ಗ್ರಾಮವಾಸಿಗಳು ಅವರಿಗೆ ದಾನವನ್ನಾದರೂ ಕೊಡಬಹುದು ಅಥವಾ ಕೆಲಸದ ಪ್ರತಿಫಲವನ್ನಾದರೂ ಸಲ್ಲಿಸಬಹುದು. ಹಳ್ಳಿಗರು ತಾವೇ ಒಂದು ಉದ್ಯೋಗವನ್ನು ಹೂಡಿ ಅದರಲ್ಲಿ ಬಂದ ಲಾಭದಿಂದ ಕಾರ್ಯಕರ್ತನ ನಿರ್ವಾಹ ಸಾಗಿಸಬಹುದು.

ಬಾಪೂಜಿ:— ಎರಡನ್ನೂ ಮಾಡಬೇಕಾಗುವದು. ಕಾರ್ಯಕರ್ತನಿಗೆ ವೇತನವನ್ನಂತೂ ನಾವು ಕೊಡುವವರೇ. ಇದಲ್ಲದೆ ಹಳ್ಳಿಗರಾಗಲೀ ಸ್ವತಃ ತಾನೇ ಆಗಲೀ, ಹಳ್ಳಿಗೆ ಲಾಭದಾಯಕವಾಗುವಂಥ ಯಾವುದೊಂದು ಉದ್ಯೋಗವನ್ನೂ ಕಲ್ಪಿಸಿಕೊಳ್ಳಬಹುದು.

ಅತಿ ಬುದ್ಧಿಶಾಲಿಯಾದ ಕಾರ್ಯಕರ್ತನು, ಹಳ್ಳಿಯಲ್ಲಿ ನೆಲಿಸಿದ್ದಾದರೆ ಆತನು ಬುದ್ಧಿ ಬಲದಿಂದ ತನ್ನ ಸಲುವಾಗಿಯಷ್ಟೇ ಅಲ್ಲ, ತನ್ನ ಕಾರ್ಯ ಕಲಾಪಕ್ಕೆ ಬೇಕಾಗುವ ವೆಚ್ಚದ ಹಣವನ್ನು ಸಹ ಅಲ್ಲಿಯೇ ಸಂಗ್ರಹಿಸಿಕೊಳ್ಳುವನು. ಮಿತ್ರರಿಂದ ಏನೂ ಪಡೆಯಲಿಕ್ಕಿಲ್ಲ, ಹೀಗಾಗುವದು ಶಕ್ಯವಿದೆ. ಆದರೂ ಈ ರೀತಿ ಬುದ್ಧಿಯ ಬಲದಿಂದ ಹಣ ಸಂಪಾದಿಸುವದೆಂದರೆ

ಬುದ್ಧಿಯ ದುರ್ವ್ಯಯವೆಂದೇ ನನ್ನ ಅಭಿಪ್ರಾಯವಿದೆ. ಈ ತರದ ಎಲ್ಲ ಆದಾಯವೆಲ್ಲ ದೇಶಕ್ಕೆ ಸಲ್ಲತಕ್ಕದ್ದು.

ಜಾಜೂಜೀಃ—ನಮ್ಮ ಕಾರ್ಯಕರ್ತರು ಖಾದಿಯ ಆಧಾರ ದಿಂದಲೇ ತಮ್ಮ ಜೀವನ ನಿರ್ವಾಹ ಸಾಗಿಸುವದಾದರೆ ಅದು ಸ್ವಾವಲಂಬೀ ಖಾದಿಯಿಂದ ಶಕ್ಯವಾಗಲಾರದು. ವ್ಯಾಪಾರೀ ಪದ್ಧತಿಯಿಂದ ಖಾದಿಯನ್ನು ಹುಟ್ಟಿಸುವದು, ಮಾರಾಟ ಮಾಡು ವದು, ಹೊರಗೆ ಕಳಿಸುವದು ಮುಂತಾದ ರೀತಿಯಿಂದ ಲಾಭ ಪಡೆಯಬೇಕಾಗುವದು.

ಬಾಪೂಜೀಃ—ನನ್ನ ಯೋಜನೆಯಲ್ಲಿ ಈ ಮಾತು ಹೀಗಿ ರುವದಿಲ್ಲ. ಖಾದಿಯ ಮುಖಾಂತರ ಹಳ್ಳಿಯನ್ನು ಸ್ವಾವಲಂಬಿ ಯಾಗಿ ನಾವು ಮಾಡುವದಾದರೆ ಹೆಚ್ಚುಳಿಯುವ ಖಾದಿಯನ್ನು ಹೊರಗೆ ಕಳಿಸಬೇಕಾದೀತು.

ಸ್ವಾವಲಂಬನ ಖಾದಿಯಲ್ಲದೆ ಬೇರೆ ಖಾದಿಯನ್ನು ನಾವು ಹುಟ್ಟಿಸದಿದ್ದರೆ ಹಾಗೂ ನಮ್ಮ ಅಥವಾ ನಮ್ಮ ಹಳ್ಳಿಯವರ ಸ್ವಾಧೀನದಲ್ಲಿ ಭೂಮಿ ಮೊದಲಾದ ಅನ್ಯ ಯಾವುದೇ ಆಧಾರ ಗಳಿಲ್ಲದಿದ್ದರೆ ಕೇವಲ ಸ್ವಾವಲಂಬನ ಖಾದಿಯಿಂದ ಕೆಲಸವು ಬಗೆ ಹರಿಯಲಿಕ್ಕಿಲ್ಲವೆಂದು ಯಾರೋ ನನಗೊಮ್ಮೆ ಹೇಳಿದ್ದರು. ಬಟ್ಟೆ ಕಾಳು-ಕಡಿ ಮುಂತಾದ ಮೊಟ್ಟಮೊದಲನೆಯ ಅವಶ್ಯಕತೆಯ ಪದಾರ್ಥಗಳನ್ನು ಹಳ್ಳಿಗರು ತಮ್ಮಲ್ಲಿಯೇ ಹುಟ್ಟಿಸಿಕೊಳ್ಳಬೇ ಕೆಂಬ ಮಟ್ಟಿಗೆ ನನ್ನ ಇಂದಿನ ಕಲ್ಪನೆಯಿದೆ. ಇದಕ್ಕೇ ನಾವು ಸ್ವಾವಲಂಬಿ (Self Sufficient) ಎನ್ನುವೆವು.

ಆದರೆ ಇದರ ಅರ್ಥವಾದರೂ ವಿಪರೀತವಾಗುವ ಸಂಭವವಿದೆ. ಕಾರಣ ಈ ಪದದ ಅರ್ಥವನ್ನು ಚೆನ್ನಾಗಿ ಅರಿತುಕೊಳ್ಳುವದು

ಅತ್ಯವಶ್ಯ. ಸ್ವಯಂ-ಪರ್ಯಾಪ್ತತೆ (Self Sufficiency) ಯೆಂದರೆ ಕೂಪಮಂಡೂಕತೆಯಲ್ಲ ಸ್ವಯಂ-ಪರ್ಯಾಪ್ತ (Self Sufficient) ವೆಂದರೆ ಸ್ವಯಂ-ಪುಷ್ಟ (Self contained) ವಲ್ಲ. ಎಲ್ಲ ಪದಾರ್ಥಗಳನ್ನು ನಾವು ಎಂದೂ ಉತ್ಪನ್ನ ಮಾಡಲಾರೆವು. ಮತ್ತು ಹಾಗೆ ಮಾಡುವ ಉದ್ದೇಶವೂ ನಮ್ಮದಿಲ್ಲ. ಪೂರ್ಣ ಸ್ವಾವಲಂಬನದ ಸಮಿ-ಸಮೀಪಕ್ಕೆ ನಮಗೆ ಹೋಗತಕ್ಕದ್ದಿದೆ. ನಮ್ಮಿಂದ ಹುಟ್ಟಿಸಲು ಶಕ್ಯವಾಗದಂಥ ಪದಾರ್ಥಗಳನ್ನು ವಿನಿಮಯದಿಂದ ಪಡೆಯಲು ಸಾಧ್ಯವಾಗುವಂತೆ ನಮ್ಮ ಪದಾರ್ಥಗಳನ್ನು ನಮ್ಮ ಅವಶ್ಯಕತೆಗಿಂತ ಹೆಚ್ಚು ಪ್ರಮಾಣದಿಂದ ಉತ್ಪನ್ನ ಮಾಡಬೇಕಾಗುವದು. ಆದರೆ ಈ ಮೇರೆಗೆ ಹೆಚ್ಚಿಗೆ ಉತ್ಪನ್ನ ಮಾಡಿದ ವಸ್ತುಗಳನ್ನು ನಾವು ಮುಂಬೈಗೆ ಕಳಿಸತಕ್ಕದ್ದಲ್ಲ. ಹಾಗೂ ಇಂಥ ದೂರದ ಪಟ್ಟಣಗಳನ್ನು ಲಕ್ಷಿಸಿ ಅವುಗಳಿಗೆ ಬೇಕಾಗುವಂಥ ಪದಾರ್ಥಗಳನ್ನು ಹುಟ್ಟಿಸುವ ಇಚ್ಛೆಯನ್ನೂ ನಾವು ತಳೆಯಕೂಡದು. ಹಾಗೆ ಮಾಡುವದೆಂದರೆ ಸ್ವದೇಶೀ ವಿಷಯಕ ನನ್ನ ಕಲ್ಪನೆಗೆ ವಿರುದ್ಧವಾಗಿರುವದು. ತಮ್ಮ ಹತ್ತಿರದ ನೆರೆಹೊರೆಯವರನ್ನು ಬಿಟ್ಟು ದೂರದಲ್ಲಿ ವಾಸಿಸುವವರ ಸೇವೆಗಾಗಿ ಹಾತೊರೆಯಬಾರದೆಂಬದೇ ಸ್ವದೇಶಿಯ ಅರ್ಥವು.

ದೃಷ್ಟಿಯು ಹೇಗಿರಬೇಕೆಂದರೆ, ಮೊದಲು ಸುತ್ತುಮುತ್ತಲಿನ ಹಳ್ಳಿ, ಆ ಮೇಲೆ ಜಿಲ್ಹೆ, ನಂತರ ಪ್ರಾಂತ. ಈ ರೀತಿ ಕಾರ್ಯ ನಡೆದರೆ ಚರಕ ಸಂಘವು ಕೇವಲ ಧ್ಯೇಯ ಧೋರಣ ಮಾರ್ಗದರ್ಶಕ ಸಂಸ್ಥೆಯಾಗಿರುವದರಲ್ಲಿ ಸಂತುಷ್ಟತೆ ಹೊಂದಬೇಕಾಗುವದು. ನಮಗೆ ಎಲ್ಲ ಲಂಪಟದಲ್ಲಿ ತೊಡಕುವದು ಬೇಕಾಗಿಲ್ಲ. ನಮ್ಮ ಹತ್ತಿರ ಮೂರುಸಾವಿರ ಕಾರ್ಯಕರ್ತರಿರುವರು. ಹಲವು ಮಾರಾಟದ ಅಂಗಡಿ ಮುಂತಾದವೂ ಇರುವವು. ಅವುಗಳನ್ನು ಇಂದೇ ಸುಟ್ಟು ಬೂದಿ ಮಾಡತಕ್ಕದ್ದಿರುವದಿಲ್ಲ.

ಆದರೆ ನಮ್ಮ ಮನಸ್ಸಿನ ಒಲವು ಹೇಗಿರಬೇಕೆಂಬದನ್ನು ನಾನು ಹೇಳಹತ್ತಿರುವೆನು.

ಕಾರ್ಯಕ್ಷೇತ್ರದ ವ್ಯಾಪ್ತಿ: —

ಜಾಜೂಜಿ:—ಕಾರ್ಯಕರ್ತನು ತನ್ನ ಕಾರ್ಯ ಕ್ಷೇತ್ರವನ್ನು ಐದು ಮೈಲು ತ್ರಿಜ್ಯದ ವರೆಗೆ ಇಟ್ಟುಕೊಳ್ಳಬಹುದಲ್ಲವೇ?

ಬಾಪೂಜಿ:—ಅಹುದು. ಹಲವೆಡೆಯಲ್ಲಿ ಇದಕ್ಕೂ ಕಡಮೆ ಇರಬಹುದು. ಹೇಗೆಂದರೆ ಬಂಗಾಲ ಬಿಹಾರಗಳಲ್ಲಿ ಐದುಮೈಲು ತ್ರಿಜ್ಯದಲ್ಲಿಯೇ ಎಷ್ಟೋ ಹಳ್ಳಿಗಳು ಬರುವವು.

ಜಾಜೂಜಿ:—ಕಾರ್ಯಕರ್ತನು ಮುಂಜಾವಿನಲ್ಲೆದ್ದು ತನ್ನ ಸ್ಥಳದಿಂದ ಹೊರಟು ಸಂಜೆಯವರೆಗೆ ತಿರುಗಾಡಿ ತಿರುಗಿ ಬರುವಂತೆ ಕ್ಷೇತ್ರಮರ್ಯಾದೆಯನ್ನಿಟ್ಟುಕೊಳ್ಳಬಹುದಲ್ಲವೇ?

ಬಾಪೂಜಿ:—ಅಹುದು. ಆಗಬಹುದು.

ಜಾಜೂಜಿ:—ಚರಕ ಸಂಘವು ಇದನ್ನು ಮೊದಲು ಮಾಡಬಹುದೇ?

ಬಾಪೂಜಿ:—ಅವಶ್ಯವಾಗಿ. ಯಾಕಂದರೆ ಚರಕ ಸಂಘವು ಸೂರ್ಯನಂತಿದೆ. ಮಿಕ್ಕ ಉದ್ಯೋಗಗಳು ಗ್ರಹಗಳಂತೆ. ಸೂರ್ಯನ ಗತಿಯು ಸರಿಯಾಗಿದ್ದರೆ ಮಾತ್ರ ಮಿಕ್ಕ ಗ್ರಹಗಳು ಗತಿಸುವವು. ಇಂದು ನಮ್ಮ ಗ್ರಾಮೋದ್ಯೋಗಗಳ ಸ್ಥಿತಿಯು ಧೂಮಕೇತುವಿನಂತಿದೆ.

ಕಾರ್ಯಕರ್ತರ ಕೆಲಸದ ಮರ್ಯಾದೆ.

ಜಾಜೂಜಿ:—ಅಸ್ಪೃಶ್ಯತಾ ನಿವಾರಣೆಯ ಕಾರ್ಯದಲ್ಲಿ ಒಮ್ಮೊಮ್ಮೆ ಬಹಳ ಗೊಂದಲಗಳೇಳುತ್ತವೆ. ಆ ಗೊಂದಲಗಳಲ್ಲಿ ನಮ್ಮ ಕಾರ್ಯಕರ್ತನು ಎಷ್ಟರಮಟ್ಟಿಗೆ ಸಿಲುಕಬಹುದು?

ಬಾಪೂಜಿ:—ಕಾರ್ಯಕ್ಕೆ ತಡೆಯುಂಟಾಗುವಂತಹ ಗೊಂದಲದಲ್ಲಿ ಕಾರ್ಯಕರ್ತನು ಬೀಳತಕ್ಕದ್ದಲ್ಲ. ಆದರೆ ಕಾರ್ಯಕರ್ತನು ತನ್ನ ಸ್ವಂತ ಜೀವನದಲ್ಲಿ ಅಸ್ಪೃಶ್ಯತೆಗೆ ರವಷ್ಟಾದರೂ ಇಂಬು ಕೊಡಕೂಡದು. ಹರಿಜನರು ತುಂಬುವ ಬಾವಿಯಲ್ಲಿಯೇ ಗ್ರಾಮಸೇವಕನು ನೀರು ತುಂಬಬೇಕು. ಅವರ ಬಾವಿಯನ್ನು ಸ್ವಚ್ಛ ಮಾಡುವದು ಅದರ ಕಟ್ಟಡ ಕಾಲುವೆ ಮುಂತಾದ್ದನ್ನು ಸರಿಪಡಿಸುವದು ಇತ್ಯಾದಿ ಮಾಡುವನು.

ಜಾಜೂಜೀ:—ಎರಡನೆಯ ಮಾತೆಂದರೆ ರಾಜನೈತಿಕದ ಬಗ್ಗೆ ನಾನು ಒಂದು ಸ್ಥಳದಲ್ಲಿ ಕೆಲಸ ಮಾಡುತ್ತಿರುವೆನೆಂದು ತಿಳಿಯಿರಿ; ನನ್ನ ಕಣ್ಣೆದುರು ಹಲ್ಲೆ ನಡೆಯುತ್ತಿದೆ; ಅಲ್ಲಿಗೆ ಹೋಗಲು ಬರಲು ನಮ್ಮನ್ನು ಪ್ರತಿಬಂಧಿಸಲಾಗಿದೆ; ಇಂಥ ಪ್ರಸಂಗದಲ್ಲಿ ನಾನು ಸವಿನಯ ಕಾಯದೆಭಂಗ ಮಾಡಬಹುದೋ? ಆದರೆ ಅನ್ಯ ರಾಜನೈತಿಕ ವ್ಯವಹಾರದಲ್ಲಿ ಬಹುಶಃ ನಾವು ಅಲಿಪ್ತರಾಗಿರಬೇಕಾಗುವದು. ಇನ್ನು ಸಾಮೂಹಿಕ ಶಾಸನ ಭಂಗದ ಆಂದೋಲನವು ನಡೆದ ಸಮಯದಲ್ಲಿ ಕಾರ್ಯಕರ್ತರು ಅಲಿಪ್ತರಾಗಿ ಉಳಿಯಲಾರರು. ಇಂಥ ವೇಳೆಯಲ್ಲಿ ಏನು ಮಾಡತಕ್ಕದ್ದು?

ಬಾಪೂಜೀ:—ಸಾಮೂಹಿಕ ಕಾಯದೆ ಭಂಗವು ನಡೆದಾಗ್ಗೆ ಒಂದು ತರದ ಅರಾಜಕತೆಯೇ ಪಸರಿಸುತ್ತಿರುವದು. ಎಲ್ಲರೂ ತಮ್ಮ ತಮ್ಮ ಮುಂದಾಳುಗಳು ತಾವೇ ಆಗುವರು. ಯುದ್ಧದ ಭಾಷೆಯೇ ನಡೆಯಹತ್ತುವದು. ಆದರೂ ಆಗ್ಗೆ ಸವಿನಯ ಶಾಸನ ಭಂಗದ ಪುರಸ್ಕರ್ತನ ಆಜ್ಞೆಯನ್ನು ಎಲ್ಲರೂ ಪಾಲಿಸಬೇಕಾಗುವದು. ಸಾಮೂಹಿಕ ಕಾಯದೆ, ಭಂಗದಲ್ಲಿಯಂತೂ ಅದರಿಂದ ಅಲಿಪ್ತರಾಗಿ ಯಾರೂ ಉಳಿಯಲಾರರು. ಆದರೆ ಅಂಥ ಪ್ರಸಂಗದಲ್ಲಿಯಾದರೂ ಚರಕ ಸಂಘದ ಪ್ರಮುಖನಿಗೆ ಕಾರ್ಯಕರ್ತನು

ತನ್ನ ಪರಿಸ್ಥಿತಿಯ ನಿವೇದನೆ ಮಾಡುವನು. ಪ್ರಮುಖನಾದರೂ ಪರಿಸ್ಥಿತಿಯನ್ನು ಚೆನ್ನಾಗಿ ಪರಿಶೀಲಿಸಿ ತನ್ನ ನಿರ್ಣಯ ಕೊಡುವನು. ಈ ತರದ ಸಾಮೂಹಿಕ ಶಾಸನ ಭಂಗವು ಸದ್ಯಕ್ಕೆ ನನ್ನ ದೃಷ್ಟಿಪಥದಲ್ಲಿರುವದಿಲ್ಲ.

ನಾಲ್ಕನೆಯ ದಿನ, ಬುಧವಾರ ತಾ ೧೧-೧೦-೧೯೪೪

ವಿಕೇಂದ್ರೀಕರಣ

ಜಾಜೂಜಿ:— ತಮ್ಮ ವಿಕೇಂದ್ರೀಕರಣದ ತಥ್ಯಾಂಶವು ನನಗೆ ಇನ್ನೂ ಚೆನ್ನಾಗಿ ಹೊಳೆಯಲೊಲ್ಲದು. ದಯವಿಟ್ಟು ತಿಳಿಸಬೇಕು.

ಬಾಪೂಜಿಃ— ನನ್ನ ದೃಷ್ಟಿಕೋನವು ಹೀಗಿದೆ. ಸ್ವಾತಂತ್ರ್ಯವನ್ನಪೇಕ್ಷಿಸುವ ಪ್ರಾಂತಗಳಿಗೆ ಸ್ವಾತಂತ್ರ್ಯ ಕೊಟ್ಟುಬಿಡತಕ್ಕದ್ದು. ಅವರು ಹೀಗನ್ನಬಹುದು; ಧ್ಯೇಯ ಧೋರಣೆಯ ಮಾರ್ಗದರ್ಶನವು ನಿಮ್ಮದೇ ಇರಲೊಲ್ಲದೇಕೆ. ನಾವು ನಮ್ಮ ಯೋಗ್ಯತೆಗೆ ತಕ್ಕಂತೆ ಕಾರ್ಯತತ್ಪರರಾಗುವೆವು. ಉಳಿದ ಯಾವತ್ತೂ ಕಾರ್ಯಕಲಾಪವನ್ನು ನಮ್ಮ ಅಭಿಪ್ರಾಯದಂತೆಯೇ ಮತ್ತು ನಮ್ಮ ಹೊಣೆಯಿಂದಲೇ ಮಾಡುವೆವು. ಹೀಗಾದರೆ ನನಗೆ ಆನಂದವೆನಿಸುವದು. ಅವರು ನನ್ನ ಧ್ಯೇಯ ಧೋರಣೆಯಂತೆ ವರ್ತಿಸುತ್ತಿದ್ದರೆ ಸ್ವತಃ ಸಚ್ಚರಿತ್ರರಾಗಿದ್ದರೆ, ವಿಶ್ವಾಸಪೂರ್ವಕ ಸ್ವಚ್ಛ, ಹಾಗೂ ಪ್ರಾಮಾಣಿಕ ಪ್ರಯೋಗವನ್ನು ಸಾಗಿಸುವ ಮಾರ್ಗದಲ್ಲಿ ಸಂಕಟಗಳನ್ನು ಸಹನ ಮಾಡಿದ್ದರೆ ಸಂಪೂರ್ಣ ಸ್ವಾಯತ್ತತೆಯಿಂದ ಕಾರ್ಯಮಾಡಲು ಅವರಿಗೆ ಅಪ್ಪಣೆ ಕೊಡುವೆನು. ಆಯಿತು ನನ್ನ ಶರ್ತು ಇಷ್ಟೇ. ಅವರು ಹುಟ್ಟಿಸುವ ಖಾದಿಯನ್ನೆಲ್ಲ ಸುತ್ತುಮುತ್ತಲಿನ ಹಳ್ಳಿಗಳಲ್ಲಿ ತಮ್ಮ ತಾಲೂಕದಲ್ಲಿ, ತಮ್ಮ ಜಿಲ್ಹೆಯಲ್ಲಿ ಕೊನೆಗೆ ತಮ್ಮ ಪ್ರಾಂತದಲ್ಲಿ ಮಾರತಕ್ಕದ್ದೆಂಬದಿಷ್ಟೇ ನನ್ನ ಶರ್ತು

ಉಳಿಯುವದು. ಚಿಕಾಕೋಲದವರಂತೆ ಆದುದನ್ನೆಲ್ಲ ಮುಂಬೈ ಸಲುವಾಗಿ ಹುಟ್ಟಿಸುವದು ತಾವು ಸ್ವಂತಮನೆಯಲ್ಲಿ ಉಡುವಂತೇಯೇ ಇಲ್ಲ. ಹೀಗೆ ನನ್ನ ಅಭಿಪ್ರಾಯವಿಲ್ಲ.

ಜಾಜೂಜಿ:— ಚಿಕಾಕೋಲದ್ದೊಂದು ವಿಶಿಷ್ಟತೆಯದೆ. ಆದೊಂದು ಇಡೀ ದೇಶಕ್ಕೆ ಜಿನುಗು ಖಾದಿಯನ್ನು ಪೂರೈಸುವ ಉತ್ಪತ್ತಿ ಕೇಂದ್ರವಾಗಿರುವದು.

ಬಾಪೂಜಿಃ— ಸರಿ. ಇಂಥ ಪ್ರಸಂಗದಲ್ಲಿಯೂ, ಉತ್ಪತ್ತಿಯನ್ನು ಮಾಡುವವರಿಗೆ ಮಾಡಿಸುವವರಿಗೆ ಹಾಗೂ ಅದನ್ನು ಮಾರಾಟ ಮಾಡುವವರಿಗೆ ನಾನು ಈ ರೀತಿ ಹೇಳುವೆನು: ಅಲ್ಲಿಯ ಕಾರ್ಯವನ್ನು ನಡಿಸತಕ್ಕದ್ದೇ ಆದರೆ ನಿರಾತಂಕವಾಗಿ ನಡಿಸಿರಿ. ಆದರೆ ಅಲ್ಲಿಯ ಕೆಸಗಾರರು ಎಂದೂ ಖಾದಿಯನ್ನು ಮುಟ್ಟದೆ ಗಿರಣಿಯ ಬಟ್ಟೆಯನ್ನೇ ತೊಡುತ್ತ ಕೇವಲ ಮುಂಬೈಯ ಸಲುವಾಗಿಯೇ ಖಾದಿಯನ್ನು ತಯಾರಿಸುತ್ತಿದ್ದರೆ ಸಂಘದ ಮುಖಾಂತರ ಅಲ್ಲಿಯ ಕೇಂದ್ರವು ನಡೆಯಲಾರದು ನಾನು ಅದನ್ನು ಬಂದು ಮಾಡುವೆನು. ನನ್ನಲ್ಲಿ ಅಷ್ಟೊಂದು ನಿಷ್ಠುರತೆ ಅದೆ.

ನಮ್ಮ ಅರ್ಥಶಾಸ್ತ್ರ.

ಜಾಜೂಜಿಃ— ಕೆಲಸಗಾರರ ಕೂಲಿಯ ಹಣದಲ್ಲಿ ಕೆಲ ವಂಶವನ್ನು ಮುರಿದುಕೊಂಡು ಅದರಲ್ಲಿ ನಾವು ಅವರಿಗೆ ಖಾದಿಯನ್ನೇನೋ ಕೊಡುತ್ತಿರುವೆವು. ಆದರೆ ಅದರಲ್ಲಿ ಒಂದುಬಗೆಯ ಒತ್ತಾಯವಿದೆ. ಅವರು ಸ್ವೇಚ್ಛೆಯಿಂದ ಖಾದಿಯನ್ನು ಧರಿಸುತ್ತಿರುವದಿಲ್ಲ.

ಬಾಪೂಜಿ:— ಇಷ್ಟರಿಂದಾದರೂ ನಾನು ತುಷ್ಟನಾಗುವೆನು. ಆದರೆ ಅದು ಕೆಲಕಾಲದವಮಟ್ಟಿಗೆ ಮಾತ್ರ. ಜನರು ಕೂಡಲೇ

ಅಹಿಂಸೆಯನ್ನು ಸ್ವೀಕರಿಸಿ ಖಾದಿಯನ್ನು ಧರಿಸಹೆತ್ತುವರೆಂದು ನನ್ನ ಅಂಬೋಣವಿಲ್ಲ. ನಿಜವಾದ ಅರ್ಥಶಾಸ್ತ್ರದ ದೃಷ್ಟಿಯನ್ನು ನಾವು ಅವರಿಗೆ ತೋರಿಸಿಕೊಡಲು ಶಕ್ತರಾದರೆ ಕೊನೆಗೆ ಅವರು ಅಹಿಂಸೆಯನ್ನೂ ಅರಿಯುವರು. ಅರ್ಥ-ಸಂಪತ್ತಿಯೊಂದಿಗೆ ಶುದ್ಧ ನೀತಿಯು ಒಂದುಗೂಡಿರದಿದ್ದರೆ ಅದು ಶುದ್ಧವಾದ ಅರ್ಥವೆಂದೆನಿಸದು. ನಮ್ಮ ಕಾರ್ಯಕರ್ತರು ಶುದ್ಧ ಅಹಿಂಸೆ ಹಾಗೂ ನೀತಿಯಿಂದ ಪ್ರೇರಿತರಾಗಿ ಕೆಲಸ ಮಾಡುವವರಾದರೆ ನಿಜವಾದ ಅರ್ಥದೃಷ್ಟಿಯು ಜನರಲ್ಲಿ ತಲೆದೋರುವದು. ನಮ್ಮ ನಡತೆ ತೀರ ಶುದ್ಧವಾಗಿ ನಮ್ಮಿಂದ ಜನರ ಶೋಷಣೆಯಾಗದಿದ್ದರೆ ಮಾತ್ರ ಇದು ಸಾಧ್ಯವಾಗುವದು. ಕೂಲಿಕಾರರನ್ನು ಕಷ್ಟದಲ್ಲಿದ್ದಾಗ್ಯೂ ಅವರಿಗೆ ಯೋಗ್ಯ ಕೂಲಿಯನ್ನು ಕೊಡದಿದ್ದಾಗ್ಯೂ, ಅವರ ಸುಖ ದುಃಖಗಳಲ್ಲಿ ಸಮಭಾಗಿಗಳಾಗದಿದ್ದಾಗ್ಯೂ, ಅವರು ಸೆರೆಗುಡುಕರಾದರೂ ಅವರ ಕಡೆಗೆ ಲಕ್ಷ ಕೊಡದಿದ್ದಾಗ್ಯೂ ನಾವು ಹಿಂದುಸ್ತಾನಕ್ಕೆ ಖಾದಿಯನ್ನು ತೊಡಿಸಲು ಪ್ರಯತ್ನ ಮಾಡುವದು ಈ ಮಾತಿನ ಅರ್ಥವಲ್ಲ. ಈ ರೀತಿಯಿಂದ ಹಿಂದುಸ್ಥಾನದ ಕಲ್ಯಾಣ ಮಾಡುವದಕ್ಕಿಂತ ಖಾದಿಯನ್ನು ಸುಟ್ಟುಬಿಡುವದೇ ಲೇಸು. ನಾನು ಕುಡುಕರನ್ನೂ ಸಹನಮಾಡಿಕೊಳ್ಳುವೆನು. ಅವರಿಗೂ ಕೆಲಸ ಕೊಡುವೆನು. ಅವರನ್ನು ದಬ್ಬುವದಿಲ್ಲ. ಹಾಗೂ ಅವರೊಡನೆ ಗೆಳೆತನ ಮಾಡುವೆನು. ಅವರಿಗೆ ದಿನಾಲು ತಿಳಿಹೇಳುವೆನು.

ಇದನ್ನೆಲ್ಲ ಮಾಡದೆ ಬರೀ ಖಾದೀ ಕಾರ್ಯವನ್ನು ನಾನು ಮಾಡೆನು.

ಚಿಕಾಕೋಲದ ಖಾದಿಯನ್ನು ಎಲ್ಲರೂ ಕೊಳ್ಳುತ್ತಿರುವರು. ಹಾಗೂ ದೂರದೂರದ ಪ್ರಾಂತಗಳ ಮಾರಾಟದಲ್ಲಿ ಇದರಭಾಗವು ಇರುತ್ತದೆಂಬದನ್ನೂ ನಾನು ಬಲ್ಲೆನು. ಆದರೆ ಅದು ನನಗೆ ಚುಚ್ಚುತ್ತಿರುವದು. ಯಾವುದೊಂದು ಪ್ರಾಂತ, ಜಿಲ್ಹೆ, ತಾಲೂಕು ಹಳ್ಳಿ

ಅಥವಾ ಇವುಗಳಲ್ಲಿ ಎಲ್ಲಿಯಾದರೂ ಹೊಸ ಪದ್ಧತಿಯಂತೆ ಖಾದೀ ಕಾರ್ಯ ಮಾಡುವವರಲ್ಲಿ ಸಾರ್ಥಕತೆಯನ್ನು ಬಯಸುತ್ತಿದ್ದರೆ ಈ ವಿಧಾನದಂತೆ ನಡೆಯಬೇಕಾಗುವದು. ಒಂದು ಜಿಲ್ಹೆಯು ಇನ್ನೊಂದು ಜಿಲ್ಹೆಯಲ್ಲಿ ಅತಿಕ್ರಮಣ ಮಾಡಿ ಅದರೊಂದಿಗೆ ಸ್ಪರ್ಧೆ ಮಾಡ ಬೇಕು ಎಂಬೀ ಧೋರಣೆಯು ನಮ್ಮದಿಲ್ಲವೇ ಇಲ್ಲ. ಎಲ್ಲ ಜಿಲ್ಹೆಗಳು ತಮ್ಮ ತಮ್ಮ ಆವಶ್ಯಕತೆಗಳನ್ನು ಪೂರೈಸಿಕೊಳ್ಳತಕ್ಕದ್ದು. ಹೀಗಾದರೆ ಮಾರಾಟದ ತೊಡಕಿನಿಂದ ನಾವು ಪಾರಾಗುವೆವು. ಈ ಹೊಸ ನೀತಿಯನ್ನು ವ್ಯವಹಾರರಂಗಕ್ಕಿಳಿಸುವದರಿಂದ ಸದ್ಯದ ಪರಿಸ್ಥಿತಿಯಲ್ಲಿ ನಮ್ಮ ಅಸ್ತಿತ್ವವೇ ಇಲ್ಲದಂತಾಗಬಹುದು. ಆದರೆ ಮುಂದೆ ಈ ಕಾರ್ಯವು ಪ್ರಗತಿಹೊಂದುತ್ತ ಹೋಗುವದು. ಲೆಕ್ಕ ಹಾಕಿ ತೋರಿಸಲು ನನ್ನಿಂದಾಗದು. ಇದಲ್ಲದೆ ಇನ್ನೂ ನನಗೆ ಇದರ ಲೆಕ್ಕವು ದೊರೆತಿಲ್ಲ. ನೀವು ಅದನ್ನು ನನಗೆ ತಿಳಿಸಬಲ್ಲಿರಿ. ಆದರೆ ಅಹಿಂಸೆಯ ಪ್ರತಿಷ್ಠೆಯನ್ನು ಖಾದಿಯಿಂದಲೇ ಮಾಡುವ ದಿದೆಯಾದರೆ ಅದನ್ನು ಮಾಡುವದಾದರೂ ಹೀಗೆಯೇ ಎಂಬದನ್ನು ಮಾತ್ರ ನಾನು ಬಲ್ಲೆನು.

ಬೇರೆಬೇರೆ ವಿಶ್ವಸ್ತ-ಮಂಡಲಗಳ ರಚನೆ:—

ಜಾಜೂಜಿ:— ಈ ಸಲುವಾಗಿ ಪ್ರಾಂತಗಳಲ್ಲಿ ಬೇರೆಬೇರೆ ವಿಶ್ವಸ್ತಮಂಡಲಗಳನ್ನು ರಚಿಸಿ ಸಂಘದ ಕಾರ್ಯವನ್ನು ಅವರ ವಶಕ್ಕೆ ಒಪ್ಪಿಸಬೇಕಾಗಬಹುದೇ?

ಬಾಪೂಜಿ:— ನಿಶ್ಚಯವಾಗಿ ಏನು ಮಾಡಬೇಕಾಗಬಹು ದೆಂಬುದು ನನಗೆ ಇನ್ನೂ ಹೊಳೆದಿಲ್ಲ. ಆದರೆ ನನ್ನ ಮನಸ್ಸಿ ನಲ್ಲಿದ್ದಂತೆ ವಿಕೇಂದ್ರೀಕರಣವನ್ನು ನಾವು ಸಾಧಿಸುವದಾದರೆ ಎಲ್ಲ ಆಡಳತೆಯ ವ್ಯವಹಾರವು ಈಗಿನಂತೆ ಕೇಂದ್ರಿತವಾಗಿ ನಡೆ ಯಕೂಡದೆಂಬುದು ಮಾತ್ರ ನನಗೆ ತಿಳಿದಿದೆ. ಇಂದು ನಮ್ಮ

ಯಂತ್ರವು ತಲೆಭಾರವಾಗಿದೆ. ಹೀಗಾಗದೆ ಮತ್ತೇನಾದೀತು? ಮೊದಲಿನಿಂದಲೇ ಅರಿತುಕೊಂಡು ಹೀಗೆಯೇ ಸಾಗತಕ್ಕದ್ದು, ಅನ್ಯ ರೀತಿಯಿಂದಲ್ಲ ಎಂದು ನಾನು ಒಂದುವೇಳೆ ಆಗ್ರಹ ತೊಟ್ಟದ್ದರೆ ಮತ್ತೇನಾದರೂ ಆಗುತ್ತಿದ್ದಿತು. ಇದೆಲ್ಲ ಸರಿಯಾದ ದಿಶೆಯಲ್ಲಿ ಸಾಗಿಲ್ಲೆಂಬ ಮಾತು ನನ್ನ ಬುದ್ಧಿಗೆ ಏನೂ ತೋಚಿರಲಿಲ್ಲವೆಂತಲ್ಲ. ಆದರೆ ನಾನಾದರೂ ಸ್ವಲ್ಪ ಕೆಲಸಮಾಡಿತೋರಿಸುವ ಹವ್ಯಾಸಕ್ಕೆ ಬಿದ್ದು ಯಾವದೇ ರೀತಿಯಿಂದಾಗಲಿ ಕೆಲಸವು ಹೆಚ್ಚಿದರಾಯಿತೆಂದು ಮುಂದುವರಿಯಗೊಟ್ಟೆನು. ಇದರಿಂದಲೇ ಕೇಂದ್ರೀಯ ಮಂಡಲವು ರಚಿತವಾಯಿತು.

ಜಾಜೂಜಿಃ— ಇನ್ನು ಯಾವದಾದರೊಂದು ಪದ್ಧತಿಯ ಬಗ್ಗೆ ಆಲೋಚನೆ ಮಾಡಬೇಕಾಗುವದು. ಪ್ರಾಂತಗಳಲ್ಲಿಯ ಕಾರ್ಯವನ್ನು ಎರಡನೆಯವರ ವಶಕ್ಕೆ ಒಪ್ಪಿಸುವದಾದರೆ ರಜಿಸ್ಟರ್ಡ ಸೊಸಾಯಿಟಿಗಳನ್ನುಂಟುಮಾಡಬೇಕಾಗುವದು ಹಾಗೂ ಪ್ರತಿಯೊಂದು ಸೊಸಾಯಿಟಿಯಲ್ಲಿ ಕನಿಷ್ಟ ಏಳು ಜನ ವಿಶ್ವಸ್ತರು ಇರಬೇಕಾಗುವದು.

ಕೇವಲ ಮಾರಾಟದ ವಿಕೇಂದ್ರೀಕರಣದಲ್ಲಿಯ ತೊಂದರೆಗಳುಃ—

ತಾವು ಅಪ್ಪಣೆ ಕೊಟ್ಟರೆ ಮಾರಾಟದ ವಿಕೇಂದ್ರೀಕರಣವನ್ನು ಕೂಡಲೆ ಮಾಡಿಬಿಡುವೆನು. ಇಂದು ಖಾದೀ ಉದ್ಯಮದಲ್ಲಿ ಇಷ್ಟು ಲಾಭವಿದೆಯಲ್ಲ, ಇಷ್ಟು ಹೆಚ್ಚಿನ ಅವಕಾಶವಿದೆಯಲ್ಲ ಆದಕ್ಕಾಗಿ ವ್ಯಾಪಾರಸ್ಥರು ಮುಕರುತ್ತಿದ್ದಾರೆ. ನಮಗೆ ಈ ಭಾಂಡಾರವನ್ನೊಪ್ಪಿಸಿರಿ, ಆ ಭಾಂಡಾರವನ್ನು ಕೊಡಿರಿ ಎಂದು ಅನೇಕರಿಂದ ನನಗೆ ಪತ್ರಗಳು ಬಂದಿವೆ. ಆದರೆ ಮುಂಬರುವ ವಿಕೇಂದ್ರೀಕರಣದ ನಿಜಸ್ವರೂಪದ ಚಿತ್ರವು ನನ್ನ ಕಣ್ಣೆದುರು ಬಂದಿಲ್ಲ.

ಆದ್ದರಿಂದ ಈಗ ಏನು ಮಾಡಬೇಕೆಂಬದು ಚನ್ನಾಗಿ ತಿಳಿಯು ಲೊಲ್ಲದು. ಯಾವನೊಬ್ಬ ವ್ಯಕ್ತಿಗಾಗಲೀ, ಯಾವುದೊಂದು ಮಂಡಲಕ್ಕಾಗಲೀ ನಾವು ಖಾದೀ ಕಾರ್ಯವನ್ನು ಒಪ್ಪಿಸುವದಾದರೆ ಈ ಮೂರು ಮಾತುಗಳನ್ನು ಲಕ್ಷಿಸಬೇಕಾಗುವದು. (೧) ಖಾದಿಯ ಶುದ್ಧತೆ (೨) ಜೀವನ ವೇತನ ಹಾಗೂ (೩) ಲಾಭ-ಬಡಕತನದ ಅಭಾವ. ಈ ಮೂರು ಮಾತುಗಳ ಬಗ್ಗೆ ನಾವು ಎಚ್ಚರಪಡದಿದ್ದರೆ ಎಲ್ಲವೂ ಅಸ್ತವ್ಯಸ್ತವಾಗುವದು. ಮಾಡತಕ್ಕುದನ್ನೆಲ್ಲ ನಾವು ಬಹು ಎಚ್ಚರದಿಂದ ಮಾಡಬೇಕಾಗಿದೆ. ಸಂಘದ ಕೆಲಸದ ಉದಾಹರಣೆಯನ್ನೇ ನೀವು ತೆಗೆದುಕೊಳ್ಳಿರಿ. ಕೂಲಿಯ ದರವನ್ನು ಹೆಚ್ಚಿಸುವ ಹಾಗೂ ಕೆಲಸಗಾರರಿಗೆ ಯಾವ ತರದಿಂದಲೂ ಹಾನಿತಟ್ಟದಂತೆ ನೋಡಿಕೊಳ್ಳುವ ಕುರಿತು ದಕ್ಷತೆ ವಹಿಸಲು ನಾವು ಆಗಾಗ್ಗೆ ಪರಿಪತ್ರಗಳ ಮೂಲಕ ಎಚ್ಚರಿಕೆ ಕೊಡುತ್ತಿರುವೆವು. ಹೀಗಿದ್ದರೂ ನೂಲಿನ ನಂಬರು ತೆಗೆಯುವದು, ಲೆಕ್ಕದಲ್ಲಿ ಅತ್ತಿತ್ತ ಕಾಸೆರಡುಕಾಸುಗಳನ್ನು ಕೂಡಿಸಿಕೊಳ್ಳುವದು ಇಂಥ ಸಣ್ಣಪುಟ್ಟ ಮಾತುಗಳ ಬಗ್ಗೆಯೂ ಕೂಡಾ ಪ್ರತಿಯೊಂದು ಕೇಂದ್ರದಲ್ಲಿಯ ಪ್ರತಿಯೊಬ್ಬ ಕಾರ್ಯಕರ್ತನನ್ನು ನಿಯಂತ್ರಿಸುವದು ಅಸಂಭವವೇ ಆಗುತ್ತಿರುವದು. ಹೀಗೆ ಮಾಡುವದರಲ್ಲಿ ಕಾರ್ಯಕರ್ತನ ಸ್ವಾರ್ಥವೇನೂ ಇರುವದಿಲ್ಲೆಂಬದು ಇಲ್ಲಿ ಲಕ್ಷದಲ್ಲಿಡತಕ್ಕ ಸಂಗತಿಯಾಗಿದೆ. ಒಂದೆಡೆ ಖಾದೀ ಬೆಲೆಯ ವಿಷಯದಲ್ಲಿ ಗ್ರಾಹಕರ ಉಚ್ಚ ಭಾವನೆಗಳನ್ನು ಜಾಗ್ರತಗೊಳಿಸಿ ಅವರ ಬಾಯಿ ಕಟ್ಟುವೆವು. ಇನ್ನೊಂದೆಡೆ ಕಸಬುದಾರರಿಗೆ ಕಡಿಮೆ ಕೂಲಿ ಸಲ್ಲಿಸುವೆವು.

ಇದಂತೂ ಚರಕಸಂಘದ ಪ್ರತ್ಯಕ್ಷ ನಿಯಂತ್ರಣದಲ್ಲಿ ನಡೆಯುತ್ತಿರುವ ಕೇಂದ್ರಗಳ ಹಾಗೂ ಕಾರ್ಯಕರ್ತರ ವ್ಯವಹಾರದ

ಮಾತಾಯಿತು. ಇಂಥ ಪರಿಸ್ಥಿತಿಯಲ್ಲಿ ನಾವು ವಿಕೇಂದ್ರೀಕರಣ ಮಾಡಹೊರಟರೆ ಹಾಗೂ ನಿಯಂತ್ರಣವು ಬಹುಮಟ್ಟಿಗೆ ಸಡಿಲಾದರೆ ಅಥವಾ ಇಲ್ಲವೇ ಆದರೆ ಪ್ರಮಾಣಿತ ವ್ಯಾಪಾರಸ್ಥರು ಖಾದೀ ಕ್ಷೇತ್ರದಲ್ಲೆಲ್ಲ ಅದೆಷ್ಟು ಗೊಂದಲ ಮಾಡುವರೆಂಬದನ್ನು ಹೇಳಲಸದಳ. ವ್ಯಕ್ತಿಗಳೇನು, ಸಂಸ್ಥೆಗಳೇನು, ಈಗ ಖಾದೀ ಮಾರಾಟ ಮಾಡುವ ಕಾರ್ಯ ಕೈಕೊಂಡವರಲ್ಲಿಯೇ ಸಾಕಷ್ಟು ಸ್ಪರ್ಧೆಯಿದೆ. ಸಂಸ್ಥೆಯವರೂ ಸಾಕಷ್ಟು ಲಾಭ ಪಡೆಯುತ್ತಿರುವರು. ಈ ಸಂದರ್ಭದಲ್ಲಿ ಚರಕ ಸಂಘವು ಮಾರಾಟದ ಕಾರ್ಯದಿಂದ ಮೈತೆಗೆಯುವದಾದರೆ ಅದನ್ನು ಯಾರಿಗೆ ಒಪ್ಪಿಸಬೇಕು? ಯಾವ ಶರ್ತುಗಳನ್ನು ಹಾಕಬೇಕು? ಮರ್ಯಾದೆ ಎಷ್ಟರ ವರೆಗಿರಬೇಕು? ಇದೊಂದು ತೊಡಕಿನ ಒಗಟೇ ಆಗಿರುವದು. ಇನ್ನು ತಮ್ಮ ತಮ್ಮ ಆಂತರಿಕ ವ್ಯವಸ್ಥೆಯನ್ನು ತಾವೇ ಮಾಡಿಕೊಳ್ಳುವ ಹೊಣೆಯನ್ನು ಪ್ರಾಂತಗಳಿಗೇ ಒಪ್ಪಿಸಬೇಕೆಂದರೆ ಅವುಗಳಲ್ಲಿಯೂ ಖಾದೀ ವಿಷಯಕ ಸಮ್ಯಗ್ದೃಷ್ಟಿಯುಳ್ಳ ಕಾರ್ಯಕರ್ತರು ಇರುವರೆಂತಲೂ ಅಲ್ಲ.

ಬಾಪೂಜಿಃ— ಇದಕ್ಕೆ ತ್ರೋಟಕವೇನೂ ದೊರೆಯಲಾರದೇ?

ಜಾಜೂಜಿಃ—ಸ್ವಲ್ಪ ಪ್ರಾಂತಗಳಲ್ಲಿ ಈ ಪ್ರಾಂತೀಯ ಸ್ವಾತಂತ್ರ್ಯದ ಸಮಸ್ಯೆಯು ಒಂದು ವೇಳೆ ಅಷ್ಟು ಕಠಿಣವಾಗಲಿಕ್ಕಿಲ್ಲ. ಆದರೆ ಬಹಳ ಪ್ರಾಂತಗಳಲ್ಲಿ ನಿಜವಾಗಿಯೂ ಕಠಿಣವಾಗುವದು. ಸದ್ಯದ ಪರಿಸ್ಥಿತಿಯಲ್ಲಿ ವಿಕೇಂದ್ರೀಕರಣದ ನೀತಿಯ ವ್ಯಾಪ್ತಿಯನ್ನು ಪ್ರಾಂತದವರೆಗೆ ಒಯ್ಯದೆ ಜಿಲ್ಹೆಯ ಮಟ್ಟಿಗೆ ಮರ್ಯಾದಿತ ಗೊಳಿಸುವದು ಒಂದುವೇಳೆ ಹೆಚ್ಚು ಉಚಿತವಾಗುವದು. ಇಂದೇ ಸಂಪೂರ್ಣ ಪರಿವರ್ತನವನ್ನು ಒಮ್ಮೆಲೆ ಮಾಡಕೂಡದು.

ಉತ್ಪತ್ತಿಯ ವಿಕೇಂದ್ರೀಕರಣ:

ಬಾಪೂಜಿ:—ಸದ್ಯಕ್ಕೆ ವಿಕೇಂದ್ರೀಕರಣವು ಉತ್ಪತ್ತಿಯ ಮಟ್ಟಿಗೆ ಉಳಿಯುವದು. ಉತ್ಪತ್ತಿಗಾರರು ತಾವು ಹುಟ್ಟಿಸುತ್ತಿರುವ ಖಾದಿಯನ್ನು ನೆರೆಹೊರೆಯ ಪ್ರದೇಶಗಳಲ್ಲಿಯೇ ಮಾರತಕ್ಕದ್ದೆಂಬ ಕಟ್ಟು ಅವರಿಗಿರುವದು. ಒಂದು ವೇಳೆ ಅವರು ದೂರ ಕಳಿಸಲಿಚ್ಛಿಸಿದರೆ ಅದಕ್ಕೆ ಕೇಂದ್ರ ಕಚೇರಿಯ ಒಪ್ಪಿಗೆಯ ಅವಶ್ಯಕತೆಯದೆ.

ಜಾಜೂಜಿ:—ಪ್ರತಿಯೊಂದು ಕೇಂದ್ರವು ತನ್ನ ತಾಲೂಕ ಹದ್ದಿನಲ್ಲಿಯೆ ಖಾದಿಯನ್ನು ಮಾರಬಹುದೆಂಬ ನಿಯಮವನ್ನು ಹಾಕಿಡುವದರಲ್ಲಿ ಯಾವ ಆತಂಕವೂ ಇಲ್ಲ.

ಬಾಪೂಜಿ:—ಸರಿಯಿದೆ. ಉತ್ಪತ್ತಿ ಮಾಡುವವನು ಅದನ್ನು ಧರಿಸಲೇಬೇಕೆಂಬದು ಬೀಜಮಾತು. ಆ ಗ್ರಾಮದ ಹಾಗೂ ಸುತ್ತುಮುತ್ತಲಿನ ಜನರೂ ಧರಿಸಬೇಕು. ಇದಲ್ಲದೆ ಎರಡನೆಯ ಸ್ಥಳಗಳ ಸಲುವಾಗಿಯಾದರೂ ಖಾದಿಯ ಅವಶ್ಯಕತೆಯಾದರೂ ಇದ್ದೇಇರುವದೆಂಬದನ್ನು ನಾವು ಒಪ್ಪುತ್ತೇವೆ.

ಜಾಜೂಜಿ:—ಖಾದಿಯ ಕಾರ್ಯವು ಎಲ್ಲಿ ಚೆನ್ನಾಗಿ ನಡೆಯಬಹುದೋ ಅಲ್ಲಿ ಹೋಗಿ ಈ ಹೊಸನೀತಿಯಂತೆ ಸಾಧ್ಯವಾದ ಮಟ್ಟಿಗೆ ಕೆಲಸ ಬೆಳಿಸಿರಿ ಎಂದು ನಾವು ಕಾರ್ಯಕರ್ತರಿಗೆ ಹೇಳುವೆವು. ಈ ಮೇರೆಗೆ ಕಾರ್ಯಕರ್ತರು ಅಲ್ಲಿ ಹೋಗಿ ನೆಲಿಸಹತ್ತಿದಂತೆ ಸಂಘವು ಅಲ್ಲಿಂದ ಸರಿಯುತ್ತ ಹೋಗುವದು. ಈ ರೀತಿಯಿಂದ ವಿಕೇಂದ್ರೀಕರಣವು ಕೈಗೂಡುವುದು. ಆವರೆ ಒಂದು ಮಾತು ಮಾತ್ರ ಉಳಿಯುವದು. ಖಾದಿಯು ಹುಟ್ಟುತ್ತಿರುವಲ್ಲಿ ಅದನ್ನು ಮಾರಿರಿ ತಾಲೂಕಿನಲ್ಲಿ ಮಾರಿರಿ, ಬಹಳೆಂದರೆ ಜಿಲ್ಲೆಯಲ್ಲಿ ಮಾರಿರಿ. ಹೀಗಾದರೂ ಖಾದಿಯು ಎಲ್ಲ ಮಾರದೆ

ಉಳಿವರೆ ಸದ್ಯದ ಪರಿಸ್ಥಿತಿಯಲ್ಲಿ ಅದನ್ನು ಮಾರಾಟ ಮಾಡುವ ಬಗ್ಗೆ ಸಂಘವು ನೆರವಾಗುವದೆಂಬದನ್ನು ನಾವು ಕಾರ್ಯಕರ್ತರಿಗೆ ಹೇಳಬೇಕಾಗುವದು. ಇನ್ನು ಇದರಲ್ಲಿ ಹಾನಿ ತಟ್ಟದೆಂಬದು ನಿರ್ವಿವಾದವು. ಸದ್ಯಕ್ಕೆ ಉತ್ಪತ್ತಿಯಾದಷ್ಟು ಖಾದಿಯು ಮಾರಿ ಹೋಗುವದು. ಮಾರಾಟದ ವಿಷಯದಲ್ಲಿ ಏನೂ ತೊಂದರೆಯಿಲ್ಲ. ಇರುವ ತೊಂದರೆಯಲ್ಲ ಕಳಿಸು ತರಿಸುವದರಲ್ಲಿದೆ.

ಬಾಪೂಜಿ:—ಉತ್ಪತ್ತಿಯಾಗುವ ಕೇಂದ್ರದಲ್ಲಿಯೇ ಖಾದಿಯು ಮಾರುತ್ತಿದೆಯೋ?

ಜಾಜೂಜಿ:—ಇಲ್ಲ. ಸುತ್ತಮುತ್ತ ಸಹ ಮಾರುತ್ತಿಲ್ಲ. ಸದ್ಯದ ಮಾರಾಟದ ವ್ಯವಸ್ಥೆಯು ಹೀಗದೆಃ ಜಿಲ್ಹೆಯ ಸ್ಥಳಗಳಲ್ಲಿ ಹಾಗೂ ಹಲವು ತಾಲೂಕ ಸ್ಥಳಗಳಲ್ಲಿ ಸಂಘದ ಖಾದೀ ಭಾಂಡಾರಗಳಿವೆ ಹಲವೆಡೆ ಏಜನ್ಸಿಯ ರೀತಿಯೂ ಇದೆ. ಈ ಏಜಂಟರು ಜಿಲ್ಹೆಯ ಭಾಂಡಾರದಿಂದ ಖಾದಿಯನ್ನೊಯ್ದು ಜಿಲ್ಹೆಯಲ್ಲಿಯ ಎರಡನೆಯ ಸ್ಥಳಗಳಲ್ಲಿ ಮಾರುವರು. ಉತ್ಪತ್ತಿಕೇಂದ್ರಗಳಲ್ಲಿ ಕೆಲಸಗಾರರ ಕೂಲಿಯ ಹಣದಲ್ಲಿ ರೂಪಾಯಿಗೆ ಎರಡಾಣೆ ನಾಲ್ಕಾಣೆ ಎಂಟಾಣೆಯವರೆಗೆ ಮುರಿದು ಅದರಲ್ಲಿ ಅವರಿಗೆ ಖಾದಿಯನ್ನು ಕೊಡುತ್ತಿರುವ ಪರಿಪಾಠವಿದೆ. ಇದರ ಹೊರತು ಉಳಿದ ಖಾದಿಯು ಬಹಳ ಮಟ್ಟಿಗೆ ಪಟ್ಟಣಗಳಲ್ಲಿಯೇ ಮಾರುತ್ತಿರುವದು.

ಬಾಪೂಜಿಃ—ಇದರ ಬದಲು ನಾನು ಅಪೇಕ್ಷಿಸುವದು ಹೀಗೆಃ ಕಾರ್ಯಕರ್ತನು ಹಳ್ಳಿಗೆ ಹೋಗಿ ಅಲ್ಲಿಯ ಜನರು ಧರಿಸಬಹುದಾದ ಮಟ್ಟಿಗೇ ಖಾದಿಯನ್ನು ಹುಟ್ಟಿಸಲಿ. ಹೊರಗಣ ಜನರ ಸಲುವಾಗಿ ಅವನು ಉತ್ಪತ್ತಿ ಮಾಡುವದು ಬೇಡ. ಆತನು ಖಾದಿಯ ಹುಟ್ಟುವಳಿಯ ಬಗ್ಗೆ ಮಾತ್ರ ಶಿಕ್ಷಣ ಕೊಟ್ಟು ಸುಮ್ಮನೆ ಕುಳಿತುಕೊಳ್ಳಲಾರನು. ಎರಡನೆಯ, ವ್ಯವಸಾಯಗ

ಳನ್ನು ಜನರಿಗೆ ಕಲಿಸುವನು. ಅದರಿಂದಾಗುವ ಲಾಭವು ಹಳ್ಳಿಯ ಜನರ ಕಿಸೆಯಲ್ಲಿ ಬೀಳುವದು. ಆ ಮೇಲೆ ಆ ಹಳ್ಳಿಯವರು ಹೀಗನ್ನಬಹುದುಃ— "ನಾವು ಖಾದಿಯನ್ನು ಹುಟ್ಟಿಸುವೆವು. ನಮ್ಮ ಪರಿವಾರದವರೆಲ್ಲರೂ ಖಾದಿಯನ್ನು ಧರಿಸುವರು ಆದರೂ ನಮಗೆ ನಗದು ಹಣವು ಬೇಕೇಆಗುವದು ಆ ಸಲುವಾಗಿ ನಾವು ಹೆಚ್ಚಿನ ಪ್ರಮಾಣದಲ್ಲಿ ಖಾದೀ ಉತ್ಪತ್ತಿ ಮಾಡುವೆವು. ಅದನ್ನು ಮಾತ್ರ ನೀವು ತೆಗೆದುಕೊಳ್ಳಬೇಕಾಗುವದು." ಈ ರೀತಿಯಲ್ಲಿ ಹೆಚ್ಚಿನ ಉತ್ಪತ್ತಿಯ ಖಾದಿಯನ್ನು ನಾವು ತೆಗೆದುಕೊಳ್ಳುವೆವು. ಅದನ್ನು ನಿರಾಕರಿಸುವದಿಲ್ಲ. ಆದರೆ ಅಂಥ ಹಳ್ಳಿಯು ಖಾದಿಯ ಕೈಹೋರೆಯ ಕೇಂದ್ರವಾಗುವ ಸಂಭವವಿದೆ. ಆದರೆ ಆ ಪರಿಸ್ಥಿತಿಯು ನನ್ನ ಕಣ್ಮುಂದಿರುವದಿಲ್ಲ. ಖಾದೀ ಉತ್ಪತ್ತಿಯೊಂದು ಪೂರಕ ಉದ್ಯಮವೆಂದು ಅದನ್ನು ಕೈಕೊಳ್ಳುವ ಹಳ್ಳಿಗಳು, ಕಾರ್ಯಕರ್ತ, ಕಸಬುದಾರರು ಇರುವರೆಂಬ ಕಲ್ಪನೆ ಮಾತ್ರ ನನಗಿದೆ. ಅವರು ಕೇವಲ ಈ ಹೋರೆಯಮೇಲೆ ಕೈ ಊರಿ ನಿಲ್ಲದೆ ಎರಡನೆಯ ಉದ್ಯೋಗಗಳನ್ನೂ ಮಾಡುವರು. ಬಹುಮಟ್ಟಿಗೆ ಹಳ್ಳಿಗಳು ಇದನ್ನೇ ಮಾಡುವವು. ನಿಜವಾದ ವಿಕೇಂದ್ರೀಕರಣವಾದರೂ ಇದೇ.

ಖಾದಿಯು ನಿರುದ್ಯೋಗಿಗಳ ಬಗ್ಗೆ ಅಲ್ಲಃ—

ಒಕ್ಕಲತನವು ಹಳ್ಳಿಯ ಮುಖ್ಯ ಉದ್ಯೋಗವು. ಎಣ್ಣೆಗಾಣ ಮುಂತಾದವೂ ನಡೆಯುವವೆಂಬುದರಲ್ಲಿ ಸಂಶಯವಿಲ್ಲ. ಆದರೆ ಅವುಗಳಿಂದೊದಗುವ ಆದಾಯವು ಮಾತ್ರ ಸ್ವಲ್ಪ ಜನರಿಗೆ. ಹಳ್ಳಿಯಲ್ಲಿ ಬಡಜನರ ಕೂಲಿಗೇಡಿತನವನ್ನು ವ್ಯಾಪಕ ರೀತಿಯಲ್ಲಿ ಹೋಗಲಾಡಿಸಲು ಖಾದಿಯು ಸಹಾಯಕವಾಗುವದು. ಸ್ವಾವಲಂಬನ ಖಾದಿಯ ಉತ್ಪತ್ತಿಯಲ್ಲಿ ಲಾಭಕ್ಕೆ ಅವಕಾಶ

ಕಡಿಮೆ. ಹಳ್ಳಿಗರಿಗೆ ಕಣ್ಣಿಗೆ ಕಾಣುವಂತೆ ಎರಡು ದುಡ್ಡು ಹಣ ದೊರೆಯಬೇಕಾದರೆ ಸ್ವಾವಲಂಬನದೊಂದಿಗೆ ಮಾರಾಟದ ಬಗ್ಗೆ ಯೂ ಹಳ್ಳಿಗರ ಮನೆಯಲ್ಲಿ ಖಾದೀ ಉತ್ಪತ್ತಿಯಾಗುವಂತೆಯೂ ಅದನ್ನು ಮಾರಾಟಕ್ಕಾಗಿ ಹೊರಗೆ ಕಳಿಸುವಂತೆಯೂ ಏರ್ಪಾ ಟಾಗಬೇಕಾಗುವದು. ಇದರ ಹೊರತು ಇಡೀ ದಿನ ಉದ್ಯೋ ಗವಿಲ್ಲದೆ ಅರ್ಧಮರ್ಧ ಕೂಲಿಗೇಡಾದ ಹಳ್ಳಿಗರ ಹಿತ ಸಾಧಿ ಸಲು ನಾವು ಅಸಮರ್ಥರಾಗುವೆವು.

ಬಾಪೂಜಿಃ— ಖಾದಿಯು ಸರ್ವವ್ಯಾಪಿಯಾಗದೆ ಕೇವಲ ಹಲವರ ಹೋರೆಯಾಗಿ ಉಳಿಯುವದೆಂಬುದೂ ಇದರಲ್ಲಿಯ ಅಡಚಣಿ.

ಜಾಜೂಜಿಃ— ನೂಲುವದು ಎಲ್ಲಿಡೆಯಲ್ಲಿಯೂ ನಡೆಯು ವದು. ನೇಕಾರಿಕೆಯು ಈಗಾದರೂ ಒಂದು ಸ್ವತಂತ್ರ ಉದ್ಯೋ ಗವೇ ಆಗಿರುವದು. ಗಿರಣಿಗಳು ಇರುವವರೆಗೆ ಖಾದೀ ಉತ್ಪತ್ತಿಯು ದೊಡ್ಡ ಪ್ರಮಾಣದಲ್ಲಿ ಆಗಲಾರದು. ಸುರಗಾಂವದಲ್ಲಿ ನಾವು ವಸ್ತ್ರಸ್ವಾವಲಂಬನ ಕಾರ್ಯ ಕೈಕೊಂಡೆವು. ಐದು ವರ್ಷಗಳ ಕಾರ್ಯಕ್ರಮವನ್ನಿಟ್ಟುಕೊಂಡೆವು. ಅಲ್ಲಿಯ ಜನರು ಖಾದಿಯ ನ್ನೇನೋ ಅಂಗೀಕರಿಸಿರುವದು ನಿಜ. ಆದರೆ ತಿಳುವಳಿಕೆಯಿಂದಲ್ಲ ವೆಂದು ವಲ್ಲಭಸ್ವಾಮಿಯ ಅನುಭವ. ನಾವು ಅಲ್ಲಿಂದ ಬಿಟ್ಟು ಬಂದುದಾದರೆ ಹಲವು ಕಾಲದಲ್ಲಿ ಖಾದಿಯೂ ಬಿಟ್ಟುಹೋಗುವದು. ಜನರು ಸಾಮುದಾಯಿಕ ಅರ್ಥಶಾಸ್ತ್ರವನ್ನರಿತರೆ ಮಾತ್ರ ಅದು ಚಿರಸ್ಥಾಯಿಯಾಗಿ ಉಳಿಯುವದು, ಇಲ್ಲವಾದರೆ ಇಲ್ಲ. ಸ್ವಾವ ಲಂಬನದಲ್ಲಿ ಅರ್ಥಲಾಭವೂ ಸ್ವಲ್ಪಮಟ್ಟಿಗೆ ಅಡಕವಾಗಿದೆ. ಆದರೆ ಅದರ ಪ್ರಮಾಣವು ತೀರ ಕಡಿಮೆಯಾಗಿರುವದರಿಂದ ಅದು ಆಕರ್ಷಕವಾಗುವದಿಲ್ಲ.

ಬಾಪೂಜಿಃ— ನನ್ನದೂ ಇದೇ ಅಡಚಣಿ. ವಲ್ಲಭನ ಹೇಳಿಕೆಯು ನನ್ನ ಕಿವಿಗಳಲ್ಲಿ ದುಮಿದುಮಿಸುತ್ತದೆ. ಹಳ್ಳಿಯಲ್ಲಿ

ಪಕ್ಷಪಂಗಡಗಳಾದವು. ಉಪವಾಸ ಮಾಡಬೇಕಾಯಿತು. ಈ ಎಲ್ಲ ಘಟನೆಗಳ ಬುಡಕ್ಕೆ ಯಾವುದೊಂದು ವಿಚಾರದೋಷವಿದ್ದಿತೆಂದು ನನಗೆ ತೋಚುತ್ತದೆ. ನಾವು ಜನರಿಗೆ ಅದೇ ತೋರಿಸಿದೆವು. ಅನುಕೂಲತೆಗಳನ್ನು ಒದಗಿಸಿಕೊಟ್ಟೆವು. ಆದರೆ ಈ ರೀತಿಯಿಂದ ಕೆಲಸವಾಗದು. ಖಾದಿಯು ತನ್ನ ಬಲದಿಂದ ಹಿಂದುಸ್ಥಾನವನ್ನು ಎಲ್ಲಿಯವರೆಗೆ ಒಯ್ಯಬಲ್ಲದೆಂಬದನ್ನು ನಮಗೆ ಶೋಧಿಸುವದಿದೆ. ಖಾದಿಯು ಪಟ್ಟಣಗಳಲ್ಲಿ ಮಾರಬಲ್ಲದು, ಹಳ್ಳಿಗಳಲ್ಲಿ ಅಲ್ಲ ಎಂಬೀ ವಿಧಾನವನ್ನು ಮಾಡುವ ಪುಟ್ಟಿಗೆ ನಾವು ಈ ಶೋಧದಲ್ಲಿ ಇದುವರೆಗೆ ಮುಂದರಿದಿರುವೆವು. ಹಳ್ಳಿಗರಿಗೆ ಅದು ಸಹಜವಾಗಿ ದೊರೆಯುವಂತೆಯೂ ನಾವು ಇದುವರೆಗೆ ಮಾಡದಾಗಿರುವೆವು. ಒಂದುವೇಳೆ ನಾವು ಸೋತಿರುವದಾದರೆ ಸೋಲನ್ನೊಪ್ಪಿಕೊಂಡು ಮುಂದೆ ಸಾಗಬೇಕಾಗುವದು. ಅನುಭವದಿಂಧ ಪರಿಶುದ್ಧರಾಗಿ ನಾವು ಮುಂದಿನ ಪ್ರಯತ್ನ ಕೈಕೊಳ್ಳಬೇಕಾಗುವದು. ಆದುದರಿಂದಲೇ ಪಟ್ಟಣಗಳ ಸಲುವಾಗಿ ಖಾದಿಯನ್ನು ಹುಟ್ಟಿಸುವ ಹಾಗೂ ಪಟ್ಟಣಗಳಲ್ಲಿಯೇ ಅದನ್ನು ಮಾರಾಟಮಾಡುವ ಉಪಕ್ರಮುವನ್ನು ನಿಲ್ಲಿಸಬೇಕೆಂದು ನಾನು ಹೇಳುತ್ತಿರುವೆನು. ಈಗ ಒಂದು ಕೋಟಿ ರೂಪಾಯಿಗಳ ಖಾದಿಯು ಪಟ್ಟಣಗಳಲ್ಲಿ ಮಾರುತ್ತಿರುವದು. ಆದರೆ ನಾವು ಪಟ್ಟಣಿಗರಿಗೆ ಹೀಗೆ ಹೇಳಬೇಕಾಗುವದು. "ನಾವು ನಿಮಗೆ ತಯಾರೀ ಖಾದಿಯನ್ನು ಕೊಡುವದಿಲ್ಲ. ಖಾದೀ ತಯಾರಿಸಲು ನಿಮಗೆ ಕಲಿಸುವೆವು. ನೀವು ನಿಮ್ಮ ಸಲುವಾಗಿ ಖಾದಿಯನ್ನು ತಯಾರಿಸಿರಿ. ಇಲ್ಲವೆ ತಯಾರ ಮಾಡಿಸಿಕೊಳ್ಳಿರಿ" ನನಗೆ ಅವರ ಕೋಟಿ ಹಣದ ಲೋಭವಿರುವದಿಲ್ಲ. ನಾವು ಖಾದಿಯಲ್ಲಿ ನಮ್ಮ ಬುದ್ಧಿ ಅಂತಃಕರಣಗಳನ್ನು ತೊಡಗಿಸುವೆವು. ರೂಪಾಯಿಗಳನ್ನಲ್ಲ. ಇನ್ನು ನಾವು ನಿರ್ದಾಕ್ಷಿಣ್ಯರಾಗಿ ಖಾದಿಯ ಶಕ್ತಿಯು ಎಲ್ಲಿಯ ವರೆಗಿದೆ ಎಲ್ಲಿಯವರೆಗಿಲ್ಲ ಎಂಬುದನ್ನು ಶೋಧಿ

ಸಲೇ ಬೇಕು. ನಾವು ಇದು ವರೆಗೆ ಜಗತ್ತಿನೆದುರು ಸಾರುತ್ತ ಬಂದಿರುವ ಪ್ರತಿಪಾದನೆಯ ಮಟ್ಟಕ್ಕೆ ಖಾದಿಯು ನಮ್ಮನ್ನು ಕರದೊಯ್ಯಲಾರದೆಂದು ನಮ್ಮ ಮನವರಿಕೆಯಾದರೆ ನಾವು ಅದನ್ನು ಬಿಡಬಹುದು ಅಥವಾ ನಮ್ಮ ಪ್ರತಿಪಾದನೆಯನ್ನು ಕೆಳಗಿಳಿಸುವೆವು. ಇಲ್ಲವೆ ಒಕ್ಕಲತನ ಮುಂತಾದ ಮೂಲೋದ್ಯಮಕ್ಕೆ ಅಂಟಿಕೊಳ್ಳುವೆವು.

ಖಾದಿ ಇಲ್ಲದಿದ್ದರೆ ಒಕ್ಕಲನಃ—

ಒಕ್ಕಲತನವೇ ಈ ದೇಶವಾಸಿಗಳ ಏಕಮಾತ್ರ, ಚಿರಸ್ಥಾಯಿ ಹಾಗೂ ದೃಢತಮವಾದ ಅವಲಂಬನವಾಗಿರುವದೆಂದು ಮೊದಲಿನಿಂದಲು ನನ್ನ ಬಲವಾದ ನಂಬಿಕೆ ಇದೆ. ಈ ಬಗ್ಗೆಯೂ ಪರಿಶೀಲಿಸುವೆನು ಹಾಗೂ ಇದರ ಆಶ್ರಯದಿಂದ ನಾವು ಎಲ್ಲಿಯವರೆಗೆ ಹೋಗಬಲ್ಲೆವೆಂಬದನ್ನು ನೋಡುವೆನು. ಒಂದು ವೇಳೆ ನಮ್ಮ ಜನರು ಖಾದಿಯ ಬದಲು ಬೇಸಾಯದಲ್ಲಿ ನಿಷ್ಣಾತರಾಗಿ ಜನ ಸೇವೆಯ ಕಾರ್ಯ ಮಾಡುವದಾದರೆ ನನಗೇನೂ ದುಃಖವಾಗದು ನಾವು ಅನೇಕ ಕಷ್ಟನಷ್ಟಗಳನ್ನು ಪಾರಗಾಣಿಸಬೇಕಾಗುವದೆಂಬ ಮಾತು ನನಗೆ ಮನವರಿಕೆಯಾಗಿಹೋಗಿದೆ. ಬೇಸಾಯದಬಗ್ಗೆ ಲಕ್ಷ ಕೊಡತಕ್ಕ ಸಮಯವು ಈಗ ಒದಗಿದೆ. ಸರಕಾರದ ಅಧಿಕಾರ ಸೂತ್ರವು ನಮ್ಮ ಕೈಯಲ್ಲಿ ಬಾರದಿರುವವರೆಗೆ ದೇಶದ ಒಕ್ಕಲತನ ಸುಧಾರಿಸುವದು ಅಸಂಭವವಾದುದೆಂದು ಇದುವರೆಗೆ ನನ್ನ ಗ್ರಹಿಕೆಯಾಗಿದ್ದಿತು. ಈಗ ನನ್ನ ಆ ವಿಚಾರದಲ್ಲಿ ಸ್ವಲ್ಪ ಪರಿವರ್ತನವಾಗುತ್ತ ನಡೆದಿದೆ. ಸದ್ಯದ ಪರಿಸ್ಥಿತಿಯಲ್ಲಾದರೂ ನಾವು ಸ್ವಲ್ಪ ಮಟ್ಟಿಗೆ ಸುಧಾರಣೆ ಮಾಡಬಹುದೆಂಬದನ್ನು ಈಗ ನಾನು ನಿಶ್ಚಯವಾಗಿ ಹೇಳುವೆನು. ಇದು ನಿಜವಾಗಿದ್ದರೆ ಭೂಕಂದಾಯ ಮುಂತಾದ್ದನ್ನು ನಿರಾಯಾಸದಿಂದ ಸಲ್ಲಿಸಿಯೂ ರೈತನು ಭೂಮಿಯಿಂದ ಸ್ವಲ್ಪ ಆದಾಯ ಪಡೆಯಬಹುದು.

ಬೇಸಾಯುವನ್ನು ನಾವು ಸುಧಾರಿಸಬಹುದು. ಆದರೂ ನಮ್ಮ ಮೇಲೆ ಪರಕೀಯ ಸತ್ತೆಯಿರುವ ವರೆಗೆ ಅವರು ಏನಾದರೊಂದು ನೆವದಿಂದ ಅಥವಾ ಯಾವುದೊಂದು ರೀತಿಯಲ್ಲಿ ರೈತನ ಗಳಿಕೆಯನ್ನು ಅಪಹರಿಸುತ್ತ ಹೋಗುವರೆಂದು ಜವಾಹರರು ಅನ್ನುತ್ತಿರುವರು. ಇಷ್ಟರಿಂದ ಬೇಸಾಯದ ಜ್ಞಾನ ಹಾಗೂ ತಿಳವಳಿಕೆಯ ಬಗ್ಗೆ ನಾವು ಇದುವರೆಗೆ ಪ್ರಚಾರ ಮಾಡಲು ಯಾಕೆ ತಡೆಯಬೇಕೆಂದು ಈಗ ಆಲೋಚಿಸುತ್ತಿರುವೆನು. ನಮ್ಮ ಇದ್ದು ಬಿದ್ದುದನ್ನು ಧಾರಾಳವಾಗಿ ಲೂಟಿ ಮಾಡಲಿ. ಲೂಟೀ ಮಾಡಿದರೆ ನಾವು ಹೋರಾಡುವೆವು. ಹೋರಾಡಲು ಜನರಿಗೆ ಹೇಳುವೆವು. ಅವರಿಗೆ ಕಲಿಸುವೆವು. ನೀವು ಈ ರೀತಿ ಸುಲಿಗೆ ಮಾಡಲಾರಿರೆಂದು ಸರಕಾರಕ್ಕೆ ಮನವರಿಕೆ ಮಾಡಿಕೊಡುವೆವು. ನಾನು ಇದೊಂದು ಚಿತ್ರವನ್ನುಮಾತ್ರ ತೆಗೆದಿರುವೆನು.

ಅರ್ಥಾತ್ ಬೇಸಾಯದ ಪರಿಚಯ ವಿದ್ದಂಥ ಕಾರ್ಯಕರ್ತರನ್ನು ನಾವಿನ್ನು ಶೋಧಿಸ ಬೇಕಾಗುವದು.

ಜಾಜೂಜಿ:—ಬೇಸಾಯುವು ಹಳ್ಳಿಗರ ಮುಖ್ಯವಾದ ಸಮಸ್ಯೆ ಎಂಬುದು ಮೊದಲಿಂದಲು ನಮ್ಮ ದೃಷ್ಟಿಪಥದಲ್ಲಿದ್ದಿತು. ಆದರೆ ಅದು ಕಠಿಣವಾದುದೆಂದು ಬಿಟ್ಟದ್ದೆವು. ಈಗಿನ ವಿಚಾರದಿಂದಾದರೂ ನಾವು ನಮ್ಮ ಪ್ರತಿಯೊಂದು ಮರ್ಯಾದೆಯನ್ನರಿತು ಸಾಗಬೇಕಾಗಿದೆ. ಬೇಸಾಯುದಲ್ಲಿಯಾದರೂ ರೈತರು ಹೊರಗಣ ಪರಿಸ್ಥಿತಿಗೆ ಅಧೀನರಾಗಿರುವರು. ಅದು ಅವರ ಹಿಡಿತದಲ್ಲಿಲ್ಲ. ನಾವು ಅವರಿಗೆ ತಕ್ಕಮಟ್ಟಿಗೆ ಕಲಿಸಿದೆವು. ಪ್ರಯೋಗಮಾಡಿ ತೋರಿಸಿದೆವು; ಬೆಳೆಯೂ ಚೆನ್ನಾಗಿ ಬಂದಿತು. ಆದರೆ ಹತ್ತಿಯ ಬೆಲೆಯು ೧೦೦ರಿಂದ ೫೦ಕ್ಕೆ ಇಳಿದರೆ ತೀರಿತು. ರೈತನು ಎಂದಿನಂತೆ ಕಂಗಾಲ ಸ್ಥಿತಿಯಲ್ಲಿಯೇ ಉಳಿಯುವನು, ಹೀಗಿದೆ ಪರಿಸ್ಥಿತಿ.

ಜಾಜೂಜಿಃ—ಇದಕ್ಕೂ ನಿವಾರಣೋಪಾಯವಿದೆ. ಒಂದೆಂದರೆ ನಾವು ಅವರಿಗೆ ಶಿಕ್ಷಣ ಕೊಟ್ಟಿಲ್ಲ ಹಾಗೂ ಎರಡನೆಯದೆಂದರೆ ಬಂಡವಲಗಾರರು ತಮಗೆ ಹಣ ದೊರೆಯುವಂತಹ ಬೆಳೆಯನ್ನೇ ಬಿತ್ತಲು ಅವರಿಗೆ ಕಲಿಸಿದರು ಅನ್ಯತರದ ಬೆಳೆಯನ್ನು ಬೆಳೆಯಲು ಪ್ರತಿಬಂಧಿಸಿದರು.

ಜಾಜೂಜಿಃ—ಎಲ್ಲಿ ರಾಜಸತ್ತೆಯ ಬಲದಿಂದ ಅರ್ಥಶಾಸ್ತ್ರ ನಡೆಯುತ್ತಿದೆಯೋ ಅಲ್ಲಿ ಹೀಗೆ ಆಗುವದು.

ಜಾಜೂಜಿಃ—ಗೋ ಸೇವೆಯ ಕ್ಷೇತ್ರದಲ್ಲಿಯೂ ಇದೇ ಹಾಡು. ಎತ್ತು—ಆಕಳುಗಳು ಭೂಮಿಗೇ ಅಂಟಿಕೊಂಡಿರುವವು. ಹೊಲಗಳ ವಿಷಯವಾಗಿ ಇದ್ದಂತೆ ಇತ್ತಲಾದರೂ ನಮ್ಮ ಜನರ ದುರ್ಲಕ್ಷವದೆ. ಆದು ಕಾರಣ ಹಳ್ಳಿಗಳಲ್ಲಿ ನೆಲಿಸಿರುವ ಕಾರ್ಯ ಕರ್ತನಲ್ಲಿ ಈ ಎಲ್ಲ ಸಂಗತಿಗಳ ಜ್ಞಾನವನ್ನಪೇಕ್ಷಿಸ ಬೇಕಾಗುವದು. ಇವುಗಳ ಮಾಹಿತಿ ಹಾಗೂ ಜ್ಞಾನವನ್ನು ಸೇವೆಯ ಸಲುವಾಗಿಯೇ ಅವನಿಗೆ ಮಾಡಿಕೊಳ್ಳಬೇಕಾಗುವದು. ಅವನಿಂದ ಈ ಎಲ್ಲ ಕಾರ್ಯವು ಎಷ್ಟರ ಮಟ್ಟಿಗೆ ಸಾಧಿಸುವದೋ ಭಗವಂತನೇ ಬಲ್ಲನು. ಆದರೆ ಮನಸ್ಸಿನಲ್ಲಿ ಬಂದುದನ್ನು ನಾನು ಹೇಳಿ ಬಿಟ್ಟಿರುವೆನು. ಅದನ್ನು ಹೇಳಲೇ ಬೇಕು.

ಐದನೆಯ ದಿನ ಗುರವಾರ ತಾ. ೧೨ ಅಕ್ಟೋಬರ ೧೯೪೪

ಖಾದೀ ಕಾರ್ಯದ ವಿಸ್ತಾರಃ—

ಜಾಜೂಜಿಃ—ವಿಕೇಂದ್ರೀಕರಣದ ವಿಚಾರವನ್ನು ಮುಂದರಿಸುವ ಮೊದಲು ಇಂದಾದ ಖಾದೀಕಾರ್ಯದ ವಿಸ್ತಾರದ ಬಗ್ಗೆ ತಮಗೆ ಸ್ವಲ್ಪ ನಿವೇದಿಸುವೆನು. ಅಂದರೆ ಪ್ರಸ್ತುತ ವಿಷಯದಲ್ಲಿ ಸ್ವಲ್ಪ ಸಹಾಯವಾಗುವದು. ಖಾದೀ ಕಾರ್ಯವು ಎರಡು ದಿಶೆಗಳಲ್ಲಿ ನಡೆದಿದೆ. ೧ ಹೆಚ್ಚು ಹೆಚ್ಚಾಗಿ ವ್ಯಾಪಾರೀ ಖಾದಿ

ಯನ್ನು ಹುಟ್ಟಿಸಿ ಅದನ್ನು ಹೆಚ್ಚು ಹೆಚ್ಚಾಗಿ ಮಾರುವದು. ೨. ಅಧಿಕಾಧಿಕವಾಗಿ ವಸ್ತ್ರಸ್ವಾವಲಂಬನವನ್ನು ತಿಳಿಸುವದು. ಈ ಎರಡೂ ಕ್ಷೇತ್ರಗಳಲ್ಲಿ ಸಂಘವು ತೃಪ್ತಿಕರವಾಗಿ ಕಾರ್ಯ ಮಾಡಿಲ್ಲವೆಂದು ಸಂಘಕ್ಕೆ ದೋಷ ಕೊಡುತ್ತಿರುವದುಂಟು.

ಬಾಪೂಜಿ:—ಮಧ್ಯದಲ್ಲಿ ನಾನೊಂದು ಮಾತು ಕೇಳಲೇ? ವಸ್ತ್ರಸ್ವಾವಲಂಬನ ಕ್ಷೇತ್ರದಲ್ಲಿ ನಾವು ಸಂಪೂರ್ಣವಾಗಿ ಆಲೋಚಿಸಿ ಕಾರ್ಯ ಕೈ ಕೊಂಡಿರುವೆವೋ? ವಸ್ತ್ರಸ್ವಾವಲಂಬನ ಖಾದಿಯು ಗಿರಣಿ ಭಟ್ಟೆಗಿಂತ ಅಗ್ಗವಾಗಿರುವದೆಂಬುದು ನಿಶ್ಚಯ ಪೂರ್ವಕವಾಗಿ ಸಿದ್ಧವಾಗಿದೆಯೋ? ಇದನ್ನು ನಾವು ಮನಗಾಣಿಸಿ ಕೊಡದಿದ್ದರೆ ಹಳ್ಳಿಯವರು ವಸ್ತ್ರಸ್ವಾವಲಂಬಿಗಳಾಗಲಾರರು. ಹಾಗೂ ಕಾರ್ಯ ಕರ್ತರೂ ನಿರಾಶರಾಗುವರು. ಒಳ್ಳೇದು ಮುಂದೆ ಸಾಗಲಿ.

ಜಾಜೂಜಿ:—ವ್ಯಾಪಾರೀ ಖಾದಿಯಾಗಲೀ, ಸ್ವಾವಲಂಬೀ ಖಾದಿಯಾಗಲೀ ಎರಡೂ ಕಾರ್ಯಗಳಲ್ಲಿಯೂ ಒಂದು ಮಿತಿಯುದೆಯೆಂಬುದನ್ನರಿತುಕೊಂಡಿದ್ದರೆ ನಿರಾಶೆಗೆ ಅವಕಾಶವಿರುವದಿಲ್ಲ. ವ್ಯಾಪಾರೀ ಖಾದಿಯ ಕಾರ್ಯವು ಬಹುಮಟ್ಟಿಗೆ ಹೆಚ್ಚಿದೆ. ಆದರೂ ಸಹ ಇದರ ಗತಿಯಾದರು ಇನ್ನು ಮುಂದೆ ಒಮ್ಮೆಲೆ ಹೆಚ್ಚಲಾರದೆಂದು ನಮ್ಮ ಮನವರಿಕೆಯಾಗಿದೆ. ಬಟ್ಟೆಯ ಗಿರಣಿಗಳಿರುವವರೆಗೆ ಖಾದಿಯು ಲೋಕಾಶ್ರಯದ ಬಲದಿಂದಲೇ ಬೆಳೆಯತಕ್ಕುದು. ಆದರೆ ಈ ರೀತಿಯಿಂದ ಅದನ್ನು ಹೆಚ್ಚಿಸ ಬೇಕಾದರೆ ನಮ್ಮ ಅಡಚಣಿಗಳೂ ಹೆಚ್ಚುತ್ತ ಹೋಗುವವು. ಈಗ ಒಂದು ಕೋಟಿಯ ವ್ಯವಹಾರ ವಾಗುತ್ತದೆ. ಇವನ್ನು ಐದು ಕೋಟಿಗೆ ಒಯ್ಯುವ ಕಾರ್ಯಕ್ರಮವನ್ನು ತಯಾರಿಸುವ ಮಾತು ಕಳೆದ ವರ್ಷ ನಡೆದಿತ್ತು. ಇದರ ಅರ್ಥವು ಹೀಗಾಗುವುದು ಉಳಿದ ಅಂಶಗಳನ್ನೆಲ್ಲ ದುರ್ಲಕ್ಷಿಸಿ ದೊರೆತಂಥ. ಕಾರ್ಯ ಕರ್ತರನ್ನು

ಸಂಗ್ರಹಿಸಿ ಅವರಿಂದ ಈ ಕಾರ್ಯವನ್ನು ಹೆಚ್ಚಿಸುವದು. ನಾವು ಒಳ್ಳೇ ಪರಿಶ್ರಮಪಟ್ಟು ಕೆಲಸ ಮಾಡಿದರೂ ಈಗಿನ ಒಂದೂ ಕಾಲು ಪಟ್ಟು ಬಹಳವಾದರೆ ಒಂದೂವರೆ ಪಟ್ಟು ಕಾರ್ಯವನ್ನು ಮಾಡಬಲ್ಲೆವೆಂಬದನ್ನು ನಾವು ಲೆಕ್ಕ ಹಾಕಿ ನೋಡಿರುವೆವು. ಎರಡು ಪಟ್ಟು—ನಾಲ್ಕುಪಟ್ಟು ಕಾರ್ಯ ಹೆಚ್ಚಿಸುವದು ಅಸಂಭವ ವಾದುದು. ಈ ತರದಿಂದ ಕಾರ್ಯವನ್ನು ಹೆಚ್ಚಿಸುವ ಮಾರ್ಗ ದಲ್ಲಿ ಇನ್ನೂ ತೊಂದರೆಗಳು ಇದ್ದೇ ಇವೆ. ಇದು ಬೇರೆ. ಇಂಥ ಪರಿಸ್ಥಿತಿಯಲ್ಲಿ ಸಿಕ್ಕಂಥ ಕಾರ್ಯಕರ್ತರನ್ನು ನಾವು ಹಿಡಿಯ ಬೇಕಾಗುವದು. ಅವರಲ್ಲಿ ಸತ್ಯ, ಅಹಿಂಸೆ ಮೊದಲಾದ ಗುಣ ಗಳ ಜ್ಞಾನ, ಹಾಗೂ ಅವುಗಳ ಬಗ್ಗೆ ನಿಷ್ಠೆಯಿಲ್ಲದಿರುವದರಿಂದ ತತ್ಪರಿಣಾಮವಾಗಿ ಚರಕ ಸಂಘದ ನೀತಿಯು ಕುಗ್ಗುತ್ತದೆ. ಇಷ್ಟೇ ಅಲ್ಲದೆ ಅವರ ರಾಗ—ದ್ವೇಷ ಪೂರ್ಣ ವ್ಯವಹಾರವನ್ನು ನೋಡಿ ಚರಕ ಸಂಘದ ಜನರೆಲ್ಲರು ಹೀಗೆಯೇ ಎಂದು ಬಗೆದು ಜನರು ಆಡಿಕೊಳ್ಳಹತ್ತುತ್ತಾರೆ. ಮತ್ತು ತಿಳಿಯಹತ್ತುತ್ತಾರೆ. ಆದುದರಿಂದ ಈ ರೀತಿ ಕಾರ್ಯವನ್ನು ಬೆಳಿಸಬೇಕೆನ್ನುವವರ ಪಕ್ಷ ದಲ್ಲಿ ನಾನು ಸೇರೆನು.

ವಸ್ತ್ರ—ಸ್ವಾವಲಂಬನ:—

ಇದೇ ರೀತಿ ಸ್ವಾವಲಂಬನದ ಕ್ಷೇತ್ರಕ್ಕೂ ಮೇರೆಯಿದೆ. ಹಳ್ಳಿಗರಿಂದ ಹತ್ತಿಯನ್ನು ಸಂಗ್ರಹ ಮಾಡಿಸಿಟ್ಟು, ಕಾಳು ತೆಗೆ ಯುವದು, ಹಿಂಜಿ ಹಂಜೀ ಹಾಕುವದು ಹಾಗೂ ನೂಲುವದು ಈ ಕ್ರಿಯೆಗಳನ್ನು ಅವರ ಮನೆಯಲ್ಲಿಯೇ ಮಾಡಿಸಿ ಕೇವಲ ನೇಗಿಯ ಕೂಲಿಯನ್ನಷ್ಟು ಅವರಿಂದ ಪಡೆಯುವ ಏರ್ಪಾಟು ಮಾಡಿದರೂ ಗಿರಣೀ ಬಟ್ಟೆಯ ಬೆಲೆಯ ದೃಷ್ಟಿಯಿಂದ ಅವರಿ ಗಾಗುವ ಉಳಿತಾಯವು ತೀರ ಕಡಿಮೆ. ಆ ಸಲುವಾಗಿ

ಇಷ್ಟೊಂದು ಲಂಪಟವಲ್ಲಿ ಬೀಳಲು ಅವರು ಸುಲಭವಾಗಿ ಒಪ್ಪು ವದಿಲ್ಲ. ಇದಲ್ಲದೆ ಖಾದಿಗಿಂತ ಗಿರಣೀ ಬಟ್ಟೆಯು ಹೆಚ್ಚು ಅಂದ ವಾಗಿರುವದಂತೂ ಸರಿಯೇ.

ರಹಸ್ಯದ ಮಾತೆಂದರೆ, ವಸ್ತ್ರಸ್ವಾವಲಂಬನವನ್ನು ನಾವು ಬೇರೆ ರೀತಿಯಿಂದ ಬೇರೆ ದೃಷ್ಟಿಯಿಂದ ತಿಳಿದು ಕಾರ್ಯಕರ್ತ ರಿಗೂ ಅದನ್ನು ಮನಗಾಣಿಸಿಕೊಡಬೇಕು. ಅದು ಹೇಗಂದರೆ, ವಸ್ತ್ರಸ್ವಾವಲಂಬನದಿಂದ ಹಳ್ಳಿಯ ಎಲ್ಲ ಹಣವೂ ಹಳ್ಳಿಯಲ್ಲಿಯೇ ಉಳಿಯುವದು. ಹೋರೆ ಇಲ್ಲದಾಗ್ಗೆ ಇದು ಸಹಾಯಕವಾದುದ ರಿಂದ ಜನರು ಉದ್ಯಮಶೀಲರಾಗುವರು. ಅಂದರೆ ವಸ್ತ್ರಸ್ವಾವ ಲಂಬನ, ಅಹಿಂಸನ ಗ್ರಾಮೋತ್ಥಾನ ಹಾಗೂ ಗ್ರಾಮಸಂಘಟನೆ ಗಳ ಅಂಗಭೂತವೆಂದು ತಿಳಿದುಕೊಂಡು ಮಾಡುವದರಿಂದಲೇ ಶಾಶ್ವತವಾದ ಲಾಭವಾಗುವದು. ಅಮುಕ ಇಷ್ಟುವರ್ಷಗಳಲ್ಲಿ ಇಷ್ಟು ಹಳ್ಳಿಗಳನ್ನು ಪೂರ್ಣ ಸ್ವಾವಲಂಬಿ ಮಾಡತಕ್ಕದ್ದಿದೆ, ಎಂಬ ಸಂಕಲ್ಪದಿಂದ ಕೈಕೊಳ್ಳುವ ಕಾರ್ಯಕ್ರಮವು ನನಗೆ ಸಮ್ಮ ತವಿಲ್ಲ. ಸರಿಯಾದ ತಿಳುವಳಿಕೆಯಿಂದ ಎಷ್ಟು ಕಾರ್ಯಮಾಡಲು ಕಲಿಯುವರೊ ಅಷ್ಟೇ ನಿಜವಾದ ಕೆಲಸವಾಗುವದು. ತಿಳುವ ಳಿಕೆಯಿಂದ ಎಷ್ಟು ಕಾರ್ಯ ಮಾಡುವದು ಆಗುವದೋ ಅಷ್ಟು ಕಲಿತರೆ ಅದು ನಿಜವಾದ ಕಾರ್ಯವಾಗುವದು. ಕೇವಲ ಉತ್ಸಾಹ ಭರದಲ್ಲಿ ಹಾಗೂ ಭಾವನಾವಶರಾಗಿ ಮಾಡುವ ಕಾರ್ಯವು ಕೊನೆಯವರೆಗೆ ನಿಲ್ಲದು.

ಅನ್ಯ ಗ್ರಾಮೋದ್ಯೋಗಃ—ಅನ್ಯ ಗ್ರಾಮೋದ್ಯೋಗಗಳಿಗೂ ಈ ಮಾತು ಸಲ್ಲುವದು. ಸದ್ಯಕ್ಕೆ ಎಣ್ಣೆ ಗಾಣಗಳು ಹಳ್ಳಿಗಳಲ್ಲಿ ಚೆನ್ನಾಗಿ ನಡಿದಿವೆ. ಆದರೆ ಮುಂದೆ ಅವುಗಳ ವ್ಯವಹಾರವು ಎಷ್ಟರ ಮಟ್ಟಿಗೆ ಸಫಲವಾಗಬಹುದೆಂಬ ಬಗ್ಗೆ ಶಂಕೆಯದೆ. ನಿಜ ವಾಗಿ ಹೇಳಬೇಕೇದರೆ ಖಾದಿ, ಬೀಸುವದು ಮುಂತಾದ ಗ್ರಾಮೋ

ದ್ಯೋಗಗಳು ಅಂಗವಾಗಿದ್ದು ನಮ್ಮ ಗ್ರಾಮವ್ಯವಸ್ಥೆಯು ವಿಸ್ಖಲಿತವಾಗಿ ಹೋಗಿದೆ. ಇಂದು ಬಟ್ಟೆ, ಹಿಟ್ಟು, ಅಕ್ಕಿ, ಎಣ್ಣೆ ಮುಂತಾದ್ದೆಲ್ಲವು ಗಿರಣಿಗಳ ಮೇಲಾಟದಿಂದ ತುಟ್ಟಿಯಾಗಿ ಹೋಗಿರುವವು. ತಿರುಗಿ ಇವು ಹಳ್ಳಿಗಳಲ್ಲಿ ತಲೆ ಎತ್ತುವಂತೆ ಮಾಡಬೇಕಾದರೆ ಹಳ್ಳಿಗಳ ಇಡೀ ಅರ್ಥವ್ಯವಸ್ಥೆಯಲ್ಲಿ ನಾವು ಕೈಹಾಕಬೇಕಾಗುವದು. ಹಾಗೂ ಹೊಸ ರೀತಿಯಲ್ಲಿ ಅವುಗಳನ್ನು ಜೀವಿತಗೊಳಿಸಬೇಕಾಗುವದು. ಕೇವಲ ಯಾವುದೊಂದು ಅಂಗದ ವಿಷಯವಾಗಿ ಪರಿಶೀಲಿಸಿ ಪ್ರಯತ್ನ ಮಾಡುವದರಿಂದ ಕಾರ್ಯ ಕೈಗೂಡದು. ಹಳ್ಳಿಗರನ್ನು ಆಲಶ್ಯವು ಆವರಿಸಿಕೊಂಡಿದೆ. ಪ್ರಗತಿಯು ಭರದಿಂದ ಸಾಗದು. ಬಹಳ ಮೆಲ್ಲಮೆಲ್ಲಗೆ ವಿಸ್ತಾರವಾಗುವದು. ಸಮಸ್ಯೆಯು ಬಹು ಜಟಿಲವಾಗಿದೆ.

ಗ್ರಾಮೋತ್ಥಾನದ ಕಲ್ಪನೆಯಿಂದ ಎಲ್ಲ ಕಾರ್ಯ: —

ಬಾಪೂಜಿ:—ನಾನು ಇನ್ನೊಂದು ಹೆಜ್ಜೆ ಮುಂದೆ ಹೋಗಲಿಚ್ಛಿಸುವೆನು. ನೀವು ಹೇಳಿದುದೆಲ್ಲ ನನಗೆ ಸಮ್ಮತ. ಈ ಕಾರಣದಿಂದಲೇ ನಾನು ಮೂರುದಿನ ಚರಕ ಸಂಘದ ಸಭೆಯಲ್ಲಿ ಮನಬಿಚ್ಚಿ ಎಲ್ಲ ವಿಷಯುಗಳನ್ನೂ ವಿವರಿಸಿದೆನು. ಹಾಗೂ ಈ ಎಲ್ಲ ಗೊಂದಲವನ್ನೆಬ್ಬಿಸಿದೆನು. ನಾವು ಇನ್ನು ಎಲ್ಲ ಕಾರ್ಯವನ್ನು ಸಮಗ್ರ ಗ್ರಾಮೋತ್ಥಾನದ ಕಲ್ಪನೆಯ ಚೌಕಟ್ಟನಲ್ಲಿಯೇ ಕೂಡಿಸಿ ಹೊಸಪದ್ಧತಿಯಿಂದ ಸಂಘಟಿಸತಕ್ಕದ್ದಿದೆ. ಎಷ್ಟರ ಮಟ್ಟಿಗೆ ನಾವು ಮಾಡಬಲ್ಲೆವೆಂಬದನ್ನು ನೋಡೋಣ. ನಾನು ಇನ್ನೂ ಒಂದು ಹೆಜ್ಜೆ ಮುಂದಿಟ್ಟು ಹೇಳಬಯಸುವದೇನಂದರೆ ಈ ಪರಿವರ್ತನಗಳ ಕಾರಣದಿಂದ ಕೆಲ ಕಾಲ ನಮ್ಮ ಕಾರ್ಯವು ಮುಂದವಾಗಿ ಸಾಗಹತ್ತಿದರೂ ಒಂದುವೇಳೆ ಶೂನ್ಯವತ್ ಆದರೂ ಚಿಂತೆಯಿಲ್ಲ. ನಾವು ಅದನ್ನು ಸಾಧಿಸಲೇಬೇಕು. ನಾವು ಜನ

ರಲ್ಲಿ ಹುಟ್ಟಿಸಿದ ಖಾದೀ ವಿಷಯಕ ಭಾವನೆಯು ವಾಸ್ತವವಾಗಿದ್ದರೂ ಅದರ ಶಕ್ತಿಯ ವಿಷಯದಲ್ಲಿ ನಾವು ಜನರಲ್ಲಿ ಬೀರಿದ ತಿಳವಳಿಕೆಯಲ್ಲಿ ಏನಾದರೂ ದೋಷವಿದ್ದುದಾದರೆ ಅದನ್ನು ತಿರುಗಿ ನಾವು ಆಲೋಚಿಸಲೇಬೇಕಾಗುವದು. ನಮ್ಮ ಪ್ರತಿಪಾದನೆಯು ಒಂದುವೇಳೆ ಅಸತ್ಯವಾದುದಾಗಿದ್ದರೆ ಅದರಂತೆ ಸಾರಿ ಹೇಳಿ ಅದನ್ನು ಹಿಂತೆಗೆದುಕೊಳ್ಳಬೇಕಾಗುವದು.

ನಿಮ್ಮ ಖಾದಿಯನ್ನು ನೀವೇ ಸ್ವತಃ ಮಾಡಿಸಿಕೊಳ್ಳಿರೆಂದು ಪಟ್ಟಣಿಗರಿಗೆ ಹೇಳುವೆನು. ಅತ್ತಿತ್ತಲಿಂದ ಖಾದಿಯನ್ನು ಸಂಗ್ರಹಿಸಿ ಪಟ್ಟಣಿಗರಿಗೆ ಅದನ್ನು ಸಲ್ಲಿಸುವ ಲೋಭವನ್ನು ತೊರೆದು ತಿರುಗಿ ಹಳ್ಳಿಯಲ್ಲಿ ತಳವೂರಿ ಕುಳಿತುಕೊಳ್ಳುವೆನು. ಈ ಪರಿವರ್ತನದಿಂದ ಕಾರ್ಯಕರ್ತರು ಒಂದುವೇಳೆ ಓಡಿಹೋದರೂ ಹೋಗಲಿ. ನಮ್ಮ ಅಂತಃಕರಣ ಹಾಗೂ ಬುದ್ಧಿಯಲ್ಲಿ ಈ ಮಟ್ಟಿಗೆ ಪರಿವರ್ತನವಾಯಿತೆಂದರೆ ನಾವು ಇಚ್ಛಿಸಿದಂತೆ ಫಲವು ದೊರೆಯುವದು. ಚರಕ ಸಂಘವು ಕೇವಲ ಧ್ಯೇಯಧೋರಣೆಯ ರಕ್ಷಕವಾಗಿ ಉಳಿದು ಶಕ್ಯವಾಗುವ ಮಟ್ಟಿಗೆ ತನ್ನ ಕಾರ್ಯವನ್ನು ಹರಿದು ಹಂಚಿ ಎಲ್ಲ ಭಾರವನ್ನು ಕೆಳಗಿಳಿಸುವದು. ಆಮೇಲೆ ನಾವು ನೆಲಿಸಿದ ಹಳ್ಳಿಯ ಸುತ್ತುಮುತ್ತಲಿನ ನಾಲ್ಕೈದು ಮೈಲು ಅಂತರದಲ್ಲಿಯ ಹಳ್ಳಿಗಳಲ್ಲಿ ನಡೆಯುತ್ತಿರುವ ಉದ್ಯೋಗಗಳ ನಿರೀಕ್ಷಣೆಯಲ್ಲಿ ನಮ್ಮ ಎಲ್ಲ ಶಕ್ತಿ ಮತ್ತು ಧ್ಯಾನವನ್ನು ತೊಡಗಿಸುವೆವು. ಆನಂತರವೇ ನಮ್ಮ ಕೆಲಸದಲ್ಲಿ ತಥ್ಯಾಂಶವು ಎಷ್ಟಿರುವದೆಂಬದು ನಮಗೆ ಗೊತ್ತಾಗುವದು. ಹಳ್ಳಿಗರಿಗೆ ನಾವು ನಾಲ್ಕುವರೆ ಕೋಟಿ ರೂಪಾಯಿಗಳನ್ನು ಸಲ್ಲಿಸಿರುವೆವೆಂಬೀ ಮಬ್ಬಿನಲ್ಲಿಯೇ ನಾನು ಇದುವರೆಗೆ ಸಿಲುಕಿ ಬಿದ್ದಿದ್ದೆನು. ನಾನು ಕೇವಲ ನಾಲ್ಕುವರೆ ಕೋಟಿಯ ಮೋಹದಲ್ಲಿಯಲ್ಲ ಅರವತ್ತು ಕೋಟಿಯ ಮೋಹದಲ್ಲಿದ್ದೆನು. ಬೇಕಾದರೆ ನಾವು ಒಂದು ವರ್ಷದಲ್ಲಿ ಅರ

ವತ್ತು ಕೋಟಿ ರೂಪಾಯಿಗಳ ಖಾದಿಯನ್ನು ಹುಟ್ಟಿಸಬಹುದು. ಅಂದರೆ ಸ್ವರಾಜ್ಯವು ನಮ್ಮ ಕೈಯಲ್ಲಿಯೇ ಇದೆ ಎಂದೂ ನಾನು ಹೇಳುತ್ತ ಬಂದೆನು. ಒಂದುವೇಳೆ ಅದರ ಬೆನ್ನು ಹತ್ತಿದ್ದರೆ ಅದನ್ನು ಪೂರೈಸಲೂ ಬಹುದಾಗಿತ್ತು. ಆದರೆ ಒಂದು ವರ್ಷ ಮಾಡಿದುದು ಎರಡನೆಯ ವರ್ಷ ಇಲ್ಲದಾಗುತ್ತಿತ್ತು. ಆದರೆ ಇವ ತ್ತಂತೂ ಜ್ಞೇಯ ಶಕ್ಯವಿದ್ದಷ್ಟು ಕೆಳಗಿಳಿಯುವಂತೆ ಮಾಡಬೇಕಾಗಿದೆ.

ಜಾಜೂಜಿಃ— ಪಟ್ಟಣದ ಕಾರ್ಯಕರ್ತರು ಸಹ ಖಾದೀ ಕಾರ್ಯವನ್ನು ಕಡಿಮೆಮಾಡಿ ನೂಲಿನ ಬದಲು ಖಾದೀ ಕೊಡಬೇಕು ಹಾಗೂ ಅನ್ಯ ಗ್ರಾಮೋದ್ಯೋಗಗಳಲ್ಲಿಯೂ ಭಾಗವಹಿಸಬೇಕು. ಇಷ್ಟೇ ಇದರ ಮಥಿತಾರ್ಥವಾದಂತಾಯಿತು.

ಬಾಪೂಜಿ:— ಸರಿ. ಇದನ್ನು ನಾವು ಮಾಡದಿದ್ದರೆ ನಾವು ಆತ್ಮವಂಚನೆ ಮಾಡಿಕೊಳ್ಳುವದಲ್ಲದೆ ಜಗತ್ತನ್ನು ಮೋಸಗೊಳಿಸುವೆವು. ಕಾಲಬಾದೇವಿ ಖಾದೀಭಾಂಡಾರದಲ್ಲಿ ಒಂದೇ ದಿನದಲ್ಲಿ ಇಂತಿಷ್ಟು ಸಾವಿರದ ರೂಪಾಯಿ ಖಾದೀ ಮಾರಿಬಿಟ್ಟೆವೆಂಬ ಮಾತಿನಿಂದ ಹರ್ಷಿತರಾಗುತ್ತೇವೆ.

ಖಾದಿಯ ಪ್ರಮಾಣಪತ್ರ:—

ಜಾಜೂಜಿಃ— ಅಂದಮೇಲೆ ನೂಲಿನ ಬದಲು ಖಾದಿಯನ್ನು ಕೊಡುವ ಏರ್ಪಾಡು ಮಾಡಬೇಕಾಗುವದು. ಚರಕ ಸಂಘವು ಇದನ್ನು ಮಾಡದಿದ್ದರೆ ನಾವು ಮಾಡುವೆವು ನಮಗೆ ಪ್ರಮಾಣ ಪತ್ರ ಕೊಟ್ಟುಬಿಡಿ ಎಂದು ವೈಯಕ್ತಿಕ ವ್ಯಾಪಾರಸ್ಥರು ಅನ್ನಬಹುದು. ಇದನ್ನು ಮಾಡಹೋದರೆ ನಾವು ಇಲ್ಲದ ಲಂಪಟದಲ್ಲಿ ಬೀಳುವೆವು. ಅದರ ಲೆಕ್ಕಪಾಕಿ, ಕೆಲಸದ ರೀತಿ ಮುಂತಾದ್ದನ್ನೆಲ್ಲ ಪರಿಶೋಧಿಸಬೇಕಾಗುವದು. ಇದನ್ನೆಲ್ಲ ಪಾರಗಾಣಿಸುವದು ಹೇಗೆ?

ಬಾಪೂಜಿಃ— ಈ ವಿಷಯದಲ್ಲಿ ಜನರಿಗೆ ಸ್ವಾತಂತ್ರ್ಯ ಕೊಡಲೇಬೇಕಾಗಬಹುದೆಂದು ಸತೀಶ ಬಾಬೂ ಅನ್ನುತ್ತಿರುವನು.

ಜಾಜೂಜಿ:— ಎಲ್ಲ ಕೊಳ್ಳುವ ಹಾಗೂ ಮಾರುವ ಕಾರ್ಯವನ್ನು ಜನತೆಗೆ ಒಪ್ಪಿಸಬೇಕು. ಸಂಘವು ಅದನ್ನು ಮಾಡಬಾರದು. ಎಂದು ಅವರು ಅಭಿಪ್ರಾಯಪಡುತ್ತಿರುವರು.

ಬಾಪೂಜಿ:— ಅಹುದು. ಆದರೆ ಅವರ ಸೂಚನೆಯ ಬಗ್ಗೆ ನಾವು ಪೂರ್ಣ ಆಲೋಚನೆ ಮಾಡತಕ್ಕದ್ದು.

ಜಾಜೂಜಿ:— ಇದು ದುಡ್ಡಿನ ಮಾತಿದೆ. ಒಳ್ಳೊಳ್ಳೇ ಜನರು ಸಹ ಲಾಭದ ಮೋಹವನ್ನು ತಡೆಯಲು ಅಸಮರ್ಥರಾಗಿರುವರು. ಕೂಲಿಯನ್ನು ಕೊಡುವದು ನಂಬರ ತೆಗೆಯುವದು ಮುಂತಾದ ವಿಷಯಗಳಲ್ಲಿ ಅಲ್ಪಸ್ವಲ್ಪ ಲಾಭ ಮಾಡಿಕೊಳ್ಳಬೇಕೆಂಬ ದೃಷ್ಟಿಯು ಕಾರ್ಯಕರ್ತನದಿರುತ್ತದೆ. ನೂಲುವ ಹೆಣ್ಣುಮಗಳು ನೂಲು ತರುತ್ತಾಳೆ. ಕಾರ್ಯಕರ್ತನು ಎಲ್ಲಕ್ಕೂ ಗಡುತರಾಗಿದ್ದ ಲಡಿಯನ್ನು ಆರಿಸಿ ಅದರ ನಂಬರು ತೆಗೆಯುವನು. ಎಲ್ಲ ಲಡಿಗಳಿಗೂ ಅದೇ ನಂಬರನ್ನು ಜೋಡಿಸುವನು. ನೂಲಿನ ನಂಬರು ಒಂಬತ್ತೂವರೆ ಆದರೆ ಅದನ್ನು ಒಂಬತ್ತೆಂದು ಹಿಡಿಯುವನು. ಈ ರೀತಿ, ಅರಿಯದಲೆ, ಒಲವು ಲಾಭದತ್ತ ಹೊರಳುತ್ತಿರುತ್ತದೆ. ಕೆಲಸಗಾರರಾದರು ಲಾಭದ ಬಗ್ಗೆ ತಮ್ಮ ಕೈಚಳಕವನ್ನು ತೋರಿಸುತ್ತಿರುವರು. ಈ ಮೇರೆಗೆ ಮನುಷ್ಯ ಸ್ವಭಾವವು ತನ್ನಾಟವನ್ನು ಆಡುತ್ತಲಿದೆ. ಮತಿತಾರ್ಥವೆಂದರೆ, ಖಾದೀ ಕಾರ್ಯವನ್ನು ವೈಯಕ್ತಿಕ ಜನರಿಗೆ ಒಪ್ಪಿಸುವದರಲ್ಲಿ ದೊಡ್ಡ ಗಂಡಾಂತರವಿದೆ.

ಖಾದಿಯ ವ್ಯಾಪಾರವೇ ಅಸಂಭವಃ—

ಬಾಪೂಜಿ:— ಇದರ ಉತ್ತರವು ನನ್ನಲ್ಲಿದೆ. ಸತೀಶ ಬಾಬುವಿನ ದೃಷ್ಟಿಯಲ್ಲಿಯ ಗುಣವಿಶಿಷ್ಟವು ನನಗೆ ಚನ್ನಾಗಿ ತಿಳಿಯದು.

ಆದರೆ ನನ್ನ ಕಲ್ಪನೆಯಲ್ಲಿದ್ದ ಮಟ್ಟಿಗೆ ಹೇಳಬೇಕಾದರೆ ಖಾದೀ ಕಾರ್ಯವನ್ನು ಜನರಿಗೆ ಒಪ್ಪಿಸುವ ವಿಷಯವು ಮಾತ್ರ ಅದರಲ್ಲಿ ಸಮಾವೇಶವಾಗುವದಿಲ್ಲ. ಪಟ್ಟಣಿಗರಿಗೆ ನಾನು ಇಷ್ಟೇ ಹೇಳು ವೆನು. ಖಾದಿಯನ್ನು ನೀವು ಧರಿಸುವದಾದರೆ ನಾವು ಶೋಧ ಮಾಡಿ ತೆಗೆಯುವದೇ ಅದರ ಶಾಸ್ತ್ರವು. ಅದು ಒಣ ಅರ್ಥ ಶಾಸ್ತ್ರವಲ್ಲ. ಆದರೆ ಅನಿವಾರ್ಯ ರೀತಿಯಲ್ಲಿ ಅದೊಂದು ನೀತಿ ಶಾಸ್ತ್ರವಾಗಿದೆ. ಇದು ಕಾರಣದಿಂದ ಪ್ರತಿಯೊಬ್ಬನು ತನ್ನ ಖಾದಿ ಯನ್ನು ತಾನೇ ಮಾಡಿಕೊಳ್ಳಬೇಕಾಗುವದು. ಪಟ್ಟಣದಲ್ಲಿ ನೇಗಿಯ ಅನುಕೂಲತೆ ಇಲ್ಲದಿದ್ದರೆ ಅಲ್ಲಿಯಾಗಲಿ, ಅಥವಾ ಹತ್ತಿರದ ಹಳ್ಳಿಯಲ್ಲಾಗಲೀ ನೇಕಾರರ ವಸತಿ ಇದ್ದಲ್ಲಿ ನೇಗಿಯ ಏರ್ಪಾಟು ಮಾಡಿಕೊಳ್ಳಬೇಕು. ಅಲ್ಲಿ ಬಟ್ಟೆ ನೇಯಿಸಿಕೊಳ್ಳಿರಿ. ಅಲ್ಲಿ ಸ್ಪರ್ಧೆಯು ತಲೆಯೆತ್ತಲಾರದು. ನಾವು ಪಟ್ಟಣಿಗರಿಗೆ ಈ ಮೇರೆಗೆ ತಿಳಿಸಿ ಹೇಳುವೆವು. ನಾವು ಇದುವರೆಗೆ ಕೊಡುತ್ತಬಂದಿ ರುವ ಖಾದಿಯು ನಿಃಸಾರ ವಸ್ತುವು. ಅದರಲ್ಲಿ ಬಡಜನರಿಗೆ ಸಲ್ಲತಕ್ಕದ್ದೆಷ್ಟೆಂಬುದರ ಅರಿವು ಸಹ ನಮಗೆ ಇರಲಿಲ್ಲ. ಕಾರಣ ನಿಮ್ಮ ಕಣ್ಮುಂದೆಯೆ, ತಿಳಿದುಕೊಂಡು, ಖಾದಿಯನ್ನು ತಯಾರಿ ಸಿಕೊಳ್ಳಿರಿ. ಈ ರೀತಿ ನಮ್ಮ ಧೋರಣೆಯನ್ನು ಬದಲಿಸಿಕೊ ಳ್ಳುವೆವು. ಖಾದಿಯಿಂದ ಲಕ್ಷಾವಧಿ ಬಡಜನರ ಹೊಟ್ಟೆ ತುಂಬು ತ್ತಿರುವದರಿಂದ ಖಾದಿಯನ್ನು ಕೊಳ್ಳಿರೆಂದು ಪಟ್ಟಣಿಗರಿಗೆ ನಾವಿಂದು ಹೇಳಬೇಕಾಗುತ್ತದೆ. ಆದರೆ ಹೀಗೆ ಮಾಡುವದರಲ್ಲಿ ಸಂಘಕ್ಕೆ ವ್ಯಾಪಾರ-ವ್ಯವಸಾಯ ಮಾಡಬೇಕಾಗುವದು. ವ್ಯವಸಾಯವನ್ನು ಮಾಡುವದಾದರೆ ಅದರ ಬಲದಿಂದ ಎಷ್ಟೋ ಜನರ ಹೊಟ್ಟೆಗೆ ಹಾಕಬಹುದು.

ಇದು ಕಾರಣ ಖಾದೀ ವ್ಯವಸಾಯ ಮಾಡುವವರಿಗೆ ಪ್ರಮಾಣ ಪತ್ರಕೊಟ್ಟು ಅವರಿಗೆ ಸಂಘದ ಪ್ರತಿಷ್ಠೆಯನ್ನು ತಂದುಕೊಡ

ಲಾರೆವು. ಅಂದರೆ ನಾವು ಆ ಕ್ಷೇತ್ರದಿಂದಲೇ ಹೊರಬೀಳುವೆವು. ಅಂದರೆ ಪ್ರಮಾಣ ಪತ್ರದ ಸ್ವಾರಸ್ಯವೇನೂ ಉಳಿಯುದಂತಾಗುವದು. ನಾವು ಕಾರ್ಯವನ್ನು ಈ ವರೆಗೆ ಮರ್ಯಾದಿತಗೊಳಿಸುವೆವು. ಸುತ್ತುಮುತ್ತಲಿನ ಹಳ್ಳಿಗಳಲ್ಲಿ ಕೆಲಸ ನಡೆಯುತ್ತಿರುವವಷ್ಟೇ. ಅಲ್ಲಿ ನಮ್ಮ ಹತ್ತರ ಏನಾದರೂ ಖಾದೀ ಉಳಿದರೆ ಅದನ್ನು ಪಟ್ಟಣವಾಸಿಗಳು ಬೇಕಾದರೆ ಒಯ್ಯಬಹುದು. ಆದರೆ ಪಟ್ಟಣಿಗರನ್ನು ಲಕ್ಷಿಸಿ ಖಾದೀ ಉತ್ಪತ್ತಿಯನ್ನು ಮಾಡುವದಿಲ್ಲ. ಇದರಿಂದ ಕಾರ್ಯವು ಒಂದು ವೇಳೆ ಸಂಕುಚಿತವಾದರೆ ಪ್ರತ್ಯವಾಯವಾದರೂ ಏನು? ನಾನು ಇವತ್ತು ಯಾವ ಪದ್ಧತಿಯಿಂದ ಕೆಲಸ ಮಾಡುತ್ತಿರುವೆನೋ ಇದರಿಂದಂತೂ ಬಡಜನರ ನಿಜವಾದ ಅರ್ಥ ಲಾಭವನ್ನು ಮಾಡಿಕೊಡುವದು ಸಾಧ್ಯವಿಲ್ಲಾ. ಚರಕಸಂಘವು ನಿಮಗೆ ಹೆಚ್ಚಿನ ಕೂಲಿಯನ್ನು ಕೊಡುತ್ತಿರುವದೆಂದು ನಾನು ಇಂದು ಹಳ್ಳಿಗರನ್ನು ಪ್ರಲೋಭಿಸುತ್ತ ಬಂದಿರುವೆನು. ಈ ರೀತಿಯಿಂದ ನಮ್ಮ ಕಾರ್ಯವು ತಾಳಿ ಬಾಳಲಾರದು. ಅವರು ಅಪೇಕ್ಷಿಸಿದರೆ ನಿರುದ್ಯೋಗಿಗಳಿಗೆ ಉದ್ಯೋಗ ಕಲ್ಪಿಸಿಕೊಡತಕ್ಕದ್ದಿದೆ. ಅವರಿಗೆ ಬೆಲೆಯೂ ದೊರೆಯಬೇಕು. ಖಾದಿಯನ್ನು ಪಟ್ಟಣಗಳಿಗೆ ಕಳಿಸುವ ಪ್ರಸಂಗ ಬರಬಾರದು. ಈ ರೀತಿ ನಮ್ಮ ಕಾರ್ಯ ಸಾಗಿಸುವದದೆ.

ಹಳ್ಳಿಗರಿಗೆ ನಿಜವಾದ ಸಹಾಯಃ –

ಜಾಜೂಜಿಃ—ಇನ್ನು ಸ್ಪಷ್ಟವಾಗಿ ನನಗೆ ತಿಳಿಯುವಂತೆ ವಿವರಿಸಬೇಕು.

ಬಾಪೂಜಿಃ—ಇಂದು ನಾವು ಹಳ್ಳಿಗರಿಗೆ ನಿಜವಾದ ಅರ್ಥದಲ್ಲಿ ಸಹಾಯ ಸಲ್ಲಿಸುತ್ತಿರುವದಿಲ್ಲ. ನೂಲುವವರಿಗೆ ನಾನು ೩, ೪, ೬, ೮ ಆಣೆ ಕೊಟ್ಟರೆ ಅವರಿಗೆ ದಿನಕೂಲಿಯನ್ನು ಕೊಟ್ಟೆನೆಂದು ಸಂತೋಷಪಡುವೆನು. ನಿಜವಾದ ಅರ್ಥವಲ್ಲಿ ನಾನು ಅವ

ರಿಗೆ ಪರಿಹಾರ ಮಾತ್ರ ಕೊಡುತ್ತಿರುವೆನು. ಯಾಕಂದರೆ ನಾನು ಅವರಿಗೆ ಕೊಡುತ್ತಿರುವ ಕೆಲಸವನ್ನು ತಾಳುವಂತೆ ಮಾಡುವದು ನನ್ನ ಕೈಯಿಂದಾಗದು. ನಮ್ಮ ಕೈಯಲ್ಲಿ ರಾಜಸತ್ತೆ ಬಂದು ಅದರ ಬಲದಿಂದ ನಾವು ಗಿರಣಿಗಳನ್ನು ನಿಲ್ಲಿಸಿ ಬಿಟ್ಟೆವೆಂದು ತಿಳಿಯಿರಿ. ಹಾಗಾದರೆ ಒಂದುವೇಳೆ ಅದು ತಾಳಿಯೂ ತಾಳಬಹುದು. ಆದರೆ ನಿಮ್ಮ ನಿರುದ್ಯೋಗತನವನ್ನು ನಾನು ಹೋಗಲಾಡಿಸಿರುವೆನೆಂದು ಹೇಳಿ ಅವರನ್ನು ಇಂದು ಹೇಗೆ ಮೋಸಗೊಳಿಸಲಿ? ಅವರಿಗೆ ನಾನು ದುಡ್ಡನ್ನೂ ಕೊಡತಕ್ಕದ್ದಿದ್ದರೆ ಅವರಿಗೆ ಎರಡನೆಯ ಉದ್ಯೋಗಗಳನ್ನು ಕಲಿಸುವೆನು. ಸದ್ಯದ ಆರ್ಥಿಕ ರಚನೆಯ ಸಂಪೂರ್ಣ ತಿಳವಳಿಕೆ ಹಾಗೂ ಜ್ಞಾನವನ್ನು ಅವರಿಗೆ ಮಾಡಿಕೊಡುವೆನು. ಯಾವತ್ತು ನೂಲುವವರಿಗೆ ಕೆಲಸ ಕೊಡಬೇಕೆಂದು ನನ್ನ ಮನಸ್ಸಿನಲ್ಲಿದ್ದೇ ಇರುವದು. ಆದರೆ ಉತ್ಪನ್ನವಾದ ಖಾದಿಯನ್ನು ಮುಂಬೈಗೆ ಮಾತ್ರ ಕಳಿಸುವದಿಲ್ಲ. ಸುತ್ತುಮುತ್ತಲಿನ ಹಳ್ಳಿಗಳಲ್ಲಿ ಮಾರಬೇಕೆಂದು ಕಾರ್ಯಕರ್ತರಿಗೆ ಹೇಳಿಬಿಡುವೆನು. ನೂಲುವದಲ್ಲದೆ ಅನ್ಯ ಯಾವ ಉದೋಗವನ್ನು ಅವರಿಗೆ ಕೊಡಬಹುದೆಂಬ ಬಗ್ಗೆ ಆಲೋಚನೆ ಮಾಡುವೆನು. ಇದನ್ನು ನಾವು ಮಾಡದಿದ್ದರೆ ನಮ್ಮ ಕಾರ್ಯವು ಬೇರೂರಿ ನಿಲ್ಲಲಾರದು. ಹಳ್ಳಿಗರಾದರೇನು ನಾವಾದರೇನು ಅಲ್ಪಸ್ವಲ್ಪ ಪಟ್ಟಣದ ಮೋಹವು ಇದ್ದೇ ಇರುವದೆಂಬುದು ನನಗೆ ಗೊತ್ತಿದೆ. ಆದರೆ ಪಟ್ಟಣದ ಪ್ರಭಾವದ ಝುರಿಯಲ್ಲಿ ನಮ್ಮ ಜೀವನವು ಹರಿದು ಹೋಗುತ್ತಿರುವದನ್ನು ನಾವು ತಡೆಯುವೆವು. ಪಟ್ಟಣಕ್ಕಿಂತ ಹಳ್ಳಿಗಳಲ್ಲಿಯೆ ಹೆಚ್ಚು ಸೌಕರ್ಯಗಳು ಹೇಗೆ ದೊರೆಯುಬಹುದೆಂಬದನ್ನು ತೋರಿಸಿಕೊಡುವೆವು. ದಿನಾಲು ಎಂಟಾಣೆ ಕೂಲಿಯನ್ನು ಕೊಟ್ಟು ತಯಾರಿಸಿದ ಖಾದಿಯನ್ನು ಬೆಲೆ ಹೆಚ್ಚಿಸಿ ಮುಂಬೈಗೆ ಕಳಿಸುತ್ತ ಹೋದರೆ ಈ ಕಾರ್ಯವು ಎಂದೂ ನಡೆಯಲಾರದು.

ನಿಮ್ಮೊಡನೆ ದಿನಾಲು ಒಂದು ತಾಸಿನ ವರೆಗೆ ಚರ್ಚೆ ಮಾಡಲುಪಕ್ರಮ ಮಾಡಿದ ಕಾರಣವೇನಂದರೆ, ಈ ಪ್ರಶ್ನೆಯು ದಿನಾಲು ನನ್ನೆದುರು ಬಂದು ನಿಂತರೆ ನನ್ನ ಅಂತಃಕರಣವೂ ಸ್ವಚ್ಛವಾಗುವದಲ್ಲದೆ ನನಗೆ ಸ್ಪಷ್ಟವಾದ ದರ್ಶನವೂ ಆಗುವದು. ತಳದಿಂದ ಸಮಗ್ರ ಪರಿವರ್ತನ ಮಾಡತಕ್ಕದ್ದಿದೆ. ಎಂಬುದರ ಅರಿವು ನನಗಿದೆ. ಇನ್ನು ನಾವು ಉರುಳಿ ಬೀಳುವದೂ ಆದರೆ ಮಬ್ಬಿನಲ್ಲಿ ಏಕೆ ? ತಿಳವಳಿಕೆಯಿಂದ, ಎಚ್ಚರದಿಂದ ಬೀಳುವಾ. ಮೂರ್ಖರಾಗಿ ಬೇಡ. ಇಷ್ಟೆಲ್ಲ ಮಾಡಿದ ಮೇಲೂ ಒಂದುವೇಳೆ ಜನರು ನನಗೆ ಅಪಹಾಸ್ಯ ಮಾಡಿದರೆ ನಾನು ಅದನ್ನು ಸಹನ ಮಾಡುವೆನು. ಗಾಂಧಿಯು ಒಂದು ಕೋಟಿ ರೂಪಾಯಿ ಹಾಳು ಮಾಡಿದನೆಂದು ಜನರು ಅನ್ನಬಹುದು. ಅಹುದು ಹಾಳು ಮಾಡಿದೆನು. ಆದರೆ ಅದನ್ನು ತಿಂದಿಲ್ಲ. ಈ ಎಲ್ಲ ವಿಷಯುಗಳನ್ನೂ ನಿಮಗೆ ಹೇಳಿರುವೆನು. ಆದರೆ ಅವು ಸತ್ಯವಾದವುಗಳೋ ಇಲ್ಲವೋ ಎಂಬುದನ್ನು ತಿಳಿಯಲು ನನಗೆ ನಿಮ್ಮ ಸಹಾಯದ ಅವಶ್ಯಕತೆಯಿದೆ. ತಮ್ಮ ಅಭಿಪ್ರಾಯವನ್ನು ತಿಳಿಯಲಿಚ್ಛಿಸುವೆನು.

ನೂಲುವವರಿಗೆ ಬೇರೆ ಬೇರೆ ಉದ್ಯೋಗ ಕಲ್ಪಿಸುವೆವು:—

ಜಾಜೂಜಿಃ—ಕಸಬುದಾರರಿಗೆ ಕೂಲಿಯನ್ನು ಕೊಟ್ಟು ತಯಾರಿಸಿದ ಖಾದಿಯನ್ನು ಪಟ್ಟಣಗಳಿಗೆ ಕಳಿಸುತ್ತಿರುವದರಿಂದ ಹಳ್ಳಿಗರಿಗೆ ತಾತ್ಕಾಲಿಕ ಅರ್ಥಲಾಭವಾಗುತ್ತಿರುವದು. ಇದರ ಬದಲಾಗಿ ನಾವು ಇನ್ನು ಅವರಿಗೆ ಏನು ಕೊಡಬಲ್ಲೆವು ?

ಬಾಪೂಜಿಃ—ಒಂದು ವೇಳೆ ನನ್ನ ಅಧಿಕಾರ ನಡೆಯುತ್ತಿದ್ದರೆ ನಾನು ಹೀಗೆ ಹೇಳುವೆನು. ಖಾದಿಯ ಸಲುವಾಗಿ ಇದು ವರೆಗೆ ದಿನಗೂಲಿಯನ್ನು ಕೊಟ್ಟ ಜನರನ್ನು ಹೊರ ಹೊರಡಿಸಿ ಅವರಿಗೆ ಬೇರೆ ಉದ್ಯೋಗವನ್ನು ಕಲ್ಪಿಸಿಕೊಡುವೆನು. ಆ

ಉದ್ಯೋಗವಾದರೂ ಯಾವುದೆಂಬುದನ್ನು ಆಲೋಚಿಸ ಬೇಕಾಗಿದೆ. ಸೇವಾಗ್ರಾಮದ ಉದಾಹರಣೆಯನ್ನೇ ತೆಗೆದುಕೊಳ್ಳುವದಾದರೆ ಇಲ್ಲಿಯ ಜನರಿಗೆ—ಅವರಲ್ಲಿ ಬಹು ಜನರು ಹರಿಜನರಿರುವರು.—ಖಾದಿಯ ಹೊರತು ಬೇರೆ ಬೇರೆ ಉದ್ಯೋಗಗಳನ್ನೂ ಕೊಡಬಲ್ಲೆವು.

ಜಾಜೂಜಿ:—ಇಲ್ಲಿಯ ಪರಿಸ್ಥಿತಿಯು ಬೇರೆ ಇದೆ. ಇಲ್ಲಿ ಅನೇಕ ಸಂಸ್ಥೆಗಳು ಸ್ಥಾಪಿತವಾಗಿವೆ. ಅತಿಥಿಗಳು ಬರುತ್ತಿರುವರು. ಮನೆಗಳನ್ನು ಕಟ್ಟುತ್ತಿರುವರು. ಯಾವುದೊಂದು ಕೆಲಸ ನಡದೇ ಇರುತ್ತದೆ. ಇದರಿಂದ ಜನರಿಗೆ ಕೆಲಸ ಸಿಕ್ಕುವದು.

ಬಾಪೂಜಿ:—ಎಲ್ಲೆಡೆಯಲ್ಲಿಯೂ ಇದೇ ಪರಿಸ್ಥಿತಿಯನ್ನುಂಟು ಮಾಡುವೆನು. ಯಾವುದೊಂದು ಕೆಲಸವನ್ನು ಹುಡುಕಲು ನಮ್ಮ ಬುದ್ಧಿ ಹಾಗೂ ಶಕ್ತಿಸರ್ವಸ್ವವನ್ನು ಉಪಯೋಗಿಸ ಬೇಕಾಗುವದು.

ಸಮಗ್ರ ದೃಷ್ಟಿ:—

ಜಾಜೂಜಿ:—ಬೇಸಾಯ, ಗೋರಕ್ಷಣೆಗಳ ಬಗ್ಗೆ ತಾವು ಹೇಳಿದುದು ನಿಜವದೆ. ಆದರೆ ಖಾದಿಯ ಮುಖಾಂತರ ಹಳ್ಳಿಗರಿಗೆ ಚಿರವಾದ ಅರ್ಥಲಾಭವನ್ನು ಹೇಗೆ ಒದಗಿಸಿ ಕೊಡಬಹುದೆಂಬ ಬಗ್ಗೆ ಆಲೋಚಿಸ ಬೇಕಾಗುವದು. ಗಿರಣಿಯ ಬಟ್ಟೆಯು ಎದುರು ಇಲ್ಲದಿದ್ದರೆ ಲಾಭವೇ ಲಾಭವಾಗುತ್ತಿತ್ತು. ಆದರೆ ಆ ಶತ್ರುವು ಎದುರಿಸಿ ನಿಂತಿರುವವರೆಗೆ ಏನು ಮಾಡಬೇಕು ?

ಬಾಪೂಜಿಃ—ಗಿರಣಿಯಂತಹ ಬಟ್ಟೆ ದೊರೆಯಲಾರದೆಂದು ನಾನು ಹಳ್ಳಿಗರಿಗೆ ತಿಳಿಸಿ ಹೇಳುವೆನು. ಖಾದಿಯು ಒಂದು ವೇಳೆ ಒಂದು ದುಡ್ಡು ತುಟ್ಟಿಯಾಗಿದ್ದರೂ ಆ ದುಡ್ಡು ಅವರಿಗಾಗಲಿ ಅವರ ಪರಿವಾರಕ್ಕಾಗಲೀ ಕೊನೆಗೆ ಆ ಹಳ್ಳಿಯವರಿಗಾಗಲೀ ದೊರೆಯುತ್ತದೆಂದೂ ಇದರಿಂದಲೇ ಹಳ್ಳಿಯ ನೀತಿಯು

ಸುರಕ್ಷಿತವಾಗುವದೆಂದೂ ಅವರಿಗೆ ಮನವರಿಕೆ ಮಾಡಿಕೊಡುವೆನು. ಆ ನೀತಿಯ ಅಂಗಗಳ ಪರಿಚಯವನ್ನು ಅವರಿಗೆ ಮಾಡಿಕೊಡುವೆನು. ಅವರೊಂದಿಗೆ ಹಳ್ಳಿಯಲ್ಲಿಯೇ ನೆಲಿಸಿ ಉಳಿತಾಯದ ಅನ್ಯ ರೀತಿಗಳನ್ನೂ ಅವರಿಗೆ ಕಲಿಸುವೆನು. ಕೇವಲ ಖಾದಿಯ ಆಧಾರದಿಂದಲೇ ಜೀವನ ನಿರ್ವಾಹ ಸಾಗಿಸುವ ನನ್ನ ಕಲ್ಪನೆಯೇ ಅಳಿಸಿಹೋಗಿದೆ.

ಜಾಜೂಜೀ—ಅಂದರೆ ಖಾದಿ ಹಾಗೂ ಅನ್ಯ ಗ್ರಾಮೋದ್ಯೋಗಗಳಲ್ಲಿಯ ನೈತಿಕ ಮತ್ತು ಸಾಮಾಜಿಕ ಗುಣಗಳನ್ನು ಆವರಿಗೆ ಬಿಂಬಿಸಿಯೇ ಅವರಿಂದ ಕೆಲಸ ತೆಗೆದುಕೊಳ್ಳತಕ್ಕದ್ದದೆ.

ಬಾಪೂಜೀ—ಅಹುದು. ನಾನು ಕೇವಲ ಖಾದಿಯೊಂದನ್ನೇ ನನ್ನ ಕಣ್ಣುಮುಂದೆ ಇಡಲು ಬಯಸುವದಿಲ್ಲ. ಜನರ ಸ್ಥಿತಿಯನ್ನು ಸುಧಾರಿಸಲು ಕಾರಣವಾಗಿರುವ ಒಕ್ಕಲತನ ಗೋಪಾಲನ ಹಾಗೂ ಅನ್ಯತರದ ಗ್ರಾಮದ ಉದ್ಯೋಗಗಳನ್ನು ಹಳ್ಳಿಗಳಲ್ಲಿ ತಿರುಗಿ ಹೇಗೆ ಬೇರೂರಿಸಬೇಕೆಂಬ ಬಗ್ಗೆಯೂ ಆಲೋಚಿಸುತ್ತಿರುವೆನು. ನಾಲ್ಕಾರು ಹಳ್ಳಿಗಳಲ್ಲಿ ಈ ಕಾರ್ಯವನ್ನು ನಾನು ಸಾಧಿಸಿದರೆ ನನ್ನ ಸಮಸ್ಯೆಯು ಬಿಡುವದು. ಪಿಂಡದಲ್ಲಿದ್ದುದೇ ಬ್ರಹ್ಮಾಂಡದಲ್ಲಿ.

ಜಾಜೂಜೀ—ಅರ್ಥಾತ್ ಸಮಗ್ರ ದೃಷ್ಟಿಯನ್ನಿಷ್ಟೇ ವಿಕಾಸಗೊಳಿಸಬೇಕಾಯಿತು. ಖಾದಿಯ ವಿಷಯದಲ್ಲಿಯಾದರೂ ನಾವು ಇನ್ನು ಕೇವಲ ಆರ್ಥಿಕ ದೃಷ್ಟಿಗೇ ಮಹತ್ವ ಕೊಡದೆ ನೈತಿಕ ಹಾಗೂ ಸಾಮಾಜಿಕ ಅಂಗಗಳ ಜ್ಞಾನವನ್ನೂ ಜನರಿಗೆ ಮಾಡಿಕೊಡಬೇಕಾಯಿತು.

ಬಾಪೂಜೀ—ಇದುಕಾರಣವೇ ವಲ್ಲಭಸ್ವಾಮಿಯ ಪದ್ಧತಿಯಾದರೂ ಅಲ್ಪ ಮಟ್ಟಿಗೆ ನನಗೆ ಚುಚ್ಚುತ್ತಿದೆ. ಆತನು ಒಂದೇ ಅಂಗಕ್ಕೆ ಮಹತ್ವ ಕೊಟ್ಟನು. ಇಂತಿಷ್ಟು ಅವಧಿಯಲ್ಲಿ ಇಡೀ

ಹಳ್ಳಿಗೆ ಖಾದೀಮಯ ಉಡಿಸುವೆನೆಂದು ಹೇಳಿದನು. ನಾನು ಇಷ್ಟರಿಂದಲೆ ಹಿಗ್ಗುವದೊಂದು ಕಾಲವಿದ್ದಿತು. ಅದು ನನ್ನ ತಪ್ಪೆಂದು ಈಗ ಮನಗಂಡಿರುವೆನು. ಖಾದಿಯೊಂದೇ ಹಳ್ಳಿಯನ್ನು ಮೇಲಕ್ಕೆತ್ತಲಾರದು. ಇಡೀ ಗ್ರಾಮಜೀವನದ ಯಾವತ್ತು ಗ್ರಾಮೋದ್ಯೋಗಗಳ ಪುನರುಜ್ಜೀವನ ಮಾಡಿಯೇ ಗ್ರಾಮವಾಸಿಗಳನ್ನು ಉದ್ಯಮಶೀಲರನ್ನಾಗಿ ಮಾಡಿದರೆ ಮಾತ್ರ ಗ್ರಾಮೋತ್ಥಾನವಾಗುವದು.

ಜಾಜೂಜಿ:—ಬಹಳ ಮಹತ್ವಪೂರ್ಣ ಸಮಸ್ಯೆಗಳು ಎದುರು ನಿಂತವು. ಇನ್ನು ವಿಕೇಂದ್ರೀಕರಣದ ಚರ್ಚೆಯನ್ನು ನಾಳೆ ಮಾಡುವಾ.

ಆರನೆಯ ದಿನ, ಶುಕ್ರವಾರ ತಾ. ೧೩ ಅಕ್ಟೋಬರ ೧೯೪೪

ಇದು ವಿಕೇಂದ್ರೀಕರಣವಲ್ಲ-

ಜಾಜೂಜಿ:—ಇಂದು ತಾವು ವಿಕೇಂದ್ರೀಕರಣದ ಬಗ್ಗೆ ಹೇಳಿರಿ. ಒಂದು ದೃಷ್ಟಿಯಿಂದ ಉತ್ಪತ್ತಿಯ ವಿಕೇಂದ್ರೀಕರಣ ವಿದ್ದೇಇದೆ. ಯಾಕಂದರೆ ಉತ್ಪತ್ತೀ ಕೇಂದ್ರಗಳು ಅಲ್ಲಲ್ಲಿ ಹರಡಿಕೊಂಡಿವೆ. ಹೌದು ಬಂಡವಾಳವು ಮಾತ್ರ ಒಂದೇ ಸ್ಥಳದಿಂದ ಸಲ್ಲುತ್ತಿರುವದು ನಿಜ. ಸದ್ಯದಲ್ಲಿರುವ ಕೇಂದ್ರೀಯ ನಿಯಂತ್ರಣವು ಸಂಘದ ನೀತಿಯನ್ನನುಸರಿಸಿಯೇ ಇರುತ್ತದೆಂದು ನನ್ನ ಅಭಿಪ್ರಾಯ. ಬಂಡವಾಳದ ದೃಷ್ಟಿಯಿಂದ ವಿಚಾರ ಮಾಡುವದಾದರೆ, ಹಳ್ಳಿಗಳಲ್ಲಿ ನಡೆಯಬಹುದಾದ ಕಾರ್ಯಕ್ಕೆ ಹೊಣೆಗಾರರಾರು? ಕೊನೆಗೆ ಒದಗಬಹುದಾದ ಲಾಭ ಹಾನಿಯು ಯಾರದು? ಮುಂತಾದ ವಿಷಯಗಳ ಬಗ್ಗೆ ಆಲೋಚಿಸಬೇಕಾಗುವದು. ಒಂದು ರೀತಿಯೆಂದರೆ, ನಾವು ಕಳಿಸಿದ ಕಾರ್ಯಕರ್ತನು ಎಲ್ಲವನ್ನೂ ಮಾಡುವನು. ಎರಡನೆಯದೆಂದರೆ, ಹಳ್ಳಿಗರ ಸಹಾಯದಿಂದ ಅಲ್ಲಿಯ ಖಾದೀ ಪ್ರೇಮಿಗಳ ಸಂಘವನ್ನೇ

ಏರ್ಪಡಿಸಿ ಅದರ ಮುಖಾಂತರ ಕೆಲಸ ಸಾಗಿಸುವನು. ಹಳ್ಳಿಯ ಜನರೇ ವರ್ಗಣಿ, ಹಿಸೆ ಮುಂತಾದ್ದನ್ನು ಕೂಡಿಸಿಕೊಳ್ಳಬೇಕು. ಮೂರನೆಯ ಮಾರ್ಗವೆಂದರೆ, ಖಾದಿಯ ಕಸಬುದಾರರೇ ತಮ್ಮ ದೊಂದು ಸೊಸಾಯಿಟಿಯನ್ನು ಏರ್ಪಡಿಸಿಕೊಂಡು ತಮ್ಮ ಆಡ ಳತೆಯನ್ನು ತಾವೇ ಒಡೆಯರಾಗಿ ಸಾಗಿಸಬಹುದು. ಕಾರ್ಯ ಕರ್ತನಿಗೇ ಒಡೆತನ ಕೊಡುವದಾದರೆ ಧನಸಂಪತ್ತು ಮುಂತಾ ದ್ದನ್ನು ಆತನ ವಶಕ್ಕೆ ಒಪ್ಪಿಸಬೇಕಾಗುವದು. ಇದನ್ನು ಯಾವ ಶರ್ತಿನಿಂದ ಕೊಡಬೇಕು ಅಥವಾ ಆತನನ್ನು ಟ್ರಸ್ಟಿಯೆಂದು ಬಗೆ ಯಬೇಕೋ? ಕಾರ್ಯಕರ್ತನು ಒಂದುವೇಳೆ ತನ್ನ ವೈಯಕ್ತಿಕ ಸ್ವಾರ್ಥಕ್ಕಾಗಿ ಕೆಲಸ ಸಾಗಿಸಿದರೆ ಆತನ ಕಾರ್ಯದಲ್ಲಿ ಸಾಕಷ್ಟು ಗೊಂದಲೇಳುವ ಸಂಭವವಿದೆ. ಪರಸ್ಪರ ಸಹಕಾರೀ ಸಂಘಗ ಳನ್ನು ರಚಿಸುವದು ಎಲ್ಲವುಗಳಲ್ಲಿಯೂ ಮಿಗಿಲಾದದ್ದು ಕಸಬು ದಾರರ ಸ್ವಾರ್ಥಸಂಬಂಧದಿಂದ ಅಲ್ಪ ಸ್ವಲ್ಪ ಗೊಂದಲವಾಗಬ ಹುದು. ಆದರೆ ಇಷ್ಟರಿಂದ ಭಯಪಟ್ಟು ಕಾರ್ಯಕ್ಕೆ ತಡೆಯುಂಟು ಮಾಡುವದು ಸರಿಯಲ್ಲ. ಖಾದಿಯಂತೆ ಎಣ್ಣೆಗಾಣ ಕೈಕಾಗದ ಮುಂತಾದವುಗಳ ಬಗ್ಗೆಯೂ ಸಹಕಾರ-ಸಂಘಗಳನ್ನು ಏರ್ಪಡಿ ಸಬೇಕು. ಅವಶ್ಯವೆನಿಸಿದರೆ ಮುಂದೆ ಹಲವು ಹಳ್ಳಿಗಳ ಸಂಘ ಗಳ ಸಂಯುಕ್ತ ಸಮಿತಿಯೊಂದನ್ನು ಮಾರ್ಪಡಿಸಿಯೂ ಕೆಲಸ ಸಾಗಿಸಲು ಬರುವದು.

ಬಾಪೂಜಿ:— ಈ ವಿಷಯದಲ್ಲಿ ನನಗೆ ಹೆಚ್ಚಿಗೆ ಏನೂ ಹೇಳತಕ್ಕದ್ದಿಲ್ಲ. ಎಲ್ಲಿ ಕಾರ್ಯಕರ್ತರು ಕೂಡುವರೋ ಹಾಗೂ ಅವರಲ್ಲಿ ಆತ್ಮವಿಶ್ವಾಸವಿದೆಯೋ ಅಂಥಲ್ಲಿ ಕಾರ್ಯ ಪ್ರಾರಂಭ ವಾಗಲಿ. ಮೂರೂ ಮಾರ್ಗಗಳಿಂದ ಒಂದೇ ಕಾಲಕ್ಕೆ ಕಾರ್ಯ ಕೈಕೊಂಡರೂ ಅಡ್ಡಿ ಇಲ್ಲ. ಆದರೆ ನಿನ್ನಿನ ದಿನ ಉದ್ಭೂತವಾಗಿ ಚರ್ಚಿಸಲ್ಪಟ್ಟ ಪ್ರಶ್ನೆಯು ಒಂದು ವೇಳೆ ಸತ್ಯವಾಗಿದ್ದರೆ ಈ ಎಲ್ಲ

ಲಂಪಟದಿಂದ ನಾವು ಪಾರಾಗುವೆವು. ಖಾದಿಯು ಎಲ್ಲಿಯವರೆಗೆ ಮಾಟದ ಒಂದು ವಸ್ತುವಾಗಿರುವದೋ ಅಲ್ಲಿಯವರೆಗೆ ಇದೆಲ್ಲ ಲಂಪಟ ಏಳುವದೇ. ಇಂದೇ ನಾವು ಇದರಿಂದ ಪಾರಾಗಲಾರೆವೆಂಬದನ್ನೂ ನಾನು ಅರಿತಿರುವೆನು. ಆದರೆ ರೊಟ್ಟಿಯಂತೆ ಖಾದಿಯಾದರೂ ಮನೆಯಲ್ಲಿಯೇ ಸಿದ್ಧಪಡಿಸತಕ್ಕದೆಂದೂ ಪೇಟೆಯಲ್ಲಿಯ ಬಿಸ್ಕೀಟು ಎಷ್ಟೇ ಅಗ್ಗವಾಗಿ ದೊರೆತರೂ ಅದನ್ನು ತಿಂದು ನಾವು ಜೀವನ ನಿರ್ವಾಹ ಸಾಗಿಸಲಾರೆವೆಂದೂ ನಮ್ಮ ಭಾವನೆ ಇರುವವರೆಗೆ ಜನರಿಗಾದರೂ ಪೇಟೆಯಲ್ಲಿಯ ತಿಂಡಿಯನ್ನು ತಿಂದು ಬದುಕುವದರಲ್ಲಿ ನಾಶವಿರುವದೆಂಬದನ್ನು ಜನರು ಮನಗಾಣಬೇಕು. ಜನರು ಇದನ್ನು ತಿಳಿದರೆಂದರೆ ಮನೆ-ಮನೆಯಲ್ಲಿ ಅಡಿಗೆ ಮಾಡುವ ಸುಲಭವಾದ ರೀತಿಯನ್ನು ಹುಡುಕುವದಷ್ಟು ಉಳಿಯುವದು. ರೊಟ್ಟಿಯಂತೆ ಬಟ್ಟೆ ಎಂಬೀ ಸೂತ್ರವೇ ಗೂಢವಾಗುವದು. ನಂತರ ಎಲ್ಲ ಲಂಪಟವೂ ಹೊರಟು ಹೋಗುವದು. ಸಹಕಾರ ಸಂಘಗಳು ಒಂದುವೇಳೆ ರಚಿತವಾದರೆ ಅವುಗಳ ಸ್ವರೂಪವೇ ಬೇರೆಯಾಗುವದು. ಉತ್ಪತ್ತಿ ಕೇಂದ್ರಗಳಲ್ಲಿ ಈ ಮೊದಲೇ ವಿಕೇಂದ್ರೀಕರಣ ವಿದ್ದೇ ಇರುವದೆಂದು ನೀವು ಅಂದಾಗ್ಗೇ 'ಇಲ್ಲ' ಎಂದು ನಾನು ಉತ್ತರ ಕೊಡತಕ್ಕವನಿದ್ದೆನು. ಉದಾಹರಣಾರ್ಥ ಲ್ಯಾಂಕಶಾಯರದಲ್ಲಿಯೂ ಹಲವು ಬಟ್ಟೆ ಮನೆಗಳಲ್ಲಿಯೇ ತಯಾರಾಗುತ್ತದೆ. ಆದರೆ ಮನೆಯವರಿಗಾಗಿ ಅಲ್ಲ, ಒಡೆಯನ ಸಲುವಾಗಿ. ಇದಕ್ಕೆ ವಿಕೇಂದ್ರೀಕರಣವೆನ್ನುವದಾದರೆ ಅನರ್ಥವಾಗುವದು. ಇದರಂತೆ ಜಪಾನದಲ್ಲಿಯೂ ಎಷ್ಟೋ ವಸ್ತುಗಳು ಮನೆಯಲ್ಲಿಯೇ ತಯಾರಾಗುತ್ತವೆ. ಆದರೆ ಮನೆಯವರ ಉಪಯೋಗಕ್ಕಲ್ಲ. ಎಲ್ಲವೂ ಸರಕಾರಕ್ಕಾಗಿ. ಸರಕಾರವು ಎಲ್ಲವನ್ನೂ ಕೇಂದ್ರೀಕರಿಸಿಬಿಟ್ಟಿದೆ. ವಸ್ತುಗಳನ್ನೇನೋ ಮನೆಯಲ್ಲಿಯೇ ಮಾಡುತ್ತಿರುವರು. ಮಾಡುವ ರೀತಿಯಾದರೂ ಇಂಗ್ಲಂಡಕ್ಕಿಂತ ಹೆಚ್ಚು ಚನ್ನಾಗಿಯದೆ. ಆದರೆ

ಮನೆಯವರು ತಮ್ಮ ಉಪಯೋಗಕ್ಕಾಗಿ ಅವುಗಳಲ್ಲಿ ಏನನ್ನೂ ಇಟ್ಟುಕೊಳ್ಳಲಾರರು. ಇದನ್ನು ಸರಕಾರವು ಮಾಡಿಸುತ್ತದೆ. ಅಥವಾ ಸರಕಾರದ ಸಲುವಾಗಿ ನಾಲ್ಕಾರು ವ್ಯಾಪಾರಸ್ಥರು ಮಾಡಿಸುವದೂ ಉಂಟು. ಇದಲ್ಲದೆ ಆ ವಸ್ತುಗಳನ್ನು ದೇಶವಿದೇಶಗಳ ಪೇಟೆಗೆ ಕಳಿಸುವ ಸಲುವಾಗಿ ಹಡಗ ಮುಂತಾದ್ದನ್ನೆಲ್ಲ ಸರಕಾರವು ಕೊಡುತ್ತಿರುವುದು ಹಾಗೂ ಈ ರೀತಿಯಿಂದ ಬೇರೆ ಬೇರೆ ದೇಶಗಳ ಧನವನ್ನು ತನ್ನೆಡೆ ಸೆಳೆಯುತ್ತದೆ. ಲ್ಯಾಂಕಶಾಯರದ್ದಾದರೂ ಇದೇ ಹಾಡು. ಅಲ್ಲಿಯ ಗಿರಣಿಗಳಲ್ಲಿ ಲಕ್ಷಾವಧಿ ಧೋತರಗಳು ಹುಟ್ಟುತ್ತವೆ. ಆದರೆ ಅಲ್ಲಿಯವರು ಕೊಳ್ಳಲಿಚ್ಛಿಸಿದರೆ ಅವು ಅವರಿಗೆ ದೊರೆಯುವು. ಅವೆಲ್ಲ ಹಿಂದುಸ್ಥಾನದ ಜನರ ಸಲುವಾಗಿ ಮದ್ರಾಸ, ಮುಂಬೈ, ಕಲಕತ್ತೆಗಳಿಗೆ ಕಳಿಸುವರು. ಅದರಂತೆ ಆಫ್ರಿಕೆಯ ಸಲುವಾಗಿ ತಯಾರಿಸಿದ ಸರಕು ಅಲ್ಲಿಗೆ ಹೋಗುವದು. ಇದೆಲ್ಲಕ್ಕೆ ನಾನು ಏಕೇಂದ್ರೀಕರಣವೆನ್ನಲಾರೆನು.

ಖಾದಿಯು ಮಾರಾಟದ ವಸ್ತುವಲ್ಲ.

ನಾವೂ ಅದನ್ನೇ ಮಾಡಿರುವೆವು. ತಾವು ಚರಕ ಸಂಘದ ಕೆಲಸ ಮಾಡುತ್ತಿರುವವರು ಹಾಗೂ ತಯಾರಾದ ನೂಲನ್ನು ಸಂಘಕ್ಕೆ ಸಲ್ಲಿಸತಕ್ಕವರು, ಎಂಬುದಿಷ್ಟೇ ನಮ್ಮ ಕಸಬುದಾರರಿಗೆ ಗೊತ್ತು. ನಾವು ಕೂಲಿಯನ್ನು ಹೆಚ್ಚಿಸಿದೆವು. ಕಸಬುದಾರರು ಹರ್ಷಿತರಾದರು. ಖಾದಿಯು ಮಾರಾಟದ ವಸ್ತುವಲ್ಲ. ಉಡುವ ವಸ್ತುವಿದೆ ಎಂಬೀ ಮಟ್ಟಿಗೆ ನಾವು ಬಂದುದಾದರೆ ಖಾದಿಯ ಸಂದೇಶವನ್ನು ಪೂರ್ಣವಾಗಿ ಅರಿತಿರುವೆವೆಂದೂ ಅದರ ಶಕ್ತಿಯ ಮರ್ಯಾದೆಯನ್ನು ತಿಳಿದಿರುವೆವೆಂದೂ ಬಗೆಯ ತಕ್ಕದ್ದು. ರಾಜ ತಂತ್ರವು ನಮ್ಮ ಕೈಗೆ ಬಂದುದಾದರೆ ಇಡೀ ದೇಶಕ್ಕೇ ಖಾದಿಯನ್ನು ಉಡಿಸುವದು ಶಕ್ಯವಾಗಬಹುದು. ಇಂದು ಖಾದೀ ಹುಟ್ಟುತ್ತಿರುವ ಸ್ಥಳಗಳಿಂದ ದೇಶದಲ್ಲೆಲ್ಲ ಅದನ್ನು ಪಸರಿಸ ಬಹುದು. ಅಂದ

ಮೇಲೆ ಭವಿಷ್ಯ ಕಾಲದಲ್ಲಿ ದೇಶದ ಸರಕಾರವು ಚರಕ ಸಂಘಕ್ಕೆ 'ನೀವು' ಕೇವಲ ವಸ್ತ್ರಸ್ವಾವಲಂಬನವನ್ನು ಸಾಧಿಸುವ ಸಂಸ್ಥೆಯಾಗಿರಿ. ನಿಮಗೆ ಬೇಕಾದ ಸಾಧನ ಸಾಮಗ್ರಿಗಳನ್ನು ನಾವು ಒದಗಿಸಿ ಕೊಡುವೆವು. ನೀವು ದೇಶವು ಸ್ವಾವಲಂಬಿಯಾಗುವಂತೆ ಮಾಡಿರಿ' ಎಂದು ಆಹ್ವಾನ ಕೊಟ್ಟರೆ ಅದನ್ನು ಕೂಡಲೆ ಮಾಡಿ ತೋರಿಸುವಂತಹ ಪರಿಸ್ಥಿತಿಯನ್ನು ಇಂದೇ ನಾವು ಏಕೆ ನಿರ್ಮಿಸಬಾರದು ? ಆದರೆ ಇಂದೇ ಸರಕಾರವು ನಮಗೆ—'ತೆಗೆದು ಕೊಳ್ಳಿರಿ. ನಾವು ಗಿರಣಿಗಳನ್ನೆಲ್ಲ ಮುಚ್ಚಿಬಿಡುವೆವು. ದೇಶಕ್ಕೆಲ್ಲ ಖಾದಿಯನ್ನು ಉಡಿಸಿರಿ.' ಎಂದು ಹೇಳಿದರೆ ನಾವು ಮಾಡಲಾರೆವು. ಈ ಕಾರಣದಿಂದ ಖಾದಿಯು ನಮ್ಮನ್ನು ಎಲ್ಲಿಯವರೆಗೆ ಮುಟ್ಟಿಸಬಹುದೆಂಬದನ್ನು ನಾವು ಅರಿಯ ಬೇಕಾಗುವದು. ನಾನಾದರೂ ಇದನ್ನು ಚೆನ್ನಾಗಿ ಅರಿತಿರುವೆನೆಂದು ಸ್ವತಃ ಹೇಳಲಾರೆ. ಆದರೆ ಖಾದಿಯು ಮಾರಾಟದ ವಸ್ತುವಲ್ಲ. ಉಡುಪಿನ ವಸ್ತುವಾಗಿರುವದೆಂಬುದನ್ನು ಸ್ಪಷ್ಟವಾಗಿ ಮನಗಂಡಿರುವೆನು. ಇದರಿಂದ ಖಾದಿಯ ಕಾರ್ಯ ನೀತಿಯನ್ನು ಬದಲಿಸುವ ಮಾತು ತಲೆದೋರುವದು. ಸಮಗ್ರ ರೀತಿಯಲ್ಲಿ ಗ್ರಾಮೋತ್ಥಾನ ಮಾಡತಕ್ಕದ್ದಿದೆ ಎಂಬುದೂ ಅದರಲ್ಲಿ ಖಾದಿಗೆ ಒಂದು ಸ್ಥಾನ—ಒಳ್ಳೇ ಮಹತ್ವ ಪೂರ್ಣ ಸ್ಥಾನವಿದೆ ಎಂಬುದೂ ನನ್ನ ತಲೆಯಲ್ಲಿ ಇಂದು ಸುತ್ತುತ್ತಿರುವದು. ಇದರಂತೆಯೇ ಎಣ್ಣೆಗಾಣ ಮೊದಲಾದ ಅನ್ಯ ಉದ್ಯೋಗಗಳೂ ಇವೆ. ಈ ದೃಷ್ಟಿಯಿಂದ ನಾವು ನೋಡಿದರೆ ನಮ್ಮ ಕಾರ್ಯದಿಂದ ಹಿಂದುಸ್ಥಾನಕ್ಕೆ ಒಳ್ಳೇ ಲಾಭವೇ ಲಾಭವಾಗುವದು. ಹಾಗೂ ಸರಕಾರದ ಅಧಿಕಾರ ಸೂತ್ರಗಳು ನಮ್ಮ ಕೈಯಲ್ಲಿ ಬಂದರೂ ನಾವು ಕಾರ್ಯಕ್ಕೆ ಅಂಟಿಕೊಂಡೇ ನಿಲ್ಲುವೆವು. ಎಂದೂ ಹಿಂದೆ ಸರಿಯೆವು.

ಸ್ವತಃ ಉಡುವ ಸಲುವಾಗಿ ನೂಲುವದು.

ಜಾಜೂಜೀ—ಅಂದರ್ಮೇಲೆ ನಮ್ಮ ಎಲ್ಲ ಪ್ರಯತ್ನಗಳು ಸ್ವಾವಲಂಬನ ಮತ್ತು ಸ್ವತಃ ಖಾದೀ ಧರಿಸುವದು ಇತ್ತಕಡೆಗೆ ಸಾಗಬೇಕಾದವೆಂಬ ನಿಷ್ಕರ್ಷವಾದಂತಾಯಿತಲ್ಲವೆ ?

ಬಾಪೂಜೀ—ಇದು ಸರಿಯೆ. ಆದರೆ ಈ ವಿಷಯದಲ್ಲಿ ನನಗೆ ಪ್ರತ್ಯಕ್ಷ ಅನುಭವವಿರುವದಿಲ್ಲಾದ್ದರಿಂದ ನಾನು ಹೀಗೆ ಆಗ್ರಹ ತೊಡಲಾರೆ. ಮೊದಲು ನಾನು ಖಾದಿಯ ಉಪಕ್ರಮ ಮಾಡಿ ನಂತರ ಆ ಬಗ್ಗೆ ಅಭ್ಯಾಸ ಮಾಡಿದೆನು. ಈ ಮೇರೆಗೆ ನನ್ನನ್ನು ಮೋಸಗೊಳಿಸಹತ್ತಿರುವೆನು. ನಾನು ಕೊಟ್ಟದ್ದೆಂದರೆ ದುಡ್ಡು ಆದರೆ ತಿರುಳನ್ನು—ಸ್ವಾವಲಂಬನವನ್ನು—ಜನರಿಗೆ ಕೊಡ ಡಾದೆನು. ಕೂಲಿಯ ರೂಪದಲ್ಲಿ ಜನರಿಗೆ ಹಣಕೊಟ್ಟು ಇದ ರಲ್ಲಿ ಸ್ವರಾಜ್ಯವು ಪೂರ್ಣವಾಗಿ ಅಡಕವಾಗಿರುವದೆಂದು ಹೇಳಿ ದೆನು. ಜನರು ನನ್ನಲ್ಲಿ ವಿಶ್ವಾಸವನ್ನಿಟ್ಟು ಆ ಮಾತು ನಂಬಿ ದರು. ಇಂದೂ ನಂಬುತ್ತಿರುವರು. ಇನ್ನು ಇದು ಎಷ್ಟರ ಮಟ್ಟಿಗೆ ಸಾಧ್ಯವಾಗಬಹುದೆಂಬ ಶಂಕೆಯು ನನ್ನನ್ನು ಬಾಧಿಸ ತೊಡಗಿದೆ. ಇದೇ ಪ್ರಕಾರ ಖಾದೀ ಕಾರ್ಯವನ್ನು ನಡೆಸುತ್ತ ಹೋದರೆ ಅದು ನಡೆಯಲಾರದೆಂಬ ಅಂಜಿಕೆ ನನ್ನಲ್ಲುಂಟಾಗಿದೆ.

ಜಾಜೂಜೀ— ಈಗ ಪಟ್ಟಣಗಳಲ್ಲಿರುವ ಖಾದೀ ಭಾಂಡಾ ರಗಳು ಕೊನೆಯ ವರೆಗೆ ನಡೆಯಲಾರವೆಂಬ ಕಲ್ಪನೆಯ ಚಿತ್ರವು ತಮ್ಮ ಕಣ್ಣೆದುರು ಇರುವುದೋ ?

ಬಾಪೂಜೀ:—ಅಹುದು. ಅಂಥ ಚಿತ್ರವು ನನ್ನ ಕಣ್ಣೆದುರು ಇದೆ.

ಜಾಜೂಜೀ:— ಹಾಗಾದರೆ ಜನರು ನೂಲನ್ನು ಕೊಟ್ಟು ಅದರ ಬದಲಾಗಿಯೆ ಖಾದಿಯನ್ನು ಪಡೆಯತಕ್ಕದ್ದೆಂಬ ನಿರ್ಣ ಯಕ್ಕೆ ನಾವು ಬರಬೇಕಾಯಿತು.

ಬಾಪೂಜಿ:— ಆದರ ಹೊರತು ಕೆಲಸ ನಡೆಯಲಾರದೆಂದು ನಮಗೆ ತೋರಿದ ಕೂಡಲೆ ನಾವು ನೂಲಲು ಕಲಿತೆವು. ಆದರೆ ನೇಗಿಯ ವಿಷಯದಲ್ಲಿ ಮಾತ್ರ ನಮ್ಮಿಂದ ವಿಶೇಷವಾದುದೇನೂ ಮಾಡುವದಾಗಲಿಲ್ಲ. ನೇಕಾರರನ್ನಾದರೂ ಅದೇ ರೀತಿಯಲ್ಲಿ ತಯಾರಿಸಬೇಕಾಗಬಹುದೆಂದು ಈಗ ಅನಿಸಹತ್ತಿದೆ. ನಾವು ಮಾಡ ತಕ್ಕ ಪರಿವರ್ತನೆಗಳನ್ನೆಲ್ಲ ವಿಚಾರಪೂರ್ವಕವಾಗಿ, ಅಂದು ತಿಳಿದು ಮಾಡಬೇಕಾಗುವದು.

ಜೀವನ ವೇತನದ ಬಗ್ಗೆ ನಾವು ಮಾಡಿದಂತೆ, ಕೆಲ ಕಾಲ ತೋಚಿದಂತೆ ಮಾಡುತ್ತ ಹೋದೆವು. ಆ ಮೇಲೆ ಬುದ್ಧಿಯು ತಿಳಿಯಾದಂತೆ ಇದು ಖಾದಿಯು ಪರಮಾರ್ಥವಾಗಿರದೆ ನೂಲು ವವರ ಶೋಷಣವಾಗಿರುವದೆಂದು ನಾವು ಬಗೆಯಹತ್ತಿದೆವು. ಆಗ್ಗೆ ನಾವು ಕೂಲಿಯನ್ನು ಹೆಚ್ಚಿಸಿದೆವು. ಎಂಟಾಣೆ ಕೊಡಬೇ ಕೆಂದು ನಾನಂದೆ. ಎಂಟಾಣೆ ಬೇಡ ಮೂರಾಣೆ ಕೊಡಬಹು ದೆಂದು ನೀವು ಅಭಿಪ್ರಾಯಪಟ್ಟಿರಿ. ಒಳ್ಳೇದು ಮೂರಾಣೆಯನ್ನೇ ಕೊಡಿರೆಂದು ನಾನು ಹೇಳಿದೆನು. ಮುಂದೆ ಮೂರಾಣೆಯಿಂದ ನಾಲ್ಕಾಣೆಯಾಯಿತು. ಈ ಹೊಸ ವಿಧಾನವಾದರೂ ಹೀಗೆಯೇ ಅದೆ. ನೀವು ಇದನ್ನು ಸ್ವೀಕರಿಸಿರಿ. ಮುಂದೆ ಶೋಧ ಮಾಡುತ್ತ ಮಾಡುತ್ತ ಬೆಳವಣಿಗೆಯಾಗುವದು. ನೀವು ಮೂರು ರೀತಿಗಳಲ್ಲಿ ಆಲೋಚನೆ ಮಾಡಬೇಕೆಂದು ತಿಳಿಸಿದಿರಿ. ಅಗತ್ಯವಾಗಿ ಮಾಡಿರಿ. ಪ್ರತಿಯೊಂದು ಜಿಲ್ಹೆಯಲ್ಲಿ ನಮ್ಮ ಸಂಘಟನೆ ನಡೆದಿದೆ. ಸಂಚಾ ಲಕರಿರುವರು. ಹಲ ಕಾರ್ಯಕರ್ತರನ್ನು ಕರೆಯಿಸಿ ಅವರೊಡನೆ ವಿವರವಾಗಿ ವಿಚಾರವಿನಿಮಯ ಮಾಡಿರಿ. ಅಹುದು. ಕೆಲಸವು ಸಂಕೋಚವಾಗಬಹುದೆಂದು ನಾನು ಅವಶ್ಯವಾಗಿ ಹೇಳುವೆನು. ಆದರೆ ಇದಕ್ಕೆ ನಾನು ಸೊಪ್ಪು ಹಾಕೆನು. ಯಾರೂ ನೂಲ

ದಿದ್ದರೆ ನಾನೊಬ್ಬನೆ ನೂಲುವೆನು. ಖಾದಿಯ ಧೋತರಗಳು ಆಗು ವದೇ ಶಕ್ಯವಾಗದೆಂದು ಖಾದಿಯ ಪ್ರಾರಂಭ ಕಾಲದಲ್ಲಿ ನನಗೆ ಹೇಳಲಾಗಿತ್ತು. ಹಾಗಾದರೆ ನಾನು ತಟ್ಟು ಕಂಬಳಿಯನ್ನು ಸುತ್ತಿ ಕೊಂಡು ತಿರುಗುವೆನು. ಆದರೆ ಗಿರಣಿಯ ಧೋತರವನ್ನು ಉಡ ಲಿಕ್ಕಿಲ್ಲೆಂದು ನಾನು ಹೇಳಿದ್ದೆನು. ಶೀರಿತು ಒಂದು ತಿಂಗಳಲ್ಲಿಯೆ ಮಗನಲಾಲನು ಧೋತರ ತಯಾರಿಸಿಕೊಟ್ಟನು. ಗಂಗಾ ಬಹಿನ ಮುಜುಮುದಾರ ಇವರು ಧೋತರಗಳನ್ನು ಕಳಿಸಿ ನಿಮಗೆ ಬೇಕಾ ದಷ್ಟು ನೇಯಿಸಿ ಕಳಿಸುವೆನೆಂದು ಪತ್ರ ಬರೆದರು.

ಖಾದಿಯಿಂದ ಸ್ವರಾಜ್ಯಃ—

ಜಾಜೂಜಿಃ— ಅಂದರೆ, ಈಗ ಪಟ್ಟಣಗಳಲ್ಲಿಯ ಭಾಂಡಾ ರಗಳಲ್ಲಿ ದೊಡ್ಡ ಪ್ರಮಾಣದಿಂದ ಆಗುತ್ತಿರುವ ಖಾದೀ ಮಾರಾಟ ವನ್ನು ಬಂದ ಮಾಡಬೇಕಾದಂತಾಯಿತು. ಜನರಿಗೆ ನೂಲಲು ಹೇಳಬೇಕೆಂಬದಾಯಿತು. ಇದರ ಪರಿಣಾಮವಾಗಿ ಒಮ್ಮೆ ನಮ್ಮ ಬಹುಕಾರ್ಯವು ಬಂದಾಗಬಹುದು.

ಬಾಪೂಜಿಃ— ನಿಮ್ಮ ಸೂಚನೆಯಲ್ಲಿ ವ್ಯವಹಾರ ದೃಷ್ಟಿ ಯಿದೆ. ಅದನ್ನು ಸ್ವೀಕರಿಸಲು ನನಗೇನೂ ಬಾಧೆ ಇಲ್ಲ. ಜನ ರಂತೂ ಈಗ ಕಂಗಾಲರಾಗಿರುವರು. ಒಂದು ರೊಟ್ಟಿಯನ್ನು ಕೊಟ್ಟರೆ ಸಾಕು. ಹೇಳಿದುದನ್ನು ಮಾಡುವರು. ಪರಿಪೂರ್ಣ ವಿಚಾರಮಾಡದೆ ಹಾಗೇ ಕಾರ್ಯ ಸಾಗಿಸಿದರೆ ನಾವು ಅವರನ್ನು ಮೋಸಗೊಳಿಸುವೆವಲ್ಲದೆ ನಾವೂ ವಂಚಿತರಾಗುವೆವು. ಈಗ ನಾವು ಅವರಿಗೆ ಕೊಡುತ್ತಿರುವದು ಕೂಲಿಯಂತಹದು? ಬರಗಾಲದಲ್ಲಿ ಕಲ್ಲು ಒಡೆಯುವವರಿಗೆ ಅಥವಾ ಲೈನಮಾರ್ಗ ಮಾಡುವವರಿಗೆ ಕೊಡುತ್ತಿರುವ ರೀತಿಯಂತೆ ಇದೂ ಒಂದುತರದ ಭಿಕ್ಷೆಯೇ ಆಗಿದೆ. ಅದಕ್ಕೆ ಯಾವ ಬಗೆಯ ಸ್ಥಿರವಾದ ಬೆಲೆಯಿರುವದಿಲ್ಲ.

ಜಾಜೂಜಿಃ— ಖಾದೀ ಧಾರಿಗಳಿಗೆ ಖಾದಿಯ ಬೆಲೆಯಲ್ಲಿ ಹಣದ ಬದಲು ಸ್ವತಃ ನೂತ ನೂಲನ್ನು ಕೊಡಿರೆಂದು ಹೇಳುವ ಮುಂಚೆ ನಮ್ಮಲ್ಲಿ ಎಷ್ಟೊಂದು ಅನುರಾಗವಿರುತ್ತದೆಂಬದನ್ನು ಆಲೋಚಿಸತಕ್ಕದ್ದು. ಪ್ರತ್ಯಕ್ಷ ಚರಕ ಸಂಘದ ಕಾರ್ಯಕರ್ತರ ಮಾತನ್ನೇ ಎತ್ತುತ್ತಿರುವೆನು. ಪ್ರತಿಯೊಬ್ಬ ಕಾರ್ಯಕರ್ತನು ಪ್ರತಿತಿಂಗಳು ಏನಿಲ್ಲೆಂದರು ಏಳುವರೆ ಲಡಿ ನೂಲನ್ನು ನೂಲಲೇ ಬೇಕೆಂಬ ನಿಯಮುವನ್ನು ಸಂಘವು ಹಾಕಿಟ್ಟಿರುವದು. ಆದರೆ ಇದರ ಪರಿಣಾಮವು ಸಂತೋಷಕವಾಗಿರುವದಿಲ್ಲ. ಜನತೆಯಲ್ಲಿ ನೂಲುವವರ ಸಂಖ್ಯೆ ತೀರ ಕಡಿಮೆ ಇದೆ. ಹಾಗೂ ಹಳ್ಳಿಗಳಲ್ಲಿ ನೂಲುವವರೆಲ್ಲರು ಕೇವಲ ಕೂಲಿಗಾಗಿ ನೂಲುತ್ತಿರುವರು. ತಮ್ಮ ಸಲುವಾಗಿ ನೂಲುವವರು ತೀರ ವಿರಳ. ಸ್ಥಿತಿಯು ಹೀಗದೆ, ಇಂಥ ಪರಿಸ್ಥಿತಿಯಲ್ಲಿ ನೀವು ಹೇಳುತ್ತಿರುವ ಪರಿವರ್ತನವು ಎಷ್ಟರಮಟ್ಟಿಗೆ ಸಫಲವಾಗಬಹುದೆಂದು ಹೇಳುವದು ಕಠಿಣವಾದುದು.

ಬಾಪೂಜಿಃ— ಖಾದಿಯೆಂದರೆ ಕೂಲಿಯನ್ನು ಒದಗಿಸಿಕೊಡ ತಕ್ಕಂತಹ ಒಂದು ಉದ್ಯೋಗವಾಗಿರುವದೆಂಬದನ್ನು ನಮ್ಮ ವಿಚಾರ ಸೀಮೆಯಿಂದ ಹೊರದೂಡತಕ್ಕದ್ದೆಂಬದನ್ನು ನಾವೆಲ್ಲರೂ ಅರಿಯಬೇಕು. ಅದು ಒಂದು ವೇಳೆ ಅಂಥ ಉದ್ಯೋಗವೇ ಇದ್ದು ದಾದರೆ ತಿರುಗಿ ಅದನ್ನು ವ್ಯಾಪಾರದ ರೀತಿಯಲ್ಲಿಯೇ ಸಾಗಿಸ ಬೇಕಾಗುವದು. ಗಿರಣಿಗಳ ಮುಖಾಂತರ ನಾವು ಒಂದೊಂದು ಪಟ್ಟಣದಲ್ಲಿ ಒಂದು ಲಕ್ಷ ಇಲ್ಲವೆ ಹಲವು ಸಹಸ್ರ ಜನಗಳಿಗೆ ನಾವು ವೇತನವನ್ನು ಸಲ್ಲಿಸುತ್ತಿದ್ದರೆ ಖಾದಿಯ ಮುಖಾಂತರ ಹದಿನೈದು ಸಹಸ್ರ ಹಳ್ಳಿಗಳಲ್ಲಿಯ ಬಡಜನರ ಕಿಸೆಯಲ್ಲಿ ಒಂದು ಕೋಟಿ ರೂಪಾಯಿ ಹಾಕುತ್ತಿರುವೆವು. ಇಷ್ಟೇ ಅವುಗಳಲ್ಲಿಯ ವ್ಯತ್ಯಾಸ. ಎರಡೂ ಉದ್ಯೋಗಗಳಂತೂ ಆದವು. ಅಂದಮೇಲೆ ಖಾದಿಯನ್ನೇ ಧರಿಸಿರಿ, ಗಿರಣೀ ಬಟ್ಟೆಗೆ ಬಹಿಷ್ಕಾರ

ಹಾಕಿರಿ ಎಂಬೀ ಮಾತಿನಲ್ಲಿಯ ಒಗರು ಕುಸಿದು ಬೀಳುವದಲ್ಲದೆ ಸ್ವರಾಜ್ಯ ಸಾಧನದ ಪ್ರತಿಪಾದನೆಯೂ ಅದರಲ್ಲಿ ಉಳಿಯಲಾರದು. ಮೂಲತಃ ಖಾದೀ ಕಲ್ಪನೆಯ ಹಿನ್ನೆಲೆಯಲ್ಲಿ ಗ್ರಾಮೋತ್ಥಾನ ಅದರ ಜೊತೆಗೆ ತನ್ನಿಂದ ತಾನೆ ಸ್ವರಾಜ್ಯದ ಶಕ್ತಿಯನ್ನು ಜನತೆಯಲ್ಲಿ ನೆಲೆಗೊಳಿಸುವದು ಈ ಪ್ರತಿಪಾದನೆ ಇರುವದು.

ಹಳ್ಳಿಗರನ್ನು ಶಕ್ತಿಯುಕ್ತರನ್ನಾಗಿ ಮಾಡುವದುಃ—

ಪಟ್ಟಣಿಗರ ಭಾವನೆಯ ಬಲದಿಂದ ಹಳ್ಳಿಗರಿಗೆ ಸಹಾಯ ನೀಡುತ್ತ ಹೋಗುವದು ಸಾಕಾಗದು. ಆದರೆ ಹಳ್ಳಿಗರಲ್ಲಿ ತಮ್ಮ ಜೀವನ ಸಮಸ್ಯೆಗಳನ್ನು ಎದುರಿಸುವ ಶಕ್ತಿಯನ್ನು ತಂದುಕೊಟ್ಟು ಮುಂದುವರಿಯುವದಿದೆ. ನಾವು ಗಿರಣಿಗಳನ್ನು ಒಂದು ವೇಳೆ ಹೆಚ್ಚಿಸಿದರೆ ಜನರಿಗೆ ಪೂರ್ಣ ರೀತಿಯಿಂದ ಬಟ್ಟೆ ದೊರೆಯುವದು. ಗಿರಣಿಗಳೆಲ್ಲ ಸರಕಾರದ ವಶದಲ್ಲಿದ್ದರೆ ಬಟ್ಟೆಯ ಬೆಲೆಯೂ ಒಂದು ವೇಳೆ ಕಡಿಮೆಯಾಗಬಹುದು. ಹಾಗೂ ಜನರ ಶೋಷಣೆಯೂ ಆಗ ಲಾರದು. ಆದರೆ ಜನರಲ್ಲಿಯ ಆಲಸ್ಯ ರೋಗವನ್ನು ನಿವಾರಿಸಲು ಖಾದಿಯೊಂದು ದೊಡ್ಡ ಪ್ರತಿಕಾರ ಸಾಧನವಾಗಿರುವದು. ಅದು ಜನತೆ ಯಲ್ಲಿ ಸ್ವರಾಜ್ಯ ಶಕ್ತಿಯನ್ನು ಹುಟ್ಟಿಸುವ ವಸ್ತುವಾಗಿದೆ. ಎರಡ ನೆಯ ವಸ್ತುಗಳನ್ನೂ ಇದೇ ರೀತಿ ಮಾರ್ಪಡಿಸುವದಾದರೆ ಹಳ್ಳಿ ಗಳು ಕೂಡಲೆ ಸ್ವಾವಲಂಬಿಯಾಗುವವು. ಸಬಕಾರದಂತಹ ಪದಾ ರ್ಥವನ್ನು ಸೌಳಿಸಿಂದ ಮನೆಯಲ್ಲಿಯೇ ತಯಾರಿಸಿಕೊಂಡು ಸ್ವಚ್ಛರಾಗಿರುವರು. ಆ ಸಬಕಾರದಲ್ಲಿ ಟಾಟಾ ಅಥವಾ ಗೋದ್ರೇಜ ರಂತಹ ಸಾಬಾಣ ಕಾರಖಾನೆಗಳ ಸುವಾಸನೆ ಮತ್ತು ಅಂಥ ಅಂದವಾದ ಪ್ಯಾಕಿಂಗ ಇರಲಿಕ್ಕಿಲ್ಲ. ಆದರೆ ಹಳ್ಳಿಗಳ ಸಲುವಾಗಿ ಉಪಯುಕ್ತತೆ, ಸ್ವಾವಲಂಬನ ದೃಷ್ಟಿಯಿಂದ ಖಾದಿಯಷ್ಟೇ ಯೋಗ್ಯತೆಯು ಅದಕ್ಕೂ ಬರುವದು. ಸಮಗ್ರ ಗ್ರಾಮೋತ್ಥಾನದ ಶಕ್ತಿಯನ್ನು ಅಳವಡಿಸಿಕೊಂಡಿರುವ ಖಾದಿಯ ಒಂದು ಭವ್ಯವಾದ

ಚಿತ್ರವನ್ನು ಇಷ್ಟು ದಿನ ನನ್ನ ಕಲ್ಪನೆಯಲ್ಲಿ ರಚಿಸಿಕೊಂಡಿದ್ದೆನು ಅದು ಈಗ ಮಸಕಾಗಿ ಹೋಗಿದೆ. ನಾನು ಎಷ್ಟೋ ಜನ ಕಾರ್ಯಕರ್ತರೊಂದಿಗೆ ವಿಚಾರ ವಿನಿಮಯ ಮಾಡಿರುವೆನು. ಆ ಅನುಭವದಿಂದ ನನಗೆ ತೋರುವದೇನಂದರೆ, ಆ ಚಿತ್ರವನ್ನು ನನ್ನ ಕೈಯಿಂದ ನಾನೇ ಅಳಿಸಬೇಕಾಗಬಹುದು. ನಾನು ಖಾದಿಯ ಮಂತ್ರವನ್ನುಪದೇಶ ಮಾಡತಕ್ಕವನಾದ್ದರಿಂದ ನಾನು ಅದನ್ನು ಸ್ವೀಕರಿಸಲೇಬೇಕು. ಸತ್ಯದ ಬೇಡಿಕೆ ಇದೇ. ಸೋಲು ಅಥವಾ ದುರ್ಬಲತೆಗೆ ವಶನಾಗಿ ಹೀಗೆ ಮಾಡುವದಿಲ್ಲ. ಜ್ಞಾನಪೂರ್ವಕ ವಾಗಿಯೇ ಮಾಡುವೆನು. ಖಾದಿಯ ಬಗ್ಗೆ ನಾನು ಮಾಡಿದ ಪ್ರತಿಪಾದನೆಯಲ್ಲಿ ಅತಿಶಯೋಕ್ತಿ ಇದ್ದುದಾದರೆ ಪ್ರಪಂಚದ ಎದುರು ನಾನು ಅದನ್ನು ತಿದ್ದಿಕೊಳ್ಳಲೇಬೇಕು.

ಜಾಜೂಜಿಃ— ವರ್ಷದಲ್ಲಿ ಹಲವು ತಿಂಗಳು ಉದ್ಯೋಗ ವಿಲ್ಲದೆ ಕುಳಿತ ಹಳ್ಳಿಗರಿಗೆ ಅಲ್ಲಿ ಮಟ್ಟಿಗಾದರು ನಿರ್ವಾಹವನ್ನೊದಗಿಸಿ ಕೊಡತಕ್ಕ ಉದ್ಯೋಗವೆಂದೇ ಖಾದಿಯ ಬಗ್ಗೆ ಮುಖ್ಯತಃ ನಮ್ಮ ಪ್ರತಿಪಾದನೆ ಇದ್ದಿತು.

ಬಾಪೂಜಿಃ— ಇಷ್ಟೇ ಹೇಳಿ ನಾನು ಸುಮ್ಮನೆ ಕುಳಿತು ಕೊಂಡಿದ್ದಿಲ್ಲ. ಅದರಲ್ಲಿ ಸ್ವರಾಜ್ಯ ಸಂಪಾದನೆಯ ಶಕ್ತಿಯನ್ನೂ ಆರೋಪಿಸಿದ್ದೆನು.

ಜಾಜೂಜಿಃ— ಜೀವನಸಮೃದ್ಧಿಯನ್ನೊದಗಿಸಿಕೊಡತಕ್ಕಂಥ ಆ ಶಕ್ತಿಗೆ ಈಗ ನೀವು ಕೊಡುತ್ತಿರುವಂತೆ ಹಿಂದೆ ಎಂದೂ ಅಷ್ಟು ಮಹತ್ವ ಕೊಡಲಿಲ್ಲ. ಸುಮಾರು ಮೂರು ಲಕ್ಷ ಜನರು ಈಗ ಖಾದೀ ಉದ್ಯೋಗದಲ್ಲಿರುವರು. ಜೀವಿಕೆ, ಸ್ವಾವಲಂಬನ ಇವುಗಳಲ್ಲದೇ ಬೇರೆಬೇರೆ ಗುಣಗಳ ವಿಕಾಸವು ಸದ್ಯದಲ್ಲಿ ನೀವು ಅಪೇಕ್ಷಿಸುತ್ತಿರುವಷ್ಟು ಶೀಘ್ರ ಆಗಲಾರದು. ಕಾಲಾಂತರದಲ್ಲಿ

ಒಂದು ವೇಳೆ ಆಗಬಹುದು. ಇಂದು ಖಾದೀ ಮಾರಾಟವನ್ನು ಬಂದಮಾಡಿದರೆ ಹಾಗೂ ಜನರು ತಮ್ಮ ಸಲುವಾಗಿ ನೂಲಹತ್ತಿದರೆ ತಮಗೆ ಸಮಾಧಾನವಾಗುವದಲ್ಲವೇ ?

ಬಾಪೂಜಿ:— ಸರಿ.

ಜಾಜೂಜಿ:— ಮಾರಾಟವನ್ನು ಬಂದಮಾಡಿದರೆ ಕೂಲಿಯಿಂದ ನೂಲುವದು ಸಾಕಷ್ಟು ಪ್ರಮಾಣದಿಂದ ಬಂದು ಆಗುವದು.

ಬಾಪೂಜಿ:— ಅಹುದು. ಆದರೂ ನೂಲುವದು ಎಷ್ಟು ಉಳಿಯುವದೋ ಅದೇ ನಿಜವಾದದ್ದು. ಅದೇ ಸ್ವರಾಜ್ಯ ತರತಕ್ಕದು. ಆದರೆ ಎಳೆಯಲ್ಲಿ ಸ್ವರಾಜ್ಯ ತರತಕ್ಕ ಶಕ್ತಿಯಿದೆ.

ಹೊಸ ನೀತಿಯಿಂದ ಸಂಕೋಚನವಿಲ್ಲ, ವಿಸ್ತಾರವಿದೆ:—

ಜಾಜೂಜಿ:— ಇಂದು ಖಾದಿಯ ನೆರವಿನಿಂದ ಮೂರು ಲಕ್ಷ ಜನರೊಡನೆ ನಮ್ಮ ಸಂಪರ್ಕವಿದೆ. ಸ್ವಂತದ ಬಗ್ಗೆ ನೂಲಲು ನಾವು ಹೇಳಿದರೆ ಒಂದುವೇಳೆ ಮೂವತ್ತು ಸಾವಿರಕ್ಕಿಂತ ಹೆಚ್ಚು ಜನರೊಡನೆ ಅದು ಉಳಿಯಲಾರದು.

ಬಾಪೂಜಿ:— ಇಂದು ಮೂವತ್ತು ಸಾವಿರವಿದ್ದದ್ದು ಮುಂದೆ ಕದಾಚಿತ್ ಮೂರುಕೋಟಿಯಾಗಬಹುದು. ಏನೇ ಆಗಲಿ ಅವರಲ್ಲಿ ಮೋಸಕ್ಕೆ ಅನುವಿಲ್ಲ. ಹಳ್ಳಿಗರನ್ನಾಗಲಿ, ಕಸಬುದಾರರನ್ನಾಗಲೀ, ಪ್ರತಿಭಟಿಸಿ ಕಾರ್ಯ ಸಾಗಿಸುವ ಪ್ರಸಂಗವುಳಿಯಲಾರದು. ಅವರ ಜೀವನದೊಂದಿಗೆ ನಾವು ಬೆರೆಯುವೆವು. ತಮ್ಮ ಮನಸಿನಲ್ಲಿದ್ದುದನ್ನು ಕಾಯಕರ್ತರು ಹಳ್ಳಿಗರಿಗೆ ಹಳ್ಳಿಯ ಜನರು ಕಾರ್ಯಕರ್ತರಿಗೆ ಅಕ್ಕರತೆಯಿಂದ ಹೇಳಕೇಳಹತ್ತುವರು. ಆದರೆ ಇಂದು ನಾವು ಹಣದ ಹಮ್ಮಿಣಿಯನ್ನು ಕಟ್ಟಿಕೊಂಡು ಅವರ ಹತ್ತಿರ ಹೋಗಿ ನೂಲಿರಿ. ನಿಮಗೆ ನಾಲ್ಕಾಣೆ ಕೊಡುವೆವು ಎಂದು

ಹೇಳುತ್ತಿರುವೆವು. ನೂಲುವವರ ಕೂಲಿಯನ್ನು ಏರಿಸುವದೂ ನಮಗೆ ಅಗತ್ಯವಿದೆ. ಗಂಡಾಳಿನಷ್ಟೇ ಆವಳಿಗಾದರೂ ಕೂಲಿಯನ್ನು ಕೊಡುವೆನು. ಆದರೆ ನೀನು ಕೇವಲ ಕೂಲಿಗಾಗಿ ನೂಲುತ್ತಿರುವದು ನನಗೆ ಎಂದೂ ಸೇರದೆಂದು ಅವಳಿಗೆ ನಾನು ಖಂಡಿತ ಹೇಳಿಬಿಡುವೆನು. ನಾನು ಅವಳಿಗೆ ಹೀಗೆ ಹೇಳುವೆನು. "ನೀನು ನಿನ್ನ ಸಲುವಾಗಿಯೆ ನೂಲು, ನಿನ್ನ ನೂಲನ್ನು ನೇಯಿಸಿಕೊಡುವೆನು. ನಿನ್ನ ಮಕ್ಕಳಿಗೆ ನಾನು ಓದುಬರಹ ಕಲಿಸುವೆನು. ಉದ್ಯೋಗ ಧಂದೆಗಳ ಪರಿಚಯ ಮಾಡಿಕೊಡುವೆನು. ನಿನ್ನ ಆಯ-ವ್ಯಯದ ಪಟ್ಟಿಯನ್ನು ನನಗೆ ತೋರಿಸು. ಎಲ್ಲ ಬಗೆಯಿಂದಲು ನಾನು ನಿನಗೆ ನೆರವಾಗುವೆನು. ನಿನ್ನ ಕಷ್ಟನಷ್ಟಗಳನ್ನು ದೂರಮಾಡುವೆನು." ನಾವು ಮೊಟ್ಟಮೊದಲಿನಿಂದಲೂ ಹೀಗೆ ಮಾಡಿದ್ದರೆ, ಅಂಥ ಕಾರ್ಯಕರ್ತರು ನಮಗೆ ಲಭಿಸಿದ್ದರೆ, ಇಷ್ಟೊತ್ತಿನಲ್ಲಿ ಸ್ವರಾಜ್ಯವನ್ನು ಗಳಿಸಿಕೊಂಡು ಕೂಡುತ್ತಿದ್ದೆವು. ಮಿಂಚಿ ಹೋದ ಮಾತಿಗೆ ನಾನು ಚಿಂತಿಸುವದಿಲ್ಲ.

ನಮ್ಮ ತಪ್ಪು.

ಜಾಜೂಜಿ:— ಈ ತರದ ಭಾವನೆಯುಳ್ಳ ಕಾರ್ಯಕರ್ತರು ಬೇಕಾದಷ್ಟು ನಮಗೆ ದೊರೆಯಬಹುದೆಂದು ತಾವು ಬಗೆಯುವಿರಾ? ಒಂದು ವೇಳೆ ದೊರೆತರೆ ಮತ್ತೆ ಬಾಕಿ ಏನು ಉಳಿಯಿತು ?

ಬಾಪೂಜಿ:— ಅದು ನಮ್ಮದೇ ತಪ್ಪು, ಈ ದೃಷ್ಟಿಯನ್ನಿಟ್ಟುಕೊಂಡು ನಾವು ಕಾರ್ಯವನ್ನು ಮಾಡಲಿಲ್ಲ; ಕಾರ್ಯಕರ್ತರನ್ನು ತಯಾರಿಸಲಿಲ್ಲ. ಒಳ್ಳೇ ಅವಸರ ಮಾಡಿದೆವು. ವಿಚಾರ ಮಾಡಿ ತಿಳಿದು ಸಮಾಧಾನದಿಂದ ಕಾರ್ಯ ಜರುಗಿಸಿದ್ದರೆ ಅವರು ದೊರೆತೂ ದೊರೆಯುತ್ತಿದ್ದರು.

ಜಾಜೂಜಿ:— ಒಳ್ಳೇ ಕಾರ್ಯಕರ್ತರು ಹಳ್ಳಿಗಳಲ್ಲಿ ನೆಲಸಬೇಕೆಂದು ನೀವು ಹಲವಾರು ಸಾರೆ ಹೇಳಿರುವಿರಿ.

ಬಾಪೂಜಿ:— ಇದರ ಹೊರತು ರಾಟೆಯು ಅಹಿಂಸೆಯ ಪ್ರತೀಕವಾಗಿರುವದೆಂದೂ ಹೇಳಿದೆನು. ಒಂದು ವೇಳೆ ಇದನ್ನು ನಾವು ಸಫಲಗೊಳಿಸದಿದ್ದರೆ ಖಾದೀ ವಿಷಯಕ ನಮ್ಮ ಪ್ರತಿಪಾದನೆಯು ಎಂದೂ ನಿಲ್ಲದು.

ಜಾಜೂಜಿ:— ಕೊನೆಗೆ ಕಾರ್ಯಕರ್ತರಾದರೂ ಇಂದು ಇದ್ದಂತಹ ಜನಸಮುದಾಯದಿಂದಲ್ಲವೆ ಹೊರಡುವದು?

ಬಾಪೂಜಿ:— ಇದೇ ಒಂದು ವೇಳೆ ನಮ್ಮ ಪ್ರತ್ಯುತ್ತರವಾಗಿದ್ದರೆ ಅಹಿಂಸೆಯ ಮುಖಾಂತರ ನಮಗೆ ಸ್ವರಾಜ್ಯ ಲಭಿಸದು. ಯಾಕಂದರೆ ನನ್ನ ಕಲ್ಪನೆಯಲ್ಲಿರುವ ಸ್ವರಾಜ್ಯಕ್ಕೆ ಜನರು ಸಿದ್ಧರಿಲ್ಲ.

ಈ ಸಲುವಾಗಿಯೇ ನಾನೊಬ್ಬನುಳಿದರೂ ಈ ಕಾರ್ಯವನ್ನು ನನಗೆ ಸಾಧಿಸತಕ್ಕುದಿದೆ ಎಂದು ನಾನು ಹೇಳುತ್ತಿರುವದು. ಚರಕಸಂಘ, ಗ್ರಾಮೋದ್ಯೋಗ ಸಂಘ, ತಾಲೀಮೀ ಸಂಘಗಳು ಒಂದು ವೇಳೆ ನೆರವಾದರೆ ಒಳಿತೇ ಆಗುವದು. ಜನರು ನನಗೆ ಸಹಾಯ ಮಾಡದಿರುವ ಸಂಭವವೂ ಇದೆ. ಆಗಲಾದರೂ ನಮ್ಮಲ್ಲಿ ಹಿಂಸೆಯು ತುಂಬಿದೆ ಎಂಬ ಮಾತೇ ಸಿದ್ಧವಾಗುವದಿಲ್ಲವೆ? ಮತ್ತು ಈಗ ನಾವು ಅಹಿಂಸೆಯೆಂದು ಹೇಳುತ್ತಿರುವದು ನಿಜವಾದ ಅಹಿಂಸೆಯಾಗಿರದೆ ಕಾಯರತೆಯಲ್ಲವೆ? ಇದರಿಂದ ಇದೇ ಸಿದ್ಧವಾಗುವದಿಲ್ಲವೆ?

ಜಾಜೂಜಿ:— ಇದೆಲ್ಲ ಸರಿಯಿದೆ. ಆದರೆ ಇದು ವ್ಯವಹಾರ್ಯವಾಗುವ ಬಗೆ ಯಾವುದೆಂಬದೇ ಸದ್ಯದ ಪ್ರಶ್ನೆ.

ಬಾಪೂಜಿ:— ಅಂದಮೇಲೆ, ನಾವು ನಮ್ಮ ದೊಡ್ಡದೊಡ್ಡ ಮಾತುಗಳನ್ನು ಬಿಟ್ಟು ಬಿಡಬೇಕಾಗುವದು. ನಿಜವಾಗಿ ಸತ್ಯಕ್ಕೇ ಅಂಟಕೊಂಡಿರೋಣ. ಎರಡನೆಯವರು ನಮಗಿಂತ ಹೀನರೆಂಬ

ಭಾವನೆಗೆ ಎಡೆಗೊಡದೆ ನಿಃಸಂಕೋಚವಾಗಿ ಎಲ್ಲರಂತೆಯೇ ನಾವು ಎಂದು ಹೇಳಬೇಕಾಗುವದು. ಸ್ವರಾಜ್ಯವು ಒಂದುವೇಳೆ ದೊರೆತರೆ ನಮ್ಮ ಯಾವದೊಂದು ವಿಶಿಷ್ಟತೆಯ ಕಾರಣದಿಂದ ಲಭಿಸಿತೆಂಬದು ಮಾತ್ರ ಸಿದ್ಧವಾಗುವದಿಲ್ಲ.

ಏಳನೆಯದಿನ ಶನಿವಾರ ತಾ. ೧೪ ಅಕ್ಟೋಬರ ೧೯೪೪.

ಶಿಕ್ಷಣದ ಏರ್ಪಾಟು.

ಜಾಜೂಜಿ:— ಇನ್ನು ಸಮಗ್ರ ಗ್ರಾಮೋತ್ಥಾನದ ಕಾರ್ಯಕ್ರಮವನ್ನು ಕೈಕೊಳ್ಳಬೇಕಾಗುವದು. ಹಾಗೂ ಆ ಬಗ್ಗೆ ಸುಯೋಗ್ಯ ಕಾರ್ಯಕರ್ತರನ್ನು ಸಂಘಟಿಸಬೇಕಾಗುವದು, ತಯಾರಿಸಬೇಕಾಗುವದು. ಮಾರಾಟದ ಸಲುವಾಗಿ ಖಾದಿಯನ್ನು ಹುಟ್ಟಿಸುವ ಪರಿಸ್ಥಿತಿ ಉಂಟಾಗುವದು ಅನಿಷ್ಟವಾದುದೆಂದು ತಿಳಿಯಬೇಕು. ಇನ್ನು ವಸ್ತ್ರಸ್ವಾವಲಂಬನದ ಸಲುವಾಗಿಯೇ ಖಾದಿಯ ಉತ್ಪತ್ತಿಯನ್ನು ಮಾಡತಕ್ಕದ್ದೆಂಬ ಮಾತಿನ ಬಗ್ಗೆಯೇ ಆಗ್ರಹ ತೊಡಬೇಕಾಗುವದು. ಈ ಸಂದರ್ಭದಲ್ಲಿ ಸಂಘದ ಕಾರ್ಯವು ಎಷ್ಟೇ ಸಂಕುಚಿತವಾದರೂ ಚಿಂತೆಯಿಲ್ಲ. ಇದರ ಸರಳವಾದ ಅರ್ಥವೆಂದರೆ, ನಾವು ನೂಲನ್ನು ಪಡೆದೇ ಖಾದೀ ಕೊಡತಕ್ಕದ್ದು; ನಗದು ಹಣಕ್ಕಲ್ಲ. ಹಾಗೂ ಬಂದ ನೂಲನ್ನು ನೇಯಿಸುವ ಏರ್ಪಾಟು ಮಾಡತಕ್ಕದ್ದು. ಇನ್ನು ಎರಡನೆಯ ಮಾತೆಂದರೆ; ಈ ನೀತಿಯು ಎಂದಿನಿಂದ ಹಾಗೂ ಎಷ್ಟರಮಟ್ಟಿಗೆ ವ್ಯವಹಾರ ರಂಗಕ್ಕಿಳಿಯುವದು, ಹಾಗೂ ಪೂರ್ಣ ನೂಲು ಕೊಡದೆ ಖಾದಿಯು ದೊರೆಯಲಾರದೆಂಬ ನಿಯಮವನ್ನು ಕೂಡಲೆ ಹಾಕಬೇಕೋ ಅಥವಾ ರೂಪಾಯಿಯಲ್ಲಿ ನಾಲ್ಕರಲ್ಲೊಂದು, ಮೂರರಲ್ಲೊಂದು ಇಲ್ಲವೆ ಅರ್ಧ ಪಾಲು ನೂಲು ಕೊಟ್ಟು ಖಾದಿಯನ್ನು ಕೊಡಲುಪಕ್ರಮಿಸಿ ಬರಬರುತ್ತ ನೂಲಿನ ಪ್ರಮಾಣವನ್ನು ಹೆಚ್ಚು ಹೆಚ್ಚು

ಮಾಡಿ ನಿಶ್ಚಿತ ಅವಧಿಯಲ್ಲಿ ಹದಿನಾರಾಣೆಗೆ ತಂದು ನಿಲ್ಲಿಸುವಂತೆ ನಿಯಮ ಮಾಡಬೇಕೋ? ಈ ಕೆಲಸವು ತೀರ ಬಿಕ್ಕಟ್ಟಿನದಾಗಿ ರುವದೆಂಬಲ್ಲಿ ಸಂದೇಹವಿಲ್ಲ. ಈ ನೀತಿಯನ್ನು ವ್ಯವಹಾರ್ಯ ಮಾಡುವ ಕುರಿತು ಕಾರ್ಯಕರ್ತರನ್ನು ತಯಾರಿಸುವ ಹಾಗೂ ಜನತೆಗೆ ಇದರ ಪರಿಚಯ ಮಾಡಿಕೊಡುವ ವಿಷಯದಲ್ಲಿ ನಾವು ಸಾಕಷ್ಟು ಪರಿಶ್ರಮ ಪಡಬೇಕಾಗುವದು.

ಶಿಕ್ಷಣದ ಏರ್ಪಾಟಿನ ವಿಷಯವು ಇನ್ನುಮುಂದೆ ಬರುವದು ಕಾರ್ಯಕರ್ತರನ್ನು ತಯಾರಿಸುವ ಕುರಿತು ಪ್ರತಿಯೊಂದು ಪ್ರಾಂತ ದಲ್ಲಿ ವಿದ್ಯಾಲಯ ತೆರೆಯಬೇಕಾಗಬಹುದು. ಆ ಸಲುವಾಗಿ ಅಭ್ಯಾಸ ಕ್ರಮ ಗೊತ್ತುಪಡಿಸಬೇಕಾಗುವದು. ಈ ಕೆಲಸಕ್ಕಾಗಿ ನುರಿತ ಶಿಕ್ಷಕರು ಸಾಕಷ್ಟು ದೊರೆಯಲಾರರು. ಮೊದಲನೆಯ ತರಗತಿಯ ಕಾರ್ಯಕರ್ತರು ತಮ್ಮ ತಮ್ಮ ಸಾಧನಾ ಕ್ಷೇತ್ರವನ್ನಾರಿಸಿಕೊಂಡು ಅಲ್ಲಿ ನೆಲಿಸಿರುವರು. ತಮ್ಮ ಗ್ರಾಮ, ತಾಲೂಕು, ಜಿಲ್ಲೆಯೇ ಅವರ ಕಾರ್ಯ ಕ್ಷೇತ್ರ. ಈ ತರದ ವೃತ್ತಿಯ ಬೆಳವಣಿಗೆಗೆ ತಾವು ಅವಕಾಶವನ್ನೂ ಕೊಟ್ಟಿರುವಿರಿ. ಈ ಶ್ರೇಷ್ಠ ಕಾರ್ಯಕರ್ತರಲ್ಲಿಯ ಕೆಲವರನ್ನಾದರೂ ಅವರವರ ಕ್ಷೇತ್ರದಿಂದ ಬಿಡಿಸಿ ಶಿಕ್ಷಣ ಕೇಂದ್ರ ಗಳಿಗೆ ಅಂಟಿಸುವವರೆಗೆ ನಮ್ಮ ಕಾರ್ಯ ನಡೆಯುವದೆಂತು? ಅವರನ್ನುಳಿದು ಗ್ರಾಮಸೇವಕರಿಗೆ ನಿಜವಾದ ಸಂಸ್ಕಾರ ಹಾಗೂ ದೃಷ್ಟಿಯನ್ನು ತಂದು ಕೊಡಬಲ್ಲವರಾರು?

ಬಾಪೂಜಿಃ—ಖಾದೀ ಕಾರ್ಯವಾದರೂ ಮೊಟ್ಟಮೊದಲು ಒಂದೇ ಕೇಂದ್ರದಿಂದ ಸುರುವಾಯಿತು. ಇಲ್ಲಿಯಾದರು ಹಾಗೆಯೇ ಆಗುವದು. ಮೊದಲು ಇಲ್ಲಿ ತೆರೆಯಲಾದ ಶಿಕ್ಷಣ ಕೇಂದ್ರವೊಂದೇ ನಡೆಯುವದು. ಅಲ್ಲಿ ನಿಷ್ಣಾತರನ್ನು ತಯಾರಿಸಿ ಅವರನ್ನು ಅನ್ಯ ಕೇಂದ್ರಗಳಿಗೆ ಕಳಿಸುವೆವು. ಅವರ ಕೆಳಗೆ ಇನ್ನೂ ಕಾರ್ಯ

ಕರ್ತರು ತಯಾರಾಗುವರು ಹಾಗೂ ಅವರು ಹೋಗಿ ಬೇರೆ ಬೇರೆ ಕೇಂದ್ರಗಳನ್ನು ತೆರೆಯುವರು.

ಜಾಜೂಜಿ:— ಇದಕ್ಕೆ ಬಹಳ ಕಾಲಾವಧಿ ಬೇಕಾಗ ಬಹುದು. ಐದು, ಏಳು, ಹತ್ತುವರ್ಷಗಳು ಗತಿಸಬಹುದು.

ಪ್ರಯತ್ನಶೀಲರಾದ ಕಾರ್ಯಕರ್ತರು ಬೇಕು.

ಬಾಪೂಜಿ:—ಆಗಬಹುದು. ಆದರೆ ನನ್ನ ವಿಚಾರ ಹಾಗಿಲ್ಲ. ಕಾರ್ಯಕರ್ತರು ಸಾಕಷ್ಟು ತಯಾರಿಯಿಂದಲೇ ಬರತಕ್ಕದ್ದು. ಅಂಥರೆ ಇಲ್ಲಿ ಯೋಗ್ಯತೆ ಪಡೆದು ಹೊರಗೆ ಹೋಗಲು ಬಹಳ ದಿನ ಹತ್ತುವದಿಲ್ಲ. ನಾನು ಮೊದಲು ಇಂತಹ ಕಾರ್ಯಕರ್ತ ರನ್ನೇ ಆರಿಸುವೆನು. ತಿರುಗಿ ಒಂದು ಮಟ್ಟದವರೆಗೆ ಅವರ ಯೋಗ್ಯತೆಬೆಳೆದೊಡನೆ 'ನೀವು ಹೋಗಿರಿ ಹಾಗೂ ಕೆಲಸಮಾಡುತ್ತ ಮಾಡುತ್ತಲೆ ಅನುಭವ ಪಡೆಯಿರಿ ಮತ್ತು ಹೆಚ್ಚಿನ ಜ್ಞಾನ ಬೆಳಿಸಿ ಕೊಳ್ಳಿರಿ.' ಎಂದು ನಾನು ಅವರಿಗೆ ಹೇಳುವೆನು. ಇದರಿಂದ ಬಹಳ ಕಾಲಾವಧಿ ಹತ್ತಬಹುದೆಂಬ ಭೀತಿ ನನಗಿಲ್ಲ; ಒಂದು ವೇಳೆ ಹತ್ತಿದರೂ ಹತ್ತಲಿ. ಎರಡನೆಯ ಮಾರ್ಗವೇ ಇಲ್ಲಿಂದ ಮೇಲೆ ಇದ್ದ ಹಾದಿಯಿಂದಲೆ ನಾವಿಂದು ಸಾಗಬೇಕಾಗುವದು. ಇಂದು ಉಚ್ಚತರಗತಿಯ ಕಾರ್ಯಕರ್ತರು ದೊರೆಯದಿದ್ದರೆ ಇಲ್ಲ. ನಾವು ಯಥಾಶಕ್ತಿ ಪ್ರಯತ್ನ ಮಾಡುವಾ. ಸಿಕ್ಕಂತೆ ಸಿಗಲಿ.

ಜಾಜೂಜಿ:—ಇ. ಸ. ೧೯೨೦ರಲ್ಲಿ ಬಂದ ಕಾರ್ಯ ಕರ್ತರು ತಮ್ಮ ಯೋಗ್ಯತೆಯನ್ನು ಸಿದ್ಧಗೊಳಿಸಿದರು. ಆ ನಂತರ ಉಚ್ಚ ತರಗತಿಯ ಜನರು ಬಹಳ ಬರಲಿಲ್ಲ. ಬಂದರೇನೋ ನಿಜ. ಇಂದೂ ಬರುತ್ತಿರುವರು. ಆದರೆ ಬಹಳ ಕಡಿಮೆ.

ಬಾಪೂಜಿ:—ನಿಜಸ್ಥಿತಿಯು ಹೀಗದೆ. ನಮ್ಮ ಕಾರ್ಯದಲ್ಲಿ ಅಪೂರ್ಣತೆ ಸಾಕಷ್ಟಿತ್ತು ಹಾಗೂ ಮೇಲ್ತರಗತಿಯ ಜನರ ಮನ

ಸ್ಸನ್ನು ಸೆಳೆಯುವಂತಹ ಕಾರ್ಯಕ್ರಮವಾದರೂ ಕಡಿಮೆಮಟ್ಟಿಗೆ ಇದ್ದಿತು. ಬುದ್ಧಿಯ ವಿಕಾಸಕ್ಕೆ ಅವಕಾಶ ತೋರುತ್ತಿರಲಿಲ್ಲ. ಹಾಗೂ ಬುದ್ಧಿಯ ವಿಕಾಸವಂತೂ ಎಲ್ಲರಿಗೂ ಬೇಕೇಬೇಕು. ಅದುಕಾರಣ ಬಹುಜನಕ್ಕೆ ಇದು ರುಚಿಸಲಿಲ್ಲ. ಇದಲ್ಲದೆ ಎರಡನೆಯ ಕ್ಷೇತ್ರಗಳಲ್ಲಿ ತೋರುತ್ತಿದ್ದ ಅರ್ಥಲಾಭವಾದರೂ ಇಲ್ಲಿ ಇರಲಿಲ್ಲ. ಅರ್ಥಲಾಭಕ್ಕಿಂತಲೂ ಹೆಚ್ಚಿಗೆ ಬಾಧಿಸುತ್ತಿದ್ದ ಮಾತೆಂದರೆ ನಿಜವಾದ ಜ್ಞಾನದ ಕೊರತೆ. ಖಾದೀಕ್ಷೇತ್ರದಲ್ಲಿಯ ಕಾರ್ಯಕರ್ತರಲ್ಲಿ ಒಂದು ಬಗೆಯ ಮಂದತನವೂ ಅವರಿಗೆ ಕಂಡು ಬರಹತ್ತಿತು. ಇದುಕಾರಣವೂ ಅವರು ಆಕರ್ಷಿತರಾಗಲಿಲ್ಲ. ಖಾದೀಕಾರ್ಯಕರ್ತರನ್ನು ನೋಡಿ ಅಪಹಾಸವನ್ನು ಸಹ ಅವರು ಮಾಡಹತ್ತಿದರು. ಖಾದೀ ಭಕ್ತರು ಖಾದಿಯನ್ನು ಹಾಕಿಕೊಳ್ಳುತ್ತಿರುವರು. ಆದನ್ನಾದರು ಯೋಗ್ಯ ರೀತಿಯಲ್ಲಲ್ಲ. ಹೊಲಸು ಅಸ್ವಚ್ಛರಾಗಿರುವರು. ಅವರೆಲ್ಲ ವ್ಯವಹಾರ-ಜ್ಞಾನ-ಶೂನ್ಯರಿರುವರು. ಇಲ್ಲಿಯವರೆಗೆ ಜನರು ಅವರನ್ನು ಹೀಯಾಳಿಸಹತ್ತಿದರು. ರಾಟಿಯ ಶಾಸ್ತ್ರೀಯಜ್ಞಾನ ಹಾಗೂ ಅದನ್ನು ಜನತೆಗೆ ತಿಳಿಸುವ ಉತ್ಸಾಹ ಹಾಗೂ ಶಕ್ತಿ ಇವು ಅವರಲ್ಲಿ ತೋರಿಬರುತ್ತಿರಲಿಲ್ಲ. ನಮಗೆ ತೋರಿಸಿರಿ, ತಿಳಿಸಿರಿ ಎಂದು ಯಾರಾದರು ಕೇಳಿದರೆ ನಮ್ಮಿಂದ ಅದು ಆಗದಾಗಿತ್ತು. ನಾವು ಹಳ್ಳಿಗರ ಮಧ್ಯದಲ್ಲಿ ಹೋಗಿ ಕುಳಿತೆವು. ಅವರಿಗೆ ಕೆಲಸ ಕೊಟ್ಟೆವು. ಅವರಿಗೆ ಹಳ್ಳಿಯಲ್ಲಿಯೇ ವೇತನ ದೊರೆಯುವಂತೆ ಏರ್ಪಡಿಸಿದೆವು. ನಮ್ಮಲ್ಲಿ ಬುದ್ಧಿವಂತರಾಗಿದ್ದವರು ಸಾಕಷ್ಟು ಸಂಖ್ಯೆಯಲ್ಲಿ ಹಳ್ಳಿಗಳಲ್ಲಿ ನೆಲಿಸಿ ಕಾರ್ಯ ಮಾಡಲಿಲ್ಲ. ಹೋದವರು ತಿಳಿಯುವ ಹಾಗೂ ಅಭ್ಯಾಸ ಮಾಡುವ ಲವಲವಿಕೆಯುಳ್ಳವರಿಗೆ ನಮ್ಮ ಕಾರ್ಯ ನೀತಿಯನ್ನರಿಯುವ ಹಾಗೆ ತಿಳಿಹೇಳುವ ರೀತಿಯನ್ನೂ ಕಲಿಯಲಿಲ್ಲ. ನಾವು ಒಂದುವೇಳೆ ಹಾಗೆ ಮಾಡಿದ್ದೇ ಆಗಿದ್ದರೆ

ಇಂದು ನಮ್ಮ ವಿಷಯದಲ್ಲಿ ಇಷ್ಟು ಪಾರಂಗತರಾಗಿ ಅರ್ಥಶಾಸ್ತ್ರಜ್ಞರಿಗೆ ಖಂಡಿತವಾಗಿ ಹೀಗೆ ಹೇಳಿ ಬಿಡುತ್ತಿದ್ದೆವುಃ—"ನಿಮಗೆ ಗೊತ್ತಿದ್ದುದು ನಮಗೆ ಗೊತ್ತಿದೆ. ಆದರೆ ನಮಗೆ ಗೊತ್ತಿದ್ದುದು ಮಾತ್ರ ನಿಮಗೆ ತಿಳಿದಿರುವದಿಲ್ಲ. ಅದನ್ನು ನಾವು ನಿಮಗೆ ತೋರಿಸುತ್ತೇವೆ"

ಹೊಸ ಬೆಲೆಗಳ ನಿರ್ಮಾಣಃ—

ಜಾಜೂಜಿಃ—ನಮ್ಮ ಜ್ಞಾನವು ಅಪೂರ್ಣವಿದೆ. ನಮ್ಮಲ್ಲಿ ಅನೇಕ ಕುಂದುಕೊರತೆಗಳಂತೂ ಸಾಕಷ್ಟು ಇವೆ. ಆದರೂ ಮೂಲ್ಯ ಮಾಪನದ ನಮ್ಮ ಒರೆಗಲ್ಲು ಹೊಸಬಗೆಯದಾಗಿದೆ.

ಬಾಪೂಜಿಃ—ಅಹುದು. ನಿಜವಾಗಿ ಹಾಗೆಯೇ ಅದೆ. ಆದರೆ ಅವರ ಅಳತೆಗೋಲು ಸರಿಯಾದುದಿಲ್ಲೆಂದು ಹೇಳುವಷ್ಟು ಯೋಗ್ಯತೆಯು ನಮ್ಮಲ್ಲಿ ಬರಬೇಕು.

ಜಾಜೂಜಿ:—ಆದರೆ ನೈತಿಕ ಹಾಗೂ ವ್ಯಾವಹಾರಿಕ ಬೆಲೆಗಳ ತುಲನೆ ಹೇಗಾಗಬಲ್ಲದು?

ಬಾಪೂಜಿಃ— ಇದೇ ಅದರ ವೈಶಿಷ್ಟ್ಯವಾಗಿರುವದೆಂಬದನ್ನಿಷ್ಟು ನಾವು ಹೇಳಬಹುದಾಗಿತ್ತು. ಅದರ ನೈತಿಕ ಬೆಲೆಯು ಇಂತಹದಿದೆ. ಈ ಮಾತನ್ನು ಜಗತ್ತಿನಲ್ಲಿ ನಾವು ಸಿದ್ಧಮಾಡಿ ತೋರಿಸತಕ್ಕುದದೆ.

ಖಾದೀಕಾರ್ಯ ಒಂದೇ ನಡೆಯತಕ್ಕ ವಸ್ತುವಾಗಿಲ್ಲ ಎಂಬ ಮಾತು ನಮಗೆ ಇಂದು ಮನವರಿಕೆಯಾದರೆ ನಾವು ಜಗತ್ತಿಗೆ ಅದರಂತೆ ಸಾರಬೇಕಾಗುವದು. ಕಲ್ಲು ಒಡೆಯುವದು ಲೈನಗಳನ್ನು ಮಾಡುವದು ಮುಂತಾದ ಕೆಲಸಗಳಂತೆ ಖಾದಿಯ ಕಾರ್ಯವಾದರೂ ತಾರಣದ ಸಾಧನಗಳಲ್ಲೊಂದು ಸ್ಥಾನ ಪಡೆದಿರುವದೆಂಬ ಮಾತನ್ನು ಸರಕಾರೀ ವರದಿಗಳೂ ಒಪ್ಪಿಕೊಂಡಿವೆ

ತಾರಣೋಪಾಯವೆಂದು ಖಾದಿಯು ಯಾವಾಗಲೂ ಸಿದ್ಧವಾಗಿದೆ ಯೆಂಬದನ್ನು ನೀವಾದರೂ ತೋರಿಸಿರುವಿರಿ. ಆ ಸ್ಥಾನವು ಎಂದೂ ಚ್ಯುತವಾಗದು. ಆದರೆ ಅದು ನಿಜವಾದ ಅರ್ಥಶಾಸ್ತ್ರದ ಪರಿಪೂರ್ಣತೆಗೆ ಅನಿವಾರ್ಯವಾದುದೆಂಬದನ್ನು ನಾವು ಸಿದ್ಧಗೊಳಿಸತಕ್ಕುದಿತ್ತು.

ಸ್ವಾವಲಂಬನದ ನೀತಿಯನ್ನು ಪ್ರಚುರಗೊಳಿಸುವ ಮಾರ್ಗದಲ್ಲಿ ಎಷ್ಟೆಷ್ಟು ತೊಂದರೆಗಳುಂಟೆಂಬದನ್ನು ಪ್ರತ್ಯಕ್ಷ ಕೆಲಸ ಮಾಡಿ ಕಂಡುಕೊಳ್ಳುವೆವು. ವ್ಯಾಪಾರೀ ಖಾದಿಯಾದರೂ ಕೆಲ ಕಾಲ ನಡೆಯಬಹುದು. ಆದರೆ ಸಂಘವು ಮಾತ್ರ ಸ್ವಾವಲಂಬನದ ನೀತಿಯನ್ನು ಅನುಸರಿಸುವದು. ಕಾರ್ಯಕರ್ತರು ತಮ್ಮ ಶಕ್ತಿ ಸರ್ವಸ್ವವನ್ನು ಅದರಲ್ಲಿಯೇ ಕೇಂದ್ರೀಕರಿಸತಕ್ಕದ್ದು.

ಜಾಜೂಜಿ:—ಸದ್ಯಕ್ಕೆ ಈ ಚರ್ಚೆಯನ್ನು ಇಲ್ಲಿಗೇ ನಿಲ್ಲಿಸುವಾ.

ಪರಿಪತ್ರ.

ಹಿಂದಿನ ಪ್ರಕರಣದಲ್ಲಿ ಕೊಟ್ಟಿರುವ ಚರ್ಚೆಯ ಸಾರಾಂಶವು ಪರಿಪತ್ರ ರೂಪದಿಂದ ಚರಕ ಸಂಘದ ಪ್ರಾಂತೀಯ ಶಾಖೆಗಳ ಮಂತ್ರಿಗಳಿಗೂ, ಮುಖ್ಯ ಮುಖ್ಯ ಕಾರ್ಯಕರ್ತರಿಗೂ ಅ. ಭಾ. ಚ. ಸಂಘದ ಮಂತ್ರಿಗಳಾದ ಶ್ರೀ. ಜಾಜೂಜಿಯವರ ಮುಖಾಂತರ ಕಳಿಸಲಾಯಿತು. ಅವರಲ್ಲಿ ಹೆಚ್ಚು ಜನರು ಆಳವಾಗಿ ಆಲೋಚಿಸಿ ತಮ್ಮ ವಿಚಾರಗಳನ್ನು ಕೇಂದ್ರಿಯ ಕಚೇರಿಗೆ ಕಳಿಸಿರುವರಲ್ಲದೆ ಅನೇಕ ಸೂಕ್ತ ಸೂಚನೆಗಳನ್ನು ಕಳಿಸಿರುವರೆಂಬದೊಂದು ಸಂತೋಷದ ಮಾತು. ಆ ಪರಿಪತ್ರವನ್ನು ಈ ಕೆಳಗೆ ಕೊಡಲಾಗಿದೆ. ಇದರಿಂದ ಸಂಘದ ನವಸಂಸ್ಕರಣದ ಭೂಮಿಕೆಯು ಸಾರರೂಪದಿಂದ ಓದುಗರ ಕಣ್ಮುಂದೆ ಬರುವದು.

ಪರಿಪತ್ರ.

"ಖಾದಿಯ ವಿಷಯದಲ್ಲಿ ನಾವು ಇಟ್ಟುಕೊಂಡಿದ್ದ ಆಕಾಂಕ್ಷೆಗಳು ಎಷ್ಟರಮಟ್ಟಿಗೆ ಸಫಲವಾಗಿರುವವೆಂಬುದರ ನಿರೀಕ್ಷಣೆ ಮಾಡಿ ಅದರ ಮೇಲಿಂದ ಭವಿಷ್ಯದ ನೀತಿಯನ್ನು ಗೊತ್ತುಪಡಿಸುವದು ಅವಶ್ಯವಾದುದೆಂದು ಈಗ ತೋರುತ್ತದೆ. ಆರಂಭದಿಂದಲೂ ಬಡ, ನಿರುದ್ಯೋಗಿ ಜನರಿಗೆ ಸಹಾಯ ಮಾಡುವದರ ಜೊತೆಗೆ ಸ್ವರಾಜ್ಯ ಸಾಧನೆಗೆ, ಅವಶ್ಯವಾದ ಗುಣಗಳ ವಿಕಾಸವನ್ನುಂಟು ಮಾಡುವುದೂ ಖಾದಿಯ ಉದ್ದೇಶವಾಗಿ ಇದ್ದೇ ಇತ್ತು. ಚರಕ ಸಂಘದ ಪ್ರಯತ್ನದಿಂದ ಬಡಜನರಿಗೆ ಸಹಾಯವೇನೋ ಸಿಕ್ಕಿತು ಆದರೆ ಬಹು ಸ್ವಲ್ಪ. ಸದ್ಯದ ಪರಿಸ್ಥಿತಿಯಲ್ಲಿ ಈ ದೃಷ್ಟಿಯಿಂದ ಆ ಕಾರ್ಯವು ಒಮ್ಮೆಲೆ ಬೆಳೆದೀತೆಂದು ತೋರುವದಿಲ್ಲ. ಖಾದೀ ಕಾರ್ಯವನ್ನು ಒಮ್ಮೆಲೆ ಬೆಳಿಸುವದರಲ್ಲಿ ಹಲವು ತೊಂದರೆಗಳಿವೆ. ಉತ್ಪತ್ತಿಯು ಒಂದುವೇಳೆ ಹೆಚ್ಚಿದರೂ, ಗಿರಣಿಯ ಬಟ್ಟೆಯ

ಸ್ಪರ್ಧೆಯ ಮೂಲಕ ಮಾರಾಟದಲ್ಲಿ ಅಡಚಣಿಗಳಿರುತ್ತವೆ. ಬಂಡವಾಳದ ಅಡಚಣಿಯೂ ಇದೆ. ಒಮ್ಮೆಲೆ ಕಾರ್ಯ ಹೆಚ್ಚಿಸಲು ಸಿಕ್ಕಿದಂಥ ಕಾರ್ಯಕರ್ತರಿಂದ ಕೆಲಸ ಸಾಗಿಸಬೇಕಾಗುವದು. ಅವರು ನಮ್ಮ ವ್ಯಾಪಾರ ಕಾರ್ಯದಲ್ಲಿ ಹೇಗಾದರೂ ನೆರವಾಗಬಲ್ಲರು. ಆದರೆ ಖಾದೀ ನೀತಿಯು ಅವರಿಂದ ಸುಶೋಭಿತ ವಾಗಲಾರದು. ರಾಟಿಯು ಅಹಿಂಸೆಯ ಪ್ರತೀಕವೆಂಬುದರ ಪ್ರಚಾರವು ಬಹುಮಟ್ಟಿಗೆ ಖಾದೀ ಕಾರ್ಯಕರ್ತರ ಸ್ವಂತ ಆಚರಣೆಯನ್ನವಲಂಬಿಸಿದೆ. ಕೇವಲ ವ್ಯಾಪಾರೀ ಬುದ್ಧಿಯಿಂದ ಕೆಲಸ ಮಾಡುವ ಕಾರ್ಯಕರ್ತರು ಖಾದೀ ಸಿದ್ಧಾಂತಗಳಿಗೆ ಧಕ್ಕೆ ತರುವರಲ್ಲದೆ ಕೊನೆಗೆ ಉದ್ದೇಶ ಸಾಧನೆಗೇ ಬಾಧೆ ತರುವರು. ಆದ್ದರಿಂದ ಖಾದೀ ಉತ್ಪತ್ತಿ ಹಾಗೂ ಮಾರಾಟದ ಕಾರ್ಯವನ್ನು ಇಂದಿನ ಪರಿಸ್ಥಿತಿಯಲ್ಲಿ ಹೆಚ್ಚಿಸುವದು ಸಾಧ್ಯವಾಗದು. ಕಾರಣ ಅದರ ಪ್ರಮಾಣವನ್ನು ಬೆಳೆಸುವ ಮೋಹವನ್ನು ನಾವು ಬಿಟ್ಟುಬಿಡಬೇಕು. ಪೂರ್ಣ ಪ್ರಯತ್ನ ಮಾಡಿದರೂ ಪ್ರತಿವರ್ಷ ನೂರಕ್ಕೆ ೨೫ ಕ್ಕಿಂತ ಹೆಚ್ಚಿನ ವೃದ್ಧಿಮಾಡುವದು ಸಾಧ್ಯವಿಲ್ಲೆಂದು ಕಾಣುತ್ತದೆ. ಹೆಚ್ಚು ಬಂಡವಾಳ ದೊರೆತರೂ ಈ ಪ್ರಕಾರದ ಒಂದು ಮೇರೆ ಇದ್ದೇ ಇರುವದು.

ವಸ್ತ್ರಸ್ವಾವಲಂಬನದ ದೃಷ್ಟಿಯಿಂದಲೂ ಕಾರ್ಯವು ಬಹು ಸ್ವಲ್ಪಮಟ್ಟಿಗೇ ಸಾಧ್ಯವಾಗಿದೆ. ಸ್ವತಃ ಚರಕಸಂಘದ ಕಾರ್ಯಕರ್ತರು ಪ್ರ ತಿತಿಂಗಳುಕನಿಷ್ಟ ಏಳುವರೆ ಲಡಿ ನೂಲನ್ನು ತಪ್ಪದೆ ನೂಲಬೇಕೆಂದು ಸಂಘವು ಆಶಿಸಿತ್ತು. ಆದರೆ ಅಂಥ ಕಾರ್ಯಕರ್ತರು ಸ್ವಲ್ಪೇ ಜನರಿದ್ದಾರೆ. ಕೂಲಿಯ ಸಲುವಾಗಿಯಲ್ಲದೆ, ಸ್ವಂತ ಬಟ್ಟೆಗಾಗಿ ನೂಲುವವರ ಸಂಖ್ಯೆ ತೀರ ಕಡಿಮೆ. ಕೂಲಿಗೋಸ್ಕರ ನೂಲುವವರ ಕೂಲಿಯಲ್ಲಿ ಸ್ವಲ್ಪ ಅಂಶವನ್ನು ಬಟ್ಟೆಯ

ರೂಪದಲ್ಲಿ ಕೊಡಲಾಗುತ್ತದೆ. ಇಂಥವರನ್ನು ಸ್ವಾವಲಂಬಿಗಳೆಂದು ಬಗೆಯುವದು ತಪ್ಪಾಗುವದು. ಅವರು ಸ್ವಸಂತೋಷದಿಂದ ಖಾದೀ ಧರಿಸುವದಿಲ್ಲ. ನೂಲುವದರಲ್ಲಿಯ ಸ್ವಾವಲಂಬನದ ತತ್ವವನ್ನರಿ ತಂತೂ ಅಲ್ಲವೇ ಅಲ್ಲ. ಸ್ವಾವಲಂಬಿ ನೂಲುವದು ಹೆಚ್ಚದಿರಲಿಕ್ಕೆ ಕಾರಣವೆಂದರೆ, ಅದರಿಂದ ಆರ್ಥಿಕ ಲಾಭ ತೀರ ಕಡಿಮೆ ಆಗು ತ್ತದೆ. ಅಷ್ಟು ಅರ್ಥಲಾಭಕ್ಕಾಗಿ ದೀರ್ಘಕಾಲ ಪರಿಶ್ರಮ ಮಾಡಲು ಬಡವರೂ, ನಿರುದ್ಯೋಗಿಗಳೂ ಕೂಡಾ ಸಿದ್ಧರಾಗುವದಿಲ್ಲ.

ಮೇಲಿನ ಮಾತುಗಳು ನಿಜವಾದುದಾದರೆ, ಸದ್ಯದ ಪರಿಸ್ಥಿತಿ ಯಲ್ಲಿ ಬಡನಿರುದ್ಯೋಗಿಗಳಿಗೆ ಸಹಾಯ ಮಾಡುವ ದೃಷ್ಟಿ ಯಿಂದಲೂ, ವಸ್ತ್ರಸ್ವಾವಲಂಬನದ ದೃಷ್ಟಿಯಿಂದಲೂ ನಾವು ಕೆಲಸ ವನ್ನು ಬಹಳ ಬೆಳೆಸಲಾರೆವು. ಎಂಬೀ ನಿರ್ಣಯಕ್ಕೆ ಬರಬೇ ಕಾಗುತ್ತದೆ. ಬಡ ಜನರಿಗೆ ದೊಡ್ಡ ಪ್ರಮಾಣದಿಂದ ಆರ್ಥಿಕ ಸಹಾಯವನ್ನು ನೀಡುವ ಹಾಗೂ ವಸ್ತ್ರಸ್ವಾವಲಂಬನವನ್ನು ವ್ಯಾಪಕವಾಗಿ ಬೆಳೆಸುವ ಆಸೆಯನ್ನು ಆರಂಭದಲ್ಲಿ ನಾವು ತಳೆದಿ ದ್ದೆವು. ಖಾದಿಯು ಬಡಜನರಿಗೆ ಸಹಾಯನೀಡುವ ಹಾಗೂ ಗೈರ ಹಂಗಾಮಿನಲ್ಲಿ ಉದ್ಯೋಗ ಕಲ್ಪಿಸಿಕೊಡುವ ರೀತಿಯಲ್ಲಿ ತನ್ನ ಸ್ಥಾನ ಪಡೆದಿದೆ. ಅದು ಚಿರಕಾಲ ಉಳಿಯುವದು. ಆದರೆ ಸದ್ಯದ ಪರಿಸ್ಥಿತಿಯಲ್ಲಿ ನಾವು ಅದನ್ನು ವಿಸ್ತೃತಗೊಳಿಸಲಾರೆವು. ನಮ್ಮ ಕಾರ್ಯದ ಈ ಮಿತಿಯನ್ನು ನಾವು ಅರಿತುಕೊಳ್ಳುವದು ಆವಶ್ಯ.

ಇಂದಿನವರೆಗೆ ದೂರ ದೂರ ಸ್ಥಳಗಳಿಗೆ ಕಳಿಸಿ ಮಾರಾಟ ಮಾಡುವದಕ್ಕಾಗಿ ನಾವು ಖಾದೀ ಉತ್ಪತ್ತಿ ಮಾಡುತ್ತ ಬಂದಿ ರುವೆವು. ಖಾದಿಯ ವಿಕಾಸವನ್ನು ಯೋಗ್ಯವಾದ ಮಾರ್ಗದಿಂದ ಸಾಗಿಸಬೇಕಾದರೆ ಇದು ಸರಿಯಾದುದಲ್ಲೆಂದು ಒಪ್ಪಿಕೊಳ್ಳ ಬೇಕು. ಅಂದರೆ ಮುಂದೆ ಖಾದೀ ಉತ್ಪತ್ತಿ ಅಥವಾ ನೂಲು

ವದು ವಸ್ತ್ರಸ್ವಾವಲಂಬನ ದೃಷ್ಟಿಯಿಂದಲೇ ನಡೆಯಬೇಕು. ವಸ್ತ್ರ ಸ್ವಾವಲಂಬನದ ಕಾರ್ಯವಾದರೂ ಮುಂದೆ ಕೇವಲ ಆರ್ಥಿಕ ಲಾಭದ ಆಸೆಗಾಗಿ ಸಾಗದೆ ಸ್ವಾವಲಂಬಿಗಳಾಗಬೇಕು, ಉದ್ಯಮ ಶೀಲರಾಗಬೇಕು, ಸಮಗ್ರ ಗ್ರಾಮದ ಹಾಗೂ ರಾಷ್ಟ್ರದ ಕಲ್ಯಾಣ ವಾಗಬೇಕು, ಪರಸ್ಪರ ಸಹಕಾರ ಬೆಳೆಯಬೇಕು, ಪ್ರೇಮ ಮತ್ತು ಸತ್ಯ ಮೊದಲಾದ ಸದ್ಗುಣಗಳ ವಿಕಾಸವಾಗಬೇಕು ಎಂಬೀ ದೃಷ್ಟಿಯಿಂದಲೆ ಮುಂದೆ ಸಾಗಬೇಕು.

ಇಂದಿನವರೆಗೆ ಖಾದೀ ಉದ್ಯೋಗಕ್ಕೆ ಕೊಡುತ್ತ ಬಂದಿರುವ ಮಹತ್ವವನ್ನು ಗ್ರಾಮದ ಇತರ ಉದ್ಯೋಗಗಳಿಗೆ ಕೊಡಲಾಗಲಿಲ್ಲ. ಬಹುಶಃ ಖಾದಿಯ ಪರಿಮಿತಿಯನ್ನು ನಾವು ಗುರುತಿಸಲಿಲ್ಲ. ಕೇವಲ ಖಾದಿಯೊಂದರಿಂದಲೆ ನಮ್ಮ ಕಾರ್ಯ ಕೈಗೂಡುವುದೆಂದು ನಾವು ಬಗೆದೆವು. ಈಗ ಇತರ ಉದ್ಯೋಗಗಳಿಗೂ ಮಹತ್ವ ಕೊಡಬೇಕಾಗುವದು. ದನಗಳ ಬಗ್ಗೆ ನಾವು ಸಾಕಷ್ಟು ಲಕ್ಷ್ಯ ಕೊಡಲಿಲ್ಲ. ಒಕ್ಕಲುತನದ ಪ್ರಶ್ನೆಯನ್ನು ತಿಳಿದೂ ತಿಳಿದೂ ಬದಿಗಿಟ್ಟೆವು. ಸ್ವಚ್ಛತೆ, ಆರೋಗ್ಯ, ಊಟ ಉಡಿಗೆ ಮುಂತಾದ ವಿಷಯಗಳಮೇಲೆ ಜೋರುಕೊಟ್ಟು ಮುಂದೆ ಸಾಗುವ ಪ್ರಯತ್ನ ಮಾಡಲಿಲ್ಲ. ಇದು ನಮ್ಮ ದೊಡ್ಡ ತಪ್ಪಾಯಿತೆಂದು ತಿಳಿಯುತ್ತದೆ. ಈಗ ಅದನ್ನು ತಿದ್ದಿಕೊಳ್ಳಬೇಕು. ಹಳ್ಳಿಯ ಇಡೀ ಜೀವನವು ಒಂದೇ ಇದೆ. ಮತ್ತು ಆ ಇಡೀ ಜೀವನದ ಮಟ್ಟನ್ನು ನಾವು ಮೇಲಕ್ಕೆತ್ತಬೇಕಾಗಿದೆ. ಖಾದಿಯ ಹಾಗೂ ವಸ್ತ್ರಸ್ವಾವಲಂಬನದ ಕಾರ್ಯವು ಸಮಗ್ರ ಗ್ರಾಮೋತ್ಥಾನದ ಅಂಗವೆಂದು ತಿಳಿದು ನಡೆಯಬೇಕಾಗಿದೆ. ನಮ್ಮ ಸಮಗ್ರ ಗ್ರಾಮಸೇವೆಯ ಈ ಕಾರ್ಯದಲ್ಲಿ ಹಳ್ಳಿಗಳಿಗೆ ಅರ್ಥಲಾಭವು ಆಗಿಯೇ ಆಗುವದು ನೂಲುವ ಕೂಲಿಯ ಲಾಭವು ಅಥವಾ ವಸ್ತ್ರ ಸ್ವಾವಲಂಬನದಿಂದಾಗುವ ಹಣದ ಉಳಿತಾಯವು ಒಂದುವೇಳೆ ಹೆಚ್ಚು ಆಗ

ದಿದ್ದರೂ, ಜನರು ಉದ್ಯಮಶೀಲರಾಗುವರು. ಅವರ ಊಟ ಉಡಿಗೆ ಮತ್ತು ಆರೋಗ್ಯ ಸುಧಾರಿಸುವವು. ಪರಸ್ಪರ ಸಹಕಾರ ಹೆಚ್ಚುವುದು, ದನಕರು ಒಕ್ಕಲತನ ಸುಧಾರಿಸುವವು ಎಣ್ಣೆಗಾಣ ಮುಂತಾದ ಇತರ ಉದ್ಯೋಗಗಳು ನಡೆಯುವವು. ಇತ್ಯಾದಿ ಅನೇಕ ರೀತಿಯಿಂದ ಕೊನೆಗೆ ಅವರಿಗೆ ಲಾಭವೇ ಆಗುವದು. ಈಗ ಹಳ್ಳಿಯ ಸಮಗ್ರ ಸಂಪೂರ್ಣ ಸೇವಾಕಾರ್ಯವು ನಮ್ಮ ಕಣ್ಣೆದುರು ತೀವ್ರತಮವಾಗಿರಬೇಕು.

ಮೇಲೆ ಹೇಳಿದ ವಿಚಾರಗಳನ್ನು ಕಾರ್ಯರೂಪಕ್ಕೆ ತರಬೇಕಾದರೆ ಸುಯೋಗ್ಯ ಕಾರ್ಯಕರ್ತರನ್ನು ನಾವು ಹಳ್ಳಿಗಳಲ್ಲಿ ನಿಲ್ಲಿಸಬೇಕು, ಅವರಿಗೆ ನಮ್ಮ ವಿದ್ಯಾಲಯಗಳಲ್ಲಿ ಉಪಯುಕ್ತ ಶಿಕ್ಷಣ ಕೊಡಬೇಕಾಗುವುದು. ಕಾರ್ಯಕರ್ತರಿಗೆ ಮುಂದೆ ಬರೆದ ವಿಷಯಗಳ ಜ್ಞಾನವಿರಬೇಕಾದುದು ಅವಶ್ಯವಿದೆ. ಸಾಧ್ಯವಾದಲ್ಲಿ ಒಬ್ಬ ಕಾರ್ಯಕರ್ತನಿಗೇ ಎಲ್ಲ ವಿಷಯಗಳ ಜ್ಞಾನವಿದ್ದರೆ ಉತ್ತಮ.

ಕಾರ್ಯಕರ್ತನಿಗೆ ಮಾತೃಭಾಷೆಯ ಹೊರ್ತಾಗಿ ಪ್ರಾಂತ ಭಾಷೆ ಹಾಗೂ ರಾಷ್ಟ್ರಭಾಷೆಯ ಜ್ಞಾನವಿರಬೇಕು. ರಾಷ್ಟ್ರದ ಆರ್ಥಿಕ, ಸಾಮಾಜಿಕ ಮತ್ತು ರಾಜನೈತಿಕ ಪರಿಸ್ಥಿತಿಯ ಜ್ಞಾನವಿರಬೇಕು. ಜಗತ್ತಿನ ಪರಿಸ್ಥಿತಿಯ ಅರಿವೂ ಸ್ವಲ್ಪಮಟ್ಟಿಗೆ ಇರಬೇಕು. ಅಷ್ಟು ಜ್ಞಾನವಿದ್ದರೇ ಆತನಿಗೆ ಭಾರತದೇಶವು ಎಲ್ಲಿದೆ? ಎಲ್ಲಿಗೆ ಸಾಗಬೇಕಾಗಿದೆ? ಎಂಬ ಅರಿವು ಉಂಟಾಗುವದು. ಆತನು ಯಾವ ಕ್ಷೇತ್ರದಲ್ಲಿ ಹೋಗಿ ನಿಲ್ಲುವನೋ ಅಲ್ಲಿಯ ಪರಿಸ್ಥಿತಿಯನ್ನಂತೂ ವಿವರವಾಗಿ ಅರಿತಿರಬೇಕು. ಚರಕಸಂಘದ ಪ್ರಥಮ ಪರೀಕ್ಷೆಯ ಪೂರ್ಣಜ್ಞಾನ, ರಾಟೆಯನ್ನು ದುರಸ್ತ ಮಾಡಲು ಅವಶ್ಯವಾದ ಬಡಿಗತನದ ಪರಿಚಯ, ಎಣ್ಣೆಗಾಣ, ಕೈಕಾಗದ, ಬೀಸುವಕಲ್ಲು, ತೊದಳೀಕಲ್ಲು, ಬೇಸಾಯ, ದನಕರುಗಳ

ಪೋಷಣೆ, ಊರಿನ ಸ್ವಚ್ಛತೆ, ಆರೋಗ್ಯ, ಆಹಾರ, ಸ್ವಲ್ಪ ಹೊಲಿಗೆಯ ಕೆಲಸ, ಇವೆಲ್ಲವುಗಳ ಜ್ಞಾನವು ಕಾರ್ಯಕರ್ತನಿಗೆ ಇರಬೇಕು.

ಕಾರ್ಯಕರ್ತನಲ್ಲಿ ಈ ವ್ಯಾವಹಾರಿಕ ಯೋಗ್ಯತೆ ಇರಬೇಕಲ್ಲದೆ ಅವನು ಪೂರ್ಣ ನೀತಿವಂತನಾಗಿರಬೇಕು. ಅವನು ನೀತಿವಂತನಾಗಿರದಿದ್ದರೆ ಎಷ್ಟೇ ಕಾರ್ಯಕುಶಲನಿದ್ದರೂ ನಮ್ಮ ಕೆಲಸಕ್ಕೆ ನಿರುಪಯೋಗಿಯಾಗಿರುವನು.

"ಇಂಥ ಸುಯೋಗ್ಯ ಕಾರ್ಯಕರ್ತರು ಹಳ್ಳಿಗಳಿಗೆ ಹೋಗಿ ನೆಲಿಸಬೇಕು. ಸಾಧ್ಯವಾದಮಟ್ಟಿಗೆ ಅವನು ಅಕ್ಕಪಕ್ಕದ ಹಳ್ಳಿಗಳಲ್ಲಿ ಕೆಲಸ ಮಾಡಲಿ ಅವನ ಮೇಲೆ ಪರಿವಾರದ ಭಾರ ಬಹಳ ಇರಬಾರದು. ಅವನ ಜೀವನ ನಿರ್ವಾಹಕ್ಕೆ ಹಣ ಸಹಾಯವು ಚರಕಸಂಘದಿಂದ ಸಲ್ಲತಕ್ಕದ್ದು. ಅವನು ಕೇವಲ ಖಾದೀ ಕೆಲಸವನ್ನೇ ಮಾಡಬೇಕೆಂದಲ್ಲ. ಆದರೆ ಹಳ್ಳಿಯ ಎಲ್ಲ ಬಗೆಯ ಸೇವೆಯನ್ನೂ ಮಾಡಬೇಕು. ಅವನ ನಿರ್ವಾಹ ವೇತನವು ಅವನ ಮೇಲೆ ಅವಲಂಬಿತರಾದ ಪರಿವಾರ ಸಂಖ್ಯೆಯ ಪ್ರಮಾಣದಿಂದ ಸಲ್ಲತಕ್ಕದ್ದು. ಸದ್ಯದ ತುಟ್ಟಿಯ ಬೆಲೆಗಳ ಲೆಕ್ಕದಿಂದ ತಿಂಗಳಿಗೆ ಮೂವತ್ತರಿಂದ ಒಂದು ನೂರು ರೂಪಾಯಿಗಳ ವರೆಗೆ ಕುಟುಂಬದ ಜನರ ಸಂಖ್ಯಾನುಸಾರ ನಿರ್ವಾಹ ವೇತನ ಕೊಡಬಹುದು. ಅದು ೧೦೦ ರೂಪಾಯಿಗಳಿಗೆ ಮಿಕ್ಕಕೂಡದು. ಐದು ವರ್ಷಗಳಲ್ಲಿ ಕಾರ್ಯಕರ್ತನು ಪೂರ್ಣ ಸ್ವಾವಲಂಬಿಯಾಗಬೇಕು ಪ್ರತಿವರ್ಷದ ಅಂತ್ಯದಲ್ಲಿ ಅವನ ನಿರ್ವಾಹ ವೇತನದಲ್ಲಿ ನೂರಕ್ಕೆ ೨೦ರಂತೆ ಕಡಿಮೆ ಮಾಡತಕ್ಕದ್ದು ಅವನು ತನ್ನ ಎಲ್ಲ ಆವಶ್ಯಕತೆಗಳಬಗ್ಗೆ-ಪ್ರವಾಸ ವೆಚ್ಚದ ಬಗ್ಗೆ ಸಹಾ-ಸ್ವತಂತ್ರ ವ್ಯವಸ್ಥೆ ಮಾಡಿಕೊಳ್ಳಬೇಕು. ಉದ್ಯೋಗ ಮೊದಲಾದವುಗಳನ್ನು ನಡೆಸಲು ಬಂಡವಾಳವನ್ನು ಸಂಘವು ಕೊಡುವದಿಲ್ಲ. ತನ್ನ ಎಲ್ಲ

ಸಾಧನ ಸಾಮುಗ್ರಿಗಳನ್ನು ತಾನೇ ಮಾಡಿಕೊಳ್ಳಬೇಕು. ಕೆಲಸ ಮಾಡುತ್ತಿರುವ ಕ್ಷೇತ್ರದಲ್ಲಿಯ ಜನತೆಯಿಂದ ಪಡೆಯಬಹುದಾದ ದಾನ, ಗ್ರಾಮೋದ್ಯೋಗಗಳಲ್ಲಿಯ ಸ್ವಂತ ಪರಿಶ್ರಮದ ಪ್ರತಿಫಲ ಹಾಗೂ ಉದ್ಯೋಗಗಳಲ್ಲಾಗುವ ಉಳಿತಾಯ; ಇವೇ ಕಾರ್ಯಕರ್ತನಿಗೆ ಸ್ವಾವಲಂಬಿಯಾಗಲು ಸಾಧನಗಳು. ಎಷ್ಟು ಜನ ಸುಯೋಗ್ಯ ಕಾರ್ಯಕರ್ತರು ದೊರೆಯುವರೋ ಅಷ್ಟೇ ಕೇಂದ್ರಗಳನ್ನು ನಡಿಸತಕ್ಕದ್ದು. ಹೆಚ್ಚು ವಿಸ್ತಾರದ ಮೋಹವನ್ನು ಇಟ್ಟುಕೊಳ್ಳಬಾರದು. ಅಯೋಗ್ಯ ಕಾರ್ಯಕರ್ತರಿಗೆ ಕೆಲಸವನ್ನು ಒಪ್ಪಿಸುವದರಿಂದ ಹಾನಿಯೇ ಆಗುವುದು" ಹೀಗೆ ನಮ್ಮ ಕಲ್ಪನೆಯಿದೆ.

ಮೇಲೆ ಹೇಳಿದ ವಿಚಾರಗಳ ದೃಷ್ಟಿಯಿಂದ ಇನ್ನು ಮುಂದೆ ನಡೆಯುವ ಖಾದೀ ಕಾರ್ಯಪದ್ಧತಿಯಲ್ಲಿ ವೈಯಕ್ತಿಕ ವ್ಯಾಪಾರಿಗಳಿಗೆ ಚರಕ-ಸಂಘದ ಪ್ರಮಾಣಪತ್ರ ಕೊಡುವುದನ್ನು ನಿಲ್ಲಿಸಬೇಕಾಗುತ್ತದೆ. ಖಾದೀ ವ್ಯಾಪಾರದ ವಿಷಯದಲ್ಲಿ ಕೆಳಗಿನ ಮೂರು ಮಾತುಗಳ ಬಗ್ಗೆ ಜಾಗರೂಕತೆ ವಹಿಸುವದು ಅವಶ್ಯ.

೧ ಖಾದಿಯ ಶುದ್ಧತೆ: ಗಿರಣೀ ನೂಲು ಮಿಶ್ರವಾಗದಂತೆ ಎಚ್ಚರಿಕೆ ಇರತಕ್ಕದ್ದು,

೨ ಕೂಲಿಗಾಗಿ ನೂಲುವವರಿಗೆ ಜೀವನ ನಿರ್ವಾಹ ವೇತನ ಸಿಗಬೇಕು.

೩ ಲಾಭವಿರಕೂಡದು.

ಇದೆಲ್ಲ ಮಾತು ಪ್ರಮಾಣಿತ ವ್ಯಾಪಾರಿಗಳಿಂದ ವ್ಯಾಪಕ ರೀತಿಯಲ್ಲಿ ಕೈಗೂಡುವದು ಅಸಂಭವವಾದುದೆಂದು ನಂಬಲಾಗಿದೆ. ಚರಕಸಂಘದ ಇಂದಿನ ಉತ್ಪತ್ತಿ ಹಾಗೂ ಮಾರಾಟದ ಕೇಂದ್ರಗಳ ಸ್ವರೂಪವು ಬದಲಾಗುವದು. ಮಾರಾಟಕ್ಕಾಗಿ ಖಾದೀ ಉತ್ಪತ್ತಿಯಾಗತಕ್ಕದ್ದಲ್ಲ. ಹಾಗೂ ಮಾರಾಟವು ನಗದು ಹಣ

ಕ್ಕಲ್ಲ. ಉತ್ಪತ್ತಿ ಕೇಂದ್ರಗಳಲ್ಲಿ ಹಾಗೂ ಸುತ್ತ ಮುತ್ತಲು ಅಥವಾ ಪಟ್ಟಣಗಳಲ್ಲಿಯ ಭಾಂಡಾರಗಳಲ್ಲಿ ಅಂಶತಃ ಕೈನೂಲು, ಉಳಿದ ಹಣ ನಗದು ಪಡೆದು ಖಾದಿಯು ಮಾರಲ್ಪಡತಕ್ಕದ್ದು. ಖಾದೀ ಹಾಗೂ (ಗ್ರಾಮಸೇವಾ ಕೇಂದ್ರದಲ್ಲಿ ಅಥವಾ ಉಳಿದ ಕಡೆ ತಯಾರಾದ) ಗ್ರಾಮೋದ್ಯೋಗದ ವಸ್ತುಗಳು ಕೇಂದ್ರದಲ್ಲೇ ಅಥವಾ ನೆರೆಹೊರೆಯ ಹಳ್ಳಿಗಳಲ್ಲೇ ಹೆಚ್ಚೆಂದರೆ ಜಿಲ್ಲೆಯೊಳಗೇ ಮಾರಾಟವಾಗತಕ್ಕದ್ದು. ಗ್ರಾಮಸೇವಾ ಕೇಂದ್ರದಲ್ಲಿ ಖಾದೀ ಕೆಲಸವು ಬಹುತರವಾಗಿ ವಸ್ತ್ರಸ್ವಾವಲಂಬನಕ್ಕಾಗಿಯೆ ನಡೆಯತಕ್ಕದ್ದು. ನೂಲಿಗೆ ಬದಲಾಗಿ ಖಾದೀ ಮಾರಾಟ ಮಾಡುವ ಕುರಿತು ಸ್ವಲ್ಪ ಖಾದೀ ಉತ್ಪತ್ತಿಯಾಗಬಹುದು. ಈ ಎಲ್ಲ ವ್ಯವಸ್ಥೆಯನ್ನು ಒಮ್ಮೆಲೆ ಮಾಡಿಬಿಡಬೇಕೆಂದಲ್ಲ. ಆದರೆ ನಿಶ್ಚಿತ ರೂಪದಿಂದ ಆದಷ್ಟು ತೀವ್ರ ನಡವಳಿಕೆಯಲ್ಲಿ ತರುವಂತೆ ಆ ದಿಶೆಯಲ್ಲಿ ಮುಂದೆ ಸಾಗುವಂತಹ ಕಾರ್ಯ ಪದ್ಧತಿಯು ನಮ್ಮದಿರಬೇಕು.

ಹಳ್ಳಿಗಳಲ್ಲಿ ನೂಲಿಗೆ ಬದಲು ಖಾದೀ ಮಾರಾಟ ಮಾಡುವದು ವಸ್ತ್ರಸ್ವಾವಲಂಬನಕ್ಕೆ ವಿಶೇಷ ಸಹಾಯಕವಾಗುವುದು. ಮನೆಯಲ್ಲಿ ಹತ್ತಿಯಿದ್ದವರು ತುನಾಯಿ ಮಾಡಿ ನೂಲು ತಯಾರಿಸಿ ಅದಕ್ಕೆ ಪ್ರತಿಯಾಗಿ ಖಾದೀ ಪಡೆದುಕೊಂಡರೆ ಅವರಿಗೆ ನಗದು ಹಣ ವೆಚ್ಚ ಮಾಡುವ ಆವಶ್ಯಕತೆ ಇರುವದಿಲ್ಲ. ಖಾದಿಯ ಬೆಲೆಯಲ್ಲಿ ನೇಗಿಯ ಕೂಲಿಯ ಅಂಶಕ್ಕಾಗಿ ಹೆಚ್ಚು ನೂಲು ಕೊಡಬೇಕಾಗುವದು. ಆದರೆ ನಗದು ಹಣ ಕೊಡುವ ಭಾಗ ಬೀಳದ್ದರಿಂದ ಅದು ಕಠಿಣವೆನಿಸುವದಿಲ್ಲ.

ಹಳ್ಳಿಗಳಲ್ಲಿ ಕಾರ್ಯಕರ್ತನೇ ಏಕಮಾತ್ರ ವಿಶ್ವಸ್ತನಾಗಿಯಾಗಲೀ, ಹಳ್ಳಿಯಲ್ಲಿಯ ಸೇವಾ ಭಾವನೆಯುಳ್ಳ ಉತ್ಸಾಹೀ ಜನರ ಸಮಿತಿಯ ಮೂಲಕವಾಗಲೀ, ಕಸಬುದಾರರ ಸಹಕಾರೀ

ಸಂಘಗಳ ಮುಖಾಂತರವಾಗಲೀ ಕೆಲಸ ನಡೆಯುಬಹುದು. ಆದರೆ ಈ ಎಲ್ಲ ಕೆಲಸ ಮತ್ತು ಉದ್ಯೋಗಗಳಿಂದ ವಸ್ತುಗಳನ್ನು ತಯಾರಿಸುವದು ಹೊರಗೆ ಅಥವಾ ದೂರ ಕಳಿಸಿ ಮಾರಾಟ ಮಾಡುವದಕ್ಕಲ್ಲ; ಅಲ್ಲಿಯೇ ಅಥವಾ ನೆರೆಹೊರೆಯ ಹಳ್ಳಿಗಳ ಉಪಯೋಗಕ್ಕಾಗಿಯೇ ವಿಕೇಂದ್ರೀಕರಣವು ಹಳ್ಳಿಯಿಂದ ಸುರುವಾಗಲಿ. ಅವಶ್ಯಕತೆ ತೋರಿದಂತೆ ಕ್ಷೇತ್ರವು ವಿಸ್ತೃತವಾಗಲಿ. ಆದರ ಪರಮಾವಧಿ ಯೆಂದರೆ ಜಿಲ್ಹೆ ಯಾಗಿರಬೇಕು.

ಖಾದಿಗೆ ಬದಲಾಗಿ ಬಂದ ನೂಲನ್ನು ನೇಯಿಸುವ ಏರ್ಪಾಟು ಮಾಡಬೇಕಾಗುವುದು. ಈ ಕಾರ್ಯವನ್ನು ಚರಕ ಸಂಘವು ಕೆಲಕಾಲ ಮಾಡುತ್ತಿರಬೇಕಾಗುವುದು. ಹಳ್ಳಿಗಳಲ್ಲಿ ಈಗ ಇರುವ ನೇಕಾರರಿಂದ ಕೆಲಸ ಮಾಡಿಸಬೇಕಲ್ಲದೆ ಹೊಸ ನೇಕಾರರನ್ನೂ ಸಿದ್ಧಗೊಳಿಸಬೇಕಾಗುವುದು.

ಈಗ ಹಳ್ಳಿಯ ಸಮಗ್ರ ಸೇವೆಯನ್ನು ಲಕ್ಷಿಸಬೇಕಾದುದರಿಂದ ಚರಕ ಸಂಘ, ಗ್ರಾಮೋದ್ಯೋಗ ಸಂಘ, ತಾಲೀಮಿ ಸಂಘ, ಹರಿಜನ ಸೇವಕ ಸಂಘ ಹಾಗೂ ಗೋ-ಸೇವಾ-ಸಂಘ, ಈ ಎಲ್ಲ ಸಂಸ್ಥೆಗಳ ಅಧಿಕಾರಿಗಳ ಅಥವಾ ಪ್ರತಿನಿಧಿಗಳ ಒಂದು ಸಮ್ಮಿಲಿತ ಸಮಿತಿಯು ರಚಿಸಲ್ಪಡಬೇಕು. ಈ ಸಮಿತಿಯು ಹಳ್ಳಿಗಳಲ್ಲಿ ಯಾವುದೇ ಪ್ರತ್ಯಕ್ಷ ಕೆಲಸ ಅಥವಾ ಆಡಳಿತೆ ಮಾಡಲಾರದು. ಆದರೆ ಆಗಾಗ್ಗೆ ಸೇರಿ, ಹಳ್ಳಿಯ ಕಾರ್ಯಕ್ಕೆ ಎಲ್ಲ ಬಗೆಯಿಂದ ಯಾವ ಸಹಾಯ ಮಾಡಬಹುದು, ಬೇರೆ ಬೇರೆ ಸಂಘಗಳ ಕೆಲಸಗಳು ಒಂದಕ್ಕೊಂದು ಹೇಗೆ ಪೂರಕವಾಗಬಲ್ಲವು ಇದರ ವಿಚಾರಮಾಡಿ ಮಾರ್ಗದರ್ಶಕವಾಗುವುದು."

ಚರಕ ಸಂಘದ ನವಸಂಸ್ಕರಣದ ಭೂಮಿಕೆಯು ಸ್ಪಷ್ಟ ರೂಪದಿಂದ ಪುನಸಿನಲ್ಲಿ ಬಿಂಬಿಸಬೇಕೆಂಬ ಉದ್ದೇಶದಿಂದ ಈ ಪರಿಪತ್ರದಲ್ಲಿ ಚರ್ಚೆಯ ಸಾರಾಂಶವನ್ನು ಕೊಡಲಾಗಿದೆ. ಇದನ್ನು

ಒಮ್ಮನಸಿನಿಂದ ಓದಿ ಮನನ ಮಾಡಿಕೊಳ್ಳಬೇಕೆಂದು ವಾಚಕರಿಗೆ ಬಿನ್ನಹವಿದೆ. ರಾಟೆಯು ಅಹಿಂಸೆಯ ಪ್ರತೀಕವಾಗಿರುವದೆಂದು ಪೂಜ್ಯ ಗಾಂಧೀಜಿಯವರು ಹೇಳುತ್ತಿರುವರಲ್ಲದೆ ನೂಲಿನಲ್ಲಿ ಸ್ವರಾಜ್ಯವು ಅಡಕವಾಗಿರುವದೆಂದೂ ಹೇಳುತ್ತ ಬಂದಿರುವರು. ಅಹಿಂಸೆ ಎಂಬೀ ಶಬ್ದವು ಇಲ್ಲಿ ಕೇವಲ ಅಹಿಂಸೆಯ ದ್ಯೋತಕವೇ ಆಗಿರದೆ ನಮ್ಮನ್ನು ಶುದ್ಧಗೊಳಿಸಿ ನಮಗೆ ಸ್ವರಾಜ್ಯ ದೊರಕಿಸುವ ಕುರಿತು ಬೇಕಾದ ಪಾತ್ರತೆಯನ್ನು ದೊರಕಿಸಿಕೊಡತಕ್ಕಂತಹ ಎಲ್ಲ ಸದ್ಗುಣಗಳ ಸೂಚಕವೂ ಆಗಿದೆ. ಎಣಿಕೆ ಮಾಡುವದಾದರೆ ಈ ಗುಣಗಳ ನಾಮಾವಲಿಯು ಬಹು ದೀರ್ಘವಾಗುವುದು. ಅಥವಾ ಅವೆಲ್ಲವುಗಳ ಉಲ್ಲೇಖವನ್ನು ಅಹಿಂಸೆಯೆಂಬದೊಂದೇ ಶಬ್ದದಿಂದ ಮಾಡಬಹುದು. ಕೇವಲ ಅಹಿಂಸೆಯ ನಿಜವಾದ ವಿಕಾಸವಾದುದಾದರೆ ಅದರೊಂದಿಗೆ ಇತರ ಗುಣಗಳ ವಿಕಾಸವು ತಂತಾನೇ ಆಗುವದೆಂಬದೂ ನಿರ್ವಿವಾದವಾದುದು. ಇವುಗಳಲ್ಲಿ ಮುಖ್ಯವಾದವುಗಳ ಬಗ್ಗೆ ಪೂ. ವಿನೋಬಾಜಿಯವರು ಮಹಾರಾಷ್ಟ್ರ ಭಾಷೆಯಲ್ಲಿ ಈ ಕೆಳಗಿನ ಶ್ಲೋಕವನ್ನು ರಚಿಸಿರುವರು. ಪ್ರಾರ್ಥನೆಯ ಸಮಯದಲ್ಲಿ ಅದನ್ನು ಆಶ್ರಮವಾಸಿಗಳು ದಿನಾಲು ಹಾಡುತ್ತಿರುವರು:—

> **अहिंसा सत्य अस्तेय ब्रह्मचर्य असंग्रह**
> **शरीरश्रम अस्वाद सर्वत्र भयवर्जन ।**
> **सर्वधर्मी समानत्व स्वदेशी स्पर्शभावना**
> **ही एकादश सेवावी नम्रत्वे व्रतनिश्चये ॥**

ಈ ಗುಣಗಳ ವಿಕಾಸದಿಂದ ವೈಯಕ್ತಿಕ ಹಾಗೂ ಸಾಮಾಜಿಕ ಜೀವನವು ಶುದ್ಧ ಹಾಗೂ ಪರಿಪೂರ್ಣವಾಗುವುದು. ಇವುಗಳ ಅಭಾವದಿಂದ ಸ್ಥಿತಿಯು ವಿಪರೀತವಾಗುವುದು. ಅಹಿಂಸಾ ಶಬ್ದವು ನಮ್ಮ ನಾಲಿಗೆಯ ಮೇಲೆ ಬರಹತ್ತಿದೆ. ಆದರೆ ಕ್ವಚಿತ್

ಅದು ನಮ್ಮ ಅಂತಃಕರಣದ ವರೆಗೆ ಮುಟ್ಟುತ್ತಿರುವುದು. ಆದರೆ ಅನ್ಯಗುಣಗಳು ನಾಲಿಗೆಯ ಮೇಲಾದರು ಕ್ವಚಿತ್ತಾಗಿ ಬರುತ್ತಿರುವವು. ಸತ್ಯ ಹಾಗೂ ಅಹಿಂಸೆಗಳು ಒಂದೇ ನಾಣ್ಯದ ಎರಡು ಮೈಗಳೆಂದು ಪೂಜ್ಯ ಗಾಂಧೀಜಿಯವರು ತೋರಿಸಿಕೊಟ್ಟಿರುವರು. ಅಹಿಂಸಾ ಶಬ್ದವು ಬಳಕೆಯಲ್ಲಿ ಬಂದು ಹೋಗಿದೆ. ಆದರೆ ಸತ್ಯದ ಸ್ಮರಣವು ಕ್ವಚಿತ್ತಾಗಿ ಆಗುವದು. ಅನ್ಯಗುಣಗಳದೂ ಇದರಂತೆಯೇ. ರಾಟಿಯು ಅಹಿಂಸೆಯ ಪ್ರತೀಕವಾಗಿದೆ ಎಂಬುದರ ಬದಲಾಗಿ ಅದು ಸತ್ಯ ಮತ್ತು ಅಹಿಂಸೆಗಳ ಪ್ರತೀಕವಾಗಿರುವದೆಂದು ಬಗೆಯುವದಾದರೆ ನಮ್ಮ ದೃಷ್ಟಿಯು ಒಂದುವೇಳೆ ಹೆಚ್ಚು ನಿಚ್ಚಳಾಗಬಹುದು. ಈ ಯುಗ್ಮದಲ್ಲಿ ಇತರ ಗುಣಗಳ ಸಮಾವೇಶವೂ ಆಗುತ್ತಿರುವದೆಂಬದನ್ನು ಮರೆಯ ಕೂಡದು.

ನೂಲುವವರಲ್ಲಿ ಹಲವು ಪ್ರಕಾರಗಳುಂಟು. ಕೂಲಿಯ ಸಲುವಾಗಿ ನೂಲುವವರು, ಅಕಾಲದಲ್ಲಿ ಅಥವಾ ಸಂಕಟಸಮಯದಲ್ಲಿ ನೂಲುವವರು, ವಸ್ತ್ರ ಸ್ವಾವಲಂಬನದ ಸಲುವಾಗಿ ನೂಲುವವರು ಮೂಲ ಶಿಕ್ಷಣದಲ್ಲಿ ನೂಲುವವರು, ಹಾಗೂ ಸೂತ್ರಯಜ್ಞವೆಂದು ನೂಲುವವರು. ಚರಕಸಂಘದ ದೃಷ್ಟಿಯಿಂದ ರಾಟೆಯು ಸತ್ಯ ಅಹಿಂಸೆಗಳ ಪ್ರತೀಕವಾಗುವದಿದ್ದರೆ ಈ ಎಲ್ಲ ಬಗೆಯ ನೂಲುವವರು ತಮ್ಮಲ್ಲಿ ಹಾಗೂ ತಮ್ಮ ಮುಖಾಂತರ ಅನ್ಯರಲ್ಲಿ ಮೇಲೆ ಬರೆದಂತೆ ಗುಣಗಳ ವಿಕಾಸವನ್ನು ಯಥಾಶಕ್ತಿ ಸಿದ್ಧಗೊಳಿಸತಕ್ಕದ್ದಿದೆ ಎಂಬದನ್ನು ಲಕ್ಷದಲ್ಲಿಡಬೇಕಾಗಿದೆ. ಯಾಕಂದರೆ, ಈ ಎಲ್ಲ ಗುಣಗಳು ಅಹಿಂಸಾತ್ಮಕ ಸ್ವರಾಜ್ಯ ಹಾಗೂ ಅಹಿಂಸಾತ್ಮಕ ಸಮಾಜ ಇವುಗಳ ರಚನೆಯ ಕಾರ್ಯದಲ್ಲಿ ಅವಶ್ಯವಾದವುಗಳಿದ್ದು, ಅವು ವಿಕಾಸಗೊಂಡರೆ ನಮ್ಮ ಸ್ವರಾಜ್ಯವನ್ನು ತಡೆಹಿಡಿಯಲು ಸಮರ್ಥವಾದ ಯಾವ ಶಕ್ತಿಯೂ ಇರದು. ಖಾದೀ ಕಾರ್ಯಕರ್ತನು ಮನೆಯೊಳಗೆ, ಹೊರಗೆ, ತಾನು ಕೆಲಸ ಮಾಡ

ಬಹುದಾದ ಎರಡನೆ ಸ್ಥಳಗಳಲ್ಲಿ ತನ್ನ ಆಚರಣದಲ್ಲಿ ಈ ಗುಣಗಳನ್ನು ತೋರ್ಪಡಿಸುತ್ತ, ಕೆಳಗಣ ಹದಿನೈದು ಬಗೆಯ ರಚನಾತ್ಮಕ ಕಾರ್ಯದಲ್ಲಿ ತನು-ಮನದಿಂದ ತೊಡಗಿದರೆ ಮಾತ್ರ ಈ ಕಾರ್ಯವು ಸಫಲವಾಗಬಲ್ಲದುಃ—

(೧) ಜಾತಿಜಾತಿಗಳಲ್ಲಿ ಐಕಮತ್ಯ (೨) ಅಸ್ಪೃಶ್ಯತೆಯ ನಿವಾರಣ (೩) ಮದ್ಯಪಾನ ನಿರೋಧ (೪) ಖಾದಿ (೫) ಅನ್ಯಗ್ರಾಮೋದ್ಯೋಗಗಳು (೬) ಮೂಲಶಿಕ್ಷಣ (೭) ಗ್ರಾಮೋತ್ಥಾನ (೮) ಪ್ರೌಢಶಿಕ್ಷಣ (೯) ಸ್ತ್ರೀಯರ ಉನ್ನತಿ (೧೦) ಆರೋಗ್ಯ ಹಾಗೂ ಸ್ವಚ್ಛತೆ, (೧೧) ರಾಷ್ಟ್ರಭಾಷೆಯ ಪ್ರಚಾರ, (೧೨) ಮಾತೃಭಾಷೆಯ ಪ್ರೇಮ, (೧೩) ಆರ್ಥಿಕ ಸಮಾನತೆ (೧೪) ರೈತರು, ಕೂಲಿಕಾರರು, ವಿದ್ಯಾರ್ಥಿಗಳು, ಇವರಲ್ಲಿ ಸಂಘಟನೆ ಹಾಗೂ ಜಾಗ್ರತೆ (೧೫) ಆದಿವಾಸಿಗಳ ಸೇವೆ.

ಗುಣಗಳ ವಿಕಾಸವು ಕೇವಲ ಬೌದ್ಧಿಕ ಪ್ರಯೋಗದಿಂದಲ್ಲ ಆದರೆ ಪ್ರತ್ಯಕ್ಷ ಕಾರ್ಯಾಚರಣೆಯ ಮೂಲಕ ಸಿದ್ಧವಾಗಬಲ್ಲದು. ಆ ಮೂಲಕವೆ ಮೇಲೆ ಹೇಳಿದ ಹದಿನೈದು ಬಗೆಯ ರಚನಾತ್ಮಕ ಕಾರ್ಯವು ಆದರ ಆಧಾರವಾಗಬಲ್ಲದು. ಇದರಲ್ಲಿಯೇ ಹಳ್ಳಿಯ ಸಮಗ್ರ ಸೇವೆಯು ತುಂಬಿದೆ ಹಾಗೂ ಹಳ್ಳಿಯೆಂದರೆ ಅರ್ಥಾತ್ ಹಿಂದುಸ್ಥಾನ. ಇದೇ ಇನ್ನು ಚರಕ ಸಂಘದ ಮುಖ್ಯ ಗುರಿಯಾಗುವದು. ಒಂದು ವೇಳೆ ಇದು ಕೈಗೂಡಿದರೆ ದೇಶದ ರಾಜಕಾರಣವು ರಚನಾತ್ಮಕ ಕಾರ್ಯಕ್ಕೆ ಅಧೀನವಾಗಿ ನಿಲ್ಲುವುದು. ಈ ಕಾರ್ಯವನ್ನು ಕೈಗೂಡಿಸಿಕೊಳ್ಳುವ ಹೊಣೆಯು ಚರಕಸಂಘದ ಕಾರ್ಯಕರ್ತರ ಮೇಲೆ ಬರುವದು. ಜನತೆಯು ಈ ಕಾರ್ಯದಲ್ಲಿ ತುಂಬಾ ಸಹಕಾರ ನೀಡುವುದೆಂಬ ಆಶೆಯಿದೆ.

——

ಎರಡನೆಯ ಸಭೆ.

ಮೇಲಿನ ಪರಿಪತ್ರಕ್ಕೆ ದೇಶದೊಳಗಿನ ಅನೇಕ ಖಾದೀ ಕಾರ್ಯಕರ್ತರಿಂದ ಬಂದ ಉತ್ತರಗಳಲ್ಲಿ ಕೆಲವೊಂದನ್ನು ಓದಿಸಿ ಕೇಳಿಕೊಂಡು ಅದರ ಬೆಳಕಿನಲ್ಲಿ ಗಾಂಧೀಜಿಯವರು ತಮ್ಮ ವಿಚಾರಗಳನ್ನು ಹೆಚ್ಚು ನಿಚ್ಚಳ ಹಾಗೂ ದೃಢಗೊಳಿಸಿದರು. ತಮ್ಮ ಈ ನಿಶ್ಚಿತ ವಿಚಾರಗಳನ್ನು ತಾ|| ೧, ೨, ೩, ಡಿಸೆಂಬರ ೧೯ಳಳನೇ ಸಂಘದ ಸಭೆಯಲ್ಲಿ ವಿಶ್ವಸ್ತಮಂಡಲದ ಸದಸ್ಯರ ಹಾಗೂ ಖಾದೀ ಕಾರ್ಯ ಕೈಕೊಂಡ ಆರಿಸಲ್ಪಟ್ಟ ಕಾರ್ಯಕರ್ತರ ಎದುರು ಪ್ರಭಾವೀ ಶಬ್ದಗಳಲ್ಲಿ ಮಂಡಿಸಿರುವರು. ಅವುಗಳಲ್ಲಿ ತಾ|| ೧ರ ಭಾಷಣದ ಸಾರಾಂಶವನ್ನು ಈ ಮುಂದೆ ಕೊಡಲಾಗಿದೆಃ—

ಗ್ರಾಮಸಂಸ್ಕೃತಿ ವಿರುದ್ಧ ಪಟ್ಟಣದ ಸಭ್ಯತೆ

“ವಿಶ್ವದಲ್ಲಿ ಇಂದು ಎರಡು ವಿಚಾರ ಸರಣಿಗಳು ಪ್ರಚಲಿತವಾಗಿರುವವು. ಒಂದು, ಅದನ್ನು ಪಟ್ಟಣಗಳಲ್ಲಿ ವಿಭಕ್ತಗೊಳಿಸಬೇಕೆನ್ನುವದು; ಇನ್ನೊಂದು, ಹಳ್ಳಿಗಳಲ್ಲಿ ಗ್ರಾಮಸಂಸ್ಕೃತಿ ಹಾಗೂ ಪಟ್ಟಣದ ನಾಗರಿಕತೆ. ಎರಡೂ ಭಿನ್ನ ಭಿನ್ನವಾದ ವಸ್ತುಗಳು. ಪಟ್ಟಣದ ಸಭ್ಯತೆಯು ಯಾಂತ್ರಿಕ ಔದ್ಯೋಗೀಕರಣದ ಮೇಲೆ ನಿಂತಿದ್ದರೆ ಗ್ರಾಮಸಭ್ಯತೆಯು ಕೈಕೆಲಸದ ಮೇಲೆ ನಿಂತಿದೆ. ನಾವು ಗ್ರಾಮ ಸಂಸ್ಕೃತಿಯನ್ನು ಒಪ್ಪಿರುವೆವು. ದೊಡ್ಡ ಪ್ರಮಾಣದಲ್ಲಿಯ ಈ ಉತ್ಪತ್ತಿ ಹಾಗೂ ಈ ಔದ್ಯೋಗೀಕರಣ ಇವು ಇತ್ತೀಚೆಗೆ ಬೆಳೆದಿರುವವು. ಇದರಿಂದ ನಮ್ಮಲ್ಲುಂಟಾದ ವಿಕಾಸವೆಷ್ಟು, ನಮ್ಮ ಸುಖವು ಎಷ್ಟರಮಟ್ಟಿಗೆ ಹೆಚ್ಚಿದೆ ಎಂಬುದು ನಮಗೇ ತಿಳಿಯದು. ಆದರೆ ಸದ್ಯದ ವಿಶ್ವಯುದ್ಧವು ಇದರಿಂದಲೆ ಜನ್ಮವೆತ್ತಿದೆ ಎಂಬುದನ್ನು ಮಾತ್ರ ನಾವು ಚನ್ನಾಗಿ ಅರಿತಿರುವೆವು. ಈ ಎರಡನೆಯ ಮಹಾಯುದ್ಧವು ಇನ್ನೂ ಸಾಗಿದೆ. ಅದು ಮುಗಿಯುವ ಮುಂಚೆಯೆ

ಮೂರನೆಯ ಮಹಾಯುದ್ಧದ ಮಾತು ನಮಗೆ ಕೇಳಬರಹತ್ತಿದೆ. ಸದ್ಯದಲ್ಲಿ ನಮ್ಮ ದೇಶಕ್ಕೊದಗಿದ ದೀನ ಹಾಗು ದುಃಖದಾಯಕ ಸ್ಥಿತಿಯು ಈ ಮೊದಲು ಎಂದೂ ಇರಲಿಲ್ಲ. ಪಟ್ಟಣವಾಸಿಗಳು ಸದ್ಯದಲ್ಲಿ ಪಡೆಯುಹತ್ತಿರುವ ಒಳ್ಳೇ ವೇತನ ಹಾಗೂ ಬಹುಲಾಭ ಇವು ಎಲ್ಲ ಹಳ್ಳಿಗಳ ರಕ್ತಶೋಷಣದಿಂದಲೆ ಶಕ್ಯವಾಗಿರುವವು.

ನಮ್ಮಲ್ಲಿ ನಾವು ಸತ್ಯವಂತರಾಗಿರಬೇಕು.

ನಾವು ಕೋಟ್ಯಾವಧಿ ರೂಪಾಯಿಗಳನ್ನು ಸಂಗ್ರಹಿಸಬೇಕೆಂದು ಅಪೇಕ್ಷಿಸುತ್ತಿರುವದಿಲ್ಲ. ನಮ್ಮ ಕಾರ್ಯವು ಹಣದಮೇಲೆ ಕೈಯೂರಿ ನಿಲ್ಲುವಂತೆ ಎಂದೂ ಮಾಡಲೆಣಿಸುವದಿಲ್ಲ. ನಮ್ಮ ಕರ್ತವ್ಯವನ್ನು ಪಾಲಿಸುವ ಪ್ರಸಂಗದಲ್ಲಿ ಒಂದು ವೇಳೆ ನಮ್ಮ ಜೀವಿತವನ್ನು ಕೂಡಾ ಹೋಮ ಮಾಡಲು ನಾವು ಸಿದ್ಧರಾದರೆ ಹಣದ ಬೆಲೆ ಏನು? ನಮ್ಮಲ್ಲಿ ಆತ್ಮವಿಶ್ವಾಸವಿರತಕ್ಕದ್ದು. ನಾವು ನಮ್ಮ ಬಗ್ಗೆ ಸತ್ಯವಂತರಾಗಿರಬೇಕು. ನಾವು ಈ ರೀತಿ ಆಗುವದಾದರೆ, ಮೂವತ್ತು ಲಕ್ಷ ಬಂಡವಾಳವನ್ನು ಹಳ್ಳಿಗಳಲ್ಲಿ ಹರಡಿ ಮೂರು ನೂರು ಕೋಟಿ ರಾಷ್ಟ್ರೀಯ ಸಂಪತ್ತನ್ನುಂಟುಮಾಡಬಹುದು. ಇದರ ಸಲುವಾಗಿ ಹಳ್ಳಿಗಳು ಸ್ವಾವಲಂಬಿ ಹಾಗೂ ಆತ್ಮವಿಶ್ವಾಸಿಗಳಾಗುವದು ಅವಶ್ಯಕ. ಆದರೆ ಸ್ವಾವಲಂಬನದ ಪ್ರಯೋಗವನ್ನು ಅದರ ಸಂಕುಚಿತಾರ್ಥದಲ್ಲಿ ಸಾಗಿಸಹತ್ತಿರುವದಿಲ್ಲೆಂಬದನ್ನು ಎಲ್ಲರೂ ಲಕ್ಷದಲ್ಲಿಡತಕ್ಕದ್ದು. ಹಳ್ಳಿಗಳು ಒಂದರಿಂದೊಂದು ಬೇರೆಯಾಗಿರಬೇಕೆಂದೂ, ಅವುಗಳಲ್ಲಿ ಪರಸ್ಪರ ಸಂಬಂಧವಿರಕೂಡದೆಂದೂ ಮುಂತಾದ ಒಡಕಿನ ಉಪದೇಶವನ್ನು ನಾನು ಎಂದೂ ಮಾಡುತ್ತಿರುವದಿಲ್ಲ. ಧ್ಯೇಯಪೂರ್ತಿಗಾಗಿ ನಾವು ಒಂದು ಧೂಲಿಕಣದಷ್ಟು ನಮ್ರರಾಗಿರಬೇಕು. ಹಾಲಿನಲ್ಲಿ ಸಕ್ಕರೆ ಬೆರೆತಂತೆ ನಾವು ಜನತೆಯೊಂದಿಗೆ ತಾದಾತ್ಮ್ಯವನ್ನು ಹೊಂದಿ ಬೆರೆತುಹೋಗಬೇಕು. ಒಂದು ವೇಳೆ ಗ್ರಾಮವಾಸಿಗಳು ಶಕ್ಯವಿದ್ದ

ಮಟ್ಟಿಗೆ ಸ್ವಾವಲಂಬಿಗಳಾಗಿ ತಮ್ಮ ಬೌದ್ಧಿಕ ವಿಕಾಸಕ್ಕಾಗಿ ಸಾಕಷ್ಟು ಸಮಯವನ್ನು ಇಟ್ಟುಕೊಂಡುದಾದರೆ, ನಾವು ಭವಿಷ್ಯ ಕಾಲದಲ್ಲಿ ಸಾಧಿಸಲೆಣಿಸುತ್ತಿರುವ ಅಹಿಂಸಕ ಸಮಾಜ ರಚನೆಯ ಕಾರ್ಯದಲ್ಲಿ ಆವಶ್ಯಕವಾಗಿರುವ ಜಾಗೃತಿಯನ್ನು ತಮ್ಮಲ್ಲಿ ಒಡಮೂಡಿಸುವರು.

ವಸ್ತ್ರಸ್ವಾವಲಂಬನ-ನಮ್ಮ ಗುರಿ:—

ನಮ್ಮ ಮೊದಲನೆ ಆವಶ್ಯಕತೆಗಳಲ್ಲಿ ಅನ್ನದ ತರುವಾಯದಲ್ಲಿ ಬಟ್ಟೆಯ ಸ್ಥಾನ. ಪ್ರತಿಯೊಂದು ಹಳ್ಳಿಯು ತನ್ನ ಬಟ್ಟೆಯನ್ನು ತಾನೇ ಮಾಡಿಕೊಂಡರೆ ಅದರ ಶಕ್ತಿಯು ಎಷ್ಟೋಪಟ್ಟು ಬೆಳೆಯುವದು. ಆದರೆ ಇದರ ಸಲುವಾಗಿ ಬಟ್ಟೆಯ ಕಾರಖಾನೆಗಳನ್ನು ಕಾನೂನಿನ ಸಹಾಯದಿಂದ ನಾವು ನಿಲ್ಲಿಸಲು ಇಚ್ಛಿಸುವದಿಲ್ಲ. ಜನತೆಯ ಅಂತಃಕರಣದಲ್ಲಿ ಕ್ರಾಂತಿಯನ್ನು ಹುಟ್ಟಿಸಿ ನಮ್ಮ ಉದ್ದೇಶವನ್ನು ಸಫಲಗೊಳಿಸಲೆಣಿಸುವೆವು. ಹತ್ತಿ ಬೆಳೆಯುತ್ತಿರುವ ಎಲ್ಲ ಸ್ಥಳಗಳಲ್ಲಿ ವಿಕೇಂದ್ರೀಕರಣದ ಮೂಲಕ ಬಟ್ಟೆಯನ್ನು ಉತ್ಪನ್ನ ಮಾಡತಕ್ಕದಿದೆ. ಇನ್ನು ಪಟ್ಟಣಗಳಲ್ಲಿಯ ಖಾದೀ ಧಾರಿಗಳ ಗತಿಯೇನೆಂದು ನೀವು ಕೇಳಬಹುದು. ಅವರು ತಮ್ಮ ನೂಲನ್ನು ಸ್ವತಃ ನೂಲಬೇಕು. ಅದನ್ನು ನೇಯಿಸಿ ಬಟ್ಟೆ ಮಾಡಿಸಿಕೊಳ್ಳುವ ಏರ್ಪಾಟು ಅವರೇ ಮಾಡಿಕೊಳ್ಳಬೇಕು. ಮುಂಬೈ ಜನರ ಸಲುವಾಗಿ ಖಾದಿಯನ್ನು ತಯಾರಿಸುವವರ ಬಟ್ಟೆ ವ್ಯಾಂಚಿಸ್ಟರದಿಂದ ಬರಬೇಕು. ಇದು ಮೂರ್ಖತನದ ಪರಮಾವಧಿಯು. ಕೂಲಿಯ ಹಲವೊಂದು ಅಂಶದಲ್ಲಿ ಖಾದಿಯನ್ನು ಪಡೆಯಬೇಕೆಂದು ಬಡಜನರನ್ನು ನಿರ್ಬಂಧಿಸುವದೂ ನ್ಯಾಯಸಮ್ಮತವಾಗದು. ಅವರು ಸ್ವ-ಇಚ್ಛೆಯಿಂದಲೂ, ಪ್ರೇಮದಿಂದಲೂ ಜ್ಞಾನಪೂರ್ವಕವಾಗಿಯೂ ನೂಲು ತೆಗೆದು ಅದರಿಂದ ಸ್ವಂತಕ್ಕಾಗಿ ಬಟ್ಟೆ ತಯಾರಿಸಿ ಅದನ್ನು ಧರಿಸುವದರಲ್ಲಿ ಅಭಿಮಾನ ಪಡುವಂತೆ

ಅವರನ್ನು ಸುಶಿಕ್ಷಿತ ಮಾಡುವದು ನಮ್ಮ ಕರ್ತವ್ಯ. ಮುಂಬೈ ಜನರು ಖಾದಿಯನ್ನು ಧರಿಸಲಪೇಕ್ಷಿಸಿದರೆ ಅವರು ಸ್ವತಃ ನೂಲ ಬೇಕು, ಇಲ್ಲವೆ ತಮ್ಮ ಆಶ್ರಿತರು, ಅಥವಾ ಹುಡುಗರಿಂದ ನೂಲಿಸಬೇಕು. ಖಾದೀ ಧಾರಣದ ವ್ರತವನ್ನು ಸ್ವೀಕರಿಸಿದವರು ತಾವೇ ನೂಲಬೇಕಾದುದರಿಂದ ನೂಲುವ ಪ್ರಾಘಾತ ಬೀಳುತ್ತ ಅದು ಸಾಂಕ್ರಾಮಿಕವಾಗಿ ಹಬ್ಬುವದು. ನಾವು ಈಗ ಒಂದು ಕೋಟಿ ರೂಪಾಯಿಗಳ ಖಾದಿಯನ್ನು ಹುಟ್ಟಿಸುತ್ತಿದ್ದು ಮುಂದೆ ಹತ್ತು ಕೋಟಿ ರೂಪಾಯಿಗಳ ಖಾದಿಯ ಉತ್ಪತ್ತಿಯನ್ನು ಮಾಡ ಲಳವಾದರೂ ಇಡೀ ಹಿಂದುಸ್ಥಾನವನ್ನು ಒಳಗೊಳ್ಳುವ ನಮ್ಮ ಉದ್ದೇಶವು ಸಫಲವಾಗದು.

ಅದೇ ನಿಜವಾದ ಸ್ವರಾಜ್ಯ:—

ಸಂಪೂರ್ಣ ಹಿಂದುಸ್ಥಾನದ ರಾಜಕಾರಣದಲ್ಲಿ ಮಾರ್ಗ ದರ್ಶಕರಾಗುವ ಯೋಗ್ಯತೆಯನ್ನು ಪಡೆಯುವ ಮಟ್ಟಿಗೆ ರಚನಾ ತ್ಮಕ ಕಾರ್ಯ ಕೈಕೊಂಡ ಕಾರ್ಯಕರ್ತರು ತಮ್ಮ ಜ್ಞಾನವನ್ನು ಬೆಳೆಸಿಕೊಳ್ಳಬೇಕು. ಇಂದು ರಾಜಾಜಿಯವರು ಮದ್ರಾಸದ ಪ್ರಧಾನ ಮಂತ್ರಿಗಳಾದರೂ ನಾವು ನಮ್ಮ ಕಾರ್ಯವನ್ನು ವೃದ್ಧಿ ಗೊಳಿಸಲಾರೆವೆಂಬದನ್ನು ನಾವು ತಿಳಿದಿರುವೆವು. ಇದು ಸರಿ ಯಾದುದೇ ? ನಮ್ಮ ಸದ್ಯದ ರಾಜನೀತಿಯು ಸಲುವಾಗಿ ವ್ಹಾಯಿಸ ರಾಯರ ರಾಜಭವನದತ್ತ ಆಶೆಬುರುಕ ಮೋರೆ ಮಾಡಿಕೊಂಡು ಸಾರಿಗೆ ಮಾಡುತ್ತ ಹೋಗಬೇಕೆ ? ಒಂದು ವೇಳೆ ನಾವು ನಮ್ಮ ಕಾರ್ಯವನ್ನು ಯೋಗ್ಯತಾಪೂರ್ಣ ರೀತಿಯಲ್ಲಿ ಮಾಡಿದುದಾದರೆ ವ್ಹಾಯಿಸರಾಯರನ್ನೇ ನಮ್ಮೆಡೆಗೆ ಬರಮಾಡಿಕೊಳ್ಳಬಹುದು. ಅವರು ನಮ್ಮ ಕಾರ್ಯವನ್ನು ನೋಡಿ ಇನ್ನು ಮುಂದೆ ಈ ಜನರ ಮೇಲೆ ಪ್ರಭುತ್ವ ನಡೆಸುವದಾಗಲಿ, ದಾಸ್ಯಭಾವದಲ್ಲಿ ಇಡು ವುದಾಗಲಿ ಅಸಂಭವವಾದುದೆಂದು ಮನಗಾಣುವರು. ಏಳುಲಕ್ಷ

ಹಳ್ಳಿಗಳು ಹೊಸ ಹುರುಪಿನಿಂದ ಈ ಕೆಲಸ ಮಾಡಲನುವಾದ ಕೂಡಲೆ ನಮ್ಮ ದಾಸ್ಯತ್ವವು ನಷ್ಟವಾಗುವುದು. ಆಗ್ಗೆ ನಮ್ಮ ಪ್ರತಿಯೊಂದು ಹಳ್ಳಿಯು ಸ್ವತಂತ್ರ ಹಾಗೂ ಸ್ವಾವಲಂಬಿಯಾಗುವುದು. ಅದೇ ನಿಜವಾದ ಸ್ವರಾಜ್ಯವೂ, ನಿರ್ವ್ಯಾಜವಾದ ಲೋಕಸತ್ತೆಯೂ ಆಗುವುದು."

ತಾ|| ೨ ಹಾಗೂ ೩ನೇ ದಿನಗಳಲ್ಲಾದ ಭಾಷಣಗಳು ಅಲ್ಲಿ ನೆರೆದಿದ್ದ ಕಾರ್ಯಕರ್ತರ ಮನಸಿನ ಮೇಲೆ ಬಲವಾದ ಪರಿಣಾಮವನ್ನುಂಟು ಮಾಡಿದವು. ಅವುಗಳ ಪೂರ್ಣ ವರದಿಯನ್ನು ತೆಗೆದುಕೊಳ್ಳುವದು ಆಗಲಿಲ್ಲ. ಈ ಭಾಷಣಗಳ ಆಧಾರದಿಂದ ಇ. ಸ. ೧೯೪೪ನೇ ಸಪ್ಟಂಬರದಲ್ಲ ಮಹಾತ್ಮಾ ಗಾಂಧಿಯವರು ಸಂಘದೆದುರು ಮಂಡಿಸಿದ ಗೊತ್ತುವಳಿಯಲ್ಲಿ ಸ್ವಲ್ಪ ಸುಧಾರಣೆ ಮಾಡಿ ಕೊನೆಗೆ ಕೆಳಗೆ ಬರೆದಂತೆ ಅದನ್ನು ಸ್ವೀಕರಿಸಲಾಯಿತು.

"ರಾಟಿಯ ಮೂಲವು ಹಳ್ಳಿ. ಹಳ್ಳಿಗಳಲ್ಲಿ ವಿಭಕ್ತವಾಗಿ ಹಳ್ಳಿಗಳ ಸಮಗ್ರ ಸೇವೆಯನ್ನು ಕೈಕೊಳ್ಳುವದರಲ್ಲಿಯೆ ಚರಕ ಸಂಘದ ಇಷ್ಟಾರ್ಥಸಿದ್ಧಿ. ಈ ಗುರಿಯನ್ನು ಲಕ್ಷಿಸಿ ಸಂಘದ ಕಾರ್ಯಪ್ರಣಾಲಿಯಲ್ಲಿ ಈ ಕೆಳಗಣ ಮಾರ್ಪಾಟು ಮಾಡಬೇಕೆಂದು ಚರಕಸಂಘದ ಈ ಸಭೆಯು ನಿರ್ಣಯಿಸುತ್ತದೆಃ—

(೧) ಎಷ್ಟು ಜನ ಸುಯೋಗ್ಯ ಕಾರ್ಯಕರ್ತರು ಸಿದ್ಧರಿರುವರೋ ಹಾಗೂ ಯಾರನ್ನು ಸಂಘವು ಆರಿಸುವದೋ ಅವರು ಹಳ್ಳಿಗಳಲ್ಲಿ ನಿಲ್ಲತಕ್ಕದ್ದು.

(೨) ಮಾರಾಟದ ಭಾಂಡಾರ ಹಾಗೂ ಉತ್ಪತ್ತಿಕೇಂದ್ರ ಇವುಗಳನ್ನು ಮರ್ಯಾದಿತಗೊಳಿಸಬೇಕು.

(೩) ಶಿಕ್ಷಣಾಲಯಗಳಲ್ಲಿ ಆವಶ್ಯಕವಾದ ಮಾರ್ಪಾಟನ್ನೂ, ಬೆಳವಣಿಗೆಯನ್ನೂ ಮಾಡತಕ್ಕದ್ದು. ಹಾಗೂ ಹೊಸ ವಿದ್ಯಾಲಯಗಳನ್ನು ತೆರೆಯತಕ್ಕದ್ದು.

(ಳ) ಒಂದು ಜಿಲ್ಹೆಯ ಪರಿಮಿತಿಯನ್ನು ಮಿಕ್ಕದಷ್ಟು ಕ್ಷೇತ್ರದ ಜನರು ಹೊಸ ಯೋಜನೆಯಂತೆ ಕಾರ್ಯಮಾಡುವ ಕುರಿತು ಸ್ವಾತಂತ್ರ್ಯ ಹಾಗೂ ಸ್ವಾಯತ್ತತೆಯನ್ನು ಪಡೆಯಲಿಚ್ಛಿಸಿದರೆ, ಅದನ್ನು ಸಂಘವು ಒಪ್ಪುವದಾದರೆ, ಅಂಥ ಕ್ಷೇತ್ರದಲ್ಲಿ ಚರಕಸಂಘವು ಪ್ರತ್ಯಕ್ಷ ಕಾರ್ಯ ಮಾಡದೆ,ಎಲ್ಲಿಯ ವರೆಗೆ ಅಲ್ಲಿಯ ಕಾರ್ಯವು ಸಂಘದ ಧ್ಯೇಯ ಧೋರಣೆಗೆ ಅನುಸರಿಸಿ ನಡೆಯುವದೋ ಅಲ್ಲಿಯವರೆಗೆ ಅದಕ್ಕೆ ಮಾನ್ಯತೆಯನ್ನೂ ನೈತಿಕಬೆಂಬ ಲವನ್ನೂ ಕೊಡತಕ್ಕದ್ದು.

(ಱ) ಚರಕಸಂಘ, ಗ್ರಾಮೋದ್ಯೋಗ ಸಂಘ, ಹಿಂದುಸ್ಥಾನೀ ತಾಲೀಮೀ ಸಂಘ, ಹರಿಜನ ಸೇವಕ ಸಂಘ, ಈ ಸಂಘ ಗಳ ಒಂದು ಸಮ್ಮಿಲಿತ ಸಮಿತಿಯನ್ನು ನಿರ್ಮಿಸ ತಕ್ಕದ್ದು. ಅವರು ಕಾಲ ಕಾಲಕ್ಕೆ ಒಟ್ಟಾರೆ ಸೇರಿ ಹೊಸ ಕಾರ್ಯಪದ್ಧತಿಗೆ ಅನುಕೂಲವಾದಂಥ ಆವಶ್ಯಕ ಸೂಚನೆಗಳನ್ನು ಕೊಡುತ್ತ ಹೋಗಬೇಕು.

ಮೇಲ್ಕಂಡ ಸಮಿತಿಯಲ್ಲಿ ಚರಕಸಂಘದ ಪರವಾಗಿ ಅದರ ಅಧ್ಯಕ್ಷ, ಮಂತ್ರಿ ಹಾಗೂ ಶ್ರೀ. ಧೀರೇಂದ್ರ ಮಜುಮುದಾರರೂ, ಉಳಿದ ನಾಲ್ಕು ಸಂಘಗಳಲ್ಲಿ ಪ್ರತಿಯೊಂದರ ಪರವಾಗಿ ಪೂಜ್ಯ ಗಾಂಧೀಜಿಯವರ ಹೊರತಾಗಿ ಇಬ್ಬಿಬ್ಬ ಸದ್ಗೃಹಸ್ಥರು ಸದಸ್ಯ ರಾಗಿರತಕ್ಕದ್ದು.

ಮೇಲೆ ಹೇಳಿದ ವ್ಯವಸ್ಥೆಯಂತೆ ಆರಿಸಿಬರುವ ಸದಸ್ಯರಲ್ಲದೆ ಬೇರೆ ಮೂವರು ಹೆಚ್ಚಿಗೆ ಸದಸ್ಯರನ್ನು ಸಮಾವೇಶ ಮಾಡಿಕೊ ಳ್ಳಬೇಕೆಂಬ ನಿಯಮವನ್ನು ಮಾಡುವದು ಉಪಯುಕ್ತವಾದುದೆಂದು ಆ ಸಮಿತಿಗೆ ಸೂಚಿಸಲಾಗಿದೆ.

——

ಗೊತ್ತುವಳಿಯ ಸ್ಪಷ್ಟೀಕರಣ.

ಗ್ರಾಮಸೇವಕನ ಆರ್ಥಿಕ ಸ್ವಾವಲಂಬನ

ಮೇಲಿನ ಗೊತ್ತುವಳಿಯ ಕಲಮು (೧)ರನ್ವಯ ಹಳ್ಳಿಯಲ್ಲಿ ನಿಲ್ಲತಕ್ಕ ಕಾರ್ಯಕರ್ತನ ಬಗ್ಗೆ ಸಂಘವು ಈ ರೀತಿ ನಿಶ್ಚಯಿಸಿದೆ: ಕಾರ್ಯಕರ್ತನ ನಿರ್ವಾಹ-ವ್ಯಯವನ್ನು ಆತನ ಮೇಲೆ ಅವಲಂಬಿತವಾದ ಪರಿವಾರದ ಪ್ರಮಾಣದಲ್ಲಿ ಸಂಘವು ಸಲ್ಲಿಸುವುದು. ಆದರೆ ತಿಂಗಳೊಂದಕ್ಕೆ ಯಾರಿಗೂ ನೂರು ರೂಪಾಯಿಗಳಿಗಿಂತ ಹೆಚ್ಚು ದೊರೆಯಲಾರದು. ಸದ್ಯದ ತುಟ್ಟಿಯ ದಿನಗಳನ್ನನುಲಕ್ಷಿಸಿ ನೂರು ರೂಪಾಯಿಗಳ ಈ ಪರಿಮಿತಿಯನ್ನಿಡಲಾಗಿದೆ. ಆದ್ದರಿಂದ ಈ ದಿನಗಳು ಕಳೆದುಹೋದನಂತರ ಪರಿಮಿತಿಯು ಇಳಿಸಲ್ಪಡುವದು. ಕಾರ್ಯಕರ್ತನು ತನ್ನ ನಿರ್ವಾಹವ್ಯಯವನ್ನು ಕಡಿಮೆ ಮಾಡುತ್ತ ಮಾಡುತ್ತ ಐದು ವರ್ಷಗಳಲ್ಲಿ ಸ್ವಾವಲಂಬಿಯಾಗಬೇಕು. ಸಂಘದಿಂದ ಅವನಿಗೆ ದೊರೆಯುತ್ತಿರುವ ಸಹಾಯವು ಕ್ರಮಶಃ ಕಡಿಮೆಯಾಗುತ್ತ ಐದು ವರ್ಷಗಳನಂತರ ಅವನಿಗೆ ಆ ಸಹಾಯ ದೊರೆಯದು. ತನ್ನ ಕ್ಷೇತ್ರದಲ್ಲಿಯ ಕಾರ್ಯಕ್ಕೆ ಬೇಕಾಗುವ ಬಂಡವಾಳ ಹಾಗೂ ಸಾಧನ ಸಾಮುಗ್ರಿಗಳನ್ನು ತಾನೇ ಸಂಗ್ರಹಿಸಿಕೊಳ್ಳಬೇಕಾಗುವುದು.

"ಗ್ರಾಮಸೇವಕನ ಆರ್ಥಿಕ ಸ್ವಾವಲಂಬನದ ತಾತ್ಪರ್ಯವೆಂದರೆ, ಯುದ್ಧ ಹಾಗೂ ಉತ್ತರ ಸೇವೆಯಿಂದ ತನ್ನ ಕ್ಷೇತ್ರದಲ್ಲಿಯ ಜನತೆಯಲ್ಲಿ ಜಾಗೃತಿಯನ್ನುಂಟುಮಾಡಿ ಗ್ರಾಮಸೇವಕನು ಅವರ ಪ್ರೇಮ ಹಾಗೂ ವಿಶ್ವಾಸವನ್ನು ಗಳಿಸಿ ಅವರ ಅಂತಃಕರಣವನ್ನು ತನ್ನೆಡೆ ಸೆಳೆದುಕೊಳ್ಳಬೇಕು. ಅಂದರೆ ಜನರು ಆತನಿಗೆ ಬೇಕಾಗುವ ಬಂಡವಾಳ ಹಾಗೂ ಸಾಧನ ಸಾಮುಗ್ರಿಗಳನ್ನು ತಾವೇ ಸಂಗ್ರಹಿಸಿಕೊಡುವರು."

ಗ್ರಾಮಸೇವಕನು ಅತ್ಯಂತ ಸಾದಾ ಜೀವನವನ್ನು ಕಳೆಯು ವವನಿರಬೇಕು. ಆತನ ಸ್ವಂತ ವೆಚ್ಚವು ಶಕ್ಯವಿದ್ದಮಟ್ಟಿಗೆ ಕಡಿಮೆ ಇರುವದು. ಅವನ ಬೇಗು-ಬೆಳಗಿನ ವ್ಯವಹಾರವು ಹಳ್ಳಿಗರ ಜೀವನದೊಂದಿಗೆ ಸಮರಸವಾಗಬೇಕು. ದೊಡ್ಡ ಪರಿವಾರದ ಹೊಣೆ ಇದ್ದವರು, ಮುದುಕರು, ಬಲಹೀನರು, ಅಸ್ವಸ್ಥ ಪ್ರಕೃತಿ ಯುಳ್ಳವರು, ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಹೆಚ್ಚು ಹಣ ವೆಚ್ಚ ಮಾಡಬೇಕಾದವರು, ಈ ತರದ ಜನರಿಂದ ಮೇಲಿನ ಯೋಜನೆ ಯಲ್ಲಿ ನಿರ್ದಿಷ್ಟವಾಗಿರುವ ಗ್ರಾಮಸೇವಾ ಕಾರ್ಯವು ಸಾಗದು. ಈ ಮಿತಿಗಳನ್ನು ಸಂಪೂರ್ಣವಾಗಿ ಅರಿತುಕೊಂಡೇ ಗ್ರಾಮಸೇ ವೆಯ ಕಾರ್ಯಕ್ಕೆ ಕೈಹಾಕುವ ವಿಚಾರ ಮಾಡಬೇಕಾಗುವುದು. ಈ ಕಾರ್ಯವು ಕೆಲಕಾಲ ಮಾತ್ರ ನಡೆಯತಕ್ಕದ್ದಲ್ಲ ವೆಂಬದನ್ನೂ ಅದರೊಂದಿಗೆ ಅರಿತಿರಬೇಕಾಗುವುದು. ಕಾರ್ಯ ಕೈಕೊಳ್ಳುವ ಮೊದಲು ಈ ಕಾರ್ಯದಲ್ಲಿಯೇ ನಮ್ಮ ಆಯುಷ್ಯವನ್ನು ಕಳೆ ಯತಕ್ಕುದಿದೆ ಎಂಬೀ ಮನಸಿನ ಸಂಕಲ್ಪವಿರತಕ್ಕದ್ದು. ಯಾಕಂ ದರೆ ಗ್ರಾಮವಾಸಿಗಳ ಮನಃಸಂಸ್ಕರಣ ಮಾಡುವುದೇ ನಮ್ಮ ಗುರಿಯಾಗಿದೆ. ಆಲಸ್ಯವಿದ್ದಲ್ಲಿ ಉದ್ಯಮಶೀಲತೆಯನ್ನು, ಸ್ಪರ್ಧೆ ವೈಮನಸ್ಯ ಇವುಗಳ ಪ್ರತಿಯಾಗಿ ಸಹಯೋಗ, ಪ್ರೇಮಗಳನ್ನು ತಪ್ಪುತಿಳುವಳಿಕೆ, ಭ್ರಮೆಗಳ ಬದಲಾಗಿ ಜ್ಞಾನವನ್ನೂ ಸ್ಥಾಪಿತ ಗೊಳಿಸತಕ್ಕದ್ದಿದೆ. ದೋಷಗಳನ್ನು ನಿವಾರಿಸಿ ಗುಣಗಳನ್ನು ಉತ್ಕರ್ಷ ಗೊಳಿಸತಕ್ಕುದದೆ. ಸ್ವಭಾವವು ಪರಿಪೂರ್ಣವಾಗಿರದಿ ದ್ದರೆ ಭೌತಿಕ ಸಾಧನ ಸಾಮಗ್ರಿಗಳು ಬೇಕಾದಷ್ಟು ಉಪಲಬ್ಧ ವಿರಲಿ ಅಥವಾ ಬಿಡಲಿ ಅವುಗಳ ಸದುಪಯೋಗವಾಗಬಹು ದೆಂಬದರಲ್ಲಿ ಸಂದೇಹವಿರುವದು. ಉತ್ತಮ ಸಂಸ್ಕಾರ ಹೊಂದಿ ಜಾಗೃತಿಯನ್ನು ಪಡೆದುದಾದರೆ ಅವರು ತಮ್ಮ ಕರ್ತವ್ಯವನ್ನು ತಾವೇ ಅರಿತುಕೊಂಡು ಕಾರ್ಯೋನ್ಮುಖರಾಗುವರು. ಪಟ್ಟಣ

ಗಳಲ್ಲಿ ಈ ಕಾರ್ಯದ ಆವಶ್ಯಕತೆ ಇರುವದಿಲ್ಲೆಂದೂ, ಅಲ್ಲಿ ಈ ದೋಷಗಳು ಇರುವದಿಲ್ಲೆಂದೂ ಭಾವಿಸಕೂಡದು. ಒಂದು ವೇಳೆ ಅವು ಅಲ್ಲಿ ಹೆಚ್ಚಿನ ಪ್ರಮಾಣದಿಂದ ಇರಬಹುದು. ಆದರೆ ನಮಗೆ ಸದ್ಯಕ್ಕೆ ಹಳ್ಳಿಗಳ ಬಗ್ಗೆ ವಿಚಾರ ಮಾಡತಕ್ಕದ್ದಿದೆ. ಪಟ್ಟಣಗಳಲ್ಲಿ ಕಂಡು ಬಾರದಂತಹ ಹಲವು ವಿಶಿಷ್ಟ ಗುಣಗಳು ಹಳ್ಳಿಗಳಲ್ಲಿ ತೋರಿಬರುತ್ತಿರುವ ಸಂಭವವೂ ಇದೆ. ಮನಃಸಂಸ್ಕರಣವೆ ಹಳ್ಳಿಯಲ್ಲಿಯ ನಮ್ಮ ಮುಖ್ಯ ಕೆಲಸವಾದುದರಿಂದ ಅದು ಕೂಡಲೆ ಸಾಧ್ಯವಾಗಬಹುದೆಂದು ಬಗೆಯುವದು ತಪ್ಪಾಗುವದು. ಅದು ಕಾರಣ ಗ್ರಾಮ ಸೇವಕರು ತತ್ಪರತೆಯಿಂದ ಬಹುಕಾಲದ ವರೆಗೆ ಸೇವಾಕಾರ್ಯದಲ್ಲಿ ನಿರತರಾಗುವ ಸಂಕಲ್ಪವನ್ನು ಮಾಡುವುದು ಅವಶ್ಯವಾಗಿರುವುದು. ಅರ್ಥಾತ್ ಅವರು ತಮ್ಮ ಸ್ವಂತ ಜೀವನದ ಆದರ್ಶವನ್ನು ಸ್ಥಿರಗೊಳಿಸಬೇಕಾಗುವುದು. ಅವರು ತಮ್ಮ ಸಾಂಸಾರಿಕ ವ್ಯಾವಹಾರಿಕ ಪ್ರಗತಿಗಾಗಿ ಅವರು ಹೆಣಗುತ್ತಿದ್ದರೆ ಅವರ ವೃತ್ತಿಯು ಗ್ರಾಮಸೇವೆಯ ಕಾರ್ಯಕ್ಕೆ ಸುಸಂಗತವಾಗಲಾರದು. ಸೇವೆಯು ಸಲುವಾಗಿ ಆಧ್ಯಾತ್ಮಿಕ ಬಲ, ತ್ಯಾಗ ಹಾಗೂ ತಪಶ್ಚರ್ಯ ಇವುಗಳ ಅವಶ್ಯಕತೆ ಇದೆ. ಈ ಮೇರೆಗೆ ಸಂಕಲ್ಪಮಾಡಿ ಮುಂದುವರಿಯುವ ಕಾರ್ಯಕರ್ತರ ಮನಸ್ಸಿನಲ್ಲಿಯೂ ಕೂಡಾ ಈ ಪ್ರಶ್ನೆಯು ತಲೆದೋರುವದು ಸ್ವಾಭಾವಿಕವಾಗಿರುವುದು. ಅದೆಂದರೆ ನಾವೇನೋ ಈ ಕಾರ್ಯಕ್ಕೆ ನಮ್ಮ ತನುಮನಗಳನ್ನು ಅರ್ಪಿಸುವೆವು. ಆದರೆ ನಮ್ಮ ಹಾಗೂ ನಮ್ಮ ಪರಿವಾರದ ಯೋಗಕ್ಷೇಮವನ್ನು ನೋಡುವವರಾರು? ತಮ್ಮ ಸಂಸಾರದ ವೆಚ್ಚವನ್ನು ಸ್ವತಂತ್ರವಾಗಿ ಸಾಗಿಸಲು ಪರ್ಯಾಪ್ತವಾಗಿರುವಷ್ಟು ಸ್ವಂತ ಆಸ್ತಿಯುಳ್ಳ ಕಾರ್ಯಕರ್ತರು ನಮ್ಮಲ್ಲಿ ಬಹುವಿರಳ. ಅವರು ತಮ್ಮ ಶಕ್ತಿಸರ್ವಸ್ವವನ್ನೂ ಗ್ರಾಮಸೇವೆಯ ಕಾರ್ಯದಲ್ಲಿ ತೊಡಗಿಸುವದಾದರೆ ತಮ್ಮ

ನಿರ್ವಾಹ ಸಾಧನವನ್ನು ಎರಡನೆಯಕಡೆ ಹುಡುಕಬೇಕಾಗುವುದು. ಇದು ಸಂಭವನೀಯವಾದುದೋ? ಗ್ರಾಮಸೇವಕನ ನಿರ್ವಾಹದ ಗತಿಯೇನೆಂಬುದೊಂದು ಗಡುಚಾದ ಒಗಟಾಗಿದೆ. ಯಾವುದೊಂದು ಸಂಸ್ಥೆಯು ಹಣ ಕೂಡಿಸಿಟ್ಟು ಕಾರ್ಯಕರ್ತರ ನಿರ್ವಾಹದ ಹೊಣೆಯನ್ನು ಹೊತ್ತರೆ ಗ್ರಾಮಸೇವಕನು ತನ್ನ ಕಾರ್ಯವನ್ನು ಸ್ಥಿರತೆಯಿಂದ ಸಾಗಿಸಬಲ್ಲನೆಂಬದೊಂದು ಮಾರ್ಗವು ಈ ವಿಷಯ ದಲ್ಲಿ ಒಮ್ಮೆಲೆ ತೋಚುವದು. ಆದರೆ ಹಿಂದುಸ್ಥಾನದಂತಹ ದೊಡ್ಡ ದೇಶದ ಸೇವಾಕಾರ್ಯದಲ್ಲಿ ತೊಡಗಬಹುದಾದ ಕಾರ್ಯ ಕರ್ತರಿಗೆಲ್ಲ ಬಹುಕಾಲದ ವರೆಗೆ ಅವರ ಆವಶ್ಯಕತೆಗಳನ್ನು ಪೂರೈಸುವಂಥ ಶಕ್ತಿಯು ಯಾವುದೊಂದು ವೈಯಕ್ತಿಕ ಸಂಸ್ಥೆ ಯಲ್ಲಿರಲಾರದು. ಈ ರೀತಿಯಾಗಿ ಹೊರಗಿನಿಂದ ಏರ್ಪಾಟು ಮಾಡುವುದು ಇಷ್ಟವಾಗುವದೇ? ಜನತೆಯು ಎರಡನೆಯವರ ಮೋರೆ ನೋಡುತ್ತ ಕುಳಿತುಕೊಳ್ಳುವವರಾದರೆ ಅವರ ನಿಜವಾದ ಕಲ್ಯಾಣವಾಗುವದೇ? ಎಂಬೀ ಪ್ರಶ್ನೆಗಳೂ ಇಲ್ಲಿ ತಲೆ ಎತ್ತು ವವು. ನಾವು ನಮ್ಮ ಕಾಲುಗಳ ಮೇಲೆ ನಿಲ್ಲುವದರಲ್ಲಿಯೆ ನಮ್ಮ ಕಲ್ಯಾಣವಿರುವುದು. ಸ್ವಾವಲಂಬನವೇ ನಮ್ಮ ತಾರಣವಾಗಿ ರುವದೆಂಬದನ್ನು ನಾವು ಎಲ್ಲರಿಗೂ ಕಲಿಸಬೇಕಾಗಿದೆ. ಆದುದ ರಿಂದ ಜನತೆಯು ಹಾಗೂ ಗ್ರಾಮಸೇವಕರು ಈರ್ವರೂ ಸ್ವಾವ ಲಂಬನದಲ್ಲಿಯ ಪ್ರಗತಿ ಪಡೆಯತಕ್ಕದ್ದು. ಕಾರ್ಯಾರಂಭದಲ್ಲಿಯೇ ತೊಂದರೆಯಾಗಬಾರದೆಂದು ಸ್ವಲ್ಪ ಹೊರಗಣ ಸಹಾಯ ಪಡೆದು ಸ್ವಾವಲಂಬನದ ಮಾರ್ಗವನ್ನು ಕಂಡು ಹಿಡಿಯುವದಿದೆ. ಅಷ್ಟು ಸಹಾಯವನ್ನು ನೀಡುವ ಆಶ್ವಾಸನವು ಚರಕ ಸಂಘದ ಗೊತ್ತು ವಳಿಯಲ್ಲಿ ಆದೆ.

ಗ್ರಾಮ ಸೇವಕನಿಗೆ ಎರಡು ಕಾರ್ಯಕ್ಕಾಗಿ ಹಣ ಬೇಕಾ ಗುತ್ತದೆ. (೧) ತನ್ನ ಸ್ವಂತ ವೆಚ್ಚಕ್ಕಾಗಿ (೨) ತನ್ನ

ಕಾರ್ಯದ ಸಲುವಾಗಿ. ಸ್ವಂತ ವೆಚ್ಚದ ಸಲುವಾಗಿ ಮೂರು ಸಾಧನಗಳನ್ನು ಸೂಚಿಸಲಾಗಿದೆ. (೧) ತನ್ನ ಕ್ಷೇತ್ರದಲ್ಲಿಯ ಜನತೆಯಿಂದ ಸಹಾಯ (೨) ಸ್ವಂತ ದುಡಿಮೆಯ ಪ್ರತಿಫಲ ಹಾಗೂ (೩) ಆ ಕ್ಷೇತ್ರದಲ್ಲಿ ನಡೆದಿರುವ ಗ್ರಾಮೋದ್ಯೋಗಗಳಲ್ಲಿ ಹೊರಡುವ ಉಳಿತಾಯ. ಗ್ರಾಮ ಸೇವಕನು ಅಲ್ಲಿ ಕೇವಲ ಟ್ರಸ್ಟಿಯಂತೆ ಇರತಕ್ಕುದೆಂಬುದನ್ನು ನಿಶ್ಚಿತವಾಗಿ ಅರಿತಿರಬೇಕಾಗುವದು. ಅವನು ತನ್ನ ಸ್ವಂತ ಆಸ್ತಿಯನ್ನು ತನ್ನ ಕಾರ್ಯದಲ್ಲಿ ಎಂದೂ ಸೇರಿಸಕೂಡದು. ಅಲ್ಲಿ ದೊರೆಯತಕ್ಕ ಪ್ರಾಪ್ತಿಯೊಳಗಿಂದ ತನ್ನ ನಿರ್ವಾಹ ವ್ಯಯವನ್ನು ಪಡೆಯಲು ಮಾತ್ರ ಅವನಿಗೆ ಅಧಿಕಾರವುಂಟು. ಉಳಿದ ಎಲ್ಲ ಪ್ರಾಪ್ತಿಯು ಟ್ರಸ್ಟದ ಸೊತ್ತಾಗುವುದು. ಹಳ್ಳಿಯ ಹಿತಕ್ಕಾಗಿಯೇ ಅದನ್ನುಪಯೋಗಿಸಲಾಗುವುದು.

ಗ್ರಾಮ ಸೇವಕನ ಆರ್ಥಿಕ ಆಧಾರವೆಂದರೆ ಅವನು ಕಾರ್ಯ ಮಾಡುತ್ತಿದ್ದ ಕ್ಷೇತ್ರದ ಜನತೆಯೇ ಆಗಿರುವದೆಂಬ ಮಾತು ಪ್ರಾರಂಭದಲ್ಲಿ ಮಾಡಿದ ಸ್ವಾವಲಂಬನದ ವ್ಯಾಖ್ಯೆಯಿಂದ ಸ್ಪಷ್ಟವಾಗುವದು. ಈ ಯೋಜನೆಯಲ್ಲಿ ಇದೊಂದು ಆಪತ್ತಿಯನ್ನು ತೋರಿಸಬಹುದು. ಸೇವಕನ ನಿರ್ವಾಹವು ದಾತೃಗಳ ಅಧೀನವಾದರೆ ಆ ದಾತಾರರು ಅವನನ್ನು ಆದರ ಬುದ್ಧಿಯಿಂದ ನೋಡರು. ಅವನಾದರೂ ಅವರ ಅಧೀನದಲ್ಲಿದ್ದಂತೆ ಇರುವನು. ಅವನು ತನ್ನ ಕಾರ್ಯವನ್ನು ತನ್ನ ಮನಸ್ಸಿನ ಪ್ರೇರಣೆಯಂತೆ ಮಾಡಲಾರನು. ಜನತೆಯು ಸಂತುಷ್ಟವಾಗುವಂತೆ ಮಾಡಬೇಕಾಗುವುದು. ಬೇಕಾದಷ್ಟು ಕಠೋರವಾದ ತಪಶ್ಚರ್ಯವನ್ನು ನಮಗೆ ಮಾಡಹೆಚ್ಚಿರಿ; ಒಣ ರೊಟ್ಟಿಯನ್ನು ಕೊಟ್ಟು ಎಂಥ ಬೇಕಾದಂಥ ಸಾದಾ ಜೀವನವನ್ನು ನಮಗೆ ಕಲ್ಪಿಸಿಕೊಡಿರಿ; ಆದರೆ ನಿರ್ವಾಹದ ಬಗ್ಗೆ ನಾವು ಎರಡನೆಯ ಯಾರೊಬ್ಬರನ್ನು ಈ ಪ್ರಕಾರ ಅವಲಂಬಿ

ಸಿರುವಂತೆ ಮಾಡಿ ನಮ್ಮ ಜೀವನವು ನಿರಾಧಾರ, ಅನಿಶ್ಚಿತ ಹಾಗೂ ಅಸಹ್ಯವಾಗುವಂತೆ ಮಾಡಬೇಡಿರೆಂದು ಹಲವು ಕಾರ್ಯಕರ್ತರು ಬರೆದಿರುವರು. ಸಾಮಾನ್ಯ ವ್ಯಾವಹಾರಿಕ ಹಾಗೂ ಪ್ರಾಪಂಚಿಕ ದೃಷ್ಟಿಯಿಂದ ವಿಚಾರ ಮಾಡಿದರೆ ಈ ಮಾತಿನಲ್ಲಿ ತಥ್ಯಾಂಶವಿದೆ. ಆದರೆ ನಾವು ಯಾವ ತರಗತಿಯ ಕಾರ್ಯದ ಬಗ್ಗೆ ವಿಚಾರ ಮಾಡುತ್ತಿರುವೆವೋ ಅದರ ಬಗ್ಗೆ ಈ ಮಾತು ಅನ್ವಯಿಸತಕ್ಕದ್ದಲ್ಲ. ಸೇವಕನು ಹಳ್ಳಿಯಿಂದ ತನ್ನ ನಿರ್ವಾಹವನ್ನು ಅಪೇಕ್ಷಿಸುವಾಗ ಯಾರಾದರೂ ತನ್ನ ಮೇಲೆ ಉಪಕಾರದ ಹೊರೆಯನ್ನು ಹೊರಬೇಕೆಂದಲ್ಲ. ದೈನ್ಯ ಭಾವದಿಂದ ಅವನು ಯಾರಲ್ಲಿಯೂ ಯಾಚನೆ ಮಾಡುತ್ತಿರುವದಿಲ್ಲ. ಜನತೆಗೆ ತಮ್ಮ ಕರ್ತವ್ಯದ ಪಾಠ ಕಲಿಸಲು ಅವನು ಹೋಗುತ್ತಿರುವನು. ಜನರು ಅವನಿಗೆ ನೀಡತಕ್ಕ ಸಹಾಯವನ್ನು ದಾನವೆಂಬ ಬುದ್ಧಿಯಿಂದ ಸಲ್ಲಿಸದೆ ಅದು ತಮ್ಮ ಕರ್ತವ್ಯವಾಗಿರುವದೆಂದೂ, ಹಾಗೂ ಅವನು ಸಲ್ಲಿಸುತ್ತಿರುವ ಸೇವೆಯ ಋಣದ ಅಲ್ಪಾಂಶ ಪರಿಹಾರರೂಪವಾಗಿರುವದೆಂದೂ ಭಾವಿಸಿ ಕೊಡತಕ್ಕುದಿದೆ. ಸೇವಕನು ಸೇವೆಗಾಗಿಹೋಗುತ್ತಿರುವುದು ಗುರುವಿನಂತೆ ಅಲ್ಲದೆ ಆಶ್ರಿತನಂತಲ್ಲ. ನಮ್ಮ ಸಾಧು-ಸಂತರು ಜನತೆಯಿಂದಲೆ ತಮ್ಮ ನಿರ್ವಾಹ ಪಡೆಯುತ್ತ ಬಂದಿರುವರು. ಆದರೂ ಅವರು ಜನತೆಯ ಆದರ ಸತ್ಕಾರಕ್ಕೆ ಪಾತ್ರರಾಗಿರುವರು. ಜನತೆ ಹಾಗೂ ಗ್ರಾಮಸೇವಕ ಇವರೀರ್ವರಲ್ಲಿ ಇದೇ ಭಾವನೆಯಿರಬೇಕು. ಜನತೆಯಿಂದ ಪಡೆಯುತ್ತಿರುವ ದಾನದಿಂದ ಕಾರ್ಯಕ್ಕೆ ಬಾಧೆ ತಗಲುತ್ತದೆಯೆಂದು ಕಾರ್ಯಕರ್ತನಿಗೆ ಮನವರಿಕೆಯಾದೊಡನೆ ಆ ಕಾರ್ಯವನ್ನು ಅವನು ಬಿಟ್ಟು ಬಿಡಬೇಕಾಗುವುದು. ಜನತೆಗಾದರೂ ಸ್ವಾವಲಂಬನದ ಪಾಠವನ್ನು ಕಲಿಸಬೇಕಾಗಿದೆಯೆಂದು ಮೇಲೆ ಹೇಳಿದೆ. ಅವರಲ್ಲಿ ಜಾಗ್ರತಿಯಾಗಿ ಸೇವಕನ ನಿರ್ವಾಹ ಭಾರವನ್ನು ಹೊರುವ ಶಕ್ತಿಯನ್ನು ಬೆಳೆಸುವದು ಅವರ ಸ್ವಾವಲಂಬನವೃತ್ತಿಯ ಗುರುತಾಗಿರುವುದು.

ಹೊರಗಿನಿಂದ ನಿರ್ವಾಹದ ಮಾರ್ಗವನ್ನು ಕಲ್ಪಿಸಿಕೊಟ್ಟರೆ ' ಕಾರ್ಯ ಕರ್ತರಿಗೆ ಎಲ್ಲಿಂದಲೋ ವೇತನ ಸಿಗುತ್ತದೆ. ವೇತನಕ್ಕಾಗಿ ಗ್ರಾಮ ಸೇವೆಯ ಕಾರ್ಯ ಕೈಕೊಂಡಿರುವನು; ಹಣವು ಬರುತ್ತದೆ ಅದಕ್ಕೆ ಪ್ರತಿಯಾಗಿ ಸ್ವಚ್ಛತೆ ಮೊದಲಾದ ತನ್ನ ಕೆಲಸ ಮಾಡುತ್ತಿರುವನು. ಅವನು ಹೇಳಿದಂತೆ ನಾವೇಕೆ ನಡೆಯಬೇಕು ? ನಾವು ದುಡ್ಡು ಕೊಡುತ್ತಿರುವದಾದರೂ ಆಷ್ಟರಲ್ಲಿಯೆ ಇದೆ' ಎಂಬೀ ಆಕ್ಷೇಪವನ್ನು ಸ್ಥಾನಿಕ ಜನತೆಯು ಎತ್ತುತ್ತಿದ್ದುದು ಅನೇಕ ಸಾರೆ ಕಿವಿಗೆ ಬಿದ್ದಿದೆ.

ಈ ಮೇರೆಗೆ ಎರಡೂ ಪ್ರಕಾರಗಳಲ್ಲಿ ಒಂದಿಲ್ಲೊಂದು ಆಪತ್ತಿ ಇದೆ. ಅಂದ ಮೇಲೆ ಶುದ್ಧವಾದ ಮಾರ್ಗವನ್ನು ನಾವೇಕೆ ಅನುಸರಿಸಬಾರದು ? ತಮ್ಮ ಹಿತವು ಯಾತರಲ್ಲಿದೆ ಎಂಬುದನ್ನು ಜನತೆಯು ತಾನೇ ಯೋಚಿಸಬೇಕೆಂಬುದೇ ನಮ್ಮ ಮುಖ್ಯ ಲಕ್ಷವಾಗಿರತಕ್ಕದ್ದು. ಅವರು ತಾವೇ ಎಚ್ಚತ್ತು ಪ್ರಯತ್ನಶೀಲರಾಗದಿದ್ದರೆ ಹೊರಗಿನಿಂದ ಮಾಡಿದ ಪ್ರಯತ್ನಗಳೆಲ್ಲ ತಾತ್ಕಾಲಿಕವಾಗಿಯೇ ಪರಿಣಮಿಸುವವು. ಹೊರಗಣ ಸಹಾಯವು ಬಂದಾದರೆ ಕಾರ್ಯವೂ ನಿಲ್ಲುವದು ಅಥವಾ ಸಡಿಲಾಗುವದು. ಅದರ ತಳಹದಿಯು ಭದ್ರವಾಗಲಾರದು. ನಮ್ಮ ಸೇವೆಯು ಶುದ್ಧವಾದುದಾದರೆ, ಪ್ರಾರಂಭದಲ್ಲಿ ಒಂದು ವೇಳೆ ಆಗಲಿಕ್ಕಿಲ್ಲ, ಆದರೆ ಮುಂದೆ ಪರಿಚಯವಾದ ನಂತರ ಜನತೆಯು ಅವನಿಗೆ ಮನ್ನಣೆ ಕೊಡುವದಲ್ಲದೆ ಯಾವ ತರದ ಒತ್ತಾಯವಿಲ್ಲದೆ ಸೇವಕನ ನಿರ್ವಾಹದ ಏರ್ಪಾಟು ಮಾಡುವರು. ಕೇವಲ ನಿರ್ವಾಹ ವೇತನ ಪಡೆಯುತ್ತಿರುವದರ ದೆಸೆಯಿಂದ ತಾನು ಯಾರೊಬ್ಬರ ಅಧೀನನಾಗಿರುವನೆಂದು ಎಂದೂ ಭಾವಿಸದಂಥ ಯೋಗ್ಯತೆಯುಳ್ಳವನಾಗುವನು ಮತ್ತು ಹಾಗಿರಬೇಕು. ತನ್ನ ಸಾರಾಸಾರ ಬುದ್ಧಿಯಂತೆ ಕೆಲಸ ಮಾಡುತ್ತ ಹೋಗುವ ಆತ್ಮಬಲ ಅವನಲ್ಲಿರಬೇಕು. ಅವನ

ನಿರ್ವಾಹ ವ್ಯಯವು ಹಲವು ಧನಿಕರಿಂದ ಬರದೆ ಸಾಮಾನ್ಯ ಜನತೆಯಿಂದಲೆ ಬರುವದು, ವ್ಯಾವಹಾರಿಕ ದೃಷ್ಟಿಯಿಂದ ಸಮಂಜಸವಾಗುವುದು. ಯಾಕಂದರೆ ಇದರಿಂದ ಸಾಮಾನ್ಯ ಜನತೆಯಲ್ಲಿಯು ಬಲ ಬರುವುದು ಹಾಗೂ ನಿರ್ವಾಹ ವ್ಯಯವು ಹಲವು ಧನಿಕ ಜನರ ಲಹರಿಯನ್ನವಲಂಬಿಸಿ ನಿಲ್ಲಬಾರದು.

ಸೇವಕನ ಸ್ವಂತ ದುಡಿಮೆಯೆ ನಿರ್ವಾಹದ ಎರಡನೆಯ ಪ್ರಕಾರವು ಕಲ್ಪಿಸಲ್ಪಟ್ಟಿದೆ. ಈ ಕೆಲಸವಾದರೂ ಸುಲಭವಾದುದಲ್ಲ. ಹಳ್ಳಿಗಳಲ್ಲಿ ಕೇವಲ ಶರೀರಶ್ರಮದಿಂದ ನಡೆಯುತ್ತಿರುವ ಕೆಲಸಗಳಿಂದ ಬರತಕ್ಕ ಉಳಿತಾಯ ಬಹಳ ಕಡಿಮೆ. ಈ ರೀತಿಯ ದುಡಿಮೆಯಿಂದ ತನ್ನ ಹಾಗೂ ತನ್ನ ಪರಿವಾರದ ಪಾಲನ-ಪೋಷಣ ಮಾಡುವುದು - ವಿಶೇಷವಾಗಿ ಮಧ್ಯಮವರ್ಗದ ಜನರಿಗೆ - ತೀರ ಕಠಿನವಾಗುವದು. ಪಾಲನ, ಪೋಷಣದ ಸಲುವಾಗಿ ತಗಲುವ ಸಮಯದ ನಂತರ ಸೇವೆ ಮಾಡಲು ಅವನಿಗೆ ವೇಳೆ ಹಾಗೂ ಶ್ರಮ ಕಡಿಮೆ ಉಳಿಯುವದು. ಆದರೂ ಈ ಮಾರ್ಗವು ಅಗ್ರಾಹ್ಯವಾದುದಲ್ಲ. ಯಾವನ ಮೇಲೆ ಕುಟುಂಬ ಪೋಷಣದ ಭಾರವು ಅಷ್ಟೊಂದು ಭಾರವಿರುವದಿಲ್ಲವೋ, ಅವನು ಎರಡನೆಯ ಯಾವ ಸೇವೆಯ ಕಾರ್ಯವನ್ನು ಮಾಡದೆಯೆ ಸುಖಮಯ ಜೀವನವನ್ನು ಸಾಗಿಸುತ್ತ, ಎಲ್ಲ ವ್ಯವಹಾರಗಳನ್ನು ಸರಳವಾಗಿ ನಡೆಸುತ್ತ, ಜನತೆಯ ಮಧ್ಯದಲ್ಲಿ ಒಂದು ಬಗೆಯ ಮಾದರಿಯ ಜೀವನವನ್ನು ರೂಪಿಸಬಲ್ಲನು. ಸುಧಾರಣೆಯ ಬಗ್ಗೆ ಜನತೆಗೆ ಉಪದೇಶ ಮಾಡತಕ್ಕವರು ತಮ್ಮ ಸ್ವಂತ ಜೀವನವನ್ನು ಆ ರೀತಿ ಮಾರ್ಪಡಿಸಿ ತೋರಿಸಿದರೆ ಅದೇನು ಸಾಮಾನ್ಯ ಸೇವೆಯೆಂದು ಎಣಿಸಲಾಗದು. ಇದಾದರೂ ಉಪಯುಕ್ತ ವಸ್ತುವಾಗಿದೆ. ಗ್ರಾಮಸೇವಕನು ತನ್ನ ಪ್ರಚಾರ ಕಾರ್ಯವನ್ನು ತನ್ನ ಆಚರಣೆಯ

ಮುಖಾಂತರವೆ ಮಾಡತಕ್ಕದ್ದಿದೆ. ನಿರ್ವಾಹದ ಸ್ವಲ್ಪಾಂಶವನ್ನು ತನ್ನ ದುಡಿಮೆಯಿಂದ ಹೊರಡಿಸುವದೂ ಉಚಿತವಾದುದೆಂಬುದನ್ನು ಅರಿತಿರಬೇಕು.

ಉದ್ಯೋಗದ ಸಂಘಟನೆಯೇ ನಿರ್ವಾಹದ ಮೂರನೆಯ ಪ್ರಕಾರವೆಂದು ಬಗೆಯಲಾಗಿದೆ. ಯಾವ ಉದ್ಯೋಗವನ್ನು ಕೈಕೊಳ್ಳಬೇಕೆಂಬುದು ಸ್ಥಾನಿಕ ಪರಿಸ್ಥಿತಿಯ ಮೇಲೂ, ಎಷ್ಟರಮಟ್ಟಿಗೆ ಸಂಘಟನೆಯು ಶಕ್ಯವಾಗಬಹುದೆಂಬುದರ ಮೇಲೂ, ಅವಲಂಬಿತವಾಗಿದೆ. ಖಾದಿ ಮಾರಾಟಾದರೆ ಅದರಲ್ಲಿಯ ಕಾರ್ಯಕರ್ತನ ನಿರ್ವಾಹವ್ಯಯವು ಸಾಗಬಲ್ಲದೆಂಬ ಮಾತು ಖಾದೀ ಉದ್ಯೋಗದಲ್ಲಿ ಸಿದ್ಧವಾಗಿ ಹೋಗಿದೆ. ಇಂದು ಖಾದೀ ಕಾರ್ಯವು ನಡೆಯುತ್ತಿರುವಲ್ಲಿ ಈ ಕಾರ್ಯ ಸುಗಮವಾಗಿ ಸಾಗುವುದು. ನೂಲುವ ಪರಂಪರೆಯೇ ಇಲ್ಲದ ಸ್ಥಳಗಳಲ್ಲಿ ಕಠಿಣವಾಗುವುದು.

ಸೇವಕನ ಸ್ವಾವಲಂಬನದ ಮೂರು ಬಗೆಗಳನ್ನು ಮೇಲೆ ತೋರಿಸಲಾಗಿದೆ. ಅವನು ಅವೆಲ್ಲ ಇಲ್ಲವೆ ಒಂದು ಅಥವಾ ಹೆಚ್ಚು ಮಾರ್ಗಗಳನ್ನು ಆಶ್ರಯಿಸಬಹುದು. ಇದರಲ್ಲಿ ಅವನ ಸ್ವಂತಖರ್ಚು ತೀರ ಕಡಿಮೆ ಇರತಕ್ಕದ್ದೆಂಬದು ಅವಶ್ಯ. ಶಕ್ಯವಿದ್ದಮಟ್ಟಿಗೆ ನಿರ್ವಾಹ ಭಾರವು ಕಡಿಮೆ ಇದ್ದವರು ಈ ಕಾರ್ಯದಲ್ಲಿ ತೊಡಗುವದು ಸೌಕರ್ಯದ್ದಾಗುವದು. ಯಾರ ಯೋಗ್ಯತೆಯು ದೊಡ್ಡದಿದೆ, ಯಾರು ಜನತೆಗೆ ಪರಿಚಿತರಾಗಿರುವರು, ಯಾರ ಸೇವೆಯನ್ನು ಪಡೆಯಲು ಜನತೆಯು ಉತ್ಸುಕವಾಗಿರುವದು, ಅವರಿಗೆ ಕಾರ್ಯವು ಅಷ್ಟೊಂದು ಕಠಿನವಾಗದು. ಆದರೂ ಸೇವಕನು ಹೇಗೇ ಇರಲಿ, ಎಂಥವನೇ ಇರಲೊಲ್ಲನೇಕೆ, ಅವನು ಗ್ರಾಮಸೇವೆಯನ್ನು ಕೈಕೊಳ್ಳುವದಾದರೆ ಈಶ್ವರನನ್ನು ನಂಬಿ ಕಾರ್ಯಪ್ರವೃತ್ತನಾಗತಕ್ಕದ್ದು. ಈ ವಿಶ್ವಾಸಬಲದಿಂದ ತನ್ನ ಪ್ರಸನ್ನತೆಯನ್ನು ಅವನು ಕಾಯ್ದುಕೊಳ್ಳುವದಲ್ಲದೆ ನಿಜವಾದ

ಸೇವೆಯನ್ನೂ ಮಾಡಬಲ್ಲನು. ಇಂಥ ಬಹುಜನ ಕಾರ್ಯಕರ್ತರು ದೊರೆಯುವರೇ ಎಂದು ಕೇಳಲಾಗುತ್ತದೆ. ಆದರೆ ನಾವು ಮಾಡ ಬೇಕಾದ ಕಾರ್ಯವನ್ನು ಸ್ಮರಣೆಗೆ ತಂದು ಆಲೋಚಿಸಿದರೆ ಅಂಥ ಕಾರ್ಯಕರ್ತರು ಒಂದುವೇಳೆ ಲಭಿಸದಿದ್ದರೆ ಈ ಕಾರ್ಯವು ಕೈಗೂಡಲಾರದೆಂಬುದು ನಿರ್ವಿವಾದವಾಗುವುದು. ತಮ್ಮ ಸ್ವಾತಂ ತ್ರ್ಯವನ್ನು ಸ್ಥಿರಗೊಳಿಸಲು ಸ್ವತಂತ್ರ ದೇಶಗಳಿಗಾದರೂ ಎಷ್ಟು ಬಲಿದಾನ ಮಾಡಬೇಕಾಗಿದೆ? ಪರತಂತ್ರವಾದ ಭಾರತವು ಅದಕ್ಕೂ ಹೆಚ್ಚು ಪ್ರಮಾಣದಿಂದ ಬಲಿದಾನ ಮಾಡುವದು ಅವಶ್ಯವಾದು ದೆಂಬದನ್ನು ಅರಿತಿರಬೇಕು.

ಇನ್ನುಳಿಯಿತು ಕಾರ್ಯಕ್ಕೆ ಬೇಕಾಗುವ ಹಣದ ಪ್ರಶ್ನೆ. ಇದರ ಉತ್ತರವನ್ನೂ ಮೇಲೆ ಬರೆಯಲಾಗಿದೆ. ಅಲ್ಲಿಂದಲೆ ಅದನ್ನೂ ಪಡೆಯತಕ್ಕದ್ದು. ಕ್ಷೇತ್ರದ ಜನತೆಯಲ್ಲಿ ಜಾಗೃತಿಯನ್ನುಂಟು ಮಾಡಿ, ಪ್ರಯತ್ನದಿಂದ ಬೇಕಾದ ಸಾಧನ ಸಾಮುಗ್ರಿಗಳನ್ನು ಸಂಗ್ರಹಿಸಿಕೊಳ್ಳಬೇಕು. ಸದ್ಯಕ್ಕೆ ಖಾದೀ ಕಾರ್ಯ ನಡೆದಿರುವ ಸ್ಥಳಗಳಲ್ಲಿ ಇದು ಸುಗಮವಾಗುವದು. ಜನರ ಹತ್ತಿರ ರಾಟಿ ಗಳಿವೆ. ನೇಗಿಯ ಕಾರ್ಯವು ನಡೆಯುತ್ತ ಇದೆ. ಸುತ್ತಮು ತ್ತಲು ಹತ್ತಿ ದೊರೆಯುತ್ತದೆ. ಈ ಸ್ಥಿತಿಯಲ್ಲಿ ಅಲ್ಲಿ ಕಾರ್ಯ ನಡೆಸುವದು ಸುಲಭವಾಗುವುದು. ಆದರೆ ಕಾರ್ಯದ ಸಲುವಾಗಿ ಹಣವು ದೊರೆಯುದಿದ್ದರೂ ಸೇವಕನ ಸೇವಾ ಕಾರ್ಯವು ಕುಂಠಿ ತವಾಗಲಾರದೆಂಬದು ಖಂಡಿತ. ಸಾಧನ ಸಾಮುಗ್ರಿಗಳ ಅಭಾವ ದಲ್ಲಿ ಶಕ್ಯವಾದಷ್ಟು ಸೇವೆಯ ಕಾರ್ಯವನ್ನು ಅವನು ಮಾಡು ತ್ತಿರುವನು. ಮನಃಸಂಸ್ಕರಣ ಮಾಡುವದೇ ನಮ್ಮ ಮುಖ್ಯ ಲಕ್ಷ್ಯವಾಗಿರುವುದೆಂಬದನ್ನು ಮೊದಲೇ ಹೇಳಿದೆ. ಇದಕ್ಕಾಗಿ ಸಾಧನ ಸಾಮುಗ್ರಿಗಳ ಆವಶ್ಯಕತೆ ಇರುವದಿಲ್ಲೆಂಬದನ್ನು ಲಕ್ಷದ ಲ್ಲಿಡಬೇಕು.

ಕ್ಷೇತ್ರವನ್ನು ಆರಿಸುವಾಗ್ಗೆ ಸಾಕಷ್ಟು ಎಚ್ಚರದಿಂದ ನೋಡ ಬೇಕಾಗುವುದು. ಯಾಕಂದರೆ ನಾವು ಒಮ್ಮೆ ಕ್ಷೇತ್ರವನ್ನಾರಿಸಿ ಅಲ್ಲಿ ಕಾರ್ಯ ಕೈಕೊಂಡಮೇಲೆ ಅದಕ್ಕೇ ಅಂಟಿಕೊಂಡು ಕೂಡ ಬೇಕಾಗುವುದು. ಆ ಕ್ಷೇತ್ರದಲ್ಲಿಯ ಪ್ರಮುಖ ಜನರು ಅನು ಕೂಲರಾಗಿದ್ದರೆ ಕಾರ್ಯವು ಸುಕರವಾಗುವುದು. ಅವರು ಒಂದು ವೇಳೆ ಪ್ರತಿಕೂಲರಾಗಿದ್ದರೆ ಪ್ರತಿಕೂಲ ಪರಿಸ್ಥಿತಿಯ ವಿರುದ್ಧ ಹೆಣಗಲು ಸಾಕಷ್ಟು ಶಕ್ತಿ ಸಾಮರ್ಥ್ಯ ವ್ಯಯಮಾಡಬೇಕಾಗು ವದು.

ಒಬ್ಬನಿಗಿಂತ ಹೆಚ್ಚು ಕಾರ್ಯಕರ್ತರ ವೆಚ್ಚ:

ಸಮಗ್ರ ಗ್ರಾಮಸೇವೆಯ ಸಲುವಾಗಿ ಯಾವುದೊಂದು ಹಳ್ಳಿಯಲ್ಲಿ ಒಬ್ಬನಿಗಿಂತ ಹೆಚ್ಚು ಕಾರ್ಯಕರ್ತರು ನೆಲೆಸುವದಾ ದರೆ ಅವರೆಲ್ಲರ ನಿರ್ವಾಹ ವ್ಯಯದ ಪ್ರಬಂಧವು ಚರಕ ಸಂಘದ ಯೋಜನೆಯಂತೆ ಆ ಸಂಘದ ಮುಖಾಂತರ ಮಾಡಲ್ಪಡುವದೋ? ಸದ್ಯದ ಪರಿಸ್ಥಿತಿಯಲ್ಲಿ ಗ್ರಾಮಸೇವೆಯ ಸಲುವಾಗಿ ಒಂದೊಂದು ಕಡೆ ಒಬ್ಬೊಬ್ಬ ಕಾರ್ಯಕರ್ತನೆ ನಿಲ್ಲತಕ್ಕದ್ದೆಂದು ಕಲ್ಪನೆ ಅದೆ. ಅವನ ನಿರ್ವಾಹ ವ್ಯಯದ ಹೊಣೆಯನ್ನು ಸಂಘವು ವಹಿಸುವದು. ಇನ್ನು ತನ್ನ ಸಹಾಯಕ್ಕೆಂದು ಎರಡನೆ ಕಾರ್ಯಕರ್ತನನ್ನು ಅವನು ಕರೆದುಕೊಂಡು ಹೋದರೆ ಆ ಸಹಾಯಕನ ನಿರ್ವಾಹ ವನ್ನು ಆತನ ಮುಖಾಂತರ ಸಂಘಟಿಸಲಾದ ಕೆಲಸದಿಂದ ಅಥವಾ ಅಲ್ಲಿಯ ಜನತೆಯಿಂದ ಪಡೆಯಬೇಕಾಗುವುದು.

ಅನ್ಯ ಸಂಸ್ಥೆಗಳಿಗೆ ಆರ್ಥಿಕ ಸಹಾಯ:

ಹಲವು ಸಂಸ್ಥೆಗಳು ಗ್ರಾಮಸೇವೆಯನ್ನು ಕೈಕೊಳ್ಳಲು ಸಿದ್ಧ ವಾಗಿರುವವು. ಗ್ರಾಮಸೇವೆಯ ಸಲುವಾಗಿ ತಮ್ಮ ಕಾರ್ಯಕರ್ತ ರನ್ನು ಕಳಿಸಲೂ ಅವು ಇಷ್ಟಪಡುತ್ತಿರುವವು. ಗ್ರಾಮಸೇವಕನಿಗೆ

ಆರ್ಥಿಕ ಸಹಾಯ ಸಲ್ಲಿಸಬೇಕೆಂದು ಚರಕಸಂಘದ ಯೋಜನೆಯಿದೆ. ಅದರಂತೆ ತಮ್ಮ ಕಾರ್ಯಕರ್ತರಿಗೂ ಸಹಾಯ ದೊರೆಯಬೇಕೆಂದು ಅವರ ಆಪೇಕ್ಷೆಯಿದೆ. ಕಾರಣ ಯಾವ ಸಂಸ್ಥೆಯ ಕಾರ್ಯಕರ್ತನಿಗೂ ಚರಕಸಂಘದಿಂದ ಆರ್ಥಿಕ ಸಹಾಯವು ದೊರೆಯಲಾರದೆಂದು ಇಲ್ಲಿ ಸ್ಪಷ್ಟ ಮಾಡುವದು ಅವಶ್ಯವಿದೆ. ಗ್ರಾಮ ಸೇವಕನು ಸ್ವತಂತ್ರ ರೀತಿಯಿಂದ ಕಾರ್ಯಮಾಡುವ ಯೋಗ್ಯತೆಯನ್ನು ಪಡೆಯತಕ್ಕುದೆಂಬುದೇ ಉದ್ದೇಶವಿದೆ. ಅವನು ಯಾವ ಸಂಸ್ಥೆಯ ಆಧೀನನೂ ಆಗಿರತಕ್ಕದ್ದಲ್ಲ. ಚರಕಸಂಘದಿಂದ ಸಹಾಯ ಪಡೆಯುತ್ತಿರುವ ಕಾರ್ಯಕರ್ತನ ಮೇಲಾದರೂ ಸಂಘದ ನಿಯಂತ್ರಣವು ತೀರ ಕಡಿಮೆ ಇರತಕ್ಕದ್ದು. ಅವನ ಕಾರ್ಯದ ನೈತಿಕ ನೆಲೆಯನ್ನು ನಿರೀಕ್ಷಿಸುತ್ತ ಅವನಿಗೆ ಮಾರ್ಗದರ್ಶಕವಾಗುಗುವದು. ಕಾರ್ಯಕರ್ತನು ಯಾವ ಸಂಸ್ಥೆಯ ಅಧೀನಕ್ಕೊಳಪಟ್ಟು ಕಾರ್ಯ ಮಾಡುತ್ತಿರುವನೋ ಆ ಸಂಸ್ಥೆಯಲ್ಲಿ ಆತನ ನಿರ್ವಾಹ ಸಾಗಿಸುವ ಶಕ್ತಿಯಿರಬೇಕು. ಅವನ ಖರ್ಚಿನ ಹೊಣೆಯು ಆ ಸಂಸ್ಥೆಗಳ ಮೇಲಿರುವುದೇ ಉಚಿತವಾದುದು. ಯಾವುದೊಂದು ಸಂಸ್ಥೆಯು ಚರಕಸಂಘದ ಕಾರ್ಯಸರಣಿಯಂತೆ ಕಾರ್ಯ ಮಾಡಲಿಚ್ಛಿಸಿದರೆ ಅದಕ್ಕೆ ಚರಕಸಂಘದ ನೈತಿಕ ಬೆಂಬಲವು ದೊರೆಯುವದು. ಆ ಕ್ಷೇತ್ರದಲ್ಲಿ ಖಾದೀ ಕಾರ್ಯವನ್ನು ಸಂಘಟಿಸಲು ಚರಕಸಂಘವು ಅದಕ್ಕೆ ಪೂರ್ಣ ಅವಕಾಶ ಕೊಡುವುದು. ಮಾತ್ರ ಚರಕಸಂಘದಿಂದ ಅದಕ್ಕೆ ಮನ್ನಣೆ ದೊರೆಯುವದು ಅವಶ್ಯವಿದೆ.

ಕಾರ್ಯಕರ್ತರ ಯಾದಿ:

ಹೊಸ ಕಾರ್ಯಸರಣಿಯಂತೆ ಕೆಲಸ ಕೈಕೊಳ್ಳುವ ಇಚ್ಛೆ ಹಾಗೂ ಯೋಗ್ಯತೆ ಇದ್ದ ಕಾರ್ಯಕರ್ತರ ಪ್ರಾಂತವಾರ ಯಾದಿ

ಗಳನ್ನು ತಯಾರಿಸುವದು ಅವಶ್ಯವಾದುದು. ಸಂಘದ ಶಾಖೆಗಳು ಕಾರ್ಯಕರ್ತರೊಡನೆ ಆಲೋಚಿಸಿ ಇಂಥ ಯಾದಿಯೊಂದನ್ನು ತಯಾರಿಸಬೇಕು. ಚರಕ ಸಂಘದಲ್ಲಿ ಇಂದು ಇಲ್ಲದಂಥ ಕಾರ್ಯಕರ್ತರು ಈ ಹೊಸ ವಿಧಾನದಂತೆ ನಡೆಯುವ ಕಾರ್ಯದಲ್ಲಿ ಭಾಗವಹಿಸಲು ಅಪೇಕ್ಷಿಸುತ್ತಿರುವ ಸಂಭವವೂ ಇದೆ. ಶಾಖೆಗಳು ಅಂಥವರನ್ನೂ ಶೋಧಿಸಬೇಕು. ಈ ಯೋಜನೆಯನ್ನು ಅಭ್ಯಸಿಸಿದ ಕಾರ್ಯಕರ್ತರಾದರೂ ಇದರಲ್ಲಿ ಶಾಖೆಗಳಿಗೆ ಸಹಾಯ ಮಾಡಬಲ್ಲರು. ಅವರು ಒಂದುವೇಳೆ ತಾವೇ ಈ ಕಾರ್ಯವನ್ನು ಕೈಕೊಳ್ಳಲಿಚ್ಛಿಸಲಿ, ಅಥವಾ ತಮ್ಮ ಜೊತೆಗಾರರನ್ನು ಇಲ್ಲವೆ ಪರಿಚಿತರನ್ನು ಅದರಲ್ಲಿ ತೊಡಗಿಸಲೆಣಿಸಲಿ, ಚರಕಸಂಘದ ತಮ್ಮ ತಮ್ಮ ಪ್ರಾಂತೀಯ ಶಾಖೆಗಳಿಗೆ ಅದರಂತೆ ಸೂಚಿಸಬೇಕು. ಈ ಹೊಸ ಕಾರ್ಯದಲ್ಲಿ ತೊಡಗಲರ್ಹರಾದಂಥ ಕಾರ್ಯಕರ್ತರಲ್ಲಿ ಹಲವರು ಶಾಖೆಗಳಲ್ಲಿ ವಿಶೇಷ ಹೊಣೆಯ ಕೆಲಸವನ್ನು ವಹಿಸಿರುವ ಸಂಭವವಿದೆ. ಸದ್ಯದ ಅವರ ಕೆಲಸದಿಂದ ಅವರನ್ನು ಬಿಡಿಸಿದರೆ ನಮ್ಮ ಸದ್ಯದ ಕಾರ್ಯದಲ್ಲಿ ಸಾಕಷ್ಟು ತೊಂದರೆ ಯುಂಟಾಗುವುದೆಂಬುದು ನಿಜ. ಆದರೆ ಹೊಸ ವಿಚಾರಸರಣಿಯ ರಹಸ್ಯವನ್ನು ನಾವು ಅರಿತಿದ್ದರೆ ಸದ್ಯದ ಕಾರ್ಯದಲ್ಲಿ ವ್ಯತ್ಯಯವುಂಟಾದರೂ ಅದರ ಬಗ್ಗೆ ಭಯಗೊಳ್ಳದೆ ಮೋಹ ತೊರೆದು, ಅಂಥ ಕಾರ್ಯಕರ್ತರನ್ನು ಮುಕ್ತ ಮಾಡಬೇಕಾಗುವುದು.

ಕೇಂದ್ರಗಳನ್ನು ಮರ್ಯಾದಿತ ಗೊಳಿಸುವುದು:

ಉತ್ಪತ್ತಿ ಕೇಂದ್ರ:—ಗೊತ್ತುವಳಿಯ ಎರಡನೆಯ ಕಲಮಿನನ್ವಯ ಮಾರಾಟದ ಭಾಂಡಾರ ಹಾಗೂ ಹುಟ್ಟುವಳಿ ಕೇಂದ್ರಗಳನ್ನು ಮರ್ಯಾದಿತ ಗೊಳಿಸಬೇಕೆಂದು ಮಾಡಿದ ಸೂಚನೆಯ ವಿಷಯದಲ್ಲಿ ಕೆಳಗಣ ಕಾರ್ಯಸರಣಿಯನ್ನು ಕೂಡಲೆ ಅನುಸರಿಸತಕ್ಕದ್ದು:

(೧) ದೊಡ್ಡ ದೊಡ್ಡ ಹುಟ್ಟುವಳಿ ಕೇಂದ್ರಗಳನ್ನು ಇನ್ನು ಮುಂದೆ ವಿಸ್ತಾರಗೊಳಿಸುವ ಆಲೋಚನೆ ಬಿಟ್ಟು ಕೊಡಬೇಕು.

(೨) ನೂಲುವ ಕೂಲಿಯಲ್ಲಿಯ ಕೆಲವೊಂದು ಅಂಶವಲ್ಲಿ ಖಾದಿಯನ್ನು ಕೊಡುತ್ತಿರುವ ಪ್ರಾಘಾತವನ್ನು ಸಂಘವು ಕೆಲ ಅವಧಿಯವರೆಗೆ ಒಪ್ಪಿತು. ಆದರೆ ಅದು ಕೃತ್ರಿಮ ಹಾಗೂ ನಿರ್ಜೀವವಾದುದೆಂದು ಈಗ ಮನಗಾಣಲಾಗಿದೆ. ಇನ್ನುಮುಂದೆ ತಿಳಿದು ಸ್ವೇಚ್ಛೆಯಿಂದ ಖಾದೀಕಾರ್ಯ ಮಾಡುತ್ತಿರುವಂಥ ಕಸಬುದಾರರಿಂದಲೇ ಸಂಘವು ನೂಲಿಸುವ ನೇಯಿಸುವ ವ್ಯವಹಾರವನ್ನಿಟ್ಟುಕೊಳ್ಳುವದು ಉಚಿತವೂ, ಖಾದಿಗೆ ಪೋಷಕವೂ ಆಗುವದೆಂದು ಬಗೆಯಲಾಗಿದೆ. ಕೇಂದ್ರಗಳನ್ನು ಮರ್ಯಾದಿತಗೊಳಿಸುವಾಗ್ಗೆ ಈ ಮಾತನ್ನು ನಾವು ಲಕ್ಷ್ಯದಲ್ಲಿಡತಕ್ಕದ್ದು ಹಾಗೂ ಯೋಗ್ಯವಾದ ಸುಧಾರಣೆಯನ್ನು ಮೆಲ್ಲಮೆಲ್ಲನೆ ಮಾಡುತ್ತಾ ಹೋಗತಕ್ಕದ್ದು.

(೩) ಹಲವೊಂದು ನೂಲುವ ಕೇಂದ್ರವಿದ್ದು ಅಲ್ಲಿಯ ನೂಲನ್ನು ಒಂದೇ ಕೇಂದ್ರಕ್ಕೆ ಕಳಿಸಿ ನೇಯಿಸುವ ಪರಿಪಾಠ ಇರುತ್ತಿದ್ದರೆ ಅದನ್ನು ಇನ್ನು ಮುಂದೆ ನಿಲ್ಲಿಸಿ ನೂಲುವ ಕೇಂದ್ರಗಳಲ್ಲಿಯೆ ನೇಗಿಯ ಕಾರ್ಯವನ್ನು ಸಂಘಟಿಸಿ ಅವುಗಳನ್ನು ಸಣ್ಣ ಆದರೆ ಸಂಪೂರ್ಣ ಕೇಂದ್ರಗಳನ್ನಾಗಿ ಪರಿವರ್ತಿಸಬೇಕು.

(೪) ಸ್ಥಾನಿಕ ಉಪಯೋಗಕ್ಕಾಗಿ ಗ್ರಾಮೋದ್ಯೋಗದ ವಸ್ತುಗಳು ತಯಾರಾಗುವಂತಿದ್ದರೆ ಅತ್ತಾದರು ಸ್ವಲ್ಪ ಲಕ್ಷ ಪೂರೈಸುವ ಕುರಿತು ಹೊರಗೆ ಕಳಿಸುವ ಸಲು

ವಾಗಿ ತಯಾರಿಸುತ್ತಿದ್ದ ಖಾದಿಯ ಉತ್ಪತ್ತಿಯನ್ನು ನಿಲ್ಲಿಸಿ ಬಿಡುವುದು ಸಮಂಜಸವಾದುದು.

(೫) ಪರಪ್ರಾಂತಗಳಿಗೆ ಖಾದೀ ಕಳಿಸುವದನ್ನು ಕೂಡಲೆ ಕಡಿಮೆ ಮಾಡಬೇಕು.

ಸ್ಥಾನಿಕ ಮಾರಾಟ

ಸಂಘದ ಮೊದಲಿನ ಕಾರ್ಯಸರಣಿಯಲ್ಲಿ ಸಾವಕಾಶವಾಗಿ ಬದಲಾವಣೆ ಮಾಡುವದು ಅವಶ್ಯವಾಗಿದೆ. ಖಾದಿಯ ಸ್ಥಾನಿಕ ಮಾರಾಟವನ್ನು ಹೆಚ್ಚಿಸುವ ಪರಿವರ್ತನವೂ ಅದರಲ್ಲಿ ಸಮಾವಿಷ್ಟ ವಾಗಿದೆ. ಇಂದು ನಮ್ಮ ಹುಟ್ಟುವಳಿ ಕೇಂದ್ರಗಳಲ್ಲಿ ತಯಾರಾ ಗುತ್ತಿರುವ ನೂಲು ಮಾರಾಟಕ್ಕೋಸ್ಕರ ಬಹುತರವಾಗಿ ದೂರ ದೂರ ಕಳಿಸಲ್ಪಡುತ್ತದೆ. ಇನ್ನು ಕೇಂದ್ರದ ಕಕ್ಷೆಯಲ್ಲಿಯೆ ಖಾದಿಯನ್ನುಪಯೋಗಿಸುವವರ ಸಂಖ್ಯೆಯು ಬೆಳೆಯುತ್ತ ಹುಟ್ಟುವ ಖಾದಿಯೆಲ್ಲ ಅಲ್ಲಿಯೇ ಮಾರಾಟ ವಾಗುವಂತೆ ಪ್ರಯತ್ನ ಮಾಡ ತಕ್ಕದ್ದು. ದೂರದಿಂದ ವ್ಯಾಪಾರಸ್ಥರು ಬಂದು ಖಾದಿಯನ್ನು ಕೊಂಡರೆ ಅದಕ್ಕೆ ಸ್ಥಾನಿಕ ಮಾರಾಟವೆನ್ನಲಾಗದು. ತಮ್ಮ ಉಪಯೋಗಕ್ಕಾಗಿ ಆ ಕ್ಷೇತ್ರದಲ್ಲಿಯ ಜನರು ಖಾದಿಯನ್ನು ಕೊಳ್ಳುತ್ತಿದ್ದರೆ ಅದು ಸ್ಥಾನಿಕ ಮಾರಾಟವೆಂದು ಬಗೆಯಲಾಗು ವದು. ಇಂಥ ಮಾರಾಟವು ಹೆಚ್ಚುವಂತೆ ವಿಶೇಷ ಪ್ರಯತ್ನ ಮಾಡತಕ್ಕದ್ದು. ಅದರ ಅಂಕಿಗಳನ್ನು ಬೇರೆ ತೋರಿಸುತ್ತ ಇಂಥ ಮಾರಾಟವು ಹೆಚ್ಚುವಂತೆ ಏರ್ಪಾಟು ಮಾಡತಕ್ಕದ್ದು. ಹೊಸ ನೀತಿಗನುಸಾರವಾಗಿ ನಾವು ಇದೊಂದು ಹೆಜ್ಜೆಯನ್ನಾದರೂ ಮುಂದಿಡಬೇಕಾಗಿದೆ.

ಖಾದಿಯ ಸ್ಥಾನಿಕ ಉಪಯೋಗವನ್ನು ಬೆಳೆಸುವಿಕೆ

ಮಾರಾಟಕ್ಕಾಗಿ ಖಾದಿಯನ್ನು ದೂರ ದೂರ ಕಳಿಸುವುದು ತಾತ್ವಿಕ ದೃಷ್ಟಿಯಿಂದ ಸರಿಯಾದುದಲ್ಲೆಂಬುದನ್ನು ಸಂಘವು

ಯಾವಾಗಲೂ ನೆನಪಿನಲ್ಲಿಡತಕ್ಕದ್ದು. ಇನ್ನು ಹೊಸ ನೀತಿಯ ದೃಷ್ಟಿಯನ್ವಯ ಈ ಮಾತನ್ನು ಹೆಚ್ಚು ಒತ್ತಿ ಹೇಳುವದು ಅತ್ಯವಶ್ಯವಾದುದು. ಈ ಬಗ್ಗೆ ಸಭೆಯಲ್ಲಿ ಸಾಕಷ್ಟು ಚರ್ಚೆ ಯಾಯಿತು. ಈ ವಿಷಯದಲ್ಲಿ ಒಂದು ಆದರ್ಶವನ್ನು ನಮ್ಮೆದುರು ಇಟ್ಟುಕೊಂಡು ಅದನ್ನನುಲಕ್ಷಿಸಿ ನಾವು ಎಲ್ಲಿಯವರೆಗೆ ಸಾಗಿರುವೆವೆಂಬುದನ್ನು ಅಳತೆ ಮಾಡುತ್ತಿರುವದು ಉಚಿತ. ಈ ಸಲುವಾಗಿ ಸಂಘವು ಕೆಳಗಣ ಆಶಯದ ನಿರ್ಣಯವನ್ನು ಪ್ರಕಟಿಸಿರುವುದು:—

"ಖಾದಿಯು ಹುಟ್ಟುತ್ತಿರುವ ಕೇಂದ್ರಗಳ ಕ್ಷೇತ್ರದಲ್ಲಿಯ ಜನರಲ್ಲಿ ಖಾದಿಯನ್ನು ಪಯೋಗಿಸುವ ಹುಮ್ಮಸವು ಹೆಚ್ಚು ಹೆಚ್ಚು ಬೆಳೆಯುವಂತೆ ಮಾಡುವದು ಅತ್ಯವಶ್ಯವಾಗಿರುವದೆಂದೂ, ಆ ಬಗ್ಗೆ ಬಲವಾದ ಪ್ರಯತ್ನ ಮಾಡಬೇಕೆಂದೂ ಚರಕ ಸಂಘವು ತನ್ನ ಎಲ್ಲ ಕಾರ್ಯಕರ್ತರ ಹಾಗೂ ಖಾದಿ ಪ್ರೇಮಿಗಳ ಲಕ್ಷ್ಯಕ್ಕೆ ತರುತ್ತದೆ. ನೂಲುವ ಕಾರ್ಯ ನಡೆಯುತ್ತಿರುವ ಕ್ಷೇತ್ರಗಳ ಕಕ್ಷೆಯಲ್ಲಿಯ ಪೂರ್ಣ ಜನಸಂಖ್ಯೆಯ ಲೆಕ್ಕದಿಂದ ಪ್ರತಿಯೊಬ್ಬ ವ್ಯಕ್ತಿಯು ಇನ್ನುಮುಂದೆ ಕ್ಷಿಪ್ರದಲ್ಲಿಯೆ ಕನಿಷ್ಟ ಒಂದು ಚೌರಸ ಗಜ ಖಾದಿಯನ್ನಾದರೂ ಉಪಯೋಗ ಮಾಡುವಂತೆ ಏರ್ಪಾಟು ಮಾಡಿ ಈ ಪ್ರಮಾಣವನ್ನು ಹೆಚ್ಚೆಚ್ಚು ಮಾಡುವ ಪ್ರಯತ್ನ ಮಾಡುತ್ತಿರಬೇಕೆಂದೂ ಚರಕ ಸಂಘವು ಆಶಿಸುತ್ತದೆ."

ಮಾರಾಟದ ಭಾಂಡಾರಗಳು

(೧) ಪರಪ್ರಾಂತದಿಂದ ಖಾದೀ ತರಿಸುವದನ್ನು ಕಡಿಮೆ ಮಾಡಬೇಕು.

(೨) ಖಾದಿಯ ಮಾರಾಟದ ಬೆಲೆಯನ್ನು ಪೂರ್ಣ ನಗದು ಹಣದಲ್ಲಿ ಪಡೆಯದೆ ಅದರ ಕೆಲವೊಂದು ಅಂಶವನ್ನು ನೂಲಿನ ರೂಪದಲ್ಲಿ ಪಡೆಯುವ ಪರಿಪಾಠವನ್ನಿಡ

ಬೇಕು. ಆದರೆ ಈ ನಿಯಮವನ್ನು ಒಮ್ಮೆಲೆ ವ್ಯವಹಾರದಲ್ಲಿ ತರುವದಾದರೆ ಖಾದೀ ಪ್ರೇಮಿಗಳಿಗೆ ತುಂಬಾ ತೊಂದರೆ ಯುಂಟಾಗುವದರಿಂದ ಅವರಿಗೆ ಸ್ವಲ್ಪ ಅವಕಾಶ ಕೊಡುವುದು ಆವಶ್ಯಕವಾದುದು. ಸದ್ಯದ ಪರಿಸ್ಥಿತಿಯಲ್ಲಿ ಖಾದಿಯ ಬೆಲೆಯಲ್ಲಿ ರೂಪಾಯಿಗೆ ಕನಿಷ್ಟ ಆರು ಪೈ ಪ್ರಮಾಣದಂತೆ ಒಳ್ಳೇ ನೂಲು, ಸ್ವತಃ ನೂತದ್ದಿರಲಿ ಪರಿವಾರದವರು ನೂತದ್ದಿರಲಿ, ಮಿತ್ರರಿಂದ ಪಡೆದಿರಲಿ, ಅಥವಾ ನೆರೆಹೊರೆಯಲ್ಲಿ ನೂತದ್ದಿರಲಿ ತಾ ೧ನೇ ಜುಲೈ ೧೯೪೫ರಿಂದ ತೆಗೆದುಕೊಳ್ಳಲಾಗುವದು. ಹಾಗೂ ಇದರ ಪ್ರಮಾಣವನ್ನು ತಾ ೨ನೇ ಅಕ್ಟೋಬರ ೧೯೪೫ರಿಂದ ಒಂದು ರೂಪಾಯಿ ಬೆಲೆಯ ಖಾದಿಗೆ ಒಂದು ಲಡಿ ನೂಲಿನವರೆಗೆ ಬೆಳೆಸುವ ಸಂಕಲ್ಪವಿದೆ.

(೩) ಮೇಲಿನ ನಿಯಮದಂತೆ ಕಾರ್ಯಮಾಡಲು ಆನುಕೂಲವಾಗುವಂತೆ ಭಾಂಡಾರಗಳ ಸ್ವರೂಪವನ್ನು ಬದಲಿಸಬೇಕಾಗುವದು.

ಗ್ರಾಹಕರಿಗೆ ಕೇವಲ ಖಾದಿಯನ್ನು ಪೂರೈಸುವ ಬದಲು, ನೂಲು ತೆಗೆಯುವ ಹಾಗೂ ಹೆಂಜಿ ಹಾಕುವ ಕಲೆಗಳನ್ನು ಕಲಿಸುವದು, ಖಾದೀ ಸರಂಜಾಮದ ಎಲ್ಲ ಬಗೆಯ ಸಲಕರಣೆಗಳನ್ನು ಒದಗಿಸಿಕೊಡುವುದು, ಈ ಮಾತುಗಳ ಕಡೆ ಭಾಂಡಾರಗಳು ಇನ್ನು ಮುಂದೆ ಲಕ್ಷ ಪೂರೈಸಬೇಕಾಗುವುದು. ಭಾಂಡಾರಗಳಿಗೆ ಒಂದು ಬಗೆಯಿಂದ ನೂಲುವ ಹಾಗೂ ಹಿಂಜುವ ಕಲೆಗಳನ್ನು ಕಲಿಸುವ ಶಿಕ್ಷಣಾಲಯಗಳ ಸ್ವರೂಪ ಬರುವದು. ಸರಂಜಾಮು, ಅರಳೆ, ಹೆಂಜಿ ಮುಂತಾದ ಎಲ್ಲ ವಸ್ತುಗಳು ಅಲ್ಲಿಂದಲ್ಲಿಯೆ ನಿರ್ಮಾಣವಾಗತಕ್ಕದ್ದು. ದೂರದೂರದಿಂದ ಖಾದಿಯನ್ನು ತರಿಸುವದು ತ್ಯಾಜ್ಯವಾದುದೆಂದು

ನಾವು ಬಗೆಯುತ್ತಿರುವಂತೆ ಅಥವಾ ಅದಕ್ಕೂ ಹೆಚ್ಚಿಗೆ ಹಂಜಿ ಹಾಗೂ ಸರಂಜಾಮುಗಳನ್ನು ತರಿಸುವುದು ವರ್ಜ್ಯವಾಗಿರುವದೆಂದು ತಿಳಿಯಬೇಕು. ಈ ರೀತಿ ಭಂಡಾರಗಳು ರೂಪಾಂತರ ಹೊಂದಲು ಅವು ತಂತಾವೇ ಮರ್ಯಾದಿತವಾಗಹತ್ತುವವು. ಭಾಂಡಾರಗಳ ಕಾರ್ಯಕರ್ತರು ತಮ್ಮ ಮಾರಾಟದ ವೇಳೆಯನ್ನು ಕಡಿಮೆ ಮಾಡಿಯಾದರೂ ಈ ಕಾರ್ಯದಲ್ಲಿ ತಮ್ಮ ವೇಳೆ ಹಾಗೂ ಶಕ್ತಿಯನ್ನು ತೊಡಗಿಸಲನುವಾಗುವಂತೆ ಶಾಖೆಗಳು ಏರ್ಪಾಟು ಮಾಡಬೇಕು. ಪ್ರತಿಯೊಬ್ಬ ಗ್ರಾಹಕನಿಗೆ ಸ್ವತಃ ನೂಲುವದಾಗಲಿ, ನೂಲಿಸಿಕೊಳ್ಳುವದಾಗಲಿ ಅನಿವಾರ್ಯವಾದ ಮೇಲೆ ಹಂಜಿಯ ಬೇಡಿಕೆಯು ಹೆಚ್ಚುವದು. ಹತ್ತಿ ಬೆಳೆಯುತ್ತಿರುವ ಸ್ಥಳಗಳಲ್ಲಿ ತಮಗೆ ಬೇಕಾಗುವಷ್ಟು ಹತ್ತಿಯನ್ನು ಸಂಗ್ರಹಿಸಿಟ್ಟುಕೊಳ್ಳುವಂತೆ ಭಾಂಡಾರಗಳು ಯತ್ನಿಸಬೇಕಾಗುವುದಿಲ್ಲ. ಒಳ್ಳೇ ಹತ್ತಿಯ ಪರಿಚಯ ಹಾಗೂ ಅದರ ಯೋಗ್ಯ ಬೆಲೆ ಇತ್ಯಾದಿ ವಿಷಯಗಳಲ್ಲಿ ಭಾಂಡಾರಗಳ ಕಾರ್ಯಕರ್ತರು ಗ್ರಾಹಕರಿಗೆ ಮಾರ್ಗದರ್ಶಕರೂ, ಸಹಾಯಕರೂ, ಆಗಬೇಕಾಗಬಹುದು. ಈ ರೀತಿ ಹತ್ತಿಯನ್ನು ಸಂಗ್ರಹಿಸಿಕೊಂಡಂಥ ಗ್ರಾಹಕರಿಗೆ ತುನಾಯಿಯ ಉಪಕರಣಗಳನ್ನು ಒದಗಿಸುವದು, ಹಾಗೂ ತಮ್ಮ ಹಂಜಿಗಳನ್ನು ತಾವೇ ಮಾಡಿಕೊಳ್ಳುವದನ್ನು ಕಲಿಸುವದು ಮುಂತಾದ್ದನ್ನು ಭಾಂಡಾರಗಳು ಮಾಡಬೇಕಾಗುವುದು. ಹತ್ತಿ ಬೆಳೆಯದ ಸ್ಥಳಗಳಲ್ಲಿ ಭಾಂಡಾರಗಳ ಮುಖಾಂತರ ಒಳ್ಳೇ ಅರಳಿಯನ್ನು ಗ್ರಾಹಕರಿಗೆ ಒದಗಿಸಿಕೊಟ್ಟು ಹಿಂಜುವ ಸಾಮಾನ ಹಾಗೂ ಹಂಜೀಹಾಕುವ ರೀತಿಯನ್ನು ಅವರಿಗೆ ಕಲಿಸುವ ಏರ್ಪಾಟನ್ನು ಮಾಡಬೇಕಾಗುವದು. ಇಷ್ಟು ಪ್ರಯತ್ನಪಟ್ಟರೂ ಹಲವು ಗ್ರಾಹಕರು ತಯಾರೀ ಹಂಜಿಗಳನ್ನೇ ಬೇಡುವರು. ಇಂಥ ಗ್ರಾಹಕರ ಸಲುವಾಗಿ ಭಾಂಡಾರವಿದ್ದ ಸ್ಥಳದಲ್ಲಾಗಲಿ ಅಥವಾ ನೆರೆಹೊರೆಯ ಹಳ್ಳಿಯಲ್ಲಾಗಲಿ

ಹಿಂಜುವ ಜನರನ್ನು ತಯಾರಿಸಿ, ಅವರಿಂದ ಹೆಂಜಿಗಳನ್ನು ಹಾಕಿಸಿ ಭಾಂಡಾರಗಳಲ್ಲಿಡಬೇಕು. ಹೆಂಜಿಗಳನ್ನು ದೂರಿನ ಉತ್ಪತ್ತಿ ಕೇಂದ್ರದಿಂದ ರೇಲ್ವೆಪಾರ್ಸಲ ಮುಖಾಂತರ ತರಿಸಕೂಡದು.

ವಸ್ತ್ರಸ್ವಾವಲಂಬಿ ನೂಲುವವರು ತಮ್ಮ ನಾದುರಸ್ತಾದ ರಾಟಿಗಳನ್ನು ಸರಿಪಡಿಸಿಕೊಳ್ಳುವ ಕುರಿತು ಹಾಗೂ ಅವನ್ನು ಹೇಗೆ ದುರಸ್ತಮಾಡಬೇಕೆಂಬದನ್ನು ಅರಿತುಕೊಳ್ಳುವ ಕುರಿತು ಭಾಂಡಾರಗಳ ಸಹಾಯವನ್ನು ಅಪೇಕ್ಷಿಸುವುದುಂಟು. ಅದರೊಂದಿಗೆ ತಮ್ಮ ನೂಲನ್ನು ನೇಯಿಸಿಕೊಳ್ಳುವ ವಿಷಯದಲ್ಲಿ ತರತರದ ಪ್ರಶ್ನೆಗಳನ್ನು ಕೇಳುತ್ತಿರುವುದೂ ಉಂಟು. ಇಂಥ ಮಾತುಗಳ ಬಗ್ಗೆ ಗ್ರಾಹಕರನ್ನು ಸಮಾಧಾನಗೊಳಿಸುವದು ಭಾಂಡಾರಗಳ ಕಾರ್ಯಕರ್ತರ ಕರ್ತವ್ಯವಾಗಿರುವದು. ವಸ್ತ್ರಸ್ವಾವಲಂಬನದ ಪ್ರಚಾರಕ್ಕಾಗಿಯೂ, ಖಾದಿಯನ್ನು ವ್ಯಾಪಕಗೊಳಿಸುವದಕ್ಕಾಗಿಯೂ, ಇದರ ಸಂಪೂರ್ಣ ಜ್ಞಾನವನ್ನು ಭಾಂಡಾರದವರು ಪಡೆದಿರಬೇಕಲ್ಲದೆ ಅವರ ಮುಖಾಂತರ ನೂಲುವವರಿಗೂ ಅದರ ಪರಿಚಯ ಮಾಡಿಕೊಡುತ್ತಿರುವದು ಅತ್ಯಂತ ಆವಶ್ಯಕವಾಗಿರುವುದು.

ಭಾಂಡಾರಗಳಲ್ಲಿ ನೇಗಿಯ ಏರ್ಪಾಟು:

ಭಾಂಡಾರಗಳಲ್ಲಿ ಬರತಕ್ಕ ನೂಲನ್ನು ನೇಯಿಸುವ ಏರ್ಪಾಟಿನ ಬಗ್ಗೆ ನಾವೆಲ್ಲರೂ ಲಕ್ಷಪೂರ್ವಕವಾಗಿ ಯೋಚಿಸತಕ್ಕದ್ದು. ಮಾರಾಟದ ಭಾಂಡಾರಗಳಲ್ಲಿ ಇದುವರೆಗೆ ವಸ್ತ್ರಸ್ವಾವಲಂಬಿಗಳ ನೂಲು ಒಮ್ಮೊಮ್ಮೆ ಬರುತ್ತಿದ್ದಿತು. ಆದರೆ ಇನ್ನುಮುಂದೆ ಖಾದಿಯ ಬೆಲೆಯಲ್ಲಿಯೂ ನೂಲು ಬರಹತ್ತುವದು. ಕಾರಣ ನಾವು ಇದರ ಏರ್ಪಾಟು ಮಾಡಲೇಬೇಕು. ಈ ನೂಲನ್ನು ಭಾಂಡಾರಗಳಿಂದ ದೂರದವರೆಗೆ ಕಳಿಸುವದಂತೂ ಅನಿಷ್ಟವಾದುದಂತೂ ಸರಿಯೆ. ಇದಲ್ಲದೆ ಸಾಗಾಟದ ಸದ್ಯದ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿಯಂತೂ ಹೀಗೆ ಮಾಡುವದು ಎಂದೂ ಸಮಂಜಸವಾಗದು. ಖಾದೀ ಮಾರಾ

ಟದ ಭಾಂಡಾರಗಳಲ್ಲಿ ಗ್ರಾಹಕರ ಸಲುವಾಗಿ ನೂಲುವ ಶಿಕ್ಷಣ, ಸರಂಜಾಮುಗಳ ಪೂರೈಕೆ ಮುಂತಾದವುಗಳ ಬಗ್ಗೆ ಏರ್ಪಾಟು ಮಾಡಲೆಣಿಸಿದಂತೆ ಭಾಂಡಾರಗಳಲ್ಲಿ ಬರಲಿರುವ ನೂಲನ್ನು ಅಲ್ಲಿಯೆ ನೆರೆಹೊರೆಯಲ್ಲಿ ನೇಯಿಸುವ ವ್ಯವಸ್ಥೆಯನ್ನೂ ಮಾಡುವುದು ಅತ್ಯಗತ್ಯವಾದುದು. ಈ ವ್ಯವಸ್ಥೆಯನ್ನು ಭಾಂಡಾರಗಳಿದ್ದ ಪಟ್ಟಣಗಳಲ್ಲಾಗಲಿ ಅಥವಾ ನೆರೆಹೊರೆಯ ಹಳ್ಳಿಗಳಲ್ಲಾಗಲಿ ಮಾಡತಕ್ಕದ್ದು. ಈ ಬಗ್ಗೆ ತಗಲಬಹುದಾದ ಅವಶ್ಯಕವಾದ ವೆಚ್ಚವನ್ನೂ ಒಹಿಸಬೇಕಾಗುವುದು. ಅದು ಮೊದಲು ಸ್ವಲ್ಪ ಹೆಚ್ಚಾಗಬಹುದು. ಆದರೆ ಬರಬರುತ್ತ ಕಡಿಮೆಯಾಗುತ್ತ ಹೋಗುವದು. ಈ ವೆಚ್ಚದ ಭಾರವು ಖಾದಿಯಮೇಲೆ ಬೀಳುವದು ಉಚಿತವಾಗದು. ಇದನ್ನು ಪ್ರಯತ್ನಮಾಡಿ ತಮ್ಮ ಪಟ್ಟಣದಲ್ಲಿಯೇ ಕೂಡಿಸಬೇಕು.

ಮಾರಾಟದ ಭಾಂಡಾರಗಳ ಸ್ವರೂಪಃ

ನೇಗಿಯ ಏರ್ಪಾಟು ಮಾಡಿದ ನಂತರ ಭಾಂಡಾರಗಳಿಗೆ ಕಾರ್ಯಾಲಯುಗಳ ಸ್ವರೂಪ ಬರುವದು. ಆದರೆ ಇಷ್ಟರಿಂದ ನಾವು ಸಂತುಷ್ಟರಾಗತಕ್ಕದ್ದಲ್ಲ. ಭಾಂಡಾರಗಳಲ್ಲಿ ನೇಗಿಯ ಪೂರ್ವಕ್ರಿಯೆಗಳಾದ ಕಾಳುತೆಗೆಯುವದು, ಹಿಂಜುವದು ಹಾಗೂ ನೂಲುವದು ಮುಂತಾದವುಗಳನ್ನು ಕಲಿಸುವ ಏರ್ಪಾಟನ್ನು ಸಾಧ್ಯವಿದ್ದ ಮಟ್ಟಿಗೆ ಮಾಡಬೇಕಾಗುವದು. ಸರಂಜಾಮುಗಳನ್ನೂ ಬಹುಮಟ್ಟಿಗೆ ಅಲ್ಲಿಯೆ ಮಾಡಿಸಿಕೊಳ್ಳಬೇಕು. ಭಾಂಡಾರಗಳ ಕಟ್ಟಡವು ಸಾಕಷ್ಟು ವಿಶಾಲವಾಗಿದ್ದರೆ ಮಾತ್ರ ಇದು ಸಾಧ್ಯವಾಗುವುದು. ಪಟ್ಟಣಗಳಲ್ಲಿ ಪೇಟೆಯ ಸುತ್ತಲು ಇಂಥ ಸ್ಥಳವನ್ನು ದೊರಕಿಸುವದೆಂದರೆ ವಿಶೇಷ ವೆಚ್ಚ ತಗಲುವದು. ಸ್ಥಳದ ಸಲುವಾಗಿ ಈ ರೀತಿ ವೆಚ್ಚಮಾಡುವದು ಸಮಂಜಸವಾಗಲಾರದು. ಒಂದು ವೇಳೆ

ವೆಚ್ಚದ ಮಾತನ್ನು ಬಿಟ್ಟರೂ, ಹೊಸ ಕಾರ್ಯದ ದೃಷ್ಟಿಯಿಂದ ಭಾಂಡಾರವು ಪೇಟೆಯಿಂದ ದೂರದಲ್ಲಿ ಒಂದು ಶಾಂತವಾದ ಸ್ಥಳ ದಲ್ಲಿರುವದು ಅವಶ್ಯ. ಅದು ಕಾರಣ ಭಾಂಡಾರವನ್ನು ಅಂಥ ಸ್ಥಳಕ್ಕೆ ಒಯ್ಯುವದು ಉಚಿತ. ಅಂದರೆ ಅಲ್ಲಿ ಈ ಯಾವತ್ತೂ ಅನುಕೂಲತೆಗಳನ್ನು ಮಾಡಿಕೊಳ್ಳಬಹುದು. ಹಾಗೂ ಅಲ್ಲಿರುವ ವರಲ್ಲಿ ಖಾದಿಯ ಬಗ್ಗೆ ಅಭಿರುಚಿಯೂ ಹೆಚ್ಚುವದು.

ಭಾಂಡಾರಗಳಲ್ಲಿ ಸಾಹಿತ್ಯದ ಪ್ರಬಂಧಃ

ನಮ್ಮ ಗ್ರಾಹಕರಲ್ಲಿ ಖಾದೀ ಸಾಹಿತ್ಯದ ಪ್ರಚಾರವನ್ನು ಮಾಡತಕ್ಕದ್ದು. ನಮ್ಮ ಭಾಂಡಾರಗಳಲ್ಲಿ ನೂಲುವ ಸಲಕರಣೆ ಗಳ ಸಂಗ್ರಹ ಹಾಗೂ ನೂಲುವ ಕಲೆಯ ಶಿಕ್ಷಣದ ಏರ್ಪಾಟು ಮಾಡಿದಂತೆ ಗ್ರಾಮೋದ್ಯೋಗದ ಸಲುವಾಗಿ ಉಪಯುಕ್ತವಾದ ಹಲವು ಪುಸ್ತಕಗಳನ್ನೂ ಅಲ್ಲಿ ಸಂಗ್ರಹಿಸಿಡುವದು ಉಚಿತವಾಗು ವದು. ಈ ಪುಸ್ತಕಗಳನ್ನು ಮಾರಾಟಕ್ಕಾಗಿಯೂ ಇಡಬಹುದು. ಮತ್ತು ಗ್ರಾಹಕರು ಅವುಗಳನ್ನೋದಿ ತಿರುಗಿಕೊಡಲು ಬಯಸಿ ದರೆ ಪುಸ್ತಕಾಲಯಗಳಲ್ಲಿಯಂತೆ ಹಣ ಇಟ್ಟುಕೊಂಡು ಕೊಡುವ ಏರ್ಪಾಟನ್ನೂ ಮಾಡಬೇಕಾಗುವದು. ಅವಶ್ಯವೆಂದು ತೋರಿದರೆ ಯಾವುದೊಂದು ಪುಸ್ತಕದ ಒಂದಕ್ಕಿಂತ ಹೆಚ್ಚು ಪ್ರತಿಗಳನ್ನಾದರೂ ಇಡಬಹುದು. ಶಾಖೆಗಳು ಈ ಬಗ್ಗೆ ಆಲೋಚಿಸಿ ಒಂದು ಯೋಜ ನೆಯನ್ನು ತಯಾರಿಸಿದರೆ ಲಾಭದಾಯಕವಾಗುವುದು.

ತಳವನ್ನು ಚನ್ನಾಗಿ ಸೋಸಬೇಕುಃ

"ನೂಲುವವರು ಖಾದೀಧಾರಿಗಳಾಗಬೇಕು. ಅಂದರೇ ನಾವು ನಿಜವಾದ ಖಾದಿಯನ್ನು ತಯಾರಿಸಿದಂತಾಗುವದು. ಈ ಕಾರಣ ದಿಂದ ನಮ್ಮ ಭಾಂಡಾರಗಳು ಎಷ್ಟು ಬೇಕಾದಷ್ಟು ಖಾದೀ ಮಾರಲಿ. ಆದರೆ ಅದರೊಂದಿಗೆ ಸರಂಜಾಮುವನ್ನು ತಯಾರಿಸಿದರೆ

ಕಾರ್ಯೋನ್ನತಿಯು ಇನ್ನೂ ಹೆಚ್ಚಾಗುವದು. ಸದ್ಯಕ್ಕೆ ಮಾರಾಟವು ಕಡಿಮೆಯಾಗಬಹುದೆಂಬದೇನೋ ಸರಿ ಆದರೆ ಕೊನೆಗೆ ಹೆಚ್ಚಾಗುವದು. ನಮ್ಮ ಭಾಂಡಾರಗಳಲ್ಲಿ ನಿಷ್ಠಾವಂತ ನುರಿತ ಕಾರ್ಯಕರ್ತರು ಬಂದು ನಿಂತುದಾದರೆ ನನಗೆ ಎಳ್ಳಷ್ಟೂ ಅಂಜಿಕೆ ಇಲ್ಲ. ಆದರೆ ಅಂಥ ಕಾರ್ಯಕರ್ತರಿಗೆ ಸರಂಜಾಮು ತಯಾರಿಸುವ ಹಾಗೂ ದುರಸ್ತುಮಾಡುವ ಕಲೆ ಗೊತ್ತಿರಬೇಕು.

ಮೋ. ಕ. ಗಾಂಧೀ."

ಖಾದಿಯ ಬೆಲೆಯಲ್ಲಿಯ ಅಲ್ಪಾಂಶವನ್ನು ನೂಲಿನ ರೂಪದಲ್ಲಿ ಪಡೆಯತಕ್ಕುದೆಂಬ ಹೊಸ ನಿಯಮದ ವಿಷಯದಲ್ಲಿ ನಮ್ಮ ಬಹುಜನ ಕಾರ್ಯಕರ್ತರು ಚಿಂತಾಗ್ರಸ್ತರಾಗಿರುವರೆಂಬ ಸಂಗತಿಯು ನಮಗೆ ಈಗ ಬಂದಿರುವ ಪತ್ರಗಳಿಂದ ವಿದಿತವಾಗಿರುವದು. ಇದರಿಂದ ಗ್ರಾಹಕರು ಅಸಂತುಷ್ಟರಾಗುವರು, ನೂಲುವದನ್ನು ಕೈಕೊಳ್ಳುವ ಬದಲು ಅವರು ಖಾದಿಯನ್ನೇ ಬಿಡುವರು; ಮಾರಾಟವೂ, ಕಟ್ಟಾಗುವುದು. ಇತ್ಯಾದಿ ವಿಚಾರ ಸರಣಿಯೆ ಅವರ ಚಿಂತೆಗೆ ಕಾರಣ. ಇದರಿಂದ ಪಾರಾಗಲು ಹಲವೆಡೆ ಈ ಕೆಳಗಿನ ಆಲೋಚನೆ ನಡೆದಿದೆ. ಅದು ಯಾವುದೆಂದರೆ, ಪಟ್ಟಣದಲ್ಲಿ ಭಾಂಡಾರದ ಮುಖಾಂತರ ಕೂಲಿಯನ್ನು ಕೊಟ್ಟು ನೂಲಿಸುವದು, ಆ ನೂಲನ್ನು ಗ್ರಾಹಕರಿಗೆ ಮಾರಾಟ ಮಾಡುವದು, ಅಥವಾ ಅವರಿಗೆ ಕೊಳ್ಳಲು ತಿಳಿಸುವದು, ಗ್ರಾಹಕರು ಅದನ್ನು ಪಡೆದು ಭಾಂಡಾರದಲ್ಲಿ ಕೊಟ್ಟು ಖಾದಿಯನ್ನು ಕೊಂಡುಕೊಳ್ಳುವುದು.

ನಮ್ಮ ನಿರ್ಣಯದಲ್ಲಿ ಈ ವಿಚಾರಕ್ಕೆ ಆಸ್ಪದವಿದ್ದುದಾದರೆ ಅದು ಶುದ್ಧ ತಪ್ಪು. ಗ್ರಾಹಕರಿಂದ ನೂಲು ಪಡೆಯುವ ನಮ್ಮ ಉದ್ದೇಶವು ಇದರಿಂದ ಪೂರ್ಣವಾಗದು. ಖಾದೀ ಉಪಯೋಗ ಮಾಡುವವರು ಕೇವಲ ಖಾದೀ ಗ್ರಾಹಕರಾಗಿರದೆ ಅದರ ಉತ್ಪತ್ತಿಯಲ್ಲಿಯೂ ಅವರ ಅಂಗವಿರತಕ್ಕದ್ದು. ಅಂದರೆ, ಸ್ವತಃ

ನೂಲಲಿ, ತಮ್ಮ ಮನೆಯಲ್ಲಿ ರಾಟೆಯನ್ನಿಟ್ಟು ತಮ್ಮ ಮಿತ್ರರಿಂದ ನೂಲಿಸಲಿ; ಇದು ಆಗದಿದ್ದರೆ ನೆರೆಹೊರೆಯಲ್ಲಿ ನೂಲಿಸಲಿ, ಅಂತೂ ಯಾವುದೊಂದು ಬಗೆಯಿಂದ ನೂಲುವದರಲ್ಲಿಯ ಅಭಿರುಚಿಯನ್ನು ವೃದ್ಧಿಗೊಳಿಸುವದೇ ನಮ್ಮ ಉದ್ದೇಶವಾಗಿದೆ. ನಾವು ಗ್ರಾಹಕರಿಗೆ ನೂಲು ಮಾರಹತ್ತಿದರೆ ಇದು ಸಫಲವಾಗದು. ಇದು ವರೆಗೆ ನಾವು ಗ್ರಾಹಕರ ಸಲುವಾಗಿ ನೂಲಿಸುತ್ತಲೇ ಇರುವೆವು, ಖಾದಿಯನ್ನು ತಯಾರಿಸುತ್ತಲೇ ಇರುವೆವು. ಆದರೆ ಆವರ ಖಾದೀ ಧಾರಣದ ಹೊಣೆಗಾರಿಕೆಯು ನಮ್ಮ ಮೇಲೆ ಅವಲಂಬಿಸಿರಕೂಡದು. ಖಾದೀ ಉತ್ಪತ್ತಿಮಾಡುವ ಕಾರ್ಯದಲ್ಲಿಯೂ ಅವರು ತಮ್ಮ ಹೊಣೆಯನ್ನರಿಯಹತ್ತುವರು. ಇದು ವರೆಗೆ ಖಾದಿಯನ್ನು ಒಬ್ಬರು ತಯಾರಿಸಿದರು, ಇನ್ನೊಬ್ಬರು ಧರಿಸಿದರು. ಇನ್ನಾದರು ಸ್ವಲ್ಪ ಕಾಲ ಹೀಗೆಯೆ ನಡೆಯುವದೇನೋ ನಿಜ. ಆದರೆ ಇನ್ನು ಮುಂದೆ **ಪ್ರತಿಯೊಬ್ಬ ನೂಲುವವನು ಖಾದೀ ಧಾರಿಯಾಗಬೇಕು ಹಾಗೂ ಪ್ರತಿಯೊಬ್ಬ ಖಾದೀ ಧಾರಿಯು ನೂಲಬೇಕು,** ಎಂಬೀ ಮಾತನ್ನು ಒತ್ತಿ ಹೇಳುವೆವು. ಒಂದುವೇಳೆ ಭಾಂಡಾರದ ಮುಖಾಂತರ ನಾವು ಗ್ರಾಹಕರಿಗಾಗಿ ನೂಲಿಸಹತ್ತಿದರೆ ಅವರಲ್ಲಿ ನೂಲುವ ಪ್ರಚಾರ ಹೆಚ್ಚಿಸುವ ನಮ್ಮ ಕಾರ್ಯಕ್ಕೆ ಬಾಧೆ ತಟ್ಟುವದು. ಗ್ರಾಹಕರಿಗೆ ನೂಲಲು ಕಲಿಸುವದು, ಹೆಂಜಿಗಳನ್ನು ಹೇಗೆ ಮಾಡಬೇಕೆಂಬುದನ್ನು ತೋರಿಸುವುದು, ಅವರಿಗೆ ಅವಶ್ಯವಾದ ಸರಂಜಾಮು ದೊರೆಯುವಂತೆ ಪ್ರಯತ್ನ ಮಾಡುವುದು ಇವೇ ನಮ್ಮ ಕಾರ್ಯ. ಅವರ ಸಲುವಾಗಿ ನೂಲು ಹುಟ್ಟಿಸುವ ಕಾರ್ಯದಲ್ಲಿ ತೊಡಗುವದು ನಮ್ಮ ಕೆಲಸವಲ್ಲ.

ಮಾರಾಟ ಕಡಿಮೆಯಾಗುವದೆಂದು ನಾವು ಗಾಬರಿಯಾಗುವ ಕಾರಣವಿಲ್ಲ. ನಾವು ನಿಜವಾದ ಪ್ರಚಾರಕರು ಹಾಗೂ ಶಿಕ್ಷಕರು ಆದುದಾದರೆ ಖಾದಿಯ ನಿಜವಾದ ಉನ್ನತಿಯಾಗುವುದು. ಅದು

ದಿನಕ್ಕೆ ಬೆಳೆ ಅಂದರೆ ಕ್ಷಣಕ್ಕೆ ಬೆಳೆಯತೊಡಗುವದು. ನೂಲು ಪಡೆಯದೆ ಖಾದೀ ಮಾರದಿದ್ದರೆ ಹಲವು ಗ್ರಾಹಕರು ಅಸಂತುಷ್ಟರಾದರೂ ನಾವು ವ್ಯಸನ ಪಡುವ ಕಾರಣವಿಲ್ಲ. ನಾವು ಬಿಟ್ಟುಬಿಡದೆ ಅವರಿಗೆ ತಿಳಿ ಹೇಳುತ್ತಿರಬೇಕು. ಅವರಿಗೆ ಬೇಕಾದಂಥ ಉತ್ತಮ ಸರಂಜಾಮುವನ್ನು ನಮ್ಮಿಂದ ಪೂರೈಸುವದಾಗುವದಿಲ್ಲ; ಹಿಂಜುವ ಹಾಗೂ ನೂಲುವ ಕಲೆಗಳನ್ನು ಕಲಿಸುವದು ನಮ್ಮಿಂದ ಶಕ್ಯವಾಗಿಲ್ಲ; ಅವರ ನಾದುರಸ್ತವಾದ ಸರಂಜಾಮುವನ್ನು ದುರಸ್ತ ಮಾಡಿಕೊಡುವುದು ನಮ್ಮಿಂದ ಸಾಧ್ಯವಾಗಿಲ್ಲ; ಈ ಕಾರಣದಿಂದ ಇಂದಾದರು ಹಲವು ಗ್ರಾಹಕರು ನಮ್ಮ ಬಗ್ಗೆ ಅಸಂತುಷ್ಟರಾಗುತ್ತಿರುವರು. ಇನ್ನು ಅಂಥ ಗ್ರಾಹಕರ ಕಡೆಗೆ ನಮ್ಮ ಲಕ್ಷ ಹೊರಳಿಸಬೇಕು. ಇಂಥ ಗ್ರಾಹಕರು ತುಷ್ಟರೂ, ಉತ್ಸಾಹಿಗಳೂ ಆಗಿ ಅವರ ಸಂಖ್ಯೆಯು ಬೆಳೆಯುವಂತೆ ಪರಿಸ್ಥಿತಿಯನ್ನು ಮಾರ್ಪಾಟ ಮಾಡುವ ಶಕ್ತಿಯು ನಮ್ಮ ಭಾಂಡಾರಗಳಲ್ಲಿ ವರ್ಧಿಸಬೇಕು. ಗ್ರಾಹಕರು ಸ್ವತಃ ನೂಲು ತೆಗೆಯಲು ಪ್ರೇರಿತರಾಗುವಂತೆ ಪ್ರಯತ್ನ ಮಾಡಬೇಕು. ಆದರೆ 'ಯೇನಕೇನ ಪ್ರಕಾರೇಣ' ಅವರು ನೂಲು ತಂದುಕೊಡಲಿ ಹಾಗೂ ನಮ್ಮ ಖಾದಿಯು ಮಾರುತ್ತಿರಲಿ ಎಂಬೀ ಎತ್ತುಗಡೆ ಮಾತ್ರ ಮಾಡಕೂಡದು. ನಮ್ಮ ತಳವು ಭದ್ರವಾಗಿರಬೇಕು.

ಪ್ರಮಾಣಪತ್ರದ ಬಗ್ಗೆ ವಿಧಿಃ

ಚರಕ ಸಂಘದಿಂದ ಪ್ರಮಾಣಪತ್ರ ಪಡೆದು ಖಾದೀ ಉತ್ಪತ್ತಿ ಹಾಗೂ ಮಾರಾಟ ಮಾಡುತ್ತಿರುವ ವೈಯಕ್ತಿಕ ಉದ್ಯೋಗವು ಹೊಸ ಕಾರ್ಯ ಪ್ರಣಾಲಿಯನ್ವಯ ಇನ್ನು ಮುಂದೆ ನಡೆಯುಗೊಡುವುದು ಯೋಗ್ಯವಾಗಲಾರದು. ಅದು ಕಾರಣ ಈ ಮೊದಲು ಪ್ರಮಾಣಪತ್ರ ಪಡೆದಿದ್ದ ವ್ಯಕ್ತಿಗಳ ಪ್ರಮಾಣ ಪತ್ರವು ತಾ|| ೩೦ ಜೂನ ೧೯೪೪ರ ಮುಂದೆ ನಡೆಯಲಾರದು. ಪ್ರಮಾಣ

ಪತ್ರದ ನಿಯಮಗಳಂತೆ ೧೯೪೫-೪೬ನೇ ಸಲುವಾಗಿ ಅವುಗಳನ್ನು ಕೊಡಲಾಗುವದಿಲ್ಲ. ತಾ॥ ೩೦-೬-೪೫ರ ಮುಂದೆ ವೈಯಕ್ತಿಕ ಪ್ರಮಾಣಪತ್ರದ ಬಲದಿಂದ ಯಾರೂ ಖಾದಿಯ ವ್ಯವಸಾಯ ಮಾಡಲಾರರು. ಯಾವನೊಬ್ಬ ಬಹಳ ಹಳೇ ಪ್ರಮಾಣಿತ ವ್ಯಕ್ತಿಗೆ ತಾ॥ ೩೦ನೇ ಜೂನ ೧೯೪೫ರ ಅವಧಿಯಲ್ಲಿ ತನ್ನ ಕಾರ್ಯವನ್ನು ಆವರಿಸುವದು ಸಾಧ್ಯವಾಗದೆಂದು ಪ್ರಾಂತೀಯ ಮಂತ್ರಿಯು ಮನವರಿಕೆಯಾದರೆ ಅಂಥ ವ್ಯಕ್ತಿಗೆ ಮುಂದೆ ಆರು ತಿಂಗಳವರೆಗೆ ಅಂದರೆ ತಾ॥ ೩೧-೧೨-೪೫ರ ವರೆಗೆ ಹೊಸ ಪ್ರಮಾಣಪತ್ರ ಕೊಡಬಹುದು.

ಇನ್ನು ಪ್ರಮಾಣಪತ್ರಗಳು ಹಳೆಯ ಅಥವಾ ಹೊಸ ಪರೋಪಕಾರಿ ಸಾರ್ವಜನಿಕ ಸಂಸ್ಥೆಗಳಿಗಾಗಿಯೆ ಉಳಿಯುವವು. ಈ ಎಲ್ಲ ಸಂಸ್ಥೆಗಳು ತಮ್ಮ ಕಾರ್ಯವನ್ನು ಹೊಸ ಕಾರ್ಯ ಪ್ರಣಾಲಿಯಂತೆ ಅಳವಡಿಸಬೇಕಾಗುವುದು ಹಾಗೂ ಹಳ್ಳಿಯ ಸೇವೆಯಲ್ಲಿ ಪರಿವರ್ತನ ಗೊಳಿಸಬೇಕಾಗುವುದು. ಚರಕ ಸಂಘದ ಹೊಸ ಕಾರ್ಯ ಸಂಘಟನೆಗೆ ಯಾವ ತರದ ಬಾಧೆ ತಗಲು ವಂತೆ ತಮ್ಮ ಕಾರ್ಯವನ್ನು ಅವು ಎಂದೂ ಮಾಡಕೂಡದು. ಈ ದೃಷ್ಟಿಯಿಂದ ಪ್ರಮಾಣಪತ್ರದ ನಿಯಮಗಳಲ್ಲಿ ತಕ್ಕ ತಿದ್ದು ಪಡೆ ಮಾಡಲಾಗಿದೆ. ಸಂಸ್ಥೆಗಳು ಇನ್ನುಮುಂದೆ ಆ ತಿದ್ದುಪಡೆ ಹೊಂದಿದ ನಿಯಮಗಳಂತೆ ಕಾರ್ಯ ಮಾಡಬೇಕಾಗುವುದು.

ಖಾದೀ ಶಿಕ್ಷಣದ ಯೋಜನೆಃ

ಗೊತ್ತುವಳಿಯ ೩ನೆಯ ಕಲಮಿನನ್ವಯ, ವಿದ್ಯಾಲಯಗಳಲ್ಲಿ ಆವಶ್ಯಕ ಪರಿವರ್ತನ ಹಾಗೂ ಪರಿವರ್ಧನ ಮಾಡುವುದೂ, ಹೊಸ ವಿದ್ಯಾಲಯಗಳನ್ನು ತೆರೆಯುವುದೂ ಅವಶ್ಯವಾದುದೆಂದೂ ಬಗೆಯಲಾಗಿದೆ. ಯಾಕಂದರೆ ಹೊಸ ಯೋಜನೆಯು ಬಹು ಮಟ್ಟಿಗೆ ಶಿಕ್ಷಣದ ಮೇಲೆ ಕೈಯೂರಿ ನಿಂತಿದೆ. ಇದುಕಾರಣ ಶಿಕ್ಷಣ

ಸಮಿತಿಯು ಅನ್ಯ ಸಂಘಗಳ ಸಹಕಾರ ಪಡೆದು ಸದ್ಯದ ಪರಿಸ್ಥಿತಿಯಲ್ಲಿ ಎರಡು ವರ್ಷಗಳ ಪ್ರಾವೇಶಿಕ ಅಭ್ಯಾಸಕ್ರಮವನ್ನು ಹಾಕಿ-ಕೊಟ್ಟಿರುವುದು. ಈ ಅಭ್ಯಾಸಕ್ರಮವು ಎಲ್ಲ ಸಂಘಗಳಿಗೂ ಸರ್ವಸಾಮಾನ್ಯವಾದದ್ದಿರುವುದು. ಎರಡು ವರ್ಷಗಳು ಮುಗಿದನಂತರ ಪ್ರತಿಯೊಂದು ಸಂಘವು ವಿಶಿಷ್ಟ ವಿಷಯಗಳನ್ನು ಅಭ್ಯಸಿಸಬೇಕಾಗುವುದು. ಈ ಮುಂದಿನ ಅಭ್ಯಾಸಕ್ರಮವನ್ನು ಪ್ರತಿಯೊಂದು ಸಂಸ್ಥೆಯು ತನ್ನ ಮಟ್ಟಿಗೆ ತಾನೇ ತಯಾರಿಸಿಕೊಳ್ಳಬೇಕು.

ಎರಡು ವರ್ಷಗಳ ಪ್ರಾವೇಶಿಕ ಅಭ್ಯಾಸಕ್ರಮ, ವಿದ್ಯಾರ್ಥಿಗಳ ಪ್ರವೇಶದ ಬಗ್ಗೆ ಆವಶ್ಯಕವಾದ ನಿಯಮ ಹಾಗೂ ಅವರ ಖರ್ಚಿನ ವಿಷಯಕ ಯೋಜನೆ ಮುಂತಾದ್ದನ್ನು ಬೇರೆ ಮುದ್ರಿಸಲಾಗಿದೆ. ಅವುಗಳನ್ನು ಚರಕ ಸಂಘದ ಕೇಂದ್ರ ಕಚೇರಿಯಿಂದ ಪಡೆಯಬಹುದು.

ಅಂದರೆ ಸಂಘದ ಅಧಿಕಾರಿಗಳು ಬೇರೆ ಬೇರೆ ಕಾರ್ಯಕರ್ತರೇ ಮೊದಲಾದವರ ಶಿಕ್ಷಣ ವಿಷಯದಲ್ಲಿ ಪೂರ್ಣ ಲವಲವಿಕೆಯನ್ನು ತಳೆದು ಆ ಬಗ್ಗೆ ಆಲೋಚಿಸುತ್ತಿರುವುದು ಅವಶ್ಯವಾದುದು. ಈ ಬಗ್ಗೆ ನಾವು ಉದಾಸೀನರಾದರೆ ನಮ್ಮ ವಿಕಾಸಕ್ಕೆ ಹಾನಿ ತಟ್ಟುವದು. ಶಿಕ್ಷಣ ಸಮಿತಿಯು ಶಿಕ್ಷಣದ ವಿಷಯವಾಗಿ ಯಾವ ಅಭಿಲಾಷೆ ಅಥವಾ ಗುರಿ (ಆಶೆ) ಯನ್ನು ಹಿಡಿಯುತ್ತದೆಯೊ ಅದರೊಂದಿಗೆ ಪ್ರಾಂತದ ಬಹುಜನ ಕಾರ್ಯಕರ್ತರು ಪೂರ್ಣ ಪರಿಚಿತರಿರುವದಿಲ್ಲ. ಇದು ಕಾರಣ ಪ್ರಾಂತೀಯ ವಿದ್ಯಾರ್ಥಿಗಳನ್ನು ಸೇವಾಗ್ರಾಮದ ಖಾದೀ ವಿದ್ಯಾಲಯಕ್ಕೆ ಕರೆಯಲಾಗಿದೆ. ಅಲ್ಲಿ ಪೂರ್ಣ ಶಿಕ್ಷಣ ಪಡೆದ ಮೇಲೆ ಅವರು ತಮ್ಮ ತಮ್ಮ ಪ್ರಾಂತಕ್ಕೆ ಹೋಗಿ ಅಲ್ಲಿ ವಿದ್ಯಾಲಯವನ್ನು ತೆರೆಯುವ ಉಪಕ್ರಮ ಮಾಡುವರು.

ಸೇವಾಗ್ರಾಮ- ಖಾದೀ- ವಿದ್ಯಾಲಯಕ್ಕೆ ತಮ್ಮ ಕಾರ್ಯಕರ್ತರನ್ನು ಕಳಿಸುವ ಬಗ್ಗೆ ಮಂತ್ರಿಗಳು ಈಗಿನಿಂದಲೆ ವಿಚಾರ ಮಾಡುವುದು ಅವಶ್ಯ. ಯಾರು ಸಂಘದಲ್ಲಿ ಏನಿಲ್ಲೆಂದರು ಎರಡು ವರ್ಷ ಸೇವೆ ಮಾಡುತ್ತ ಬಂದಿರುವರೋ, ಯಾರ ಮೇಲೆ ಅಷ್ಟೊಂದು ಪರಿವಾರದ ಹೊಣೆ ಇರುವದಿಲ್ಲವೋ, ಹಾಗೂ ಯಾರ ಶರೀರ, ಮನಸ್ಸು, ಶಿಕ್ಷಣ ಇವು ಈ ಅಭ್ಯಾಸಕ್ಕೆ ಅನುರೂಪವಾಗಿರುವವೋ, ಅಂಥವರಲ್ಲಿಯೇ ಸದ್ಯಕ್ಕೆ ಶಿಕ್ಷಣ ಪಡೆಯುವ ಕುರಿತು ಕಾರ್ಯಕರ್ತರನ್ನು ಆರಿಸಬೇಕಾಗುವುದು. ಅಂಥ ಕಾರ್ಯಕರ್ತರು ತಾವೇ ಮಂತ್ರಿಗಳಿಗೆ ತಮ್ಮ ಅರ್ಜಿಗಳನ್ನು ಕಳಿಸಬಹುದು. ಸೇವಾಗ್ರಾಮ ವಿದ್ಯಾಲಯದ ದಿನಚರ್ಯೆ, ನಿಯಮ ಮುಂತಾದವುಗಳ ವಿಷಯವಾಗಿ "ಖಾದೀ ಜಗತ್ತಿನ" ಶಿಕ್ಷಣಾಂಕದಲ್ಲಿ ವಿವರಗಳನ್ನು ಕೊಡಲಾಗಿದೆ. ಮಂತ್ರಿಗಳು ಹಾಗೂ ಸೇವಾಗ್ರಾಮ ವಿದ್ಯಾಲಯದಲ್ಲಿ ಸೇರಲಿಚ್ಛಿಸುವ ಕಾರ್ಯಕರ್ತರು ಆ ನಿಯಮಗಳನ್ನು ಚೆನ್ನಾಗಿ ಓದಿ ತಿಳಿದುಕೊಳ್ಳಬೇಕು. ಯಾರದಾದರು ದೇಹಾರೋಗ್ಯದ ವಿಷಯವಾಗಿ ಸ್ವಲ್ಪ ಸಂದೇಹ ತೋರಿದರೆ ಡಾಕ್ಟರರಿಂದ ಅವರ ಪ್ರಕೃತಿಯನ್ನು ಪರೀಕ್ಷಿಸಿ ಅವರು ನಿರೋಗಿಯಾಗಿರುವರೆಂಬ ಬಗ್ಗೆ ಮನವರಿಕೆ ಮಾಡಿಕೊಂಡು ಪ್ರಾಂತೀಯ ಅಧಿಕಾರಿಗಳು ಅವರನ್ನು ವಿದ್ಯಾಲಯಕ್ಕೆ ಕಳಿಸಬೇಕು.

ವಿದ್ಯಾರ್ಥಿಗಳು ಪಡೆದಿರುವ ಶಿಕ್ಷಣದ ಬಗ್ಗೆ ಯಾದರೂ ಶಾಖೆಗಳು ಪೂರ್ಣ ಆಲೋಚನೆ ಮಾಡಿರಬೇಕು. ಹೊಸ ಅಭ್ಯಾಸ ಕ್ರಮದಲ್ಲಿ ವಿದ್ಯಾರ್ಥಿಯ ಯೋಗ್ಯತೆಯು ಇಂಗ್ಲೀಷ ಬಿಟ್ಟು ಉಳಿದ ವಿಷಯಗಳಲ್ಲಿ ಕನಿಷ್ಟ ಮ್ಯಾಟ್ರಿಕ್ ಅಥವಾ ವಿನೀತ ಇಯತ್ತೆಯ ಮಟ್ಟಗಾದರು ಇರತಕ್ಕದ್ದು. ರಾಷ್ಟ್ರ ಭಾಷೆಯ ಜ್ಞಾನವಂತೂ ಚೆನ್ನಾಗಿರಬೇಕೆಂಬುದಂತೂ ಸರಿಯೆ. ಇವುಗಳ

ಹೊರತಾಗಿ ಗಾಂಧಿ-ವಿಚಾರ, ರಚನಾತ್ಮಕ ಕಾರ್ಯಕ್ರಮ, ಕಾಂಗ್ರೆಸದ ಇತಿಹಾಸ ಮುಂತಾದ ಸಾಹಿತ್ಯಗಳನ್ನು ಓದಿರಬೇಕು. ಒಂದುವೇಳೆ ಮೊದಲೇ ಓದಿರದಿದ್ದರೆ ವರ್ಗದಲ್ಲಿ ಪ್ರವೇಶ ಪಡೆಯುವ ಪೂರ್ವದಲ್ಲಿಯಾದರೂ ಓದಿಕೊಂಡಿರತಕ್ಕದ್ದು. ಈ ಎಲ್ಲ ವಿಷಯಗಳಲ್ಲಿ ವಿದ್ಯಾರ್ಥಿಗಳ ಪ್ರವೇಶ ಪರೀಕ್ಷೆಯನ್ನು ತೆಗೆದು ಕೊಂಡೇ ಅವರನ್ನು ವಿದ್ಯಾಲಯಕ್ಕೆ ಕಳಿಸಬೇಕು. ಯಾಕಂದರೆ ಈ ಯೋಗ್ಯತೆ ಯಿಲ್ಲದಿದ್ದರೆ ಈ ವರ್ಗದ ಶಿಕ್ಷಣ ವಿಷಯಗಳನ್ನು ವಿದ್ಯಾರ್ಥಿಗಳು ಸರಿಯಾಗಿ ಆಕಲನ ಮಾಡಿಕೊಳ್ಳಲಾರರು.

ಯಾರು ಸಂಘದಲ್ಲಿ ಎರಡು ವರ್ಷಗಳ ವರೆಗೆ ಸೇವೆ ಮಾಡಿಲ್ಲವೋ, ಯಾರು ಸಂಘದಲ್ಲಿ ಸೇರಿಯೆ ಇಲ್ಲವೋ, ಅಂಥವರು ವಿದ್ಯಾಲಯದಲ್ಲಿ ಪ್ರವೇಶವನ್ನಪೇಕ್ಷಿಸಿದರೆ, ಪ್ರಾಂತೀಯ ಮಂತ್ರಿಗಳ ಮುಖಾಂತರ ಸಂಘದ ಮುಖ್ಯ ಕಚೇರಿಗೆ ತಮ್ಮ ಅರಿಕೆಯೋಲೆಯನ್ನು ಕಳಿಸಬೇಕು. ಶಿಕ್ಷಣ ಸಮಿತಿಯಾಗಲಿ, ಅಥವಾ ಅದರ ಪ್ರತಿನಿಧಿಯಾಗಲಿ ಆ ಬಗ್ಗೆ ಯೋಗ್ಯ ವಿಚಾರ ಮಾಡಿ ಅವರಿಗೆ ಪ್ರವೇಶ ಕಲ್ಪಿಸಿ ಕೊಡುವರು.

ಹೊಸ ಕಾರ್ಯಪ್ರಣಾಲಿಯ ಸಂಘಟನೆ:

ಹಳ್ಳಿಯಲ್ಲಿಯ ಸಮಗ್ರ ಸೇವೆಯ ಕಾರ್ಯವನ್ನು ಯಾವುದೊಂದು ಹಳ್ಳಿಯಲ್ಲಿ ಅಥವಾ ಸುತ್ತಮುತ್ತಲಿನ ಹಲವು ಹಳ್ಳಿಗಳನ್ನು ಕೂಡಿಸಿಕೊಂಡು ಕೈಕೊಳ್ಳಬಹುದು. ಈ ರೀತಿ ಬೇರೆ ಬೇರೆ ಕೇಂದ್ರಗಳು ನಿರ್ಮಿತವಾಗಲು ಅವುಗಳಲ್ಲಿ ಪರಸ್ಪರ ಸಹಯೋಗವನ್ನುಂಟುಮಾಡುವ ಕುರಿತು ಯಾವುದೊಂದು ದೊಡ್ಡ ಕ್ಷೇತ್ರವನ್ನು ಸಂಘಟಿಸುವ ಅವಶ್ಯಕತೆ ಒಂದುವೇಳೆ ತೋರಬಹುದು. ಈ ಸಂಘಟನ ಕ್ಷೇತ್ರವು ಸಾವಕಾಶವಾಗಿ ಹೆಚ್ಚೆಚ್ಚು ವಿಸ್ತಾರವಾಗುತ್ತ ಹೋಗಬಹುದು. ಆದರೆ ಈ ವಿಸ್ತಾರವು

ಜಿಲ್ಹೆಯ ಮೇರೆಯನ್ನು ಮಾತ್ರ ಮಿಕ್ಕಲಾರದು. ಈ ಬಗ್ಗೆ ನಿರ್ಣಯದ ೪ನೆಯ ಕಲಮು ಕೆಳಗಿನಂತಿದೆಃ—

“ಒಂದು ಜಿಲ್ಹೆಯ ಪರಿಮಿತಿಯನ್ನು ಮಿಕ್ಕದಷ್ಟು ಕ್ಷೇತ್ರದ ಜನರು ಹೊಸ ಯೋಜನೆಯಂತೆ ಕಾರ್ಯ ಮಾಡುವ ಕುರಿತು ಸ್ವಾತಂತ್ರ್ಯ ಹಾಗೂ ಸ್ವಾಯತ್ತತೆಯನ್ನು ಪಡೆಯಲಿಚ್ಛಿಸಿದರೆ, ಅದನ್ನು ಸಂಘವು ಒಪ್ಪುವದಾದರೆ, ಅಂಥ ಕ್ಷೇತ್ರದಲ್ಲಿ ಚರಕ ಸಂಘವು ಪ್ರತ್ಯಕ್ಷ ಕಾರ್ಯ ಮಾಡದೆ ಎಲ್ಲಿಯವರೆಗೆ ಅಲ್ಲಿಯ ಕಾರ್ಯವು ಸಂಘದ ಧ್ಯೇಯ ಧೋರಣೆಗನುಸಾರವಾಗಿ ನಡೆಯುವದೋ, ಅಲ್ಲಿಯ ವರೆಗೆ ಅದಕ್ಕೆ ಮಾನ್ಯತೆಯನ್ನು, ನೈತಿಕ ಬೆಂಬಲವನ್ನು ಕೊಡತಕ್ಕದ್ದು.” ಈ ಮೇರೆಗೆ ಮಾನ್ಯತೆ ಕೊಡುವ ವಿಷಯದಲ್ಲಿ ಸಂಘವು ಕೆಳಗಿನ ನಿಯಮುವನ್ನು ಸ್ವೀಕರಿಸಿದೆಃ—

ಮಾನ್ಯತೆಯ ನಿಯಮ:

(೧) ಯಾವ ಸಂಸ್ಥೆಗಳು ತಮ್ಮ ಕೇಂದ್ರದಲ್ಲಿಯ (ಅದು ಜಿಲ್ಹೆಯ ಮೇರೆಯನ್ನು ಎಂದೂ ಮಿಕ್ಕತಕ್ಕದ್ದಲ್ಲ) ಖಾದೀ, ಅನ್ಯಗ್ರಾಮೋದ್ಯೋಗ, ಮೂಲಶಿಕ್ಷಣ, ಗೋಸೇವೆ, ಬೇಸಾಯ ಸುಧಾರಣೆ, ಅಸ್ಪೃಶ್ಯತಾನಿವಾರಣೆ ಮುಂತಾದ ರಚನಾತ್ಮಕ ಕಾರ್ಯಗಳ ಮುಖಾಂತರ ಹಳ್ಳಿಗರ ಸಮಗ್ರ ಸೇವೆಯನ್ನು ನಿರ್ವಹಿಸುತ್ತ ಪರಸ್ಪರ ಸಹಕಾರ ಹಾಗೂ ಆರ್ಥಿಕ ಸ್ವಾವಲಂಬನ ತತ್ವದಂತೆ ಜೀವನವನ್ನು ಸಿದ್ಧಗೊಳಿಸಲು ಯತ್ನಿಸುವುದು ಹಾಗೂ ಅವರ ಆರ್ಥಿಕ, ಸಾಮಾಜಿಕ, ನೈತಿಕ ಮೊದಲಾದ ಸರ್ವಾಂಗೀಣ ಉನ್ನತಿಯನ್ನು ಮಾಡುವದು, ಇವುಗಳನ್ನೆ ಧ್ಯೇಯವನ್ನಾಗಿಟು

ಕೊಂಡು ಕಾರ್ಯ ಮಾಡುತ್ತಿರುವವೋ ಅಂಥ ಸಂಸ್ಥೆಗಳಿಗೇ ಮಾನ್ಯತೆ ಕೊಡಲಾಗುವುದು.

(೨) ಆ ಸಂಸ್ಥೆಗಳು ಪರೋಪಕಾರೀ ಸಾರ್ವಜನಿಕ ಸೇವಾ ಸಮಿತಿಗಳಾಗಿ ರೂಪುಗೊಂಡು ರಜಿಸ್ಟರ ಆಗಿರಬೇಕು. ಸಮಿತಿಯ ಸದಸ್ಯರ ಸಂಖ್ಯೆ ೧೧ಕ್ಕೆ ಮಿಕ್ಕಕೂಡದು ಹಾಗೂ ಅವರಲ್ಲಿ ಕನಿಷ್ಟ ಮೂರು ಜನರಾದರು ಪ್ರತ್ಯಕ್ಷ ಹಳ್ಳಿಯಲ್ಲಿ ನೆಲಿಸಿ ತಮ್ಮ ಕಾಲ ಹಾಗೂ ಶಕ್ತಿ ಸರ್ವಸ್ವವನ್ನು ಗ್ರಾಮಸೇವೆಯಲ್ಲಿ ತೊಡಗಿಸಿರಬೇಕು. ಇಂಥ ಸದಸ್ಯರಲ್ಲಿ ಗ್ರಾಮೋದ್ಯೋಗ ಸಂಘ, ತಾಲೀಮಿ ಸಂಘ, ಚರಕ ಸಂಘ, ಗೋಸೇವಾ ಸಂಘ, ಹಾಗೂ ಹರಿಜನ ಸೇವಕ ಸಂಘ ಈ ಸಂಘಗಳಲ್ಲಿ ಪ್ರತ್ಯಕ್ಷ ಕಾರ್ಯ ಮಾಡಿದ ಹಲ ಕೆಲವು ವ್ಯಕ್ತಿಗಳು ಸಮಾವಿಷ್ಟವಾದರೆ ಹೆಚ್ಚು ಒಳಿತು. ಅಹಿಂಸಾತ್ಮಕ ಸ್ವಾವಲಂಬೀ ಸಮಾಜ ರಚನೆಯ ಮೇಲೆ ಎಲ್ಲ ಸದಸ್ಯರ ವಿಶ್ವಾಸ ವಿರತಕ್ಕದ್ದು. ಅವರು ಪ್ರತಿತಿಂಗಳು ತಪ್ಪದೆ ೭॥ ಲಡಿ ನೂಲು ತೆಗೆಯುತ್ತಿರಬೇಕು. Habitual ಖಾದೀ ಧಾರಿಗಳಾಗಿರಬೇಕು. ಅಲ್ಲದೆ ಉಳಿದ ವಸ್ತುಗಳನ್ನು ಕೂಡಾ ಕೈಲಾದಮಟ್ಟಿಗೆ ಗ್ರಾಮೋದ್ಯೋಗಗಳಲ್ಲಿ ನಿರ್ಮಿತವಾದವುಗಳನ್ನೇ ಉಪಯೋಗಿಸುತ್ತಿರಬೇಕು.

(೩) ಕಾರ್ಯ ಕೈಕೊಳ್ಳಬೇಕಾದ ಕ್ಷೇತ್ರದಲ್ಲಿಯ ಜನಸಂಖ್ಯೆಯ ಪರಿಮಾಣದಿಂದ ಒಂದು ಸಾವಿರ ಕುಟುಂಬಗಳಲ್ಲಿ ಕನಿಷ್ಟ ಒಂದು ಕುಟುಂಬದ ಒಡೆಯನಾದರು ವಸ್ತ್ರ ಸ್ವಾವಲಂಬಿ ಅಂದರೆ ಪ್ರತಿತಿಂಗಳು ತಪ್ಪದೆ ೭॥ ಲಡಿ ನೂಲು ತೆಗೆಯತಕ್ಕವನಾಗಿರಬೇಕು.

ಹಾಗೂ ಆ ಕುಟುಂಬದ ಇತರ ಪರಿವಾರದವರು ಸಂಪೂರ್ಣ Habitual ಖಾದೀಧಾರಿಗಳಾಗಿರ ತಕ್ಕದ್ದು. ಇದರಲ್ಲಿ ಕೂಲಿಗಾಗಿ ನೂಲುವವರು ಸಮಾವೇಶವಾಗಲಾರರು ಹಾಗೂ ಸಂಸ್ಥೆಗಳ ವ್ಯಕ್ತಿಗಳೂ ಗಣಿಸಲ್ಪಡಲಾರರು.

(೪) ಸದರ ಕ್ಷೇತ್ರದಲ್ಲಿ ಖಾದೀ ಸರಂಜಾಮುವನ್ನು ತಯಾರಿಸುವ ಯೋಗ್ಯ ಯೋಜನೆ ಇರಬೇಕು.

(೫) ಕ್ಷೇತ್ರದಲ್ಲಿಯ ಎಲ್ಲ ನೂಲನ್ನು ಅಲ್ಲಿಯೆ ನೇಯಿಸುವ ಏರ್ಪಾಟು ಆಗತಕ್ಕದ್ದು.

(೬) ತಮ್ಮ ಯೋಜನೆಯನ್ವಯ ಆವಶ್ಯಕ ಸಾಧನ ಸಾಮುಗ್ರಿಗಳನ್ನು ಒಟ್ಟಾರೆ ಸಂಗ್ರಹಿಸಬೇಕು.

(೭) ಸದರ ಕ್ಷೇತ್ರದ ಖಾದೀ ಹಾಗೂ ಉಳಿದ ಗ್ರಾಮೋದ್ಯೋಗಗಳ ನೂಲನ್ನು ಮಾರಾಟ ಮಾಡುವ ಕುರಿತು ಜಿಲ್ಹೆಯ ಹೊರಗೆ ಕಳಿಸಕೂಡದು ಹಾಗೂ ಚರಕ ಸಂಘದ ಅಪ್ಪಣೆಯನ್ನು ಪಡೆಯದೆ ಹೊರಗಿನಿಂದ ಯಾವ ನೂಲನ್ನೂ ಕ್ಷೇತ್ರದಲ್ಲಿ ತರಿಸಕೂಡದು.

(೮) ಕೂಲಿಗಾಗಿ ನೂಲುವವರ ವಸ್ತ್ರ-ಸ್ವಾವಲಂಬನವು ಸ್ವೇಚ್ಛಾಮೂಲಕವಾಗಿರತಕ್ಕದ್ದಲ್ಲದೆ ಅವರ ಕೂಲಿಯಲ್ಲಿಯ ಕೆಲವಂಶವನ್ನು ಮುರಿದುಕೊಂಡು ಅದರಲ್ಲಿ ಅವರಿಗೆ ಬಟ್ಟೆಯನ್ನು ಕೊಡುವ ಮೂಲಕವಾಗಿರಕೂಡದು.

(೯) ಸಂಸ್ಥೆಯ ಲೆಕ್ಕಪತ್ರಗಳನ್ನು ವಿವರ ಸಹಿತ ಸಂಪೂರ್ಣ ಸರಿಯಾಗಿ ದಿನಾಲು ತಪ್ಪದೆ ಬರೆದಿರಬೇಕು. ಚರಕ

ಸಂಘದವರು ನಿಯಮಿಸಿದ ಕಾರ್ಯಕರ್ತರಿಗೆ ಲೆಕ್ಕ ವನ್ನು ತೋರಿಸಬೇಕಾಗುವುದು. ಚರಕಸಂಘದ ಸೂಚನೆಯ ಮೇರೆಗೆ ಇತರರಿಗೂ ತೋರಿಸಬೇಕಾಗುವುದು.

ಸಮ್ಮಿಲಿತ ಸಮಿತಿ.

ಚರಕ ಸಂಘ, ಗ್ರಾಮೋದ್ಯೋಗ ಸಂಘ, ತಾಲೀಮಿಸಂಘ, ಹರಿಜನ ಸೇವಕ ಸಂಘ, ಗೋಸೇವಾ ಸಂಘ, ಈ ಐದೂ ಸಂಘಗಳ ಸಮ್ಮಿಲಿತ ಸಮಿತಿಯೊಂದನ್ನು ಏರ್ಪಡಿಸಬೇಕೆಂದು ನಿರ್ಣಯಿಸಲಾಗಿದೆ. ಪ್ರತಿಯೊಂದು ಸಂಘದಿಂದ ಇಬ್ಬಿಬ್ಬ ಸದಸ್ಯರನ್ನು ಸಮಿತಿಯಲ್ಲಿ ತೆಗೆದುಕೊಳ್ಳಬೇಕೆಂಬ ವಿಚಾರವು ಪ್ರಾರಂಭದಲ್ಲಿ ಇದ್ದಿತು. ಮೊಟ್ಟಮೊದಲು ಅಂಥ ಸಮಿತಿಯು ರಚಿಸಲ್ಪಟ್ಟಿತ್ತು. ಆದರೆ ಒಂದು ಸಂಘದಿಂದ ಒಬ್ಬ ಸದಸ್ಯನು ಸಮಿತಿಯ ಮೇಲೆ ಬಂದರೆ ಸಾಕು ಕಾರ್ಯವು ಸುಗಮವಾಗಿ ಸಾಗುವದೆಂದು ಹಿಂದಿನಿಂದ ಕಂಡುಬಂದಿತು. ಈಗ ಕೆಳಗಿನ ಸದ್ಗೃಹಸ್ಥರ ಸಮಿತಿಯು ನಿರ್ಮಿತವಾಯಿತುঃ—

(೧) ಪೂಜ್ಯ ಗಾಂಧೀಜಿ— ಅಧ್ಯಕ್ಷ ಸಮ್ಮಿಲಿತ ಸಮಿತಿ.

(೨) ಚರಕ ಸಂಘದ ವತಿಯಿಂದ—ಶ್ರೀಕೃಷ್ಣದಾಸ ಜಾಜೂ, ಮಂತ್ರಿ, ಅಖಿಲಭಾರತ ಚರಕಸಂಘ.

(೩) ಗ್ರಾಮೋದ್ಯೋಗ ಸಂಘದಿಂದ— ಶ್ರೀ. ಜೆ. ಸಿ. ಕುಮಾರಪ್ಪ, ಮಂತ್ರಿ ಅ.ಭಾ. ಗ್ರಾಮೋದ್ಯೋಗ ಸಂಘ.

(೪) ತಾಲೀಮಿ ಸಂಘದಿಂದ— ಶ್ರೀಮತಿ ಆಶಾದೇವಿಜಿ, ಸಹಾಯಕ ಮಂತ್ರಿ ಹಿಂದುಸ್ತಾನಿ ತಾಲೀಮಿಸಂಘ

(೫) ಹರಿಜನ ಸೇವಕ ಸಂಘದಿಂದ— ಶ್ರೀ ಠಕ್ಕರಬಾಪ್ಪಾ ಮಂತ್ರಿ ಹರಿಜನ ಸೇವಕ ಸಂಘ.

(೬) ಗೋಸೇವಾ ಸಂಘದಿಂದ—ಶ್ರೀ. ಯ. ಮಾ. ಪಾರಸೇಕರ.

(೭) ಶ್ರೀ. ನರಹರೀಭಾಯಿ ಫರೀಖ, ಮಂತ್ರಿ, ಸಮ್ಮಿಲಿತ ಸಮಿತಿ.

ಐದೂ ಸಂಘಗಳ ಕಾರ್ಯವು ಸತ್ಯ ಹಾಗೂ ಅಹಿಂಸೆ ಇವುಗಳ ದೃಷ್ಟಿಯಿಂದ ಸಾಗಿದೆಯೋ ಇಲ್ಲವೋ ಎಂಬುದನ್ನು ನಿರೀಕ್ಷಿಸುತ್ತಿರುವುದೂ ರಚನಾತ್ಮಕ ಕಾರ್ಯದ ಬಗ್ಗೆ ಉಪಯುಕ್ತ ಸೂಚನೆಗಳನ್ನು ಹೊರಡಿಸುತ್ತಿರುವುದೂ ಈ ಸಮಿತಿಯ ಮುಖ್ಯ ಕಾರ್ಯವಾಗಿರುವದು.

*

ಮೂರನೆಯ ಸಭೆ.

ಸಂಘದ ಪ್ರಸ್ತುತ ನಿರ್ಣಯವು ಕಾರ್ಯಕರ್ತರಿಗೆ ತಿಳಿದೊಡನೆ ಒಳ್ಳೇ ಗೊಂದಲವೇ ಎದ್ದಿತು. ಗೊತ್ತುವಳಿಯ ಬಗ್ಗೆ ಕಾರ್ಯಕರ್ತರಲ್ಲುಂಟಾದ ಶಂಕೆಗಳನ್ನು ಅವರ ಸಮಕ್ಷಮ ಪರಿಹರಿಸುವದೇ ಉಚಿತವಾದುದೆಂದು ಅನಿಸಹತ್ತಿತು. ಈ ವಿಚಾರದಿಂದಲೆ ಪ್ರಾಂತೀಯ 'ಮಂತ್ರಿಗಳ ಹಾಗೂ ಇತರ ಪ್ರಮುಖ ಖಾದೀ ಕಾರ್ಯಕರ್ತರ ಸಭೆಯೊಂದನ್ನು ಮಾರ್ಚ ತಾ|| ೨೬ನೇ ದಿನ ಸೇವಾಗ್ರಾಮದಲ್ಲಿ ಕರೆಯಲಾಯಿತು. ಸಭೆಯು ಮೂರು ದಿನ ನಡೆಯಿತು. ಪೂಜ್ಯ ಗಾಂಧೀಜಿಯವರು ಸಭೆಯಲ್ಲಿ ಮಾರ್ಚ ತಿಂಗಳ ತಾ|| ೨೪, ೨೫ ನೆಯ ದಿನ ಮಾಡಿದ ಭಾಷಣಗಳ ಸಾರಾಂಶವನ್ನು ಈ ಕೆಳಗೆ ಕೊಡಲಾಗಿದೆ.

"ಸಭೆಯ ಯಾವತ್ತು ಕಾರ್ಯಕಲಾಪಗಳಲ್ಲಿ ಭಾಗವಹಿಸುವದು ನನ್ನಿಂದಾಗದ ಬಗ್ಗೆ ನನಗೆ ಖೇದವೆನಿಸುತ್ತದೆ. ಇದಕ್ಕೆ ಕಾರಣವೆಂದರೆ ನಾನು ೧೨೫ ವರ್ಷಗಳ ವರೆಗೆ ಬದುಕಲಿಚ್ಛಿಸುತ್ತಿರುವೆನು. ಅಂದ ಮೇಲೆ ಹೆಚ್ಚು ಸಮಯ ದೇಶಸೇವೆಯನ್ನು ಮಾಡುವದು ನನಗೆ ಶಕ್ಯವಾಗುವುದು. ಅಗಷ್ಟ ತಿಂಗಳಲ್ಲಿ ಸೇರಿದ ಆಲ್ ಇಂಡಿಯಾ ಕಾಂಗ್ರೆಸ ಕಮಿಟಿಯ ಸಭೆಯಲ್ಲಿ ೧೨೫ ವರ್ಷ ನಾನು ಬದುಕತಕ್ಕವನೆಂದು ಹೇಳಿದುದು ಚೇಷ್ಟೆಯ ಮಾತಾಗಿರಲಿಲ್ಲ. ಯಾಕಂದರೆ ಸತ್ಯಾಗ್ರಹಿಯ ಬಾಯಿಂದ ಅರಿಯದೆ, ತಿಳಿಯದೆ ಯಾವ ಶಬ್ದವೂ ಹೊರಬೀಳುವದಿಲ್ಲ. ನನ್ನ ಈ ಇಚ್ಛೆಯನ್ನು ಪೂರ್ತಿಗೊಳಿಸಲು ಎಲ್ಲ ತರದ ಪ್ರಯತ್ನ ಮಾಡುತ್ತ ಬಂದಿದ್ದೇನೆ. ಹಾಗೂ ಇದನ್ನು ಸಫಲಗೊಳಿಸುವ ಕುರಿತು ನನ್ನಲ್ಲಿಯ ಶಕ್ತಿಯನ್ನು ಹೆಚ್ಚು ಹೆಚ್ಚು ಸಂಗ್ರಹಿಸುವ ಹವಣಿಕೆಯಲ್ಲಿರುವೆನು.

೧೨೫ ವರ್ಷ ಬದುಕಬೇಕೆಂಬ ನಿರ್ಧಾರವು ಯಶಸ್ವಿಯಾಗಲು, ಡಾಕ್ಟರರಲ್ಲಾಗಲಿ, ಅವರ ಶಾಸ್ತ್ರದಲ್ಲಾಗಲಿ, ಅಷ್ಟೊಂದು ವಿಶ್ವಾಸವಿರುವಂತಿಲ್ಲ. ಆದರೂ ನನ್ನ ರೀತಿಯಲ್ಲಿ ಅವರಿಂದ ಸಾಕಷ್ಟು ಸಹಾಯ ಪಡೆದಿರುವೆನು. ನನ್ನ ಸತ್ಯ ಹಾಗೂ ಅಹಿಂಸೆಯ ತತ್ವಗಳನ್ನು ಸರ್ವಭಾವೇನ ಆಚರಣೆಯಲ್ಲಿ ತರುವ ಯೋಗ್ಯತೆಯ ಮೇಲೆ ಅದರ ಸಫಲತೆಯು ಅವಲಂಬಿತವಾಗಿದೆ. ಸೇವೆಯ ಕಾರ್ಯವಲ್ಲಾದರು ವೇಗವನ್ನು ನಾವು ತಡೆಹಿಡಿಯಬೇಕಾಗುವದೆಂಬುದನ್ನು ಅಹಿಂಸೆಯ ನನ್ನ ಪದ್ಧತಿಯಿಂದ ನಾನು ಅರಿತಿರುವೆನು. ಇದರಲ್ಲಿ ಒಂದು ಮಿತಿಯ ವರೆಗೆ ಮಾತ್ರ ನನಗೆ ಯಶಸ್ಸು ದೊರಕಿರುವದೆಂಬದನ್ನು ನಾನು ಒಪ್ಪುವೆನು. ನಾನು ನನ್ನ ಕಾರ್ಯದ ವೇಗವನ್ನು ಸಾಕಷ್ಟು ನಿಯಂತ್ರಣದಲ್ಲಿಡಲು ಶಕ್ತನಾಗಿರುವದಿಲ್ಲ. ಬಹುದಿನಗಳ ರೂಢಿಯನ್ನು ಒಮ್ಮೆಲೆ ಕಿತ್ತೊಗೆಯುವುದು ಸುಕರವಾದುದಲ್ಲ. ಅನುಚಿತವಾದ ತ್ವರೆಯು ಅನಿಷ್ಟವಾದುದು. ಅದರಿಂದ ಕಾರ್ಯದಲ್ಲಿ ಪ್ರಗತಿಯಾಗುವ ಬದಲು ಎಡೆತಡೆಯುಂಟಾಗುವುದು.

ರಾಜನೀತಿ ಹಾಗೂ ರಚನಾತ್ಮಕ ಕಾರ್ಯ ಇವೆರಡನ್ನೂ ಒಂದೆಡೆ ಸಂಕಲಿಸಲು ಸಲಹೆ ಕೊಡುವದು ಉಚಿತವಾದುದೋ ಎಂದು ನನ್ನನ್ನು ಪ್ರಶ್ನಿಸಿದ್ದುಂಟು. ಸದ್ಯದಲ್ಲಿ ಹಲವರು ಕಾಂಗ್ರೆಸ ಸಂಘಟನೆಯನ್ನು ಭದ್ರಗೊಳಿಸುವ ಕುರಿತು ರಚನಾತ್ಮಕ ಕಾರ್ಯದಲ್ಲಿ ತೊಡಗಿರುವರು. ಎರಡೂ ಕಾರ್ಯಗಳನ್ನು ಒಂದರಲ್ಲೊಂದನ್ನು ಬೆರಿಸಿದರೆ ಒಂದೂ ಕೆಲಸವು ಸರಿಯಾಗಿ ಸಾಗದು. ರಚನಾತ್ಮಕ ಕಾರ್ಯಕ್ಕೆ ಪೂರ್ಣ ರೀತಿಯಿಂದ ನಾವು ನ್ಯಾಯ ಬಗೆಯುವದಿದ್ದರೆ ತನ್ನ ಕಾಲಮೇಲೆಯೇ ನಿಲ್ಲಲು ಅದಕ್ಕೆ ಅನುವು ಕೊಡುವುದು ಉಚಿತವಾದುದೆಂಬ ಮಾತನ್ನು ನಾನು ಸಂಪೂರ್ಣ

ವಾಗಿ ಒಪ್ಪುವೆನು. ರಾಜಕಾರಣದೊಂದಿಗೆ ಅದನ್ನು ತೊಡಕಿಸುವುದು ಸರಿಯಲ್ಲ. ನನ್ನ ಈ ಹೇಳಿಕೆಯು ಪರಿಣಾಮವೇನೂ ಆಗದೆಂಬ ಶಂಕೆಯು ನನಗಿದೆ. ಆದರೆ 'ಸತ್ಯವನ್ನು ನೀವು ಸರಿಯಾಗಿ ಘೋಷಿಸುತ್ತ ಸಾಗಿರಿ. ಯಾರಾದರು ಅದನ್ನು ಲಕ್ಷಿಸುವರೊ ಇಲ್ಲವೊ ಎಂಬುದರ ಗೊಡವೆ ನಿಮಗೆ ಬೇಡ' ಎಂಬೀ ಮಹಾಭಾರತಕಾರರ ಉಕ್ತಿಯು ನನ್ನನ್ನು ಸಮಾಧಾನಗೊಳಿಸುತ್ತಿದೆ.

ಇಸವಿ ಸನ್ ೧೯೨೦ ರಲ್ಲಿ ಕಾಂಗ್ರೆಸದ ಮುಖಾಂತರ ನಾನು ರಚನಾತ್ಮಕ ಕಾರ್ಯಕ್ರಮವನ್ನು ರಾಷ್ಟ್ರದೆದುರು ಮಂಡಿಸಿದಂದಿನಿಂದ ಅದರ ಶಕ್ತಿಯಲ್ಲಿಯ ನನ್ನ ವಿಶ್ವಾಸವು ಬೆಳೆದಿದೆ. ಇದುವರೆಗೆ ಅದರಲ್ಲುಂಟಾದ ಪದ್ಧತಿ ಹಾಗೂ ಜ್ಞಾನ ಇವುಗಳ ತಳಹದಿಯ ಮೇಲೆ ಅದರ ಕ್ಷೇತ್ರವು ವಿಸ್ತಾರಗೊಂಡಿದೆ. ನನ್ನ ಹದಿನೈದು ಬಗೆಯ ಕಾರ್ಯಕ್ರಮದಲ್ಲಿ ಇರತಕ್ಕುದೆಲ್ಲ ಸಮಾವಿಷ್ಟವಾಗಿರುವುದೆಂದೂ, ಒಂದು ವೇಳೆ ಇಡೀ ದೇಶದಲ್ಲೆಲ್ಲ ಆಚರಿಸಲ್ಪಟ್ಟರೆ ಎರಡನೆಯ ಯಾವ ಕಾರ್ಯಕ್ರಮವನ್ನೂ ಅಪೇಕ್ಷಿಸದೆ, ಸ್ವರಾಜ್ಯವು ತಂತಾನೇ ದೊರೆಯುವದೆಂಬುದೇ ನನ್ನ ಪ್ರತಿಪಾದನೆ. ಇದನ್ನು ನಾನು ಅತ್ಯುಚ್ಚ ಧ್ವನಿಯಿಂದ ಸಾರಿರುವೆನು. ಜನತೆಯು ರಚನಾತ್ಮಕ ಕಾರ್ಯಕ್ರಮವನ್ನು ಸರ್ವಭಾವದಿಂದ ಅಂಗೀಕರಿಸುವುದೋ? ಹಾಗೂ ತಾವು ಯೋಚಿಸುವಂತೆ ಅವರು ಅದನ್ನು ವ್ಯವಹರಿಸಬಲ್ಲರೋ? ಎಂಬೀ ಪ್ರಶ್ನೆಯು ಏಳುತ್ತಿರುವುದುಂಟು. ಇದಕ್ಕೆ ನನ್ನ ಮಾರುತ್ತರ ಇಷ್ಟೇ ಇದೆ. ಜನತೆಯು ಒಂದುವೇಳೆ ನನ್ನ ಮಾತು ಕೇಳದಿದ್ದರೆ ನನ್ನ ಚಿಕಿತ್ಸಾ ವಿಧಾನದ ಮೇಲೆ ಅದರಿಂದ ಒಳ್ಳೇ ಹಾಗೂ ಕಾರ್ಯಕಾರಿಯಾಗುವಂತಹ ಪರಿಣಾಮವೇನೂ ಆಗಲಾರದು.

ಅಸ್ಪೃಶ್ಯತೆಯ ನಿವಾರಣೆ, ರೈತರ ಹಾಗೂ ಕೂಲಿಕಾರರ ಸಂಘಟನೆ ಮೊದಲಾದ ಕಾರ್ಯಗಳನ್ನು ಕಾಂಗ್ರೆಸದ ಮುಖಾಂ

ತರ ಕೈಕೊಳ್ಳುವದರಿಂದ ಡಾ. ಅಂಬೇಡಕರ ಮುಂತಾದ ಎರಡನೆಯ ಪಕ್ಷದ ಜನರಿಗೆ ವಿರೋಧ ಪ್ರದರ್ಶಿಸಲು ಸಂಧಿ ದೊರೆತು ಅಸ್ಪೃಶ್ಯತೆಯ ನಿವಾರಣದಂಥ ಕಾರ್ಯಕ್ಕೆ ತಡೆಯುಂಟಾಗುವುದು. ಅದುಕಾರಣ ಈ ಕಾರ್ಯಗಳನ್ನು ಸ್ವತಂತ್ರ ರೀತಿಯಿಂದ ಸಾಗಿಸುವುದು ಒಳಿತಲ್ಲವೇ? ಎಂದು ನನ್ನನ್ನು ನೇರವಾಗಿ ಕೇಳುತ್ತಿರುವುದುಂಟು.

ಈ ಬಗ್ಗೆ ನನ್ನ ಹೇಳಿಕೆಯೆಂದರೆ ಇಷ್ಟೇ ಡಾ. ಅಂಬೇಡಕರರ ವರ್ಗದವರಾಗಲಿ, ಇತರರಾಗಲಿ ಈ ರೀತಿ ಒಂದು ವೇಳೆ ವಿರೋಧಿಸಿದರೆ ಅದರಿಂದ ನಾವು ಉತ್ತೇಜಿತರಾಗಕೂಡದು. ಹಾಗೂ ಈ ಕಾರಣದಿಂದ ನಮ್ಮ ಕಾರ್ಯವನ್ನು ನಿಲ್ಲಿಸಕೂಡದು. ನಾವು ಅವರ ಅಂತಃಕರಣದಲ್ಲಿ ಪ್ರವೇಶಿಸಿ ಅವರ ಭಾವನೆಗಳನ್ನು ಅರಿತುಕೊಳ್ಳಬೇಕು. ಹರಿಜನರು ಎಂಥ ವಿಪತ್ತುಗಳಿಗೆ ತುತ್ತಾಗಿರುವರು? ಒಂದುವೇಳೆ ಅವು ನಮ್ಮ ಪಾಲಿಗೆ ಬಂದಿದ್ದರೆ ನಮ್ಮ ಸ್ವಭಾವವು ಎಷ್ಟು ಕಟುವಾಗುತ್ತಿದ್ದಿತು? ಅಂಥ ಪರಿಸ್ಥಿತಿಯಲ್ಲಿ ನಮ್ಮ ಅಹಿಂಸೆಯು ಎಷ್ಟರಮಟ್ಟಿಗೆ ತಡೆಯುತ್ತಿತ್ತು? ಎಂಬೀ ಕಲ್ಪನೆಯು ನನಗಾಗದು. ಆದ್ದರಿಂದ ಇಂಥ ಪ್ರಸಂಗದಲ್ಲಿ ನಾವು ಅಂತರ್ನಿರೀಕ್ಷಣ ಮಾಡಬೇಕಾಗುವುದು. ಅಲ್ಲಿ ಎಲ್ಲಿಯಾದರು ಅಸ್ಪೃಶ್ಯತೆಯ ಕಲಂಕವು ಕಂಡುಬಂದರೆ ಅದನ್ನು ತೊರೆಯಬೇಕಾಗುವುದು. ಹಿಂದುಧರ್ಮವು ಉಳಿಯಬೇಕಾದರೆ ಅಸ್ಪೃಶ್ಯತೆಯು ಹೋಗಲೇಬೇಕು. ಅಸ್ಪೃಶ್ಯತೆಯು ಉಳಿದರೆ ಹಿಂದುಧರ್ಮದ ನಾಶವು ಕಟ್ಟಿಟ್ಟದ್ದೇ ಮತ್ತು ಹಾಗಾಗುವುದು ಯಥಾಯೋಗ್ಯವೇ ಆದುದೆಂದು ನನ್ನ ದೃಢವಾದ ನಂಬಿಕೆ. ಯಾರು ಈ ಸುಧಾರಣೆಯ ಕಾರ್ಯದಲ್ಲಿ ವಿಶೇಷವಾಗಿ ಹೆಣಗಬೇಕಾಗಿದ್ದಿತೋ ಅಂಥವರು ಮನಃಪೂರ್ವಕವಾಗಿ ಅದನ್ನು ಕೈಕೊಳ್ಳುವದರ ಬದಲು ಒಂದು ಬಗೆಯಿಂದ ಅದರ ಬಗ್ಗೆ ಅಪಹಾಸ

ಮಾಡಹತ್ತಿದುದು ದುರ್ದೈವದ ಸಂಗತಿ. ಹರಿಜನ ಬಂಧುಗಳ ಮನಸಿನಲ್ಲಿ ಸಂಶಯವು ಅಂಕುರಿಸಿ, ಅವರಲ್ಲಿ ವಿರೋಧ ಭಾವನೆಯು ಒಡಮೂಡಿ ಅವರ ವೃತ್ತಿಯಲ್ಲಿ ಕಟುತನವು ಇಂಬುಗೊಂಡಿದ್ದರೆ ಅದರಲ್ಲಿ ಆಶ್ಚರ್ಯವಾದರೂ ಏನಿದೆ?

ಅಸ್ಪೃಶ್ಯತೆಯನ್ನು ಬೇರು ಸಹಿತ ಕಿತ್ತೊಗೆಯುವದು ಓರ್ವ ಹಿಂದು ಎಂಬೀ ದೃಷ್ಟಿಯಿಂದ ನನ್ನ ಹಾಗೂ ನನ್ನಂತಹ ಇತರ ಹಿಂದುಗಳ ಧಾರ್ಮಿಕ ಕರ್ತವ್ಯವಾಗಿದೆ. ಅಹಿಂಸೆಯ ಮಾರ್ಗದಿಂದ ನಾವು ಸ್ವರಾಜ್ಯವನ್ನು ಸಂಪಾದಿಸತಕ್ಕುದಿದ್ದರೆ ಅಸ್ಪೃಶ್ಯತೆಯನ್ನು ನಾವು ನಿವಾರಿಸಲೇಬೇಕು. ಹಾಗೆ ಮಾಡದೆ ನಮಗೆ ಸ್ವರಾಜ್ಯ ಲಭಿಸದು. ಈ ನನ್ನ ಹೇಳಿಕೆಯಲ್ಲಿ ಎಲ್ಲ ಕಾಂಗ್ರೆಸಿಗರ ವಿಶ್ವಾಸವಿರುವದಿಲ್ಲ. ಕಾಂಗ್ರೆಸು ಒಂದು ಲೋಕತಂತ್ರ ಸಂಸ್ಥೆ. ಅಲ್ಲಿ ಎಲ್ಲ ತರಹದ ವಿಚಾರಗಳ ಜನರೂ ಸೇರಲವಕಾಶವಿದೆ. ಆದ್ದರಿಂದ ತಮ್ಮ ವಿಚಾರಗಳನ್ನು ಅನ್ಯರ ಮೇಲೆ ಹೇರಿ ಅವುಗಳಂತೆ ಅವರು ವರ್ತಿಸಬೇಕೆಂದು ಅಪೇಕ್ಷಿಸುವುದು ಅಸಮಂಜಸವಾದುದು. ಅಸ್ಪೃಶ್ಯತಾ ನಿವಾರಣೆಯು ತಮ್ಮ ಧಾರ್ಮಿಕ ಕರ್ತವ್ಯವಾಗಿರುವದೆಂದು ಬಗೆಯುವವರು ಎರಡನೆಯ ಕಾರ್ಯಗಳನ್ನು ತೊರೆದು ಅದಕ್ಕೇ ತಮ್ಮ ಜೀವನವನ್ನು ಮುಡುಪಾಗಿಡುವುದು ಒಳ್ಳೇ ಸಯುಕ್ತಿಕವಾದುದು. ಆದರೆ ಅಸ್ಪೃಶ್ಯತಾ ನಿವಾರಣೆಯು ಕಾಂಗ್ರೆಸದ ರಾಜನೀತಿಯ ಒಂದು ಅಂಗಮಾತ್ರವಾದುದೆಂದು ಭಾವಿಸುವ ಜನರಿಗೆ ಅದೊಂದು ಕಾಂಗ್ರೆಸದ ಕಾರ್ಯಕ್ರಮ ವಾಗಿರುವದೆಂಬ ದೃಷ್ಟಿಯಿಂದಲೆ ಕಾರ್ಯ ಕೈಕೊಳ್ಳುವ ಸಂಪೂರ್ಣ ಅಧಿಕಾರ ವಿರುತ್ತದೆಂಬದೂ ಅಷ್ಟೇ ಸಮಂಜಸವಾಗಿರುವುದು.

ಧರ್ಮ ಹಾಗೂ ಕರ್ತವ್ಯ ಇವು ಬಹು ಸೂಕ್ಷ್ಮ ಹಾಗೂ ಸಮ್ಮಿಶ್ರ ವಾಗಿರುವ ವಸ್ತುವಾಗಿರುವವು. ಯಾಂತ್ರಿಕ ರೀತಿಯಲ್ಲಿ

ಕ್ರಯ-ವಿಕ್ರಯ ಮಾಡಲಿಕ್ಕೆ ಬರುವಂಥ ಪೇಟೆಯ ವಸ್ತುವು ಇದಲ್ಲ. ಅದನ್ನು ಶೋಧಿಸಲು ನಿರಂತರವಾದ ಆತ್ಮ ನಿರೀಕ್ಷಣೆಯ ಆವಶ್ಯಕತೆಯಿದೆ. ತತ್ವತಃ ಅದು ಎಲ್ಲೆಡೆಯಲ್ಲಿಯೂ, ಎಲ್ಲ ಸಮಯದಲ್ಲೂ ಒಂದೇ ಇರುವುದು. ಆದರೆ ಅದರ ಬಾಹ್ಯರೂಪವು ಹಾಗೂ ವ್ಯವಹಾರವು ವ್ಯಕ್ತಿಯನ್ನನುಸರಿಸಿ ಕಾಲಕಾಲಕ್ಕೆ ಬದಲಾಗುತ್ತ ಹೋಗುವುದು. ಒಂದು ವೇಳೆ ಸತ್ಯದ ಅಂಗಗಳ ರಹಸ್ಯವನ್ನು ನಾವು ಚನ್ನಾಗಿ ಅರಿತುಕೊಂಡುದಾದರೆ, ವಿಚಾರ ಹಾಗೂ ವ್ಯವಹಾರದಲ್ಲಿ ತೋರಿಬರುತ್ತಿರುವ ಭಿನ್ನತೆಯನ್ನು ಅನುಕೂಲ ದೃಷ್ಟಿಯಿಂದ ನೋಡಲು ನಮಗೆ ಶಕ್ಯವಾಗುವುದು. ಅದು ಕಾರಣ ಅಸ್ಪೃಶ್ಯತಾ ನಿವಾರಣೆಯ ವಿಷಯವಾಗಿ ಸ್ವತಂತ್ರವಾಗಿ ಕಾರ್ಯ ಮಾಡುತ್ತಿರುವ ಹಾಗೂ ಕಾಂಗ್ರೆಸದ ಕಾರ್ಯಕ್ರಮದ ಅಂಗವೆಂದು ಕಾರ್ಯ ಪ್ರವೃತ್ತರಾಗಿರುವ ಈ ಉಭಯತರನ್ನೂ ನಾನು ಸ್ವಾಗತಿಸುವೆನು.

ಖಾದೀ ಕಾರ್ಯಕರ್ತರ ರಚನಾತ್ಮಕ ಕಾರ್ಯಕ್ರಮದ ಎರಡನೆಯ ವಿಭಾಗಗಳ ಸಲುವಾಗಿ ಅಂದರೆ ಒಕ್ಕಲುತನ, ಪಶು ಸುಧಾರಣೆ, ಮೂಲಶಿಕ್ಷಣ ಇತ್ಯಾದಿಗಳ ಬಗ್ಗೆ ಚರಕಸಂಘದ ಹಣವನ್ನು ವೆಚ್ಚಮಾಡಬಹುದೋ? ಹಾಗೆ ಮಾಡಿದರೆ ಮಾತ್ರ ಅವರು ಗ್ರಾಮ ಸೇವೆಯ ಕಾರ್ಯವನ್ನು ನಿರ್ವಹಿಸಲು ಶಕ್ತರಾಗುವರು. ಎಂಬೀ ಎರಡನೆಯ ಪ್ರಶ್ನೆಯನ್ನೂ ಕೇಳಲಾಗಿದೆ. ಇದಕ್ಕೆ 'ಇಲ್ಲ, ವೆಂದೇ ನನ್ನ ಉತ್ತರ. ಒಂದು ಸಂಸ್ಥೆಗಾಗಿ ಸಂಗ್ರಹಿಸಿಟ್ಟ ಹಣವನ್ನು ಎರಡನೆಯ ಸಂಸ್ಥೆಯ ಸಲುವಾಗಿ ವೆಚ್ಚಮಾಡಕೂಡದು. ಚರಕ ಸಂಘದ ನಿಯಮದಂತೆ ಸಂಘದ ಹಣವನ್ನು ಖಾದೀ ಕಾರ್ಯವನ್ನುಳಿದು ಎರಡನೆಯ ಯಾವ ಕಾರ್ಯಕ್ಕಾಗಿಯೂ ವಿನಿಯೋಗಿಸಕೂಡದು. ಆದುದರಿಂದ ಒಕ್ಕಲುತನ, ಗೋ ಪಾಲನ ಮುಂತಾದ ಕಾರ್ಯಕ್ಕೆ ಬೇಕಾಗುವ ಹಣವನ್ನು ಸಂಬಂಧಿಸಿದ

ಆ ಆ ಸಂಸ್ಥೆಗಳೇ ಸಂಗ್ರಹಿಸಬೇಕು. ಹಾಗಾಗದಿದ್ದರೆ ಬಹಳ ಗೊಂದಲವೇಳುವದು. ಇಲ್ಲದ ತೊಡಕುಗಳು ಹುಟ್ಟುವವು. ಇನ್ನು ಒಂದು ಸಂಸ್ಥೆಯು ಹಣವನ್ನು ಎರಡನೆಯ ಸಂಸ್ಥೆಗೆ ಸಾಲರೂಪ ದಿಂದ ಕೊಡುವದಾದರೆ, ಒಳ್ಳೇ ಭದ್ರತೆ (ಜಾಮೀನು) ಪಡೆದು ಯೋಗ್ಯವಾದ ಬಡ್ಡಿಯನ್ನು ಗೊತ್ತುಮಾಡಿ ನಂತರ ಕೊಡ ಬಹುದು. ಟ್ರಸ್ಟಿಗಳ ಕೆಲಸವು ತೀರ ಸೂಕ್ಷ್ಮವೂ, ಕಠಿನವೂ ಆಗಿ ರುವುದು. ನಾನು ಕಳೆದ ಐವತ್ತು ವರ್ಷಗಳಿಂದ ಅನೇಕ ಸಂಸ್ಥೆ ಗಳ ಟ್ರಸ್ಟಿಯಾಗಿರುವೆನು. ನನ್ನ ರಕ್ಷಣದಲ್ಲಿ ಅನೇಕ ಸಂಸ್ಥೆ ಗಳು ಬೆಳೆದು ಬಾಳಿರುವವು. ನನ್ನ ಸಫಲತೆಗೆ ನಾನು ಮಹಾ ತ್ಮನೆಂಬುದು ಕಾರಣವಾಗಿರದೆ ನನ್ನ ವ್ಯಾಪಾರಿಕ ಬುದ್ಧಿಯೂ ಲೆಕ್ಕಪತ್ರ ಇಡುವದರಲ್ಲಿಯ ನನ್ನ ಜಾಗರೂಕತೆಯೂ ಕಾರಣ ವಾಗಿರುವವು. ಸಾರ್ವಜನಿಕ ಸಂಸ್ಥೆಗಳ ಯಶಾಪಯಶಗಳು ಯಾವು ದೊಂದು ಅಥವಾ ಒಂದಕ್ಕಿಂತ ಹೆಚ್ಚು ವ್ಯಕ್ತಿಗಳ ಬುದ್ಧಿಯ ತೀವ್ರತೆಯ ಮೇಲೆ ಅವಲಂಬಿತವಾಗಿರಕೂಡದು. ಆದರೆ ಅದರ ಸಂಘಟನೆಯ ಶುದ್ಧತೆ ಹಾಗೂ ನಿರ್ಭೀಳವಾದ ವ್ಯಾಪಾರಿಕ ನೀತಿ ಯನ್ನು ಅವಲಂಬಿಸಿರತಕ್ಕದ್ದು. ಈ ಗುಣಗಳು ನಮ್ಮಲ್ಲಿ ಒಡ ಮೂಡಲು ಹಣವು ತಂತಾನೆ ನಮ್ಮ ಹತ್ತಿರ ಬರುವುದು.

ಖಾದೀ ಕಾರ್ಯವನ್ನು ಶಾಖೆಗಳ ಮುಖಾಂತರ ಸಾಗಿಸುವ ದರ ಬದಲು ಹೊಸ ಯೋಜನೆಯನ್ನರಿತು ಸಮಗ್ರ ಗ್ರಾಮಸೇವೆ ಯನ್ನು ಕೈಕೊಳ್ಳಲು ಅಪೇಕ್ಷಿಸುವ ಕಾರ್ಯಕರ್ತರಿಗೆ ಒಂದು ನಿರ್ದಿಷ್ಟ ಅವಧಿಯಲ್ಲಿ ಒಪ್ಪಿಸಿಬಿಡಬೇಕೆಂದು ಓರ್ವ ಮಿತ್ರರು ನನಗೆ ಸೂಚಿಸಿರುವರು. ಈ ಸೂಚನೆಯು ನನಗೆ ಮಾನ್ಯವಿದೆ. ಆದರೆ ಇಂತಿಷ್ಟು ಅವಧಿಯಲ್ಲಿ ಖಾದೀ ಉತ್ಪತ್ತಿಯನ್ನು ಪೂರ್ಣ ನಿಲ್ಲಿಸಲಾಗುವದೆಂಬದನ್ನು ನಿರ್ದಿಷ್ಟಗೊಳಿಸುವದು ನನಗೆ ಸಮ್ಮತ ವಿಲ್ಲ. ಹಳ್ಳಿಯಲ್ಲಿ ಮಾರಾಟಾಗುವಷ್ಟು ಖಾದಿಯನ್ನು ಆ ಹಳ್ಳಿ

ಯವರೇ ಹುಟ್ಟಿಸಬೇಕೆಂಬದನ್ನು ಮಾತ್ರ ನಾನು ಅವಶ್ಯವಾಗಿ ಅಪೇಕ್ಷಿಸುತ್ತಿರುವೆನು. ಈ ಕಾರಣದಿಂದ ತರುಬರುವ ವೆಚ್ಚವು ಇಲ್ಲದಂತಾಗುವುದು. ಹಾಗೂ ಖಾದಿಯು ವ್ಯಾಪಾರಿಕ ಸ್ಪರ್ಧೆಯನ್ನು ಮೀರಿ ನಿಲ್ಲುವದು. ಮೂಲ ಶಿಕ್ಷಣದ (ನಯೀ ತಾಲೀಮು) ಮುಖಾಂತರ ಈ ಕಾರ್ಯವು ಚೆನ್ನಾಗಿ ಕೊನೆಗಾಣುವುದು. ಮೂಲ ಶಿಕ್ಷಣವು ಎಲ್ಲ ಕ್ಷೇತ್ರಗಳನ್ನು ವ್ಯಾಪಿಸುವದು. ಅಂದರೆ ಇದರಲ್ಲಿ ಲೋಹಚುಂಬಕದಂತಹ ಶಕ್ತಿಯಿದೆ. ಇದುಕಾರಣದಿಂದ ಅದು ಮುದುಕರಿರಲಿ, ತರುಣರಿರಲಿ, ಭಿನ್ನ ಪ್ರಕೃತಿಯವರಿರಲಿ, ಎಲ್ಲರನ್ನು ತನ್ನೆಡೆ ಆಕರ್ಷಿಸುವುದು. ಈ ಶಕ್ತಿಯು ಅದರಲ್ಲಿ ಅಂಕುರಿಸುವ ವರೆಗೆ ಅದು ಜೀವನಿಲ್ಲದ ಶರೀರದಂತಿರುವುದು.

ಚರಕ ಸಂಘವು ಒಂದು ವೇಳೆ ಈ ಹೊಣೆಯಿಂದ ಮುಕ್ತವಾಗಲಪೇಕ್ಷಿಸಿದರೆ ಅದು ಸುಯೋಗ್ಯ ಕಾರ್ಯಕರ್ತರನ್ನು ತಯಾರಿಸಬೇಕು. ಸದ್ಯಕ್ಕೆ ಅವರ ಕೊರತೆ ಬಹಳಿದೆ. ಆದ್ದರಿಂದ ತಾವೆಲ್ಲರು ನಯೀ ತಾಲೀಮುದ ರಹಸ್ಯವನ್ನು ತಿಳಿದುಕೊಳ್ಳದೆ ಸೇವಾಗ್ರಾಮುದಿಂದ ತೆರಳಕೂಡದು.

ತಮ್ಮಲ್ಲಿ ಪ್ರತಿಯೊಬ್ಬರು ತಮ್ಮ ತಮ್ಮ ಧ್ಯೇಯ ಸಾಧನದ ವಿಷಯದಲ್ಲಿ ಅಧೀರರಾಗಿರುವಂತೆ ನಾನಾದರೂ ಅಧೀರನಾಗಿರುವೆನು. ಆದರೆ ಕಾರ್ಯವು ದುಷ್ಕರವಾಗಿರುವದೆಂಬದನ್ನು ನಾನು ಅರಿತಿರುವೆನು. ಭಾರತ ವರ್ಷವು ಬಹು ದೀರ್ಘಕಾಲದಿಂದ ಗುಲಾಮುಗಿರಿಯಲ್ಲಿ ಸಾಗುತ್ತ ಬಂದಿದೆ. ಈ ಗುಲಾಮುಗಿರಿಯ ಇತಿಹಾಸವು ಬ್ರಿಟಿಶ ಆಡಳಿತೆಯ ಪೂರ್ವದಿಂದಲೆ ನಡೆದುಬಂದಿದೆ. ಇದು ನಮ್ಮ ವ್ಯಕ್ತಿತ್ವದ ಸಾರಸರ್ವಸ್ವವನ್ನೂ ಕ್ರಿಯಾವೃತ್ತಿಯನ್ನೂ, ನಷ್ಟಗೊಳಿಸಿದೆ ಹಾಗೂ ನಮ್ಮನ್ನು ನಿರಾಶೆಯ ರೋಗಿಯನ್ನಾಗಿ ಮಾಡಿಬಿಟ್ಟಿದೆ. ಮಾಯವಾದ ಈ ಗುಣಗಳ ಸಂಚಾರವಾಗದೆ ರಚನಾತ್ಮಕ ಕಾರ್ಯಕ್ರಮದ ಪ್ರಗತಿಯಾಗದು. ರಚನಾತ್ಮಕ

ಕಾರ್ಯಕ್ರಮವನ್ನು ಎಲ್ಲಿಯ ವರೆಗೆ ನಾವು ಸಫಲಗೊಳಿಸುವದಿಲ್ಲವೋ ಅಲ್ಲಿಯ ವರೆಗೆ ಅಹಿಂಸೆ ಹಾಗೂ ಸತ್ಯ ಇವುಗಳ ಮುಖಾಂತರ ಸ್ವರಾಜ್ಯ ಸಂಪಾದನೆಯಾಗುವುದೆಂಬದು ಕನಸಿನ ಮಾತೇ ಸರಿ. ಸ್ವಾತಂತ್ರ್ಯವು ದೊರೆಯುವುದೇನೋ ಖಂಡಿತ. ಅದು ಬರುತ್ತಲೂ ಇದೆ. ಆದರೆ ಕೇವಲ ರಾಜನೈತಿಕ ಸ್ವಾತಂತ್ರ್ಯದಿಂದ ನಾನು ಸಂತುಷ್ಟನಾಗೆನು. ಭಾರತವರ್ಷದಿಂದ ಅತ್ಯುದಾತ್ತವಾದ ದೇಣಿಗೆಯನ್ನು ಪಡೆಯುವ ಆಕಾಂಕ್ಷೆಯಿಂದ ಕುಳಿತ ಜಗತ್ತಿಗೆ ಮಾತ್ರ ಇದರಿಂದ ಎಂದೂ ಸಂತೋಷವಾಗಲಾರದೆಂಬ ಮಾತು ನಿಃಸಂದೇಹವಾದುದು. ನಮ್ಮ ಅಂತರಂಗದಲ್ಲಿ ಪರಮಾತ್ಮನ ರಾಜ್ಯವನ್ನು ಅಳವಡಿಸಿ ಅದನ್ನು ಈ ಪ್ರಪಂಚದಲ್ಲಿ ಪ್ರಸ್ಥಾಪಿಸಬೇಕೆಂಬುದೇ ನನ್ನ ಕಲ್ಪನೆಯ ಸ್ವಾತಂತ್ರ್ಯವು. ಈ ನನ್ನ ಸ್ವಪ್ನಪೂರ್ತಿಯ ಸಲುವಾಗಿ ಕಾರ್ಯ ಮಾಡುತ್ತಿರುವಾಗಲೆ ಮರಣವೊದಗಿದರೆ ಅದು ಲೇಸು. ಒಂದು ವೇಳೆ ಅದು ಎಂದೂ ಪ್ರಾಪ್ತವಾಗಲಿಕ್ಕಿಲ್ಲ. ಅಂದರೂ ಅಡ್ಡಿ ಇಲ್ಲ. ಇದರ ಅರ್ಥವೆಂಧರೆ, ನಿಃಸೀಮ ಧೈರ್ಯ ಹಾಗೂ ತಾಳ್ಮೆ. ಒಂದು ವೇಳೆ ಭಾರತವರ್ಷವು ಕೇವಲ ರಾಜನೈತಿಕ ಸ್ವಾತಂತ್ರ್ಯ ಪಡೆಯುವದರಿಂದಲೆ ತೃಪ್ತವಾದರೆ ಆ ಮೇಲೆ ನನಗೆ ಯಾವುದೇ ಒಂದು ಒಳ್ಳೇ ಕಾರ್ಯ ಮಾಡಲು ಸಾಧ್ಯವಿಲ್ಲದಾದರೆ ನಾನು ಹಿಮಾಲಯದ ಶಿಖರದ ಮೇಲೆ ಏರಿ ಕುಳಿತುಕೊಳ್ಳುವುದನ್ನು ನೀವು ನೋಡುವಿರಿ ಹಾಗೂ ನನ್ನ ಸಲಹೆಗಳನ್ನು ಪಡೆಯಲಿಚ್ಛಿಸುವವರು ಅಲ್ಲಿ ನನ್ನ ಹತ್ತಿರ ಬರಬೇಕಾಗುವುದು. ಈಗ ಅಂಶರೂಪದಿಂದ ಪಡೆಯುತ್ತಿರುವ ನೂಲಿನ ಪ್ರಮಾಣವನ್ನು ಅರ್ಧಾಣೆಯಿಂದ ಒಂದು ರೂಪಾಯಿಗೆ ಒಂದು ಲಡಿಯ ಮಟ್ಟಕ್ಕೆ ಅಂದರೆ ಎರಡುವರೆ ಆಣೆಗೆ ಏರಿಸಬೇಕೆಂದು ಶ್ರೀ. ಜಾಜೂಜಿಯವರು ಅಭಿಪ್ರಾಯಪಟ್ಟಿರುವರು. ಈ ಕಟ್ಟಳೆಯು ತೀರ ಮೃದುವಾಗಿರುವುದು. ನಾನಂತೂ ಇದಕ್ಕೂ

ಮುಂದೆ ಹೋಗಬೇಕೆನ್ನುವೆನು. ಹಿಂದಿನ ದಿನಗಳಲ್ಲಿ ಮುಂಬೈಯು ಖಾದಿಯ ವಿಷಯದಲ್ಲಿ ಮ್ಯಾಂಚೆಸ್ಟರ ಆಗಿದ್ದಿತು. ದೂರ ದೂರ ಪ್ರದೇಶದಲ್ಲಿ ತಯಾರಾದ ಖಾದಿಯು ಮಾರಾಟಕ್ಕಾಗಿ ಇಲ್ಲಿ ಬರುತ್ತಿದ್ದಿತು. ಶ್ರೀ. ವಿಠ್ಠಲದಾಸ ಜೇರಾಜಿಣಿಯವರಲ್ಲಿದ್ದ ವಿಕ್ರಯ-ಕುಶಲತೆಯ ಬಗ್ಗೆ ಅವರಿಗೆ ಧನ್ಯವಾದಗಳನ್ನರ್ಪಿಸತಕ್ಕದ್ದು. ಅವರ ಪ್ರಯತ್ನದಿಂದಲೆ ಮುಂಬೈಯಲ್ಲಿ ಮೊದಲು ಸ್ವದೇಶೀ ಸರಕುಗಳ ಹಾಗೂ ನಂತರ ಖಾದಿಯ ಸಂಚಾರವಾಯಿತು. ಆದರೆ ಅದು ಸರಿಯಾದ ಮಾರ್ಗವಾಗಿರಲಿಲ್ಲವೆಂದು ಈಗ ನನಗೆ ಮನವರಿಕೆಯಾಗಿದೆ. ಖಾದಿಯು ಎಲ್ಲಿ ಉತ್ಪನ್ನವಾಗುವುದೋ ಅಲ್ಲಿ ಅದು ಮೊದಲು ಮಾರಾಟವಾಗಬೇಕು. ಒಂದು ವೇಳೆ ಯಾವುದೊಂದು ಸ್ಥಳದಲ್ಲಿ ಅಲ್ಲಿಯ ಜನರು ತಮ್ಮ ಬೇಡಿಕೆಗಿಂತ ಹೆಚ್ಚು ಖಾದಿಯನ್ನು ತಯಾರಿಸಿದರೆ ಅವರು ತಮ್ಮ ತೀರ ನೆರೆಹೊರೆಯ ಸ್ಥಳಗಳಿಗೆ ಆ ಹೆಚ್ಚಿನ ಖಾದಿಯನ್ನು ಅವಶ್ಯವಾಗಿ ಕಳಿಸಬಹುದು. ಇದರ ಸೀಮೆಯು ಹೆಚ್ಚೆಂದರೆ ಜಿಲ್ಹೆಯ ವರೆಗೆ ಅಥವಾ ಪ್ರಾಂತದ ಮಟ್ಟಿಗೆ ಇರತಕ್ಕದ್ದು. ನಾನಂತೂ ಪ್ರಾಂತದ ಹದ್ದಿನ ವರೆಗೆ ಹೋಗಲು ಇಷ್ಟಪಡುವದಿಲ್ಲ. ಈ ಕಾರ್ಯಕ್ಕೆ ಜಿಲ್ಹೆಯ ಮೇರೆಯೇ ಸಾಕಷ್ಟು ವಿಶಾಲವಾಗಿರುವುದು. ಒಂದು ಹಳ್ಳಿಗೆ ಅವಶ್ಯವಾಗಿ ಬೇಕಾಗುವ ಖಾದಿಯು ಅಲ್ಲಿಯೇ ಮಾರಿಹೋಗಬೇಕೆಂಬುದೇ ಇದರ ಉದ್ದೇಶವಾಗಿದೆ. ಏಳು ಲಕ್ಷ ಹಳ್ಳಿಗಳಲ್ಲಿ ಈ ಪ್ರತಿಪಾದನೆಯನ್ನು ಸ್ವೀಕರಿಸಲು ಸಿದ್ಧವಾಗಿರುವ ಹಳ್ಳಿಗಳೆಷ್ಟು? ಖಾದಿಯ ಹುಟ್ಟುವಳಿ ಕಾರ್ಯವು ನಡೆಯುತ್ತಿರುವ ಹಳ್ಳಿಗಳಲ್ಲಿಯ ನೂಲುವವರು, ನೇಕಾರರು ಕೂಡಾ ಚರಕ ಸಂಘವು ಎಷ್ಟು ಪ್ರಯತ್ನಪಟ್ಟಿದ್ದರೂ ಸ್ಥಾನಿಕ ಉತ್ಪತ್ತಿಯ ತೀರ ಅಲ್ಪಾಂಶವನ್ನು ಮಾತ್ರ ಸ್ವಂತಕ್ಕಾಗಿ ಉಪಯೋಗಿಸುತ್ತಿರುವರು. ಇದು ಖಾದೀ ಆದರ್ಶಕ್ಕೆ ವಿರುದ್ಧವಾದುದು. ರೂಪಾಯಿಗೆ ಅರ್ಧಾಣೆ ಬೆಲೆಯ ನೂಲು ಪಡೆಯಬೇಕೆಂಬ ಕಟ್ಟಳೆಯು ಹಳ್ಳಿ

ಗರ ಸಲುವಾಗಿ ಇರುವದಿಲ್ಲ. ಅಲ್ಲಿ ನೂಲಿಗೆ ಪ್ರತಿಯಾಗಿ ಖಾದಿಯನ್ನು ಕೊಡತಕ್ಕದ್ದು. ಪಟ್ಟಣಗಳಲ್ಲಿಯ ಖಾದಿಯ ಮಾರಾಟವು ಕುಗ್ಗುವುದೆಂದು ಈ ನೂಲಿನ ಕಟ್ಟಳೆಯನ್ನು ಮುಂದುವರಿಸಲು ನೀವು ಅಂಜುತ್ತಿರುವಿರಾ? ಈ ಅಂಜಿಕೆಯನ್ನು ನೀವು ನಿಮ್ಮ ಮನಸಿನಿಂದ ಹೊರತಳ್ಳದಿದ್ದರೆ ನೀವು ಖಾದಿಯನ್ನು ಕೊಲ್ಲುವಿರಿ. ಸಮಾಜದಲ್ಲಿ ಖಾದಿಗೊಂದು ಪ್ರತಿಷ್ಠೆಯ ಸ್ಥಾನವು ದೊರೆತಿದೆ. ಬಡವರು ತಯಾರಿಸಿದ ಖಾದಿಯನ್ನು ಕೊಂಡುಕೊಳ್ಳುವದರಲ್ಲಿ ಬಲ್ಲಿದರು ಅಭಿಮಾನಪಡುತ್ತಿರುವರು. ಆದರೆ ಇದು ಸಾಲದು. ಬಡಜನರಿಗೆ ರೊಟ್ಟಿಯನ್ನು ಕೊಡುವ ಮಟ್ಟಿಗೆ ಮಾತ್ರ ಖಾದೀಕ್ಷೇತ್ರವನ್ನು ಮರ್ಯಾದಿತ ಮಾಡಿದರೆ ಆ ಖಾದಿಯು ಅಹಿಂಸೆಯ ಮುಖಾಂತರ ಸ್ವರಾಜ್ಯ ಸಂಪಾದನೆ ಮಾಡುವ ಕಾರ್ಯದಲ್ಲಿ ಸಹಾಯಕವಾಗಲಾರದು. ಇದು ನನಗೆ ಬೇಕಿಲ್ಲ. ಈ ನೂಲಿನ ಕಟ್ಟಳೆಯನ್ನು ಬಿಗಿ ಮಾಡುವದರಿಂದ ನಾನೊಬ್ಬನೇ ಖಾದೀಧಾರಿಯಾಗಿ ಉಳಿಯುವ ವೇಳೆ ಬಂದರೂ ನಾನೇನು ಚಿಂತಿಸುವದಿಲ್ಲ. ನೀವು ಖಾದಿಯು ಅಹಿಂಸೆಯ ಪ್ರತೀಕವಾಗಿರುವುದೆಂದು ಬಗೆದಿರುವಿರಿ. ಅದು ಸ್ವರಾಜ್ಯ ಪ್ರಾಪ್ತಿಯ ಸಾಧನವಾಗಿದೆಯೆಂದೂ ತಿಳಿದಿರುವಿರಿ. ಖಾದಿಯು ಅಳಿಯಬೇಕೆಂದು ಪರಮಾತ್ಮನ ಇಚ್ಛೆಯೇ ಇದ್ದರೆ ಅದಕ್ಕೆ ಸ್ವಾಭಾವಿಕ ಮರಣವೊದಗಲೆಂದು ನಾನು ಹಾರೈಸುವೆನು. ಆದರೆ ನಿಮ್ಮಲ್ಲಿಯ ಅಂಜಿಕೆ, ಅಶ್ರದ್ಧೆ, ಇವುಗಳ ಕಾರಣದಿಂದ ಅದನ್ನು ಕೊಲ್ಲಬೇಡಿರಿ. ಯಾವುದೊಂದು ಕಾರಣದಿಂದ ತಮಗೆ ಸ್ವತಃ ನೂಲುವದು ಆಗದಿದ್ದರೆ ಅಂಥವರು ತಮ್ಮ ಹೆಂಡತಿ, ತಾಯಿ, ಅಕ್ಕತಂಗಿಯರು, ಆಳುಹೋಳುಗಳು, ಇವರಿಂದ ಮನೆಯಲ್ಲಿ ನೂಲಿಸಬಹುದು. ಬಹಳಾದರೆ ತಮ್ಮ ನೆರೆಹೊರೆಯವರಿಂದಾದರೂ ನೂಲು ಪಡೆಯಲಿ. ಆದರೆ ಬೆಲೆ ಕೊಟ್ಟು ಮಾತ್ರ ಪಡೆಯಕೂಡದು.

ನಾನು ಖಾದಿಗೆ ಸೂರ್ಯನ ಉಪಮೆಯನ್ನೂ, ಅನ್ಯ ಗ್ರಾಮೋದ್ಯೋಗಗಳಿಗೆ ಸೂರ್ಯಮಂಡಲದ ಉಪಗ್ರಹಗಳ ಉಪಮೆಯನ್ನೂ ಕೊಟ್ಟಿರುವೆನು. ಬೇಸಾಯವು ಸೂರ್ಯಮಂಡಲದಲ್ಲಿಯ ಒಂದು ಗ್ರಹವಾಗಿರುವುದು. ಅದು ಸೂರ್ಯನಾಗಲಾರದು. ಯಾಕಂದರೆ ಬೇಸಾಯವು ಒಂದು ಸ್ವತಂತ್ರವಾದ ಉದ್ಯಮವಲ್ಲ. ಹೊಲಗಳ ಮೇಲೆ ಜನರ ಬಾಧ್ಯತೆಯಿಲ್ಲ. ಸರಕಾರವು ತನ್ನ ಸಣ್ಣಪುಟ್ಟ ಅಧಿಕಾರಗಳ ಮುಖಾಂತರ ಅವುಗಳ ನಿಯಂತ್ರಣ ಮಾಡುತ್ತಿದೆ. ಜನರಲ್ಲಿ ಆತ್ಮವಿಶ್ವಾಸವು ಉಳಿದಿರುವದಿಲ್ಲ. ಅನಿಷ್ಟ ರೀತಿನಡಾವಳಿಗಳ ಮೂಲಕ ಅವು ತುಂಡು ತುಂಡಾಗಿ ಹರಿದು ಹಂಚಿಹೋಗಿವೆ. ನಾನು ಇನ್ನೂ ಐವತ್ತು ವರ್ಷ ಬಾಳಿ ಬದುಕಿದರೆ ಹಾಗೂ ಹೊಲಗಳ ಮೇಲೆ ಜನತೆಯ ಸಂಪೂರ್ಣ ಅಧಿಕಾರ ಬಂದುದಾದರೆ ಆಗ್ಗೆ ಸೂರ್ಯಮಂಡಲದಲ್ಲಿ ಒಕ್ಕಲುತನಕ್ಕೆ ತಕ್ಕ ಸ್ಥಾನ ಕೊಡುವ ಕುರಿತು ಮತ್ತೆ ವಿಚಾರಿಸುವೆನು. ಖಾದೀ ಹಾಗೂ ಅನ್ಯ ಗ್ರಾಮೋದ್ಯೋಗಗಳಂತೆ, ಕೇವಲ ಬೇಸಾಯವೊಂದೇ ಬುದ್ಧಿವಿಕಾಸವನ್ನುಂಟು ಮಾಡಲಾರದೆಂಬುದನ್ನು ಮಾತ್ರ ನಾನು ಹೇಳಬಲ್ಲೆನು. ಸ್ವರ್ಗೀಯ ಮಧುಸೂದನ ಕವಿಯ ಉಕ್ತಿಯಲ್ಲಿ ಹೇಳುವದಾದರೆ ಎತ್ತುಗಳ ನಿರಂತರ ಸಹವಾಸದಿಂದ ಜನರು ಎತ್ತಿನಂತೆಯೇ ಪರಿಣಮಿಸುವರು.

ನಿಮ್ಮ ಆದರ್ಶದಲ್ಲಿ ನಿಮ್ಮವಿಶ್ವಾಸವಿದ್ದುದಾದರೆ ಅದಕ್ಕಾಗಿ ನಿಮ್ಮ ಶಕ್ತಿ ಸರ್ವಸ್ವವನ್ನು ಧಾರೆಎರೆಯಬೇಕೆಂಬುದೇ ನಾನು ಈಗ ಎರಡು ದಿನಗಳಿಂದ ನಿಮಗೆ ಹೇಳುತ್ತ ಬಂದಿರುವ ಮಾತಿನ ಸಾರವು. "ಸತ್ಯಮೇವ ವಿಜಯತೆ" ಎಂದು ಶಾಸ್ತ್ರವು ಸಾರಿ ಸಾರಿ ಹೇಳುತ್ತಿರುವುದು. ಇದೊಂದು ಸಾರ್ವಭೌಮ ಸಿದ್ಧಾಂತವು ಒಂದು ವೇಳೆ ಸಂಸಾರದಲ್ಲಿ ಅದರ ಅಸಫಲತೆ ಕಂಡು ಬಂದರೆ ಈ ಸಿದ್ಧಾಂತವು ಅಪೂರ್ಣವಾಗಿರುವದೆಂದು ಅದರ ಅರ್ಥವಲ್ಲ.

ಅದನ್ನು ಆಚರಿಸುವ ವ್ಯಕ್ತಿಯ ಅಪೂರ್ಣತೆಯು ಸಿದ್ಧವಾಗುವುದು. ನೀವು ಈ ಸಿದ್ಧಾಂತವನ್ನು ತಿಳಿದುದಾದರೆ ನಿಮ್ಮಲ್ಲಿ ಅನಾಸಕ್ತಿಯು ಒಡಮೂಡಿ, ಭಯ ವಿಮೋಚನೆಯಾಗುವುದು. ಆದರ್ಶದಲ್ಲಿ ಶ್ರದ್ಧೆಯು ಆವಶ್ಯಕತೆ ಇರುವಷ್ಟೇ ಆದರ್ಶಪೂರ್ತಿಗಾಗಿ ಅನಾಸಕ್ತಿಯ ಆವಶ್ಯಕತೆ ಇರುವುದು."

ಖಾದಿಯು ನೂಲಿಗೆ ಪ್ರತಿಯಾಗಿ ಏಕೆ? ನಗದು ಹಣಕ್ಕಾಗಿ ಏಕಲ್ಲ?

ಸದ್ಯಕ್ಕೆ ಪ್ರವಾಸದಲ್ಲಿರುವ ಬಂಧು ಭಾರತನ್ ಕುಮಾರಪ್ಪನು ನನಗೆ ಈ ರೀತಿ ಬರೆಯುತ್ತಿರುವನುಃ—“ಗಾಂಧೀಜಿಯವರು ಇದನ್ನೇನು ಮಾಡಿದರು? ಅವರು ಖಾದಿಯನ್ನು ಕೊಲ್ಲುವರು. ಹಾಗೂ ನಮ್ಮಂತೆ ಅವರ ಉಪದೇಶದಿಂದ ಖಾದಿಯನ್ನು ಧರಿಸುವ ವ್ರತ ಕೈಕೊಂಡವರ ಗತಿ ಏನು? ನಮಗೆ ನೂಲಲು ಬರುವದಿಲ್ಲ ಹಾಗೂ ಅದನ್ನು ಕಲಿಯುವ ಇಚ್ಛೆಯೂ ನಮಗಿಲ್ಲ-ನೂಲಿನ ಕಟ್ಟಳೆಯು ಗಾಂಧೀಜಿಯವರ ಬಲುಮೆಯನ್ನು ಪ್ರಕಟಿಸುತ್ತದೆ. ಇತ್ಯಾದಿ ಜನರು ಕೇಳಹತ್ತಿರುವರು.”

ಬಂಧು ಭಾರತನ್ ಕುಮಾರಪ್ಪನ ಪತ್ರವು ಇಂಗ್ಲೀಷದಲ್ಲಿ ಬರೆದಿದೆ. ನಾನು ಅದರ ಭಾವಾರ್ಥವನ್ನು ಕೊಟ್ಟಿರುವೆನು. ನೂಲಿನ ಎಳೆಯ ಮೇಲೆ ಸ್ವರಾಜ್ಯವು ಅವಲಂಬಿತವಾದುದು ನಿಜವಾಗಿದ್ದರೆ ನೂಲು ತೆಗೆಯಬೇಕೆಂದು ನಾನು ಬೇಡುತ್ತಿರುವದರಲ್ಲಿ ಬಲುಮೆಯ ಭಾವನೆಯು ಬರಲಾರದೆಂಬದನ್ನು ಜನರು ಅರಿತಿರಬೇಕು. ಅಲ್ಲದೆ ನೂಲುವದರಲ್ಲಿ ವಿಶೇಷವಾದ ಆಸ್ಥೆಯು ಅವರಲ್ಲಿ ಅಂಕುರಿಸಬೇಕು. ಇದರಲ್ಲಿ ಬಲುಮೆಯನ್ನು ಕಾಣುವವರಿಗೆ ಅಹಿಂಸೆಯು ಹೇಗೆ ಕಾರ್ಯ ಮಾಡಬಹುದೆಂಬದು ತಿಳಿಯದು. ಅಹಿಂಸೆಯ ಮುಖಾಂತರ ನಾವು ಸ್ವರಾಜ್ಯವನ್ನು ಗಳಿಸುವದಾದರೆ ನಮ್ಮ ಕಾರ್ಯ ಪ್ರವೃತ್ತಿಗಳಲ್ಲಿ ನೂಲುವದಕ್ಕೊಂದು ಸ್ಥಾನವನ್ನು ಕಲ್ಪಿಸುವುದು ಅಗತ್ಯವಾದುದೆಂದು ನಾನು ಹಿಂದುಸ್ಥಾನಕ್ಕೆ ಮರಳಿ ಬಂದಂದಿನಿಂದ ಘಂಟಾಘೋಷವಾಗಿ ಹೇಳುತ್ತ ಬಂದಿರುವೆನು. ರಾಟಿಯು ನಮ್ಮ ತುಬಾಕಿಯಾಗಿರುವುದೆಂದೂ ನೂಲಿನ ಕುಕ್ಕಡಿಗಳು ಮದ್ದು ಗುಂಡುಗಳೆಂದೂ ಅವುಗಳ ಮುಖಾಂ

ತರ ನಾವು ಸ್ವರಾಜ್ಯ ಪಡೆಯುವೆವೆಂದೂ ಕೀರ್ತಿಶೇಷರಾದ ಮೌಲಾನಾ ಮುಹಮ್ಮದಅಲ್ಲಿಯವರು ಪದೇ ಪದೇ ಅನ್ನುತ್ತಿದ್ದುದು ಅದು ಇಂದಿಗೂ ಅಷ್ಟೇ ಯಥಾರ್ಥವಾಗಿರುವುದು.

ಪಟ್ಟಣಗಳಲ್ಲಾಗಲಿ, ಹಳ್ಳಿಗಳಲ್ಲಾಗಲಿ, ಖಾದಿಯು ಸಾರ್ವತ್ರಿಕವಾಗಬೇಕಾದರೆ ಅದು ನೂಲಿಗೆ ಪ್ರತಿಯಾಗಿಯೇ ದೊರೆಯುಬೇಕೆಂಬುದನ್ನು ನಾನು ಅನುಭವದಿಂದ ಕಂಡಿರುವೆನು. ಇಂದಂತೂ ಒಂದು ರೂಪಾಯಿಗೆ ಒಂದಾಣೆ ಬೆಲೆಯ ನೂಲನ್ನು ಬೇಡುತ್ತಿದೆ. ಇದಂತೂ ಪ್ರಾರಂಭ. ಜನರಲ್ಲಿ ತಿಳಿವಳಿಕೆ ಉಂಟಾದಂತೆ, ಶಿಕ್ಷಣ ಪಡೆಯುತ್ತ ಹೋದಂತೆ ಅವರು ತಾವು ಸ್ವತಃ ನೂತ ನೂಲಿನಿಂದಲೆ ಖಾದಿಯನ್ನು ಪಡೆಯುತ್ತ ಹೋಗುವರು. ಜನರು ಒತ್ತಾಯದಿಂದ ತಮ್ಮ ಸ್ವಂತ ನೂಲಿನಿಂದಲೇ ಖಾದಿಯನ್ನು ಪಡೆಯುವರೆಂದು ನನ್ನ ಪ್ರತೀಕ್ಷೆ ಇದೆ. ಒಂದುವೇಳೆ ಹೀಗಾಗದಿದ್ದರೆ ಜನರು ಅಸಂತುಷ್ಟರಾಗಿ ನೂಲನ್ನು ಕೊಟ್ಟು ಖಾದಿಯನ್ನು ಪಡೆಯಹತ್ತಿದರೆ ಅಹಿಂಸೆಯಿಂದ ಸ್ವರಾಜ್ಯವನ್ನು ಸಂಪಾದಿಸುವುದು ಅಸಂಭವವಾದುದೆಂದು ನಾನು ಬಗೆಯುವೆನು. ಸ್ವರಾಜ್ಯ ಪ್ರಾಪ್ತಿಗಾಗಿ ನಾವು ಪ್ರಯತ್ನವನ್ನಂತೂ ಮಾಡಲೇಬೇಕು. ಸ್ವರಾಜ್ಯವು ಯಾಚನೆಯಿಂದ ಲಭಿಸದು ತುಬಾಕಿಯಿಂದ ಒಂದು ಬಗೆಯ ಸ್ವಾತಂತ್ರ್ಯ ದೊರೆಯಬಹುದು. ಆದರೆ ಅದು ಸ್ವರಾಜ್ಯವಾಗದು ಮತ್ತು ನನಗೆ ಆ ಸಲುವಾಗಿ ಎಷ್ಟೂ ಆಸ್ಥೆಯುಂಟಾಗದು ಮದ್ದುಗುಂಡುಗಳಿಂದ ಸ್ವರಾಜ್ಯವನ್ನು ದೊರಕಿಸುವ ಕಲ್ಪನೆಯಿಂದಲೆ ನನ್ನ ತಲೆ ತಿರುಗಹತ್ತುವದು ಮತ್ತು ಅಡಚಣಿಗಳ ಪರಂಪರೆಗಳು ಪರ್ವತಪ್ರಾಯವಾಗಿ ನನ್ನೆದುರು ನಿಲ್ಲುವವು. ಈ ಲೇಖವನ್ನು ಮದ್ದುಗುಂಡುಗಳ ಮುಖಾಂತರ ಸ್ವರಾಜ್ಯವನ್ನು ಪಡೆಯಲಿಚ್ಛಿಸುವವರ ಸಲುವಾಗಿ ಬರೆದಿಲ್ಲ. ಅವರು ಖಾದಿಯನ್ನು ಧರಿಸುವದಾದರೂ ಏಕೆ? ಅವರ ದೃಷ್ಟಿಯಲ್ಲಿ ಖಾದಿಯು ಒಂದು ನಿರು

ಪಯೋಗಿ ವಸ್ತುವಾಗಿರುವದು. ಆದರೆ ಖಾದಿಯು ಹಳ್ಳಿಗಳಲ್ಲಿ ಉತ್ಪನ್ನವಾಗಿ ಪಟ್ಟಣವಾಸಿಗಳಿಗೆ ಸಲ್ಲುವದು. ಆದರೆ ಹಳ್ಳಿಗರು ಮಾತ್ರ ಅದನ್ನು ಧರಿಸಲಾರರು. ಅವರು ಕೋಟಿ ಸಂಖ್ಯೆಯಲ್ಲಿ ಗಿರಣಿಯ ಬಟ್ಟೆಯನ್ನೇ ಉಪಯೋಗಿಸುವರು. ಎಂಬೀ ರೀತಿಯಲ್ಲಿ ಈ ಲೇಖವನ್ನು ಓದುವವರು ಬಗೆದುದಾದರೆ ಅಂಥ ಪರಿಸ್ಥಿತಿಯಲ್ಲಿ ಖಾದಿಯ ಶಕ್ತಿಯು ಕ್ಷೀಣವಾಗುವುದು. ಖಾದಿಯು ಬಡಜನರ ಮನೆಗೆ ಎರಡುದುಡ್ಡುಮಾತ್ರ ಮುಟ್ಟಿಸುವುದು. ಇಷ್ಟರಿಂದ ನಮ್ಮ ಸಮಾಧಾನವಾಗುವದಾದರೂ ಅಷ್ಟರಲ್ಲಿಯೇ ಇದೆ.

ಈ ಬಗೆಯಾಗಿ ವಿಚಾರ ಮಾಡಿದರೆ ಬಡಜನರ ಖಾದಿಯು ಅಳಿದು ಹೋಗಬಹುದು. ಅದು ಕೇವಲ ಹಲವು ಪಟ್ಟಣಿಗರ ಹೌಸಿನ ಒಡವೆಯಾಗಿ ಉಳಿಯುವುದು. ಯಾಕಂದರೆ ಆ ಜನರಾದರು ಸ್ವತಃ ನೂತು ಖಾದಿಯನ್ನು ನೇಯಿಸಿಕೊಳ್ಳಬೇಕಾಗುವುದು. ಎಂಬೀ ಶಂಕೆಯೂ ತಲೆ ಎತ್ತಿರುವುದು. ಆದರೆ ಈ ವಿಚಾರವು ಅಜ್ಞಾನದ ದ್ಯೋತಕವಾಗಿದೆ.

ಜನರು ಜೀವಿಸುವ ಸಲುವಾಗಿ ಅನ್ನ ತಿನ್ನುತ್ತಿರುವರು; ಹೌಸಿಗಾಗಿ ಅಲ್ಲ. ಅವರು ಶರೀರವನ್ನು ಮುಚ್ಚಿಕೊಳ್ಳುವ ಸಲುವಾಗಿ ಬಟ್ಟೆಯನ್ನು ಧರಿಸುತ್ತಿರುವರು; ಹೌಸಿಗಾಗಿ ಅಲ್ಲ. ಆದುಕಾರಣ ಪ್ರತಿಯೊಂದು ಮನೆಯಲ್ಲಿ ಒಲೆ ಇರುವಂತೆ ರಾಟಿಯೂ ಇರತಕ್ಕದ್ದು. ಹಾಗೂ ಪ್ರತಿಯೊಬ್ಬ ಸಶಕ್ತ ಮನುಷ್ಯನು ನೂಲಲೇಬೇಕು. ಅಂದರೆ ಎಲ್ಲರೂ ಖಾದಿ ಧಾರಿಗಳಾಗುವರು. ಸ್ವರಾಜ್ಯವನ್ನು ಪಡೆಯಲು ಅರ್ಹರಾಗುವರು. ನಿಜವಾಗಿ ನೋಡಿದರೆ ಊನರು, ಅಂಗವಿಕಲರು ಇವರ ಸಲುವಾಗಿಯೂ ಸಶಕ್ತ ವ್ಯಕ್ತಿಗಳು ನೂಲಬೇಕಾಗುವದು.

ಜನರು ಆಟದ ಸಲುವಾಗಿ ಕ್ರೀಡಾಭವನ (Clubs) ಗಳನ್ನು ನಿರ್ಮಿಸಿ ಅಲ್ಲಿ ತಮ್ಮ ಶರೀರ ಹಾಗೂ ಧನ ಎರಡನ್ನೂ

ಅಪವ್ಯಯ ಮಾಡುತ್ತಿರುವರು. ಯಾಕೆ, ಜನರು ಸ್ವರಾಜ್ಯ ಭವನ ಅಥವಾ ಚರ್ಖಾಭವನವನ್ನು ನಿರ್ಮಿಸಿ ಅಲ್ಲಿ ಹೋಗಿ ಹಂಜಿಗಳನ್ನು ಮಾಡುವದು ನೂಲುವದು ಹಾಗೂ ನೂಲಿನ ಬದಲು ಖಾದಿಯನ್ನು ಪಡೆಯುವದು ಇತ್ಯಾದಿ ಮಾಡಲಾರರೇ? ಇದರ ಸರಳವಾದ ಅರ್ಥವೆಂದರೆ ಇಷ್ಟೇ; ಎಲ್ಲಿ ಮನಸ್ಸಿಲ್ಲವೋ ಅಲ್ಲಿ ವಿರುದ್ಧ ತರ್ಕಗಳು ತಲೆದೋರುವವು ಹಾಗೂ ಮನಸ್ಸಿದ್ದಲ್ಲಿ ಅದೇ ತೆರನಾಗಿ ಅನುಕೂಲವಾದ ತರ್ಕಗಳು ಉದ್ಭವಿಸುವವು. ಈ ಬಗೆಯ ಪ್ರಬಲ ಇಚ್ಛೆಯುಂಟಾಯಿತೆಂದರೆ ಆಟವನ್ನು ಬಿಡದಂತೆ ರಾಟೆಯನ್ನು ಜನರು ಬಿಡಲಾರರು. ಆಟದ ಸಲುವಾಗಿ ಕಾರ್ಯ ಪ್ರವೃತ್ತವಾಗುವ ಇಚ್ಛೆಯು ಸ್ವರಾಜ್ಯ ಪ್ರಾಪ್ತಿಗಾಗಿ ಕಾರ್ಯೋನ್ಮುಖ ವಾಗಲಾರದೋ?

ನೂಲು ಕೊಟ್ಟು ಖಾದಿಯನ್ನು ಪಡೆಯಬೇಕೆಂಬ ಪ್ರಬಂಧದ ವಿರುದ್ಧ ಒಂದು ಬಲವಾದ ಆಕ್ಷೇಪವನ್ನು ಎತ್ತುತ್ತಿರುವುದುಂಟು. ಅದು ಯಾವುದೆಂದರೆ ಪಟ್ಟಣಿಗರು ತಮ್ಮ ನೂಲನ್ನು ಕೊಡಹತ್ತಿದರೆ ಬಡ ಜನರ ಖಾದಿಯು ಉಳಿದು ಹೋಗುವದು. ಖಾದಿಯ ಮುಖಾಂತರ ನಡೆದಿರುವ ಅಲ್ಪಸ್ವಲ್ಪ ಕಾರ್ಯವೂ ನಾಮಶೇಷವಾಗಿ ಖಾದಿಯ ಉಡುಪಿನಲ್ಲಿ ಹಳ್ಳಿಗರನ್ನು ಕಾಣುವದು ಕನಸಿನ ಮಾತಾಗುವದು. ನಾವು ಒಂದು ವೇಳೆ ಹೀಗೆ ತಿಳಿಯುವಾ. ಪಟ್ಟಣಿಗರು ಆಲಸ್ಯದಿಂದಾಗಲಿ, ಅಥವಾ ಮುನಿಸಿನಿಂದಾಗಲಿ ಖಾದೀ ಧರಿಸುವುದನ್ನು ಬಿಟ್ಟುಕೊಟ್ಟರೆ ಈ ಕಾರಣದಿಂದ ಕೂಲಿ ದೊರೆಯದಂತಾಗಿ ಹಳ್ಳಿಗರೂ ನೂಲುವದನ್ನೂ ನೇಯುವದನ್ನೂ ನಿಲ್ಲಿಸಿಬಿಟ್ಟರೆ ಅದರಿಂದ ದೇಶಕ್ಕೊದಗಬಹುದಾದ ಅಂಥ ದೊಡ್ಡ ಹಾನಿಯಾದರೂ ಏನು? ಈ ಮೇರೆಗೆ ಅವರ ನೂಲುವ ಹೋರೆಯು ಮುಳುಗಿದರೆ ಬಡಜನರು ಮತ್ತೆ ಯಾವುದಾದರೂ ಹೋರೆಯನ್ನು ಕೈಕೊಂಡು ಹೇಗಾದರೂ ಉದರ ನಿರ್ವಾಹ ಸಾಗಿ

ಸುವರು. ಇಂದಿನ ವರೆಗೆ ಮಾಡುತ್ತ ಬಂದಂತೆ ಜನರು ಮಾಡುತ್ತ ಹೋಗಲಿ ಆದರೆ ಕೋಟಿ ಸಂಖ್ಯಾಕರು ಮಾತ್ರ ಹಾಗೆ ಮಾಡ ಲಾರರು.

ಇಂದು ಬೀಡಿಗಳನ್ನು ಕಟ್ಟುವವರು ನೂಲುವವರ ನಾಲ್ಕು ಪಟ್ಟು ಅಥವಾ ಅದಕ್ಕೂ ಹೆಚ್ಚು ಗಳಿಕೆ ಮಾಡಿಕೊಳ್ಳುತ್ತಿರು ವರು. ಗಿರಣಿಗಳಿಗೆ ಹೋಗುತ್ತಿರುವ ಅನೇಕ ಕೂಲಿಕಾರರು ಸಿರಿ ವಂತರಾಗಿರುವರು. ಅಂದರೆ ಈಗ ಹಸಿವೆಯಿಂದ ಬಳಲುತ್ತಿರುವ ವರು ಹೆಚ್ಚೆಚ್ಚು ಹಸಿವೆಯಿಂದ ಬೆಂದು ಬಳಲಿ ಸಾಯುವರು. ಹಾಗೂ ಹಣ ಗಳಿಸಬಲ್ಲ ಇಂದಿನ ಬಡವರು ಸಹ ಅವರ ಮೇಲೆ ಅಡರುವರು. ಇಷ್ಟೇ ಅದರ ಅರ್ಥವಾಗುವುದು. ಅನೇಕ ಗಿರಣಿಗಳು ನೆಲಿಸಿ ಪಟ್ಟಣಗಳು ಬೆಳೆದರೂ ಇಡೀ ಹಿಂದುಸ್ತಾ ನವು ಸಮೃದ್ಧವಾಗದು. ಆದರೆ ಕೋಟ್ಯಾವಧಿ ಜನರು ಹಸಿವೆ ಯಿಂದಲೂ, ಅದರಿಂದ ಉತ್ಪನ್ನವಾಗುವ ರೋಗಗಳಿಂದಲೂ ಬಳಲಿ ಸತ್ತು ಹೋಗುವರು. ಇದರಿಂದ ಪಟ್ಟಣವಾಸಿಗಳೆಲ್ಲರು ಸಂತುಷ್ಟರಾಗುತ್ತಿದ್ದರೆ ನಾನು ಹೇಳುವುದುರಲ್ಲಿ ಪ್ರಯೋಜನ ವಿಲ್ಲ. ಅಂಥ ಪ್ರಸಂಗದಲ್ಲಿ ಹಿಂದುಸ್ಥಾನದಲ್ಲಿ ಹಿಂಸೆಯ ರಾಜ್ಯವು ನೆಲಿಸುವುದು, ಅಹಿಂಸೆ ಹಾಗೂ ಸತ್ಯ ಇವುಗಳದಲ್ಲ. ಆಗ್ಗೆ ಖಾದಿಗೆ ಯಾವ ಸ್ಥಾನವೂ ಉಳಿಯಲಾರದೆಂದೂ ಹಾಗೂ ಉಳಿ ಯತಕ್ಕದ್ದಲ್ಲವೆಂದೂ ನಾನು ಒಪ್ಪುವೆನು. ಆಗ್ಗೆ ಎಲ್ಲರೂ ವಿವ ರವಾಗಿ ಅಥವಾ ಆತ್ಮಸಂತೋಷದಿಂದ ಸೈನಿಕ ಶಿಕ್ಷಣವನ್ನು ಪಡೆಯಬೇಕಾಗುವದು. ಆದರೆ ನಾನು ಹೇಳುತ್ತ ಬಂದಿರುವುದು ಹಸಿ ವೆಯಿಂದ ಸಾಯುತ್ತಿರುವ ಕೋಟಿ ಸಂಖ್ಯಾಕರ ಬಗ್ಗೆ. ಅವರು ಬದುಕಿರಬೇಕಾದರೆ, ಬಲಶಾಲಿಗಳಾಗಿರಬೇಕಾದರೆ, ರಾಟೆಯ ಕೇಂದ್ರಗಳನ್ನು ನಿರ್ಮಿಸುವುದು, ಅಲ್ಲಿ ಸ್ವೇಚ್ಛೆಯಿಂದ ನೂಲು ವಂತೆ ಏರ್ಪಡಿಸುವುದೂ ಅವಶ್ಯವಾದುದು. ಅಹಿಂಸೆಯ ಶಸ್ತ್ರ


ವನ್ನು ಜುಲುಮೆಯಿಂದ ಜನತೆಯ ಕೈಯಲ್ಲಿ ಕೊಡಕೂಡದು. ಅದುಕಾರಣ ಈಗ ನಡೆದು ಬಂದಿರುವ ನೂಲುವ ಪ್ರಾಘಾತವು ಹೀಗೇ ಸಾಗತಕ್ಕದ್ದೆಂದೂ, ಇಷ್ಟೇ ಅಲ್ಲ ಅದು ಹಾಗೇ ಹೆಚ್ಚು ಬೆಳೆಯತಕ್ಕದ್ದೆಂದೂ ನನ್ನ ಅಭಿಪ್ರಾಯ. ಮೇಲಿನ ಕಾರಣ ಗಳಿಂದ ಒಂದುವೇಳೆ ಖಾದೀ ಭಾಂಡಾರಗಳೆಲ್ಲ ಬಂದಾಗಿ ಖಾದೀ ಧಾರಿಗಳು ಖಾದಿಯನ್ನು ಬಿಟ್ಟುಕೊಡುವುದಾದರೆ ಅದಕ್ಕೆ ನಾನು ಸತ್ಯದ ವಿಜಯವೆಂದೇ ಬಗೆಯುವೆನು. ಯಾಕಂದರೆ, ಜನರು ವಾಸ್ತವಿಕವಾಗಿ ಅಹಿಂಸೆಯನ್ನು ನಂಬುತ್ತಿರಲಿಲ್ಲ, ಅಜ್ಞಾನದಿಂದ ಖಾದಿಯನ್ನು ಧರಿಸುತ್ತಿದ್ದರು ಹಾಗೂ ಖಾದಿಯಿಂದಲೆ ಸ್ವರಾಜ್ಯ ಪಡೆಯುವೆವೆಂದು ಆತ್ಮವಂಚನೆ ಮಾಡಿಕೊಳ್ಳುತ್ತಿದ್ದರೆಂಬುದು ಆ ಪರಿಸ್ಥಿತಿಯಲ್ಲಿ ನನಗೆ ಮನವರಿಕೆಯಾಗುವುದು. ಇಂಥ ಖಾದಿ ಯಿಂದ ಸ್ವರಾಜ್ಯ ದೊರೆಯಲಾರದೆಂದು ನನ್ನ ಮನವರಿಕೆಯಾ ಗಿರಲು ಜನತೆಯನ್ನು ನಾನು ಭ್ರಮೆ ಗೊಳಿಸುವುದೆಂತು? ಒಂದು ವೇಳೆ ಸ್ವರಾಜ್ಯ ದೊರೆತರೂ, ಆ ಮೇಲೆ ಇಂಥ ಖಾದಿಯನ್ನು ಜನರು ಬೀಸಾಡಿ ಬಿಡಬಹುದು. ಇಂಥ ವೇಳೆಯಲ್ಲಿ 'ಗಾಂಧಿಯು ಸತ್ತನಂತರ ಅವನ ಬಗ್ಗೆಯೂ ಖಾದಿಯ ಬಗ್ಗೆಯೂ ಜನರಲ್ಲಿ ತಿರಸ್ಕಾರ ಬುದ್ಧಿಯು ತಲೆದೋರಿ ಮನೆಯೊಳಗಿನ ರಾಟೆಗ ಳನ್ನು ಹೊರಗೆ ತೆಗೆದು ಅವುಗಳ ಕಟ್ಟಿಗೆಗಳಿಂದಲೇ ಅವನ ದೇಹ ವನ್ನು ಸುಟ್ಟು ಬಿಡುವ ಮಟ್ಟಕ್ಕೆ ಅದು ಏರಬಹುದು.' ಎಂಬೀ ದಿವಂಗತ ಚಿಂತಾಮಣಿಯ ಭವಿಷ್ಯ ವಾಣಿಯು ಯಥಾರ್ಥವಾಗ ಬಹುದು. ಕೈಯಿಂದ ನೂತ ನೂಲಿನಲ್ಲಿ ನಿಜವಾದ ಅಹಿಂ ಸೆಯ ದರ್ಶನವಾಗದಿದ್ದರೆ ಬದುಕಿರುವಾಗಲೆ ನನ್ನ ತಪ್ಪು ತಿದ್ದಿ ಕೊಂಡು ರಾಟೆಗೆ ತಗಲುವ ಕಟ್ಟಿಗೆಯನ್ನಾದರೂ ಏಕೆ ಉಳಿಸ ಬಾರದು? ಆದರೆ ಆ ಭವಿಷ್ಯ ವಾಣಿಯು ಸತ್ಯವಾದುದೆಂದು ನಾನು ಭಾವಿಸುವದಿಲ್ಲ. ಹಿಂದುಸ್ಥಾನದ ಕೋಟ್ಯಾವಧಿ ಜನರು ಹಿಂಸೆಯ

ಮುಖಾಂತರ ಸ್ವರಾಜ್ಯ ಗಳಿಸಲಾರರೆಂದು ಜನರು ಮನಗಂಡಿರುವರು. ಈ ಪ್ರಪಂಚದಲ್ಲಿ ಹಿಂದುಸ್ಥಾನಕ್ಕೆ ಬಹು ದೊಡ್ಡ ಸ್ಥಾನವಿದೆ. ಅಥವಾ ಮುಂದೆ ಲಭಿಸುವದಿದೆ. ಹಾಗೂ ಅದು ಅಹಿಂಸೆಯಿಂದಲೆ ಸಾಧ್ಯವಾಗುವದು. ಒಂದುವೇಳೆ ಇಲ್ಲಿಯ ಕೋಟ್ಯಾವಧಿ ಜನರು ಅಹಿಂಸೆಯ ಪ್ರಯೋಜನದ ಪ್ರತ್ಯಕ್ಷ ದರ್ಶನವನ್ನು ಪಡೆಯಲು ಈಕ್ಷಿಸಿದರೆ ಅವರು ರಾಟಿಯನ್ನೇ ತಮ್ಮ ಮಧ್ಯಬಿಂದುವನ್ನಾಗಿ ಇಟ್ಟುಕೊಂಡು ಮುಂದೆ ಸಾಗಬೇಕಾಗುವುದು. ಹಾಗೂ ಪಟ್ಟಣವಾಸಿಗಳಲ್ಲಿ. ಸ್ವಾತಂತ್ರ್ಯದ ಭಾವನೆಯು ಹೆಚ್ಚು ತೀವ್ರವಾಗಿರುವದರಿಂದ ಈ ವಿಷಯದ ಮರ್ಮವನ್ನರಿತುಕೊಂಡು ಅಹಿಂಸಕ ಸ್ವರಾಜ್ಯ ಪಡೆಯುವ ಕುರಿತು ತತ್ಪರತೆಯಿಂದ ನೂಲುವದು ಹಾಗೂ ಖಾದಿಯನ್ನು ಧರಿಸುವುದು ಪಟ್ಟಣಿಗರ ಧರ್ಮವಾಗಿರುವುದು.

ಮೋ. ಕ. ಗಾಂಧೀ.

[ಗ್ರಾಮೋದ್ಯೋಗ ಪತ್ರಿಕಾ, ಜುಲೈ ೧೯೪೫]

"ಒಂದೇಮಾತರಂ"



ಮುದ್ರಕರು:— ಶ್ರೀ. ವೆಂ. ಭೀ. ನಾಯಿಕ,
ಕರ್ನಾಟಕ ವೈಭವ ಮುದ್ರಣಾಲಯ, ವಿಜಾಪುರ.